- ಓಂ -

- ಶ್ರೀಮತೇ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

ಮೂನ್ರಾವದಾಯಿರಂ

ಇರಂಡಾಮ್ ತಿರುವಂದಾದಿ

ಪೂದತ್ತಾಳ್ವಾರ್

ಮೂರನೆಯ ಸಾವಿರ

ತಮಿಳುಮೂಲ ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ
ಮತ್ತು
ವಿವರಣೆಯೊಂದಿಗೆ

ಸಂಪುಟ-9

Garani Srinivasan

27.6.81

- ಶ್ರೀಃ - (1) - ಶ್ರೀಯೈ ನಮಃ -

ದಿವ್ಯಪ್ರಬಂಧಂ - ಮೂರನೆಯ ಸಾವಿರ - ಎರಡನೆಯ ತಿರುವನ್ದಾದಿ.
திவ்ய ப்ரபந்தம் - மூன்றாவதாயிரம் - இரண்டாந்திருவந்தாதி.

ತನಿ - தனியன்

ஏன் பிறவி தீர இறைஞ்சினே னின்னமுதா
அன்பே தகளியளித்தானை — நன்புகழ் சேர்
சீதத்தார் முத்துக்கள் சேருங் கடன்மல்லைப்
பூதத்தார் பொன்னங்கழல்.

ಎನ್ ಪಿಱವಿ ತೀರ ಇಱೈಞ್ಜಿನೇ ನಿನ್ನಮುದಾ
ಅನ್ಬೇ ತಗಳಿಯಳಿತ್ತಾನೈ - ನನ್ ಪುಗೞ್ ಶೇರ್
ಶೀದತ್ತಾರ್ ಮುತ್ತುಕ್ಕಳ್ ಶೇರುಙ್ಗಡನ್ಮಲ್ಲೈ
ಪ್ಪೂದತ್ತಾರ್ ಪೊನ್ನಙ್ಗೞಲ್.

ಇನ್ ಅಮುದು & இன் அமுது ஆ = ಇನಿದಾದ ಅಮೃತದಂತಿರುವ, ಅನ್ಬೇ அன்பே = ಭಕ್ತಿಯನ್ನೇ (ಪ್ರೇಮವನ್ನೇ), ತಗಳಿ தகளி = ದೀಪವನ್ನಾಗಿ, ಅಳಿತ್ತಾನೈ அளித்தானை = ನೀಡಿದವನ, ನನ್ நன் = ಉತ್ತಮವಾದ, ಪುಗೞ್ புகழ் = ಕೀರ್ತಿ, ಶೇರ್ சேர் = ಕೂಡಿಕೊಂಡಿರುವ, ಶೀದತ್ತು சீதத்து = ತಂಪಾದ (ಶೀತಲವಾದ), ಆರ್ ஆர் = ಸೊಬಗಿನ, ಮುತ್ತುಕ್ಕಳ್ முத்துக்கள் = ಮುತ್ತುಗಳು, ಶೇರುಮ್ சேரும் = ಸೇರಿರುವ, ಕಡನ್ಮಲ್ಲೈ கடன்மல்லை = ಕಡನ್ಮಲ್ಲೈ ಕ್ಷೇತ್ರದ, ಪ್ಪೂದತ್ತಾರ್ பூதத்தார் = ಪೂದತ್ತಾೞ್ವಾರರ, ಪೊನ್ பொன் = ಚಿನ್ನದಂತ, ಅಮ್ அம் = ಸೊಬಗಿನ, ಕೞಲ್ கழல் = ತಿರುವಡಿಗಳನ್ನೆ, ಎನ್ ஏன் = ನನ್ನ, ಪಿಱವಿ பிறவி = ಜನ್ಮವು. ತೀರ தீர = ಮುಗಿದು ಹೋಗಲೆಂದು (ಹೋಗುವುದಕ್ಕಾಗಿ), ಇಱೈಞ್ಜಿನೇನ್ இறைஞ்சினேன் = ಅಡ್ಡಬೀಳುತ್ತೇನೆ.

ಇನಿದಾಗಿ, ಅಮೃತದಂತಿರುವ ಭಕ್ತಿಯನ್ನೇ ದೀಪವನ್ನಾಗಿ ನೀಡಿದವನ ಉತ್ತಮವಾದ ಕೀರ್ತಿಯಿಂದ ಕೂಡಿರುವ ತಂಪಾದ ಸೊಬಗಿನ ಮುತ್ತುಗಳು ಸೇರಿರುವ ಕಡನ್ಮಲ್ಲೈ ಕ್ಷೇತ್ರದ ಪೂದತ್ತಾೞ್ವಾರರ ಚಿನ್ನದಂತ ಸೊಬಗಿನ ತಿರುವಡಿಗಳನ್ನೆ ನನ್ನ ಜನ್ಮವು ಮುಗಿದು ಹೋಗಲೆಂದು ಅಡ್ಡಬೀಳುತ್ತೇನೆ.

Garani Srinivasan

ವಿಷಯಗಳನ್ನು ಇಷ್ಟು ಗಾಢವಾಗಿ ಸಂಗ್ರಹವಾಗಿ ಹೇಳುವಂಥ ಪೂರ್ಣವಾದ ಒಂದು ಪಾಶುರವನ್ನು 'ಕನಿ' ಎನ್ನುತ್ತಾರಷ್ಟೆ. ಈ ಪಾಶುರ ಪೂರ್ವಾಚಾರ್ಯರನ್ನು ಕುರಿತು ಹಾಗೆ ಹೇಳುತ್ತದೆ.

ಕನಿಯನ್ನು "ತಿರುಕ್ಕುರುಗೈ ಪಿಳ್ಳಾನ್ ಪಿಳ್ಳಾನ್" ಎಂಬ ಪರಮ ಭಕ್ತರು ರಚಿಸಿ ಹಾಡಿದರೆನ್ನಲಾಗಿದೆ.

ಕನಿಯಲ್ಲಿ ಅವರು ಹೇಳುತ್ತಾರೆ:- 'ಭಕ್ತಿ' ಮಾರ್ಗ ಅಮೃತದಂತೆ ಬಲು ರುಚಿ. ಅಮೃತದಂತೆಯೇ ಅದು ತಪ್ಪದೆ ಅಮರತ್ವವನ್ನು ನೀಡುತ್ತದೆ. ಈ ಭಕ್ತಿ ಮಾರ್ಗದಲ್ಲಿ ನಡೆದು, ಮಾರ್ಗದರ್ಶನ ಮಾಡಿದವರು ಪೂರ್ವಾಚಾರ್ಯರು. ಅವರು ಕಡನ್ಮಲ್ಲೈ ಕ್ಷೇತ್ರವಾಸಿಗಳು. ಅಲ್ಲಿನ ಕಡಲು ಸುಂದರವಾದ ತಂಪಾದ ಆಣಿಮುತ್ತುಗಳನ್ನು ತೇಲಿಸಿ, ತಂದು ತಂದು ಹೇಗೆ ತೀರಕ್ಕೆ ಸೇರಿಸುತ್ತದೆಯೋ ಹಾಗೆಯೇ ಪೂರ್ವಾಚಾರ್ಯರನ್ನು ಒಂದು ಅನರ್ಘ್ಯರತ್ನವನ್ನಾಗಿ ಅಲ್ಲಿ ನೆಲಸುವಂತೆ ಮಾಡಿದೆ. ಅವರ ಭಕ್ತಿ ದೀಪ್ತಿ ಅವರಿಗೆ ಅಪಾರ ಕೀರ್ತಿಯನ್ನು ತಂದಿದೆ. ನನಗಾ ಜನನ ಮರಣದ ಬಂಧನ ಬಿಡಿಸಲೆಂದಾ, ಅಮರತ್ವ ಲಭಿಸಲೆಂದಾ ಮುದದಾಸೆಯಿಂದ ನಾನು ಆಚಾರ್ಯರ ಚಿನ್ನದಂಥ ಪವಿತ್ರವೂ ಆಕರ್ಷಕವೂ ಆದ ನೀಬಗನ ತಿರುವಡಿ-ಗಳಿಗೆ ಶರಣೆಂದು ಅಡ್ಡ ಬೀಳುತ್ತೇನೆ.

27. 6. 81

ದಿವ್ಯಪ್ರಬಂಧಂ - ಮೂರನೇಯ ಸಾವಿರ - ಎರಡನೇಯ ತಿರುವಂದಾದಿ

திவ்யப்ரபந்தம் - மூன்றாவதாயிரம் - இரண்டாந்திருவந்தாதி.

1. அன்பே தகளியா ஆர்வமே நெய்யாக,
இன்புருகு சிந்தை யிடுதிரியா,— நன்புருகி
ஞானச் சுடர்விளக் கேற்றினேன் நாரணற்கு,
ஞானத் தமிழ்புரிந்த நான்

ಅನ್ಬೇ ತಗಳಿಯಾ ಆರ್ವಮೇ ನೆಯ್ಯಾಗ,
ಇನ್ಬುರುಗು ಶಿನ್ದೈ ಯಿಡುತಿರಿಯಾ, — ನನ್ಬುರುಗಿ
ಜ್ಞಾನ ಚ್ಚುಡರ್ವಿಳಕ್ಕೇತ್ರಿನೇನ್ ನಾರಣರ್ಕು,
ಜ್ಞಾನ ತ್ತಮಿಳ್ ಪುರಿನ್ದ ನಾನ್.

ಅನ್ಬೇ அன்பே = (ಭಗವದ್ವಿಷಯಕವಾದ) ಪ್ರೇಮವನ್ನೇ, ತಗಳಿ ಆ தகளி ஆ = ಹಣತೆಯನ್ನಾಗಿಯೂ, ಆರ್ವಮೇ ஆர்வமே = (ಭಗವಂತನನ್ನು ಪಡೆಯಲೇಬೇಕೆಂಬ) ದೃಢವಾದ ಮಹದಾಶೆಯನ್ನು, ನೆಯ್ ಆಗ நெய் ஆக = ತುಪ್ಪವನ್ನಾಗಿಯೂ, ಇನ್ಬು இன்பு = ಮನಸ್ಸನ್ನು, ಉರುಗು உருகு = ಕರಗಿಸುವಂಥ, ಶಿನ್ದೈ சிந்தை = (ಭಗವದ್ವಿಷಯಕವಾದ) ಚಿಂತನೆಯನ್ನು, ಇಡುತಿರಿ ಆ இடுதிரி ஆ = (ಹಣತೆಗೆ) ಜೋಡಿಸುವ ಬತ್ತಿಯನ್ನಾಗಿಯೂ, ಮಾಡಿಕೊಂಡು, ನನ್ಬು ಉರುಗಿ நன்பு உருகி = ಆತ್ಮವೂ ಕರಗಲು, ನಾರಣರ್ಕು நாரணற்கு = ಶ್ರೀಮನ್ನಾರಾಯಣನಿಗೆ, ಜ್ಞಾನಮ್ ஞானம் = (ಭಗವದ್ವಿಷಯಕವಾದ) ಜ್ಞಾನದ, ಶುಡರ್ சுடர் = ಜ್ಯೋತಿಯ, ವಿಳಕ್ಕು விளக்கு = ದೀಪವನ್ನು, ಏತ್ರಿನೇನ್ ஏற்றினேன் = ಹೊತ್ತಿಸಿದೆನು, ಜ್ಞಾನಮ್ ஞானம் = ಭಗವದ್ ಜ್ಞಾನವನ್ನು, ತಮಿಳ್ தமிழ் = ತಮಿಳು ಭಾಷೆಯಲ್ಲಿ, ಪುರಿನ್ದ புரிந்த = ಅನುಭವಿಸಿದ (ಅಂತಹವನಾದ), ನಾನ್ நான் = (ದಾಸನಾದ) ನಾನು.

(ಭಗವದ್ವಿಷಯಕವಾದ) ಪ್ರೇಮವನ್ನೇ ಹಣತೆಯನ್ನಾಗಿಯೂ, (ಭಗವಂತನನ್ನು ಪಡೆಯಲೇಬೇಕೆಂಬ) ದೃಢವಾದ ಮಹದಾಶೆಯನ್ನು ತುಪ್ಪವನ್ನಾಗಿಯೂ, ಮನಸ್ಸನ್ನು ಕರಗಿಸುವಂಥ ಭಗವಚ್ಚಿಂತನೆಯನ್ನು (ಹಣತೆಗೆ) ಜೋಡಿಸುವ ಬತ್ತಿಯನ್ನಾಗಿಯೂ ಮಾಡಿಕೊಂಡು, ಆತ್ಮವೂ ಕರಗಲು

Garani Srinivasan

ಶ್ರೀಮನ್ನಾರಾಯಣನಿಗೆ ಜ್ಞಾನ ಜ್ಯೋತಿಯನ್ನು ಹೊತ್ತಿಸಿದೆನು. ಜ್ಞಾನವನ್ನಂತೆ (1) ನಾನು ತಮಿಳುಭಾಷೆಯಲ್ಲಿ ಅನುಭವಿಸಿದೆನು.

'ಪೂರ್ವಾಚಾರ್ಯರ್' ಎಂದು ಪ್ರಸಿದ್ಧರಾದ ಮೊದಲ ಮೂವರು ಆಳ್ವಾರರುಗಳನ್ನು ಕುರಿತು 'ಮೊದಲ ತಿರುವಂದಾದಿ'ಯ ಮೊದಲಲ್ಲಿ ವಿಸ್ತಾರವಾಗಿ ಹೇಳಲಾಗಿದೆ. ಮೂವರೂ ಭಕ್ತರು, ಜ್ಞಾನಿಗಳು. ಮುಕ್ತ ಪುರುಷರು. ಪೊಯ್‌ಗೈ ಆಳ್ವಾರರು 'ಕಂಚಿ'ಯಲ್ಲಿ ಹುಟ್ಟಿದವರೆಂದರೆ, ಪೂದತ್ತಾಳ್ವಾರರು ಈಗಿನ 'ಮಹಾಬಲಿಪುರದಲ್ಲಿ' ಹುಟ್ಟಿದರೆನ್ನಲಾಗಿದೆ. ಈ ಆಳ್ವಾರರು ಪೊಯ್‌ಗೈ ಆಳ್ವಾರರಿಗಿಂತಲೂ ಒಂದು ಹೆಜ್ಜೆ ಮುಂದಿದ್ದವರು ಎನ್ನಲಾಗಿದೆ: ಪೊಯ್‌ಗೈ ಆಳ್ವಾರರು ಭಗವದ್ಗುಣಾನುಭವವನ್ನು ವರ್ಣಿಸಿದರೆ, ಪೂದತ್ತಾಳ್ವಾರರು "ಭಗವಂತನನ್ನು ಕಂಡೆ" ಎಂದು ಘಂಟಾಘೋಷವಾಗಿ ಹೇಳಿದರು. ಇದೇ ಇವರ ವೈಶಿಷ್ಟ್ಯ.

~~ಮೊದಲ ತಿರುವಂದಾದಿಯ ಪೊಯ್‌ಗೈ~~

ಇದು ಪೂದತ್ತಾಳ್ವಾರರ ತಿರುವಂದಾದಿಯ ಮೊದಲ ಪಾಶುರ.

ಇದರಲ್ಲಿ ಆಳ್ವಾರರು ಭಕ್ತಿ ಜ್ಞಾನಗಳ ಸಂಬಂಧದ ಫಲವೇನೆಂಬುದನ್ನು ಹೇಳುತ್ತಾರೆ. ಭಗವಂತನಲ್ಲಿ ಗಾಢವಾದ ಭಕ್ತಿಯನ್ನು, ಅವನನ್ನು ಪಡೆದುಕೊಳ್ಳಲೇಬೇಕೆಂಬ ದೃಢವಾದ ಮಹದಾಶೆಯನ್ನು ಹೊಂದಿದ್ದರೆ, ಅಂಥವನ ಮನಸ್ಸು ಭಗವದ್ವಿಷಯದಲ್ಲಿ ಕರಗುತ್ತದೆ. ಅಂಥ ಮನಸ್ಸು ಇಂದ್ರಿಯ ಚಾಪಲ್ಯಗಳನ್ನು ಅರಸಿಹೋಗುವುದಿಲ್ಲ. ಹೀಗೆ, ಕಾಯಾ ವಾಚಾ ಮನಸಾ ಭಗವಚ್ಚಿಂತನೆಯಲ್ಲಿಯೇ ಕಾಲ ಕಳೆಯುವವನಲ್ಲಿ ಭಗವದ್ವಿಷಯವಾದ ಜ್ಞಾನವು ತಾನಾಗಿ ಹೊಮ್ಮುತ್ತದೆ. ಎಡೆಬಿಡದೆ ಅವುಗಳನ್ನು ಅನುಭವಿಸುವ ಪರಿಣಾಮವಾಗಿ ಭಕ್ತಿಯ ಅತ್ಯಂತದಶೆ ಲಭಿಸುತ್ತದೆ. ಎಂದರೆ, ಭಗವಂತನೇ ಲಭಿಸುತ್ತಾನೆ.

ಭಕ್ತಿಯನ್ನು 'ಪರಭಕ್ತಿ', 'ಪರಜ್ಞಾನ', 'ಪರಮಭಕ್ತಿ' - ಎಂದು ಮೂರು ಹಂತಗಳಲ್ಲಿ ಹೇಳುವುದು ವಾಡಿಕೆ. ಭಗವಂತನನ್ನು ಅನುಭವಿಸುವುದರಲ್ಲಿ ಕಾಣುವ ಪ್ರೇಮದಶಾ ವಿಶೇಷಗಳಿವು. ಭಗವಂತನನ್ನು ಪಡೆದುಕೊಳ್ಳಲೇಬೇಕೆಂಬ ಮಹದಾಶೆಯೇ 'ಪರಭಕ್ತಿ' ಎಂತಲೂ, ಅವನನ್ನು ಸಾಕ್ಷಾತ್ಕರಿಸಿಕೊಳ್ಳುವ ಕ್ರಮವನ್ನು 'ಪರಜ್ಞಾನ'ವೆಂತಲೂ, ಅವನಿಂದ ಎಂದೆಂದಿಗೂ ಬೇರ್ಪಡದಂತೆ ಅವನ ದಿವ್ಯ ತಿರುವಡಿಗಳನ್ನು ಅನುಭವಿಸುತ್ತಲೇ ಇರಬೇಕೆಂಬುದನ್ನು 'ಪರಮಭಕ್ತಿ' ಎಂತಲೂ ಹೇಳುತ್ತಾರೆ. ಯಾವುದರಿಂದ ಪ್ರಾರಂಭಿಸಿದರೂ, ಪರಮಭಕ್ತಿಯಲ್ಲಿ ಅದು ಪರಿಣಾಮಗೊಳ್ಳುತ್ತದೆ ಎನ್ನಲಾಗುತ್ತದೆ.

Garani Srinivasan

ಮೊದಲ ತಿರುವಂದಾದಿಯ ಪೊಯ್ಗೈ ಆಳ್ವಾರರು 'ಪರಜ್ಞಾನ'ದಿಂದ 'ಪರಮಭಕ್ತಿ'ಗೆ ಅಡರಿದರು. ಪೂದತ್ತಾಳ್ವಾರರಾದರೋ ಪರಭಕ್ತಿಯಿಂದ, ಪರಜ್ಞಾನ ಮತ್ತು ಪರಮಭಕ್ತಿಗಳಿಗೆ ಅಡರಿದರು.

'ಹಣತೆ - ದೀಪ'ದ ರೂಪಕ ಈ ಇಬ್ಬರು ಆಳ್ವಾರರಲ್ಲಿ ಕಂಡು ಬರುತ್ತದೆ. ಅದೂ, ಮೊದಲ ಪಾಶುರದಲ್ಲಿಯೇ. ಪೊಯ್ಗೈ ಆಳ್ವಾರರಿಗೆ ಇಡಿಯ ಸೃಷ್ಟಿಯೇ ಭಗವತ್ಸ್ವರೂಪ. ಪಂಚ ಭೂತಗಳಿಂದಾದ ಇವೆಲ್ಲವೂ ಭಗವಂತನ ಹಿರಿಮೆಯನ್ನು ಕೊಂಡಾಡತಕ್ಕವು. ಈ ತೆರನಾದ ಜ್ಞಾನದಿಂದ ಸೃಷ್ಟಿಯನ್ನು ಕಂಡರೆ, ಅಲ್ಲಿ ಗೋಚರವಾಗುವುದು ಭಗವಂತನೇ! ಅವನಲ್ಲಿ ಭಕ್ತಿ ಉಮ್ಮಳಿಸುವುದು. ಅದಕ್ಕಾಗಿಯೇ ಆಳ್ವಾರರು "ಭೂಮಿಯನ್ನೇ ಹಣತೆಯನ್ನಾಗಿಸಿಕೊಂಡು, ಅದನ್ನಾಶ್ರಯಿಸಿದ ಕಡಲನೀರನ್ನೇ ತುಪ್ಪವನ್ನಾಗಿಸಿಕೊಂಡು, ಜ್ವಲಿಸುವ ಸೂರ್ಯನನ್ನೇ ಜ್ಯೋತಿಯನ್ನಾಗಿಸಿಕೊಂಡು". ಪರಜ್ಞಾನದ ದೀಪವನ್ನು ತಮ್ಮ ನೂರು ಪಾಶುರಗಳಲ್ಲಿ ಬೆಳಗಿಸಿದರು.

ಪೂದತ್ತಾಳ್ವಾರರಾದರೋ ಭಕ್ತಿ ಸಾಮ್ರಾಜ್ಯವನ್ನು ಸೂರೆಗೊಂಡವರು. ಅವರು "ಪರಭಕ್ತಿಯನ್ನೇ ಹಣತೆಯನ್ನಾಗಿಸಿ, ಭಗವಂತನನ್ನು ಪಡೆಯಲೇ ಬೇಕೆಂಬ ಉತ್ಕಟವಾದ ಆಸೆಯನ್ನು ಅದಕ್ಕೆ ತುಪ್ಪವನ್ನಾಗಿಸಿಕೊಂಡು, ಎಡೆಬಿಡದ ಭಗವಚ್ಚಿಂತನೆಯನ್ನು ಬತ್ತಿಯಾಗಿಸಿಕೊಂಡು" ಭಗವಂತನನ್ನು ಅನುಭವಿಸುತ್ತಾ ಜ್ಞಾನದೀಪವನ್ನು ತಮ್ಮ ನೂರು ಪಾಶುರಗಳ ಮೂಲಕ ಬೆಳಗಿಸಿದರು.

ಹಣತೆಯ ರೂಪಕ ಸ್ವಾರಸ್ಯಪೂರ್ಣವಾದದ್ದು. ಹಣತೆಗೆ ಆಧಾರವಸ್ತುಗಳು ಮೂರು: ಪಾತ್ರೆ ಅಥವಾ ಹಣತೆ, ತುಪ್ಪ, ಮತ್ತು ಬತ್ತಿ. ಒಂದಕ್ಕೆ ಮತ್ತೊಂದು ಆಧಾರ. ತುಪ್ಪಕ್ಕೆ ಪಾತ್ರೆ ಆಧಾರ ಮತ್ತು ಈ ಎರಡೂ ಬತ್ತಿಗೆ ಆಧಾರ. ಇವಿಷ್ಟೂ ಇದ್ದರೇನೇ 'ದೀಪ' ಆಗುವುದು. ಆದರೂ ಇವಕ್ಕೆ ಮತ್ತೊಂದು ಆಧಾರವಿಲ್ಲವಾದರೆ ದೀಪ ಉರಿಯುವುದಿಲ್ಲ. ಜ್ಯೋತಿ ಬೆಳಗದು. ಅದು ಮುಖ್ಯವಾದದ್ದು. ಬತ್ತಿಯನ್ನು ಉರಿಸತಕ್ಕ ಅಗ್ನಿ (ತೇಜಸ್ಸು). ಹಾಗೆಯೇ ಭಗವಂತನನ್ನು ಪಡೆದುಕೊಳ್ಳುವುದಕ್ಕೆ ಭಗವಂತನಲ್ಲಿ ಗಾಢವಾದ ಪ್ರೇಮ ಮೂಲಾಧಾರವಾಗಿಯೂ, ಅವನನ್ನು ಪಡೆಯಲೇ ಬೇಕೆಂಬ ಉತ್ಕಟಾಕಾಂಕ್ಷೆಯೂ, ಮತ್ತು ಭಗವಚ್ಚಿಂತನೆಯಲ್ಲಿ ತೊಡಗಿಕೊಳ್ಳತಕ್ಕ ಮನಸ್ಸೂ ಬೇಕೇ ಬೇಕು. ಇವುಗಳ ಜೊತೆಗೆ ಆತ್ಮನು

Garani Srinivasan

ಬೆಳೆಸಿಕೊಂಡರೆ, ಆಗ ತಪ್ಪದೆ ಭಗವತ್ಸಾಕ್ಷಾತ್ಕಾರವಾಗುತ್ತದೆ. ಭಗವಂತನ ಬಗೆಗೆ ಪೂರ್ಣ ಜ್ಞಾನವುಂಟಾಗುತ್ತದೆ. ಇದೇ ಧ್ಯೇಯ, ಇದೇ ಮಾರ್ಗ ಎಂಬುದು ಆಳ್ವಾರರ ಮತ.

ತಾನು ಪಡೆದುಕೊಂಡು, ಅನುಭವಿಸಿ, ಆನಂದಿಸಿದ ಪರಜ್ಞಾನವನ್ನು ತನ್ನಲ್ಲಿಯೇ ಬಚ್ಚಿಟ್ಟುಕೊಳ್ಳಬಹುದೇ? ಅದನ್ನು ಎಲ್ಲರಿಗೂ ಹಂಚಿ ಹರಡಬೇಡವೇ? ಎಲ್ಲರೂ ತನ್ನಂತೆಯೇ ಆನಂದದಲ್ಲಿ ಭಾಗಿಗಳಾಗಬೇಡವೇ? ಈ ಸದ್ಭಾವನೆಯೇ ಆಳ್ವಾರರನ್ನು ತಮ್ಮ ಅನುಭವಸಾರವನ್ನು ಹೊರಕ್ಕೆ ತರುವಂತೆ ಮಾಡಿದ್ದು. ತಮಗೆ ತಿಳಿದ ಶುದ್ಧವೂ ಸರಳವೂ ಆದ ತಮಿಳಿನಲ್ಲಿ, ಒಂದು ನೂರು ಅಂತಾದಿ ಪಾಶುರಗಳನ್ನು ರಚಿಸಿ, ಹಾಡಿ, ಹರಡಿದ್ದೇ ಈ ಎರಡನೆಯ ತಿರುವಂದಾದಿ ಎಂಬುದು.

2. ஞானத்தால் நன்குணர்ந்து நாரணன்றன் நாமங்கள்,
தானத்தால் மற்றவன் பேர் சாற்றினால், — வானத்
தணியமரராக்குவிக்கு மஃதன்றே, நாங்கள்
பணியமரர் கோமான் பரிசு.

ಜ್ಞಾನತ್ತಾಲ್ ನನ್ಗುಣರ್ನ್ದು ನಾರಣನ್ರನ್ ನಾಮಙ್ಗಳ್,
ತಾನತ್ತಾಲ್ ಮಱ್ಱವನ್ ಪೇರ್ ಶಾಱ್ಱಿನಾಲ್, — ವಾನ
ತ್ತಣಿಯಮರ ರಾಕ್ಕುವಿಕ್ಕು ಮಃದನ್ರೇ, ನಙ್ಗಳ್
ಪಣಿಯಮರರ್ ಕೋಮಾನ್ ಪರಿಶು.

ಜ್ಞಾನತ್ತಾಲ್ ஞானத்தால் = ಭಕ್ತಿಪೂರ್ವಕವಾದ ಜ್ಞಾನದಿಂದ, ನಾರಣನ್ ತನ್ நாரணன் தன் = ಶ್ರೀಮನ್ನಾರಾಯಣನ, ನಾಮಙ್ಗಳ್ நாமங்கள் = ತಿರುನಾಮಗಳನ್ನು, ನನ್ಗು நன்கு = ಚೆನ್ನಾಗಿ, ಉಣರ್ನ್ದು உணர்ந்து = ಅರಿತುಕೊಂಡು, ತಾನತ್ತಾಲ್ தானத்தால் = (ದೇವಾಲಯ ಮುಂತಾದ) ನಿರ್ದಿಷ್ಟ ಸ್ಥಳಗಳಲ್ಲಿ, ಮಱ್ಱು மற்று = ಮತ್ತು, ಅವನ್ ಪೇರ್ அவன் பேர் = ಅವನ ಹೆಸರುಗಳನ್ನು, ಶಾಱ್ಱಿನಾಲ್ சாற்றினால் = ಹೇಳಿದರೆ (ಸ್ತುತಿಸಿದರೆ), ವಾನತ್ತು வானத்து = ಪರಮಪದದ, ಅಣಿ அணி = ಒಪ್ಪವಾದ,

Garani Srinivasan

ಅಮರರ್ அமரர் = ನಿತ್ಯಸೂರಿಗಳಾಗ, ಆಕ್ಕುವಿಕ್ಕುಮ್ ஆக்குவிக்கும் = ಆಗಿಸುತ್ತಾನೆ. ಅಃದು அஃது = ಅದೇ. ಅನ್ರೇ அன்றே = ಅಲ್ಲವೇ, ನಙ್ಗಳ್ நங்கள் = ನಮ್ಮ, ಪಣಿ பணி = ಸೇವೆಗೆ, ಅಮರರ್ ಕೋಮಾನ್ அமரர் கோமான் = ನಿತ್ಯಸೂರಿಗಳ ಒಡೆಯನ, ಪರಿಶು பரிசு = ಕೊಡುಗೆ(ಸ್ವಭಾವ)!

ಭಕ್ತಿಯ ಮೂಲಕ ಬಂದ ಜ್ಞಾನದಿಂದ ಶ್ರೀಮನ್ನಾರಾಯಣನ ತಿರುನಾಮಗಳನ್ನು ಚೆನ್ನಾಗಿ ಅರಿತುಕೊಂಡು, (ದೇವಾಲಯಮುಂತಾದ) ಗೊತ್ತಾದ ಸ್ಥಳಗಳಲ್ಲಿ ಸ್ವಾಮಿಯ ಹೆಸರುಗಳನ್ನು ಸಾರಿದರೆ (ಘೋಷಿಸಿದರೆ), (ಅಂಥವರನ್ನು) ಪರಮಪದವಾಸಿಗಳಾದ ನಿತ್ಯಸೂರಿಗಳಾಗಿ ಆಗಿಸುತ್ತಾನೆ. ಅದೇ ಅಲ್ಲವೇ, ನಮ್ಮ ಸೇವೆಗೆ ನಿತ್ಯಸೂರಿ (2) ಗಳ ಒಡೆಯನ ಕೊಡುಗೆ!

ಹಿಂದಿನ ಪಾಶುರದಲ್ಲಿ, ಆಳ್ವಾರರು ಭಕ್ತಿ ಮಾಡುವುದಕ್ಕೆ ಸಾಧನಗಳೇನೆಂದೂ, ಅವುಗಳನ್ನು ಬಳಸಿಕೊಂಡು ಭಕ್ತಿ ಮಾಡುವುದರಿಂದ ಬರುವ ಫಲವೇನೆಂದೂ ಹೇಳಿದರು.

ಈಗ ಆಳ್ವಾರರು ಹೇಳುತ್ತಾರೆ: ವೃದ್ಧವಾದ ಭಕ್ತಿಯಿಂದ ಭಗವದ್ವಿಷಯಕವಾದ ಜ್ಞಾನ ಬೆಳೆಯುತ್ತದೆ. ಅದರ ಸಹಾಯದಿಂದ ಭಗವಂತನ ಅನಂತ ನಾಮಗಳನ್ನು ಅವುಗಳ ವೈಶಿಷ್ಟ್ಯವನ್ನು ಚೆನ್ನಾಗಿ ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಆ ಬಳಿಕ ಯಾವುದಾದರೊಂದು ಗೊತ್ತಾದ ಪವಿತ್ರಸ್ಥಳದಲ್ಲಿ ನಿಂತು ಭಗವಂತನ ತಿರುನಾಮಗಳನ್ನು ಘೋಷಿಸಿದರೆ, ಸ್ವಾಮಿಯು ಅವುಗಳಿಂದ ಸುಪ್ರೀತನಾಗುತ್ತಾನೆ. ಭಗವನ್ನಾಮಗಳನ್ನು ಎಡೆಬಿಡದಂತೆ ಸಾರಿ ಹೇಳುತ್ತ ಬರುವುದರಿಂದ ಅವನಿಗೆ ಭಗವಂತನು ಪರಮ-ಪದ ಮೋಕ್ಷವನ್ನೇ ನೀಡುತ್ತಾನೆ. ಸಂಸಾರದ ಬಂಧನವನ್ನು ಕಡಿದು ಹಾಕುತ್ತಾನೆ. ನಿತ್ಯಸೂರಿಗಳ ಒಡೆಯನೇ ಆದ ಭಗವಂತನು ಆ ತನ್ನ ಭಕ್ತನನ್ನು ನಿತ್ಯಸೂರಿಯನ್ನಾಗಿ ಆಗಿಸಿಬಿಡುತ್ತಾನೆ. ಅವನಿಗೆ ಎಡೆಬಿಡದ ಭಗವತ್ಸೇವೆಗೆ ಅವಕಾಶವನ್ನುಂಟು ಮಾಡುತ್ತಾನೆ. ಭಗವಂತನ ಗುಣ ಸ್ವಭಾವವೆಂದರೆ ಇದೇ- ಔದಾರ್ಯಪೂರ್ಣವಾದದ್ದೇ. ಅವನ ಕೊಡುಗೆ ಎಂಥ ಮಹತ್ವದ್ದು ಕಂಡಿರಾ!

Garani Srinivasan

ಮೂವರು ಆಳ್ವಾರರೂ ತಮ್ಮ ತಮ್ಮ ಬಾಳ್ವೆಯನ್ನು ನಡೆಸು
ತ್ತಿದ್ದ ರೀತಿಯನ್ನು ಇಲ್ಲಿ ತೋರಿಸಲಾಗಿದೆ ಎನ್ನಬಹುದು. ಅವರು
ದೇಶಾದ್ಯಂತ ಸಂಚರಿಸುತ್ತಾ, ಒಂದೊಂದು ಕಡೆಯೂ ಪ್ರಕಾಶವೂ
ಪವಿತ್ರವೂ ಆದ ದೇವಾಲಯದಲ್ಲಿ ಅರ್ಚಾಮೂರ್ತಿಯ ಮುಂದೆ ನಿಂತು
ಸ್ವಾಮಿಯನ್ನು ಸ್ತುತಿಸಿ ನಮಿಸುತ್ತಾ, ಅವನ ಪವಿತ್ರ ನಾಮಗಳನ್ನು
ಹಾಡಿಕೊಳ್ಳುತ್ತಾ ಕಾಲ ಕಳೆಯುತ್ತಿದ್ದರು.

3. பரிசு நறுமலரால் பாற்கடலான் பாதம்,
புரிவார் புகப்பெறுவார் போலும், — புரிவார்கள்
தொல்லமரர் கேள்வித் துலங்கொளிசேர் தோற்றத்து,
நல்லமரர் கோமான் நகர்.

ಪರಿಶು ನಱುಮಲರಾಲ್ ಪಾಱ್ಕಡಲಾನ್ ಪಾದಮ್,
ಪುರಿವಾರ್ ಪುಗಪ್ಪೆಱುವರ್ ಪೋಲುಮ್, — ಪುರಿವಾರ್ಗಳ್
ತೊಲ್ಲಮರರ್ ಕೇಳ್ವಿ ತ್ತುಲಙ್ಗೊಳಿಶೇರ್ ತೋಱ್ಱತ್ತು,
ನಲ್ಲಮರರ್ ಕೋಮಾನ್ ನಗರ್.

ಪರಿಶು பரிசு = ಶ್ರೇಷ್ಠಗುಣಗಳ, ನಱು நறு = ಪರಿಮಳ
ಪೂರ್ಣವಾದ, ಮಲರಾಲ್ மலரால் = ಹೂಗಳಿಂದ, ಪಾಲ್ ಕಡಲಾನ್
பாற் கடலான் = ಪಾಲ್ಗಡಲವನ, ಪಾದಮ್ பாதம் = ತಿರುವಡಿ
ಗಳನ್ನು, ಪುರಿವಾರ್ புரிவார் = ಆಶಿಸುವವರು, (ಪೂಜಿಸುವವರು),
ಪುರಿವಾರ್ಗಳ್ புரிவார்கள் = ಸಾಧನಾನುಷ್ಠಾನ ಪರರಾದ, ತೊಲ್ தொல்
ல் = ಹಳೆಯ, ಅಮರರ್ அமரர் = ದೇವತೆಗಳೂ ಸಹ, ಕೇಳ್ವಿ
கேள்வி = (ನೋಡದಂಥ) ಕೇಳಿಕೊಂಡು ಮಾತ್ರವೇ ಇರುವಂಥ, ತುಲಙ್ಗ
துலங்கு = ಹೊಳೆ ಹೊಳೆಯುವ, ಒಳಿಶೇರ್ ஒளி சேர் = ಪ್ರಕಾಶದಿಂ
ದ ಕೂಡಿದ, ತೋಱ್ಱತ್ತು தோற்றத்து = ದಿವ್ಯನೋಟವಾದ,
ನಲ್ ಅಮರರ್ ಕೋಮಾನ್ நல் அமரர் கோமான் = ಶ್ರೇಷ್ಠ
ಅಮರರ (ನಿತ್ಯಸೂರಿಗಳ) ಒಡೆಯನ, ನಗರ್ நகர் = ನಗರವನ್ನು
(ಪರಮಪದವನ್ನು), ಪುಗಪ್ಪೆಱುವರ್ ಪೋಲುಮ್ புகப்பெறு
வார் போலும் = ಪ್ರವೇಶಿಸಲು ಅವಕಾಶ (ಅರ್ಹತೆ) ವನ್ನು ಪಡೆಯು
ತ್ತಾರೆ.

ಶ್ರೇಷ್ಠವಾದ ಗುಣಗಳುಳ್ಳ ಪರಿಮಳಭರಿತವಾದ ಹೂಗಳಿಂದ
ಪಾಲ್ಗಡಲವನ ತಿರುವಡಿಗಳನ್ನು ಆಶಿಸಿ ಪೂಜಿಸುವವರು, ಸಾಧನಾನು
ಷ್ಠಾನ ಪರರಾದ ಹಳೆಯ ದೇವತೆಗಳೂ ಸಹ, ಕೇಳಿರುವ (ನೋಡದ),

ಹೊಳೆಹೊಳೆಯುವ ಪ್ರಕಾಶದಿಂದ ಕೂಡಿದ ದಿವ್ಯದೃಶ್ಯವಾದ ಉತ್ತಮ (ಬಳ್ಳಿಯ) ಅಮರರ ಒಡೆಯನ ನಗರವನ್ನು ಪ್ರವೇಶಿಸಲು ಅವಕಾಶವನ್ನು ಪಡೆಯುತ್ತಾರೆ. ③

ಇಂದಿನ ಪಾಶುರದಲ್ಲಿ ಭಗವನ್ನಾಮೋಚ್ಚಾರಣೆ, ಸಂಕೀರ್ತನೆಗಳ ಉಪಯೋಗವೇನೆಂದು ಹೇಳಲಾಯಿತು. ಈ ಪಾಶುರದಲ್ಲಿ ಆಳ್ವಾರರು ಪರಮಪದದ ಪ್ರಾಪ್ತಿ ಯಾರಿಗೆ ಎಂದು ಸ್ಪಷ್ಟಪಡಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಪಾಲ್ಗಡಲಶಯನನಾದ ಶ್ರೀಮನ್ನಾರಾಯಣನ ನಗರವಾದ ಪರಮಪದ ಅಥವಾ ಶ್ರೀವೈಕುಂಠ ಎಂಬುದು ಅಪ್ರತಿಮ ಪ್ರಕಾಶದಿಂದ ತುಂಬಿ ಮೆರೆಯುತ್ತದೆ. ಇಂದಿನಕಾಲದಿಂದಲೂ ಜಪ, ತಪಾದಿ ಅನುಷ್ಠಾನ ಸಾಧನೆಗಳಿಂದ ಸಿದ್ಧಿ ಪಡೆದಿರುವ ಇಂದ್ರಾದಿ ದೇವತೆಗಳೂ ಸಹ 'ಪರಮಪದ' ಎಂಬುದನ್ನು ಆಶಿಸುತ್ತಾ, ಕೇಳಿ ಆನಂದಿಸುತ್ತಿರುವವರೇ. ಅವರು ಪರಮಪದ ಹೇಗಿದೆಯೆಂದು ಕಣ್ಣಾರ ಕಂಡರಿಯರು. ಆದರೆ, ಆ ಪಾಲ್ಗಡಲಶಯನನ ದಿವ್ಯ ತಿರುವಡಿಗಳನ್ನು ಭಕ್ತಿಯಿಂದ ಅನಘ್ರ ಪರಿಮಳ ಪುಷ್ಪಗಳಿಂದ ಪೂಜಿಸುವವನಿಗೆ ಪರಮಪದ ನಿಜವಾಗಿಯೂ ಲಭ್ಯವಾಗುತ್ತದೆ. ಅಲ್ಲಿ ಪ್ರವೇಶಕ್ಕೆ, ಮತ್ತು ಅಲ್ಲಿ ಶಾಶ್ವತವಾಗಿ ವಾಸಿಸುವ ನಿತ್ಯಸೂರಿಗಳೊಡನೆ ಕೂಡಿ ಬಾಳುವುದಕ್ಕೂ ಅವನಿಗೆ ಅವಕಾಶ ದೊರೆಯುತ್ತದೆ.

4. நகரிழைத்து நித்திலத்து நாண்மலர் கொண்டு ஆங்கே
திகழுமணி வயிரம் சேர்த்து, — நிகரில்லாப்
பைங்கமல மேந்திப் பணிந்தேன் பனிமலராள்
அங்கம் வலங்கொண்டான் அடி.

ನಗರಿಳೈತ್ತು ನಿತ್ತಿಲತ್ತು ನಾಣ್ಮಲರ್ ಕೊಣ್ಡು, ಆಙ್ಗೇ
ತಿಗಳುಮಣಿ ವಯಿರಮ್ ಶೇರ್ತ್ತು, — ನಿಗರಿಲ್ಲಾ
ಪೈಙ್ಗಮಲ ಮೇನ್ದಿ ಪ್ಪಣಿನ್ದೇನ್ ಪನಿಮಲರಾಳ್
ಅಙ್ಗಮ್ ವಲಙ್ಗೊಣ್ಡಾನಡಿ.

ನಗರ್ நகர் = ಪವಿತ್ರವಾದ ಮಂಟಪವನ್ನು, ಇಳೈತ್ತು இழைத்து = ರಚಿಸಿ, ನಿತ್ತಿಲತ್ತು நித்திலத்து = ಆಣಿಮುತ್ತಿನ, ನಾಳ್ ಮಲರ್ ಕೊಣ್ಡು நாண் மலர் கொண்டு = ಬೆಳಗಿನ (ಆಗಲೇ ಅರಳಿದ) ಹೂವನ್ನು ಹಿಡಿಕೊಂಡು,

Garani Srinivasan

ಆಙ್ಗೇ ஆங்கே = ಅಲ್ಲಿಯೇ, ತಿಹಳುಮು திகழும் = ಹೊಳೆ
ಹೊಳೆಯುವ, ಮಣಿ ವಯಿರಮು மணி வயிரம் = ರತ್ನಗಳನ್ನು
ವಜ್ರವನ್ನೂ, ಶೇರ್ತ್ತು சேர்த்து = ಕೂಡಿಸಿ, ~~ನಿಕರ್~~ ನಿಕರ್
ಇಲ್ಲಾ நிகர் இல்லா = ಸಾಟಿಯಿಲ್ಲದ, ಪ್ಪೂ ಕಮಲಮು பூ
கமலம் = ಸುಂದರವಾದ ಕಮಲವನ್ನು, ಏನ್ದಿ ஏந்தி = ತೆಗೆದು
ಕೊಂಡು (ಧರಿಸಿ), ಪಣಿನ್ದೇನ್ பணிந்தேன் = ಎರಗಿದ್ದೇನೆ
(ಎರಗಿದೆನು), ಪನಿ பனி = ತಂಪಾದ, ಮಲರಾಳ್ மலராள் =
ಕಮಲದಲ್ಲಿ ಹುಟ್ಟಿದವಳನ್ನು, ಅಙ್ಗಮು அங்கம் = ದೇಹದ/ (ಎದೆಯ)
ವಲಮು வலம் = ಬಲಭಾಗದಲ್ಲಿ, ಕೊಣ್ಡಾನ್ கொண்டான்
= ಧರಿಸಿರುವವನ, ಅಡಿ அடி = ತಿರುವಡಿಗಳಿಗೆ.

ಪವಿತ್ರವಾದ ಮಂಟಪವನ್ನು ರಚಿಸಿ, ಆಣಿಮುತ್ತಿನ ಶು-
ಭ್ರವಾದ (ಆಗಲೇ ಅರಳಿದ) ಹೂವನ್ನು ಮುಡಿಕೊಂಡು, ಅಲ್ಲಿಯೇ
ಹೊಳೆ ಹೊಳೆಯುವ ರತ್ನಗಳನ್ನು ವಜ್ರವನ್ನು ಕೂಡಿಸಿ, ಸಾಟಿ
ಯಿಲ್ಲದ ಸುಂದರವಾದ ಕಮಲವನ್ನು ತೆಗೆದುಕೊಂಡು, ತಂಪಾದ
ಕಮಲದಲ್ಲಿ ಹುಟ್ಟಿದವಳನ್ನು ದೇಹದ (ಎದೆಯ) ಬಲಭಾಗದಲ್ಲಿ
ಧರಿಸಿರುವವನ ತಿರುವಡಿಗಳಿಗೆ ಎರಗಿದೆನು (ಎರಗುತ್ತೇನೆ). (4)

ಹಿಂದಿನ ಪಾಶುರದ ವಿಷಯವನ್ನು ಇಲ್ಲಿ ಮುಂದುವರಿಸಲಾಗಿ
ದೆ. ಅಲ್ಲದೆ, ಭಗವಂತನನ್ನು ಪೂಜಿಸುವುದು ಹೇಗೆ, ಅವನನ್ನು ಇಟ್ಟು
ಕೊಳ್ಳುವುದು ಹೇಗೆ, ಎಂಬುದನ್ನು ವಿವರಿಸುತ್ತದೆ.

ಪೂಜೆಗೆ ಕೆಲವು ಸಲಕರಣೆಗಳ ಅಗತ್ಯವಿದೆ: ಮಂಟಪ-
ಭಗವಂತನನ್ನು ಕುಳ್ಳಿರಿಸಲು. ಅಲಂಕಾರ- ಸ್ವಾಮಿಗೆ ಅದು ತಕ್ಕದ್ದಾ
ಗಿರುವಂತೆ ಮಾಡುವುದಕ್ಕಾಗಿ. ಶುಭ್ರವಾದರೆ, ರತ್ನಮಯವಾಗಿ, ಸುಂ
ದರವಾಗಿ ಅಲಂಕರಿಸಬೇಕು. ಪುಷ್ಪ- ಆಗಲೇ ಅರಳಿ, ಪರಿಮಳ
ವನ್ನು ಹೊರಸೂಸುವ ದಿವ್ಯ ಸುಂದರವಾದ ಕಮಲವೇ ಮುಂತಾದ ಅನರ್ಘ್ಯ
ಕುಸುಮಗಳು, ಭಗವಂತನ ತಿರುವಡಿಗಳ ಪೂಜೆಗೆ. ಇವುಗಳನ್ನೆಲ್ಲ
ಆಳ್ವಾರರು ಹೇಗೆ ಸಿದ್ಧಪಡಿಸಿದ್ದಾರೆ ನೋಡೋಣ.

ಆಳ್ವಾರರು ಹೇಳುತ್ತಾರೆ: ನನ್ನ ಹೃದಯವನ್ನು ಶುದ್ಧಗೊ
ಳಿಸಿದೆ. ಭಗವಂತನು ~~[illegible]~~ ಅಲ್ಲಿ ವಾಸಿಸಲು ಯೋಗ್ಯವಾಗುವಂತೆ
ಅದನ್ನು ಪವಿತ್ರವಾದ ಮಂಟಪವನ್ನಾಗಿ ಅದನ್ನು ಪರಿವರ್ತಿಸಿದೆ. ಅದನ್ನು

ಅಲಂಕರಿಸುವುದಕ್ಕೆ ಸತ್ಯ, ಅಹಿಂಸೆ, ದಯೆ, ಇಂದ್ರಿಯನಿಗ್ರಹ, ಸರ್ವಭೂತದಯೆ, ಜ್ಞಾನ, ತಪಸ್ಸು ಮತ್ತು ಧ್ಯಾನಗಳೆಂಬ ಆಠ ಮುತ್ತುಗಳಿಂದ ವಿಶಿಷ್ಟವೂ ಆಕರ್ಷಕವೂ ಆದ ಸುಂದರವಾದ ~~ಹೂವುಗಳಿಂದ~~ ಹೂಗಳನ್ನು ಇಟ್ಟು ಪೂಜಿಸಿದೆ. ಅನಂತರ, ಶ್ರೀದೇವಿಯನ್ನು ತನ್ನ ವಕ್ಷದಲ್ಲಿ ಧರಿಸಿರುವ ಭಗವಂತನನ್ನು (ಶ್ರೀಮನ್ನಾರಾಯಣನನ್ನು) ಅಲ್ಲಿಗೆ ಆಹ್ವಾನಿಸಿ, ಧ್ಯಾನಿಸಿದೆ. ಭಗವಂತನ ದಿವ್ಯವಾದ ತಿರುವಡಿಗಳಿಗೆ ಭಕ್ತಿ ಜ್ಞಾನಗಳೆಂಬ ಸುಂದರವಾದ ಕಮಲದ ಹೂಗಳಿಂದ ಪೂಜಿಸಿ, ನಮ್ಮನ್ನಾ ಆ ತಿರುವಡಿಗಳಿಗೆ ಎರಗಿದೆನು (ಎರಗುತ್ತೇನೆ).

5. அடி மூன்றி லிவ்வுலக மன்றளந்தாய் போலும்,
அடி மூன் றிரந்தவனி கொண்டாய், — படிநின்ற
நீரோத மேனி நெடுமாலே, நின்னடியை
யாரோத வல்லா ரறிந்து.

ಅಡಿ ಮೂನ್‌ರಿಲ್ ಇವ್ವುಲಹ ಮನ್‌ಅಳನ್ದಾಯ್ ಪೋಲುಮ್,
ಅಡಿ ಮೂನ್‌ರಿರನ್ದವನಿ ಕೊಣ್ಡಾಯ್, — ಪಡಿನಿನ್‌ರ
ನೀರೋದ ಮೇನಿ ನೆಡುಮಾಲೇ, ನಿನ್ನಡಿಯೈ
ಯಾರೋದ ವಲ್ಲಾರ ರರಿನ್ದು.

ಅಡಿ ಮೂನ್‌ರಿಲ್ அடி மூன்றில் = ಮೂರು ಹೆಜ್ಜೆಗಳಿಂದ, ಇ ಉಲಹಮ್ இ உலகம் = ಈ ಲೋಕವನ್ನು, ಅನ್‌ರು அன்று = ಅಂದು, ಅಳನ್ದಾಯ್ ಪೋಲುಮ್ அளந்தாய் போலும் = ಅಳೆದುಕೊಳ್ಳುವ ಹಾಗೆ, ಅಡಿ ಮೂನ್‌ರು அடி மூன்று = ಮೂರು ಹೆಜ್ಜೆಗಳಷ್ಟನ್ನು, ಇರನ್ದು இரந்து = ಯಾಚಿಸಿ, ಅವನಿ அவனி = ಭೂಮಿಯನ್ನು, ಕೊಣ್ಡಾಯ್ கொண்டாய் = ಪಡೆದುಕೊಂಡವನೇ, ಪಡಿ படி = ಭೂಮಿಯ ಮೇಲೆ, ನಿನ್‌ರ நின்ற = ಅವತರಿಸಿದ(ವನೇ), ನೀರ ಓದಮ್ நீர் ஓதம் = ಸಾಗರದಂತೆ, ಮೇನಿ மேனி = ದೇಹಕಾಂತಿಯುಳ್ಳ, ನೆಡುಮಾಲೇ நெடுமாலே = ಸರ್ವೇಶ್ವರನೇ, ನಿನ್ ಅಡಿಯೈ நின் அடியை = ನಿನ್ನ ತಿರುವಡಿಗಳನ್ನು, ಯಾರ್ யார் = ಯಾರು, ಓದವಲ್ಲಾರ್ ஓதவல்லார் = ವರ್ಣಿಸ ಬಲ್ಲರು, ಅರಿನ್ದು அறிந்து = ಅರಿತುಕೊಂಡು.

Carani Srinivasan

ಅಂದು, ಈ ಲೋಕವನ್ನು ಮೂರು ಹೆಜ್ಜೆಗಳಿಂದ ಅಳೆದುಕೊಳ್ಳುವ ದಾಗ, ಮೂರು ಹೆಜ್ಜೆಗಳ ನೆಲವನ್ನು ಯಾಚಿಸಿ ಪಡೆದುಕೊಂಡವನೇ, ಭೂಮಿಯ ಮೇಲೆ ಅವತರಿಸಿದವನೇ, ಸಾಗರದಂತೆ ದೇಹಕಾಂತಿಯುಳ್ಳ ~~ಮಹೇ~~ ಸರ್ವೇಶ್ವರನೇ, ನಿನ್ನ ತಿರುವಡಿಗಳನ್ನು ಅರಿತುಕೊಂಡು ವರ್ಣಿ 5
ಸಬಲ್ಲವರು ಯಾರು?

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನೇ, ನಿನ್ನ ಸಂಕಲ್ಪ ವೇನು? ನೀನು ನಡೆಸಿದ್ದೇನು? ಅವುಗಳ ಪರಿಣಾಮವೇನು? ಈ ವಿಷಯಗಳನ್ನು ಅರಿತುಕೊಳ್ಳುವುದಕ್ಕಾಗಲಿ, ಹಾಗೆ ಅರಿತು ವರ್ಣಿಸುವುದಕ್ಕಾಗಲಿ ಯಾರಿಂದಲೂ ಸಾಧ್ಯವಿಲ್ಲವಲ್ಲ! ಅದಕ್ಕೆ ನಿನ್ನದೇ ಒಂದು ನಿದರ್ಶನ ಸಾಕ್ಷಿಯಾಗಿದೆ ಕಂಡೆಯಾ. ಹಿಂದೆ, ನೀನು ನೀನು ಭೂಮಿಯ ಮೇಲೆ ವಾಮನ ವಟುವಾಗಿ ಅವತರಿಸಿದೆ. ಬಲಿ ಚಕ್ರವರ್ತಿಯ ಯಾಗಶಾಲೆಗೆ ಹೋದೆ. ನಿನ್ನ ಪುಟ್ಟ ಹೆಜ್ಜೆಗಳಲ್ಲಿ ಮೂರೇ ಮೂರು ಹೆಜ್ಜೆಗಳ ನೆಲವನ್ನು ಯಾಚಿಸಿ, ಅವನಿಂದ ಪಡೆದು ಕೊಂಡೆ. ಆಗ, ನಿನ್ನ ಸಂಕಲ್ಪ ಏನಿದ್ದಿರಬಹುದು? ನೀನೇ ಸೃಷ್ಟಿಸಿದ ಮೂರು ಲೋಕಗಳನ್ನೂ ನಿನ್ನ ಮೂರು ಹೆಜ್ಜೆಗಳಿಂದ ಅಳೆದು ಕೊಂಡು ಬಿಡಬೇಕೆಂದೋ? ಅದಕ್ಕೆ, ನೀನು ಆಗ ಮಾಡಿದ್ದಾದರೂ ಏನು? ನಿನ್ನ ಎರಡೇ ಹೆಜ್ಜೆಗಳನ್ನು ವಿಸ್ತರಿಸಿ, ಭೂಮಂಡಲವನ್ನೂ ಮೇಲಣ ಎಲ್ಲ ಲೋಕಗಳನ್ನೂ ವ್ಯಾಪಿಸಿ ಅಳೆದುಕೊಂಡು ಬಿಟ್ಟೆ! ಮೂರನೆಯ ಹೆಜ್ಜೆಗೆ ಅವಕಾಶವೇ ಇಲ್ಲದೆ ತನ್ನ ದಾನ ವ್ಯರ್ಥವಾ ಗುವುದಲ್ಲಾ ಎಂದು ಬಲಿ ಚಕ್ರವರ್ತಿ ಹೆದರಿದ. ತನ್ನ ತಲೆಯನ್ನೇ ಆ ಮೂರನೆಯ ಹೆಜ್ಜೆಗಾಗಿ, ನಿನ್ನ ತಿರುವಡಿಯ ಕೆಳಕ್ಕೆ ಒಡ್ಡಿದ. ಕೃತಾರ್ಥನಾದ! ಬಲಿ ಚಕ್ರವರ್ತಿಯನ್ನು ಅನುಗ್ರಹಿಸುವುದೇ ನಿನ್ನ 'ಯಾಚನೆ'ಯ ಪ್ರಯೋಜನವೇ? ಅಥವಾ, ಅವನನ್ನು ಅವನ ದಾನದಿಂದಲೇ ನಿಗ್ರಹಿಸುವುದೋ? ಸ್ವಾಮೀ, ನೀನು ಸರ್ವೇಶ್ವರ. ನೀಲಗಡಲಂತೆ ಹೊಳೆಹೊಳೆಯುವ ದೇಹಕಾಂತಿ ನಿನ್ನದು. ನಿನ್ನ ತಿರುವಡಿಗಳ ಹಿರಿಮೆಯನ್ನೇ ಅರಿತುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲದಿದ್ದಾಗ, ನಿನ್ನನ್ನು ಪೂರ್ಣವಾಗಿ ಅರಿತುಕೊಳ್ಳುವುದಕ್ಕಾಗಲಿ, ಅರಿತಂತೆ ವರ್ಣಿಸಿ ಇತರರಿಗೆ ತಿಳಿಯ ಹೇಳುವುದಕ್ಕಾಗಲಿ ಯಾರಿಗೆ ಸಾಧ್ಯವಾದೀತು?

ಎಂಥ ಭವ್ಯವಾದ ವರ್ಣನೆ! ಎಷ್ಟು ಅಚ್ಚುಕಟ್ಟಾದ ನಿದರ್ಶನ! ಭಗವಂತನ ಲೀಲೆಯನ್ನು ಅರಿಯುವುದಕ್ಕಾದೀತೇ? ಇದೇ ಪ್ರಶ್ನೆ.

Garani Srinivasan

6. அறிந்தைந்து முள்ளடக்கி யாயமலர் கொண்டு, ஆர்வம்
செறிந்த மனத்தராய்ச் செவ்வே, — அறிந்தவன்றன்
பேரோதி யேத்தும் பெருந்தவத்தோர் காண்பரே,
காரோத வண்ணன் கழல்.

ಅಱಿನ್ದೈನ್ದು ಮುಳ್ಳಡಕ್ಕಿ ಯಾಯ ಮಲರ್ ಕೊಣ್ಡು, ಆರ್ವಮ್
ಶೆಱಿನ್ದ ಮನತ್ತರಾಯ್ ಶ್ಚೆವ್ವೇ, — ಅಱಿನ್ದವನ್ ತನ್
ಪೇರೋದಿ ಯೇತ್ತುಮ್ ಪೆರುನ್ದವತ್ತೋರ್ ಕಾಣ್ಬರೇ,
ಕಾರೋದ ವಣ್ಣನ್ ಕಳಲ್.

ಅಱಿನ್ದು அறிந்து = ಅರಿತುಕೊಂಡು, ಐನ್ದುಮ್ ஐந்தும் = (ಇಂದ್ರಿಯಗಳು) ಐದನ್ನು, ಅಡಕ್ಕಿ அடக்கி = ಅಡಗಿಸಿಕೊಂಡು, ಆಯ ಮಲರ್ ಕೊಣ್ಡು ஆய மலர் கொண்டு = ಆಯ್ದ ಹೂಗಳನ್ನು ತೆಗೆದುಕೊಂಡು, ಆರ್ವಮ್ ஆர்வம் = ಆಸೆ (ಭಕ್ತಿ), ಶೆಱಿನ್ದ செறிந்த = ಹೆಚ್ಚಿದ, ಮನತ್ತರ್ ಆಯ್ மனத்தர் ஆய் = ಮನದವರಾಗಿ, ಶ್ಚೆವ್ವೇ செவ்வே = ಚೆನ್ನಾಗಿ, ಅಱಿನ್ದು அறிந்து = ಅರಿತುಕೊಂಡವನಾಗಿ, ಅವನ್ ತನ್ அவன் தன் = ಅವನ, ಪೇರ್ பேர் = ತಿರುನಾಮಗಳನ್ನು, ಓದಿ ஓதி = ಎಡೆಬಿಡದಂತೆ ಹೇಳುತ್ತಾ, ಯೇತ್ತುಮ್ ஏத்தும் = ಸ್ತುತಿಸುವ, ಪೆರುಮ್ ತವತ್ತೋರ್ பெரும் தவத்தோர் = ಮಹಾ ತಪಸ್ವಿಗಳು (ಮಹಾಭಾಗ್ಯಶಾಲಿಗಳು), ಕಾರ್ ಓದಮ್ கார் ஓதம் = ಕಾರ್ಮುಗಿಲಂತಿರುವ ಕಡಲಿನ, ವಣ್ಣನ್ வண்ணன் = ಬಣ್ಣದವನ, ಕಳಲ್ கழல் = ತಿರುವಡಿಗಳನ್ನು, ಕಾಣ್ಬರೇ காண்பரே = ಕಂಡುಕೊಳ್ಳುತ್ತಾರೆ.

ಅರಿತುಕೊಂಡು, ಐದು ಇಂದ್ರಿಯಗಳನ್ನು ಅಡಗಿಸಿಕೊಂಡು, ಆಯ್ದ ಹೂಗಳನ್ನು ತೆಗೆದುಕೊಂಡು, ಆಸೆ ಹೆಚ್ಚಿದ ಮನಸ್ಸಿನವರಾಗಿ, ಚೆನ್ನಾಗಿ ಅರಿತುಕೊಂಡವನಾಗಿ, ಅವನ ತಿರುನಾಮಗಳನ್ನು ಎಡೆಬಿಡದಂತೆ ಹೇಳುತ್ತಾ ಸ್ತುತಿಸುವ (ಪೂಜಿಸುವ) ಮಹಾ ತಪಸ್ವಿಗಳು (ಮಹಾಭಾಗ್ಯಶಾಲಿಗಳು) ಕಾರ್ಮುಗಿಲಂತೆ ಇರುವ ಕಡಲಿನ ಬಣ್ಣದವನನ್ನು ಕಂಡುಕೊಳ್ಳುತ್ತಾರೆ. (6)

ಇಂದಿನ ಪಾಶುರದಲ್ಲಿ ಭಗವಂತನ ತಿರುವಡಿಗಳ ವೈಶಿಷ್ಟ್ಯವೇನೆಂಬುದನ್ನು ಹೇಳಲಾಯಿತು. ಅವನ ಲೀಲೆಯನ್ನು ಅರಿಯಲು

ಅಂತೆಂದೂ ಹೇಳಲಾಯಿತು. ಅನ, ಆ ಭವ್ಯ ತಿರುವಡಿಗಳನ್ನು ಕಂಡುಕೊಳ್ಳುವುದರಿಂದ ಹೇಗೆ ಎಂಬುದನ್ನು ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತನ ದಿವ್ಯ ತಿರುವಡಿಗಳನ್ನು ಕಂಡುಕೊಂಡವರು ಮಹಾ ತಪಸ್ವಿಗಳು, ಮಹಾ ಭಾಗ್ಯಶಾಲಿಗಳು. ಇಂದ್ರಿಯಗಳೇ ಭಗವತ್ಪ್ರಾಪ್ತಿಗೆ ಅಡ್ಡಿಯೆಂಬುದನ್ನು ಅವರು ಚೆನ್ನಾ-ಅರಿತಿದ್ದಾರೆ. ಅವುಗಳನ್ನು ಹೊಡೆದು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಆ ಇಂದ್ರಿಯಗಳು ಪ್ರಾಪಂಚಿಕ ಸುಖದ ಕಡೆಗೆ ನಡೆಯದಂತೆ ಅವನ್ನು ತಡೆಗಟ್ಟಿ, ಭಗವತ್ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಇದರಿಂದಲೇ, ಭಗವಂತನನ್ನು ಕಂಡುಕೊಳ್ಳಲೇ ಬೇಕೆಂಬ ಮಹತ್ತರವಾದ ಆಸೆಯನ್ನು ಅವರು ತಮ್ಮಲ್ಲಿ ಬೆಳೆಸಿಕೊಂಡಿದ್ದಾರೆ. ಭಗವನ್ನಾಮಗಳನ್ನು ಅವರು ಚೆನ್ನಾಗಿ ಅರಿತುಕೊಂಡವರು. ಅವುಗಳನ್ನು ಎಡೆಬಿಡದೆ ಉಚ್ಚರಿಸುತ್ತಲೇ ಇರುತ್ತಾರೆ. ಅಲ್ಲದೆ, ಅಪಾರವಾದ ಪರಿಮಳ ಪುಷ್ಪಗಳನ್ನು ಅವರು ಶೇಖರಿಸಿ ತಂದು, ಅವುಗಳಿಂದ ಭಗವಂತನ ತಿರುವಡಿಗಳನ್ನು ಅರ್ಚಿಸಿ, ಪೂಜಿಸುತ್ತಾರೆ.

ಆ ಭಾಗ್ಯಶಾಲಿಗಳ ಜಾಡನ್ನು ಪ್ರತಿಯೊಬ್ಬನೂ ಅನುಸರಿಸಬೇಕು. ಅವರಂತೆ ನಡೆದುಕೊಂಡು, ಭಗವಂತನ ದಿವ್ಯ ತಿರುವಡಿಗಳನ್ನು ಕಂಡುಕೊಳ್ಳಬೇಕು.

7. கழலெடுத்து வாய்மடித்துக் கண்சுழன்று, மாற்றார்
அழலெடுத்த சிந்தையரா யஞ்ச, - தழலெடுத்த
போராழி யேந்தினான் பொன்மலர்ச் சேவடியே,
ஓராழி நெஞ்சே யுகந்து.

ಕಲಲೆಡುತ್ತು ವಾಯ್ ಮಡಿತ್ತು ಕ್ಕಣ್ ಶುಲನ್ರು, ಮಾಟ್ರಾರ್
ಅಲಲೆಡುತ್ತ ಶಿನ್ದೈಯರಾ ಯಂಜ, - ತಲಲೆಡುತ್ತ
ಪೋರಾಳಿ ಯೇನ್ದಿನಾನ್ ಪೊನ್ ಮಲರ್ ಶ್ಶೇವಡಿಯೇ,
ಓರಾಳಿ ನೆಂಜೇ ಯುಗನ್ದು.

ಕಲಲ್ ಎಡುತ್ತು கழல் எடுத்து = ತಿರುವಡಿಯನ್ನು ಎತ್ತಿ, ವಾಯ್ ಮಡಿತ್ತು வாய் மடித்து = ತುಟಿ ಕಚ್ಚಿ, ಕ್ಕಣ್ ಶುಲನ್ರು கண் சுழன்று = ಕಣ್ಣುಗಳು ತಿರುಗುವಂತಾಗಲು,

Garani Srinivasan

ಮಾಟ್ರಾರ್ மாற்றார் = ಎದುರಾಳಿಗಳು (ವಿರೋಧಿಗಳು), அலர் எறுத்த அழல் நாடுக்க = ಜ್ವಾಲೆ ಉಕ್ಕಿಸುವ, ತಿನ್ನೆಯರ್ ஆய்ஸ் திங்கையர் ஆய் = ಭಯಾನಕ ಚಿಂತೆಯುವರಾಗಲು, அஞ்ச அருச = ಅಂಜಲು, கழல் எறுத்த கழல் நாடுக்க = ಕೆಂಡವನ್ನುಗುಳುವ (ಕೆಂಡ ಕರುಂಬಿರುವ), ಪೋರ್ ಆಳಿ போர் ஆழி = ಹೋರಾಡತಕ್ಕ ಚಕ್ರಾಯುಧವನ್ನು, ಏಂದಿನಾನ் ஏந்தினான் = ಧರಿಸಿರುವವನ, ಪೊನ್ ಮಲರ್ பொன் மலர் = ಸುಂದರವಾದ (ಶ್ರೇಷ್ಠವಾದ) ಹೂವಿನಂಥ, ಶೇ ಅಡಿಯೇ சே அடியே = ಕೋಮಲವಾದ (ಕೆಂಪಾದ) ಪಾದವನ್ನೇ, ಆಳಿ நெஞ்சே ஆழி நெஞ்சே = ಗಾಢವಾದ ಮನಸ್ಸೇ, ಉಗನ್ದು உகந்து = ಉತ್ಸಾಹದಿಂದ (ಆಶೆಯಿಂದ), ಓರ್ ನಿನೈ = ಚಿಂತಿಸು (ಧ್ಯಾನಿಸು).

ಗಾಢವಾದ ಮನಸ್ಸೇ, ತಿರುವಡಿಯನ್ನೆತ್ತಿ, ಓಡುಕಟ್ಟಿ, ವಿರೋಧಿಗಳ ಕಣ್ಣುಗಳು ತಿರುಗುವಂತಾಗಲು, ಜ್ವಾಲೆ ಉಕ್ಕಿಸುವ ಭಯಾನಕ ಚಿಂತೆಯುಳ್ಳವರಾಗಲು, ಅಂಜಲು, ಕೆಂಡವನ್ನುಗುಳುವ ಹೋರಾಡತಕ್ಕ ಚಕ್ರಾಯುಧಧಾರಿಯ ಶ್ರೇಷ್ಠವಾದ ಹೂವಿನಂಥ ಕೋಮಲವಾದ (ಕೆಂಪಾದ) ತಿರುವಡಿಯನ್ನೇ ಉತ್ಸಾಹದಿಂದಲೂ (7) ಆಶೆಯಿಂದಲೂ ಚಿಂತಿಸು (ಧ್ಯಾನಿಸು).

ಹಿಂದಿನ ಪಾಶುರದಲ್ಲಿ ಭಗವಂತನ ತಿರುವಡಿಗಳನ್ನು ಕಂಡುಕೊಂಡು ಪೂಜಿಸುವವರು ಭಾಗ್ಯಶಾಲಿಗಳು ಎನ್ನಲಾಯಿತು. ಈಗ, ಭಗವಂತನ ಆ ದಿವ್ಯ ತಿರುವಡಿಗಳನ್ನೇ ಆಶ್ರಯಿಸಿ, ಎಡೆಬಿಡದಂತೆ ಚಿಂತಿಸುತ್ತಿರಬೇಕೆಂದು ಆಳ್ವಾರರು ತಮ್ಮ ಗಾಢವಾದ (ಗಂಭೀರವಾದ) ಮನಸ್ಸಿಗೆ ತಿಳುವಳಿಕೆ ಕೊಡುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಗಂಭೀರವಾದ ಮನಸ್ಸೇ, ಹಿಂದೆ, ಭಗವಂತನ ತಿರುವಡಿಯೊಂದು ಬೆಳೆಬೆಳೆಯುತ್ತಾ ಮೇಲಣ ಲೋಕಗಳನ್ನೆಲ್ಲಾ ಆವರಿಸಿ ಬಿಟ್ಟಿತು. ಆಗ, ನ್ಯಾಯವಿರದ ವಿರೋಧಿಗಳು ಭಯದಿಂದ ನಡುನಡುಗಿದರು. ಅವರ ಕಣ್ಣಾಲಿಗಳು ಗರಗರನೆ ತಿರುಗಿದವು. ದಿಗ್ಭ್ರಾಂತರಾದರು. ವಿರೋಧಿಗಳನ್ನು ಹೆಸರಿಲ್ಲದಂತೆ ನಾಶಮಾಡುವಂಥ ಭಯಂಕರವಾದ ಚಕ್ರಾಯುಧಧಾರಿಯ ದಿವ್ಯವೂ ಕೋಮಲವೂ ಆದ ತಿರುವಡಿಗಳನ್ನೇ

ಆಶ್ರಯಿಸು. ಅದನ್ನು ಎಷ್ಟೆ ಬಿಡದಂತೆ ಚಿಂತಿಸು.

ಈ ಪಾಶುರದಲ್ಲಿ ಭಗವಂತನ ತ್ರಿವಿಕ್ರಮಾವತಾರದ ಕಥೆಯ ಸ್ಮೃ-
ತಿ ಇದೆ. ಭಗವಂತನು ~~ಬಲಿಚಕ್ರವರ್ತಿಯಿಂದ~~ ವಾಮನ ವಟುವಾಗಿ ಬಂ-
ದು ಬಲಿಚಕ್ರವರ್ತಿಯಿಂದ ಮೂರು ಹೆಜ್ಜೆಗಳ ನೆಲವನ್ನು ಯಾಚಿಸಿ ದಾನವಾ-
ಗಿ ಪಡೆದನಷ್ಟೆ. ಆ ಕೂಡಲೇ ಭಗವಂತನು ತ್ರಿವಿಕ್ರಮನಾಗಿ ಬೆಳೆದ-
ನು. ತನ್ನ ಒಂದು ಹೆಜ್ಜೆಯನ್ನು ವಿಸ್ತರಿಸಿ ಭೂಮಂಡಲವನ್ನೆಲ್ಲಾ
ಅಳೆದುಕೊಂಡನು. ಮತ್ತೊಂದು ಹೆಜ್ಜೆಯನ್ನು ಮೇಲಣಲೋಕಗಳ-
ತ್ತ ಬೆಳೆಸುತ್ತಿರುವುದನ್ನು ಕಂಡ ಬಲಿಚಕ್ರವರ್ತಿಯ ಮಗ ನಮುಚಿ
ಕಡು ಕೋಪಗೊಂಡ. ಪಡೆದುಕೊಂಡ ದಾನವನ್ನು ಪಡೆದುಕೊಂಡ
ರೀತಿಯಲ್ಲೇ, ಪಡೆದುಕೊಂಡ ರೀತಿಯಲ್ಲೇ ಅಲ್ಲವೇ ಸ್ವೀಕರಿಸಬೇಕಿ-
ದ್ದು? ವಾಮನ ವಟು ಮಾಡುತ್ತಿರುವುದೇನು? ಇದೆಂಥ ಮೋಸ?
ಎಂಥ ಇಂದ್ರಜಾಲ? ಕೋಪದಿಂದ ನಮುಚಿ ಭಗವಂತನ ಪಾದ-
ವನ್ನು ಪಟ್ಟಾಗಿ ಹಿಡಿದ. ಅದು ಬೆಳೆಯದಂತೆ ಇರಬೇಕೆಂಬ
ಇಚ್ಛೆಯಿಂದ. ಅದನ್ನು ಮುಂದಕ್ಕೆ ಬೆಳೆಸಬಾರದೆಂದು ಪಟ್ಟು
ಹಿಡಿದ. ನ್ಯಾಯವಲ್ಲದ ರೀತಿಯಲ್ಲಿ ವರ್ತಿಸಬಾರದೆಂದು
ನಿಷ್ಠುರದ ಮಾತುಗಳನ್ನಾಡಿದ. ತ್ರಿವಿಕ್ರಮನಾದ ಭಗವಂತನು
ತನ್ನ ಕಾಲಿನ ಜಾಡಿಸುವಿಕೆಯಲ್ಲೇ ಅವನನ್ನು ಅಂತರಿಕ್ಷಕ್ಕೆ ಎಸೆದು
ಅಲ್ಲಿ ಅವನನ್ನು ಸುತ್ತಿ ಬಿಟ್ಟನು. ಆಗ ನಮುಚಿಯ ಗತಿ
ಏನಾಗಿರಬಹುದೆಂಬುದನ್ನು ಯೋಚಿಸಿ ತಿಳಿಯಬಹುದಷ್ಟೆ.
ಎದುರಾಳಿ ಎಷ್ಟೇ ಪ್ರಬಲನಾಗಿದ್ದರೂ ಭಗವಂತನ
ಮುಂದೆ ಅವನು ಯಾವ ಮಾತ್ರ! ಸುಲಭವಾಗಿ ಸಿಕ್ಕದವನಿಗೆ
ಭಗವಂತನ ಕೃಪೆಯ ಆಶ್ರಯವೇ ಬೇಕಲ್ಲವೇ?

8. உகந்துன்னை வாங்கி யொளிநிறங்கொள் கொங்கை,
அகங்குளிர வுண்ணென்றாளாவி, உகந்து
முலையுண்பாய் போலே முனிந்துண்டாய், நீயும்
அலைபண்பா லானமையா லன்று.

ಉಗನ್ದುನ್ನೈ ವಾಙ್ಗಿ ಯೊಳಿನಿಱಙ್ಗೊಳ್ ಕೊಙ್ಗೈ,
ಅಗಙ್ಗುಳಿರ ವುಣ್ಣೆನ್ಱಾಳಾವಿ, ಉಗನ್ದು
ಮುಲೈಯುಣ್ಬಾಯ್ ಪೋಲೇ ಮುನಿನ್ದುಣ್ಡಾಯ್, ನೀಯುಮ್
ಅಲೈಪಣ್ಬಾಲಾನಮೈಯಾಲನ್ಱು.

Garani Srinivasan

ಉರುಸ್ದ ಉರುನ್ದು = ಉತ್ಸಾಹದಿಂದ, ಉನ್ನೈ ಉಣ್ಣಾ = ನಿನ್ನನ್ನು, ಪಾಙ್ಗೆ ವಾಙ್ಗಿ = ಎತ್ತಿಕೊಂಡು, ಒಳ್ಳನಿ ಅಮರ ಕೋಳ್ [illegible] = ಕೊಳ್ಳೆಯುವ ಬಣ್ಣದ ಮೊಲೆಯನ್ನು, [illegible] = ಮನಸ್ಸು ತಂಪಾಗುವಷ್ಟು, ಉಣ್ಣ = ಉಣ್ಣು, [illegible] = ಎಂದಪಳ್ಳ, ಇವಿ ಆವಿ = ಪ್ರಾಣವನ್ನು, ಉರುಸ್ದ ಉರುನ್ದು = ಆಸೆಯಿಂದ, [illegible] = ಉಣ್ಣುವವನ ಹಾಗೆಯೇ, [illegible] = (ನಿನ್ನ) ಪೌಲ ಅಂದು, [illegible] = ಆಸ್ಥೆಯಿಂದ, ಭಾಗ್ಯ ಗುಣದಿಂದ, [illegible] = ಕೊಲಮೂಗೊಂಡು ಮುನಿಸ್ದು [illegible] = ನೀಲಸೂಪ್ದ, [illegible] ಉಂಡುಬಿಟ್ಟೆ.

ಅಂದು, ಉತ್ಸಾಹದಿಂದ, ನಿನ್ನನ್ನು ಎತ್ತಿಕೊಂಡು, ಕೊಳ್ಳೆಯುವ ಬಣ್ಣದ (ಆಕರ್ಷಕವಾದ) ಮೊಲೆಯನ್ನು ಮನಸ್ಸು ತಂಪಾಗುವಷ್ಟು ಹುಟ್ಟಿ ಎಂದಪಳ್ಳ ಮೊಲೆಯನ್ನು ಆಸೆಯಿಂದ ಉಣ್ಣುವವನ ಹಾಗೆಯೇ, ಆಸ್ಥೆಯಿಂದ ನೀಲಸೂಪ್ದ ನಿನ್ನ ಅತಿಶಯದ (ಪೌಲಭ್ಯ) ಗುಣದಿಂದ (8) ಕೊಲಮೂಗೊಂಡು (ಅವಳ) ಪ್ರಾಣವನ್ನೇ ಉಂಡುಬಿಟ್ಟೆ.

ಇಲ್ಲಿ ಶ್ರೀಕೃಷ್ಣಾವತಾರದ ದಿಂಗಿಲಿಯಿದೆ. ಭಗವಂತನು ಶ್ರೀಕೃಷ್ಣನಾಗಿ, ದೇವಕಿಯ ಮಗನಾಗಿ ಅವತರಿಸಿ, ಕಾರಣಾಂತರಗಳಿಂದ ನಂದಗೋಕುಲದಲ್ಲಿ ಯಶೋದೆಯ ಮಗನಾಗಿ ಬೆಳೆಯುತ್ತಿದ್ದನು. ಅವನ ಸೋದರ ಮಾವನೇ ಆದ ಕಂಸನು ಅವನನ್ನು ದೇವಾದರಾ ಮಾಡಿ ಕೊಲ್ಲಿಸಬೇಕೆಂದು ಯೋಚಿಸಿ, ಹಲವಾರು ರಾಕ್ಷಸರನ್ನು ನಿಯಮಿಸಿದನು. ಅವರಲ್ಲಿ ಒಬ್ಬಳು ಪೂತನಿ. ಅವಳು ಯಶೋದೆಯ ಹಾಗೆಯೇ ತನ್ನ ವೇಷವನ್ನು ಮರೆಸಿಕೊಂಡು ನಂದಗೋಕುಲಕ್ಕೆ ಬಂದಳು. ಶಿಶುವಾದ ಕೃಷ್ಣನನ್ನು ಕಂಡಳು. ಬಲು ಸಡಗರದಿಂದ ಅವನನ್ನೆತ್ತಿಕೊಂಡಳು. ಸುಂದರವಾದ ತನ್ನ ಮೊಲೆಯನ್ನುಣಿಸಿದಳು. ಶಿಶುವಾದ ಕೃಷ್ಣನೂ ಸಹ ಅಷ್ಟೇ ಆಸೆಯಿಂದ ಅವಳ ಮೊಲೆಗೆ ಬಾಯಿಡುತ್ತಿದ್ದನು. ಅದನ್ನು ಹಾಲ್ಕುಡಿಯುವ ರೀತಿ ಕುಡಿಯುವ ಹಾಗೆಯೇ, ಅವಳ ಪ್ರಾಣವನ್ನು ಹೀರಿ, ಅವಳನ್ನು ಕೊಂದು ಹಾಕಿದನು.

ಶತ್ರುವಾದರೂ, ಕನ್ನೆಯ ವೇಷದಲ್ಲಿ ಬಂದದ್ದರಿಂದ ಅವಳಲ್ಲಿ ಔದಾರ್ಯ ತೋರಿಸಿದ್ದು. ವಿಷದ ಮೊಲೆಯನ್ನುಣಿಸಿ ಅವನನ್ನು ಕಪಟದಿಂದ ಕೊಲ್ಲಲು ಬಂದದ್ದರಿಂದ, ಅವಳ ಕಪಟವನ್ನೇ ನೆಪ ಮಾಡಿಕೊಂಡು ಅದರಿಂದಲೇ ಅವಳ ಪ್ರಾಣಗಳನ್ನು ಹೀರಿಕೊಂಡದ್ದು. ಅದೂ ಒಂದು ಬಗೆಯ ಔದಾರ್ಯವೇ ಅಲ್ಲವೇ?

9. அன்றது கண்டஞ்சாத வாய்ச்சியுனக்கிரங்கி,
நின்று முலை தந்த இந்நீர்மைக்கு - அன்று
வரன் முறையால் நீயளந்த மாகடல்சூழ் ஞால
பெருமுறையா லெய்துமோ பேர்த்து.

ಅನ್ಱದು ಕಣ್ಡಂಜಾದ ವಾಯ್ಚ್ಚಿ ಯುನಕ್ಕಿರಂಗಿ,
ನಿನ್ಱು ಮುಲೈತನ್ದ ಇನ್ನೀರ್ಮೈಕ್ಕು, - ಅನ್ಱು
ವರನ್ ಮುಱೈಯಾಲ್ ನೀಯಳನ್ದ ಮಾಕಡಲ್ ಶೂಳ್ ಞಾಲಮ್,
ಪೆರು ಮುಱೈಯಾ ಲೆಯ್ದುಮೋ ಪೇರ್ತ್ತು.

ಅನ್ಱು அன்று = ಅಂದು, ಅದು ಕಂಡು அது கண்டு = ಅದನ್ನು ನೋಡಿ, ಅಂಜದ அஞ்சாத = ಅಂಜದೆ ಇರುವ, ಆಯ್ಚ್ಚಿ ஆய்ச்சி = ಗೊಲ್ಲತಿಯಾದ ಯಶೋದೆಯು, ಉನಕ್ಕು உனக்கு = ನಿನಗೆ, ಇರಂಗಿ இரங்கி = ಮನಸ್ಸು ಕರಗಿ, ನಿನ್ಱು நின்று = ನಿಂತು, (ಅಲ್ಲಿಯೇ ಇದ್ದುಕೊಂಡು), ಮುಲೈ ತನ್ದ முலை தந்த = ಮೊಲೆಯುಣಿಸಿದ, ಇ ನೀರ್ಮೈಕ್ಕು இ நீர்மைக்கு = ಸ್ವಭಾವಕ್ಕೆ (ವಾತ್ಸಲ್ಯಭಾವಕ್ಕೆ), ಅನ್ಱು அன்று = ಅಂದು, ವರನ್ ಮುಱೈಯಾಲ್ வரன் முறையால் = ಶ್ರೇಷ್ಠ ಪುರುಷನ ರೀತಿಯಲ್ಲಿ, ನೀ நீ = ನೀನು, ಅಳನ್ದ அளந்த = ಅಳೆದು ಕೊಂಡ, ಮಾಕಡಲ್ ಶೂಳ್ மாகடல் சூழ் = ಮಹಾಕಡಲಿನಿಂದ ಸುತ್ತುವರಿದಿರುವ, ಞಾಲಮ್ ஞாலம் = ಭೂಮಂಡಲವನ್ನು, ಪೆರು ಮುಱೈಯಾಲ್ பெருமுறையால் = ದೊಡ್ಡ ರೀತಿಯಲ್ಲಿ, ಪೇರ್ತ್ತು பேர்த்து = ಬೇರೆ ಮಾಡುವುದರಿಂದ (ಬದಲಾಯಿಸುವುದರಿಂದ), ಎಯ್ದುಮೋ எய்துமோ = ಸಮವಾದೀತೇ?

ಅಂದು ಅದನ್ನು ಕಂಡು ಅಂಜದ ಗೊಲ್ಲತಿಯಾದ ಯಶೋದೆಯು, ನಿನಗೆ ಮನಸ್ಸು ಕರಗಿ ಅಲ್ಲಿಯೇ ಇದ್ದುಕೊಂಡು ಮೊಲೆಯುಣಿಸಿದ ವಾತ್ಸಲ್ಯಭಾವಕ್ಕೆ, ಅಂದು ಶ್ರೇಷ್ಠ ಪುರುಷನ ರೀತಿಯಲ್ಲಿ ನೀನು

ಅಳೆದು ಕೊಂಡ ಮಹಾ ಕಷ್ಟದಿಂದ ವಿಮುಕ್ತ ಪಡೆದಿರುವ ಭೂಮಂಡಲ
ವನ್ನು ಹೆಂಗಸರಿಗೆ ಯಾಕೆ ಹೋಲಿಸುವುದರಿಂದ ಏನೇನು ಲಾಭವೇ?

ಒಂದನೆ ಪಾಶುರದಲ್ಲಿ ಪ್ರಳಯ ಸಂಹಾರದ ವಿಷಯವನ್ನು
ಕುರಿತು ಹೇಳಲಾಯಿತು. ಈಗ ತ್ರಿವಿಕ್ರಮಾವತಾರದ ಲೀಲೆಗೂ ಪ್ರ
ಳಯ ಸಂಹಾರದ ಲೀಲೆಗೂ ಇರುವ ಭೇದವನ್ನು ಸ್ವಾರಸ್ಯವಾಗಿ ವಿವರಿಸಿ
ಆನಂದಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಭಗವಂತ, ನೀನು ಪ್ರಳಯ
ಸಂಹಾರ ಮಾಡಿದಾಗ, ಆ ಬೃಹತ್ ದೇಹದ ಪೃಥ್ವಿ ನಿಶ್ಚೇಷ್ಟ ಬಿದ್ದು,
ಅವಳ ಮಗ್ಗುಲಲ್ಲೇ ನೀನು ಎಳೆಯ ಶಿಶುವಾಗಿ ನಲಿದಾಡುತ್ತಿರು
ದನ್ನು ನಿನ್ನ ತಾಯಿ ಯಶೋದೆ ಕಣ್ಣಾರ ಕಂಡಳು. ಅಂಜದೆ ಬಂದ
ನಿನ್ನನ್ನೆತ್ತಿ ಕೊಂಡಳು. ಅವಳ ಮನಸ್ಸು ಕರಗಿತು. ತನ್ನ ಮೊಲೆ
ಯನ್ನುಣಿಸಿ ನಿನ್ನನ್ನು ಸಮಾಧಾನ ಪಡಿಸಿದಳು. ಆದರೆ, ನೀನು
ಅಂದು, ಬಲಿ ಚಕ್ರವರ್ತಿಯ ಬಳಿಗೆ ಬಂದು, ಅವನನ್ನು ವಾಮನನಾ
ಯಾಚಿಸಿ ಪಡೆದು ಕೊಂಡ ಮೂರಡಿ ಭೂಮಿಯನ್ನು
ತ್ರಿವಿಕ್ರಮನಾಗಿ ಅಳೆದು ಕೊಂಡೆಯಲ್ಲ. ಅದರಲ್ಲಿ ಒಂದು ಹೆಜ್ಜೆ
ಯಿಂದ ನೀನು ಮಹಾ ಕಷ್ಟದಿಂದ ವಿಮುಕ್ತಗೊಳಿಸಿರುವ ಈ ಭೂಮಂಡ
ಲವನ್ನೆಲ್ಲಾ ವಿಸ್ತಾರವಾಗಿ ಆವರಿಸಿ ಅಳೆದುಕೊಂಡು ಬಿಟ್ಟೆಯಲ್ಲ
ಅದರಿಂದಲೇ ನಿನಗೆ ಈ ಹದುಳಿಯ ಸ್ವಭಾವ ಬಂತೇ? ಇದನ್ನು
ಅರಿತು ಕೊಳ್ಳುವುದು ಹೇಗೆ?

ಭಗವಂತನ ಸ್ವಭಾವವೇ ವಿಚಿತ್ರ. ಅವನು ಏನು ಬೇಕೆಂ
ದರೆ ಅದೇ ಆಗಬಲ್ಲನು. ಒಂದಕ್ಕೆ ಬಳಸಿದ್ದನ್ನು ಮತ್ತೊಂದಕ್ಕೆ
ಬಳಸುವುದಿಲ್ಲ. ಯಾರು ಯಾರಿಗೆ ಯಾವುದ್ದೇ ಅವರಿಗೆ
ಅದೇ ಸತ್ಯವು.

10. பேர்த்தனை மாசகடம் பிள்ளையாய், மண்ணிரந்து
காத்தனை பல்லுயிரும் காவலனே, - ஏத்திய
நாவுடையேன் பூவுடையேன் நின்னுள்ளி நின்றமையால்
காவடியேன் பட்ட கடை.

ಪೇರ್ತ್ತನೈ ಮಾಶಗಡಮ್ ಪಿಳ್ಳೈಯಾಯ್, ಮಣ್ಣಿರನ್ದು
ಕಾತ್ತನೈ ಪಲ್ಲುಯಿರುಮ್ ಕಾವಲನೇ,- ಏತ್ತಿಯ

ನಾವುಡೈಯೇನ್ ಪೂವುಡೈಯೇನ್ ನಿನ್ನುಳ್ಳಿ ನಿನ್ಉಣ್ಮೈಯಾಲ್,
ಶಾವಡಿಯೇನ್ ಪಟ್ಟ ಕಡೈ.

ಪಿಳ್ಳೈ ಆಯ್ பிள்ளாயாய் = ಶಿಶುವಾಗಿಯೇ, ಮಾಶಗಡಮ್ மா சகடம் = ದೊಡ್ಡ ಶಕಟವನ್ನು, ಪೇರ್ತ್ತನ್ನೆ பேர்த்தனை = ನಾಶಪಡಿಸಿದವನೇ, ಮಣ್ ಇರನ್ದ மண் இரந்து = ಭೂಮಿಯನ್ನು ಯಾಚಿಸಿ, ಕಾತ್ತನ್ನೆ காத்தனை = ರಕ್ಷಿಸಿದವನೇ, ಎಲ್ ಉಯಿರುಮ್ எல் உயிரும் = ಎಲ್ಲಾ (ಹಲವಾರು) ಜೀವರಗಳನ್ನು, ಕಾವಲನೇ காவலனே = ರಕ್ಷಕನಾಗಿರುವವನೇ, ಪತ್ತಿಯ ಏತ್ತು = ಸ್ತುತಿಸುವ, ನಾ நா = ನಾಲಗೆಯನ್ನು, ಉಡೈಯೇನ್ உடையேன் = ಉಳ್ಳವನಾಗಿದ್ದೇನೆ, ಪೂ ಉಡೈಯೇನ್ பூ உடையேன் = ಪುಷ್ಪವನ್ನು ಉಳ್ಳವನಾಗಿದ್ದೇನೆ, ನಿನ್ ಉಳ್ಳಿ நின் உள்ளி = ನಿನ್ನನ್ನು ಚಿಂತಿಸುತ್ತಾ, ನಿನ್ಉಣ್ಮೈಯಾಲ್ நின்றமையால் = ಇರುವುದರಿಂದ, ಅಡಿಯೇನ್ அடியேன் = ಪಾದಸೇವಕನಾದ ನಾನು, ಪಟ್ಟ பட்ட = ಅನುಭವಿಸಿದ, ಕಡೈ கடை = ಕಷ್ಟಪರಂಪರೆಗಳನ್ನು, ಕಾ கா = ಕಾಪಾಡು.

ಶಿಶುವಾಗಿಯೇ ಮಹಾಶಕಟವನ್ನು ನಾಶಪಡಿಸಿದವನೇ, ಭೂಮಿಯನ್ನು ಯಾಚಿಸಿ ರಕ್ಷಿಸಿದವನೇ, ಹಲವಾರು (ಎಲ್ಲಾ) ಜೀವರುಗಳನ್ನು ರಕ್ಷಿಸುವವನೇ, ಸ್ತುತಿಸುವ ನಾಲಗೆಯನ್ನುಳ್ಳವನಾಗಿದ್ದೇನೆ, ಪುಷ್ಪಗಳನ್ನುಳ್ಳವನಾಗಿದ್ದೇನೆ, ನಿನ್ನನ್ನೇ ಚಿಂತಿಸುತ್ತಾ ಇರುವುದರಿಂದ, ಪಾದಸೇವಕನಾದ ನಾನು ಅನುಭವಿಸಿದ ಕಷ್ಟಪರಂಪರೆಗಳಿಂದ ನನ್ನನ್ನು ಕಾಪಾಡು. (10)

ಇಲ್ಲಿ ಭಗವಂತನ ಶ್ರೀಕೃಷ್ಣಾವತಾರ, ವಾಮನತ್ರಿವಿಕ್ರಮಾವತಾರ ಮತ್ತು ಸ್ವಾಮಿಯು ಜೀವರಕ್ಷಕತ್ವವನ್ನು ಹೊಗಳಿ ಹೇಳುತ್ತಾ, ಮಹಾಸಂಕಟವನ್ನು ಅನುಭವಿಸುತ್ತಿರುವ ತಮ್ಮನ್ನು ಕಾಪಾಡೆಂದು ಆಳ್ವಾರರು ಭಗವಂತನನ್ನು ಪ್ರಾರ್ಥಿಸುತ್ತಾರೆ.

"ಪಿಳ್ಳೈಯಾಯ್ ಮಾಶಗಡಮ್ ಪೇರ್ತ್ತನ್ನೆ" – ಇದು ಕೃಷ್ಣಾವತಾರದ ಪ್ರಸಂಗ. ಶಿಶುವಾದ ಕೃಷ್ಣನು ನಂದಗೋಕುಲದಲ್ಲಿ ಬೆಳೆಯುತ್ತಿದ್ದಾಗ, ಅವನನ್ನು ಹೇಗಾದರೂ ಕೊಲ್ಲುವುದಕ್ಕಾಗಿ ಅವನ ಸೋದರಮಾವನಾದ ಕಂಸನು ಅನೇಕ ರಾಕ್ಷಸರನ್ನು ಕಳುಹಿಸಿದನಷ್ಟೆ. ಪೂತನಿ ಮೊದಲನೆಯವಳು. ಮಾಯಾವಿನಿ ವಿಷಪೂರಿತ ಮೊಲೆ-

Garani Srinivasan

ಹಾಲನ್ನೂಡಿಸಿ ಅವನನ್ನು ಕೊಲ್ಲಲೆತ್ನಿಸಿ ತಾನೇ ಸತ್ತಳು. ಎರಡನೆಯ ಪ್ರಸಂಗ ಪೇಳ ಇಲ್ಲಿ ಬರುವುದು. ಮತ್ತೊಬ್ಬ ರಾಕ್ಷಸನು ದೊಡ್ಡ ಬಂಡಿಯಾಗಿ ಅಲ್ಲಿ ಬಂದು, ಮಲಗಿರುವ ಶಿಶುವಾದ ಕೃಷ್ಣನ ಮೇಲೆ ಬಂದು ಅವನನ್ನು ಕೊಂದು ಬಿಡಲು ಬರುತ್ತಿರುವಾಗ, ಶಿಶುವಾದ ಕೃಷ್ಣನು ~~ಅವನನ್ನು ಕಾಲಿನಿಂದ~~ ಬಂಡಿಯಾಗಿದ್ದ ಅವನನ್ನು ಪುಟ್ಟ ಕಾಲಿನಿಂದಲೇ ಒದೆದು, ಪುಡಿಪುಡಿ ಮಾಡಿ, ಕೊಂದನು. ಇದು ಶಕಟಾಸುರ ಸಂಹಾರದ ಕಥೆ.

"ಮಣೀ ಇರನ್ನು ಕಾತ್ತನ್ನೆ" — ಇದು ಭಗವಂತನ ವಾಮನ ತ್ರಿವಿಕ್ರಮ ರೂಪದ ಕಥೆ. ಬಲಿಚಕ್ರವರ್ತಿಯು ಮೂರು ಲೋಕಗಳ ಒಡೆಯನಾಗ ಬೇಕೆಂಬ ಮಹತ್ತರವಾದ ಆಸೆಯನ್ನು ನೀಗಿಸಿ, ಅವನನ್ನು ಸಂಪೂರ್ಣವಾಗಿ ಅನುಗ್ರಹಿಸಬೇಕೆಂಬುದಕ್ಕಾಗಿ ಅವನ ಯಾಗಶಾಲೆಗೆ ವಾಮನವಟುವಾಗಿ ಭಗವಂತನು ಬಂದ. ತನ್ನ ಹೆಜ್ಜೆಯಲ್ಲಿ ಮೂರಡಿ ಮೂರು ಹೆಜ್ಜೆ ನೆಲವನ್ನು ಯಾಚಿಸಿದ. ಅದನ್ನು ಅವನಿಂದ ಪಡೆದುಕೊಂಡ. ಆ ಕೂಡಲೇ ತ್ರಿವಿಕ್ರಮನಾಗಿ ಬೆಳೆದು ತನ್ನ ಎರಡೇ ಹೆಜ್ಜೆಗಳಿಂದ ಭೂಮಂಡಲವನ್ನೂ, ಮೇಲಣ ಎಲ್ಲಾ ಲೋಕಗಳನ್ನು ವ್ಯಾಪಿಸಿ ಅಳೆದುಕೊಂಡುಬಿಟ್ಟ. ಮೂರನೆಯ ಹೆಜ್ಜೆಗೆ ಸ್ಥಳ ಇಲ್ಲವಾದ್ದರಿಂದ, ಅದನ್ನು ತನ್ನ ತಲೆಯ ಮೇಲೆಯೇ ಇಡುವಂತೆ ಬಲಿಚಕ್ರವರ್ತಿ ಭಗವಂತನನ್ನು ಕೇಳಿಕೊಂಡಂತೆಯೇ ಮಾಡಿ, ಅವನಿಗೆ ಪೂರ್ಣಾನುಗ್ರಹ ಮಾಡಿದನು.

"ಮೇಲುಯಿರುಮಾ ಕಾವಲನೇ" — ಇದು ಭಗವಂತನ ಸರ್ವರಕ್ಷಕತ್ವವನ್ನು ಸಾರುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತ, ನಿನ್ನ ಮಹಿಮೆ ಅಪಾರ. ಶಿಶುವಾಗಿದ್ದಾಗಲೇ ನೀನು ಶಕಟನೆಂಬ ರಾಕ್ಷಸನನ್ನು ನಿನ್ನ ಪುಟ್ಟ ಕಾಲಿನಿಂದ ಒದೆದು ಕೊಂದುಹಾಕಿದೆ. ವಾಮನ ವಟುವಾಗಿ ಬಂದು ಬಲಿಚಕ್ರವರ್ತಿಯಿಂದ ಮೂರಡಿ ನೆಲವನ್ನು ಯಾಚಿಸಿ ಪಡೆದುಕೊಂಡ ಬಳಿಕ ತ್ರಿವಿಕ್ರಮನಾಗಿ ಬೆಳೆದು ಅವನ ತಲೆಯ ಮೇಲೆ ನಿನ್ನ ಪಾದವನ್ನಿಟ್ಟು ಅವನನ್ನನುಗ್ರಹಿಸಿದೆ. ನಾನು ನಿನ್ನ ಪಾದಸೇವಕ. ನನಗೆ ನಿನ್ನನ್ನು ಸದಾ ಚಿಂತಿಸುವ ಮನಸ್ಸಿದೆ. ನಿನ್ನನ್ನು ಸದಾ ಸ್ತುತಿಸುವ ನಾಲಗೆಯಿದೆ. ನಿನ್ನನ್ನು ಪೂಜಿಸುವ ಪುಷ್ಪಾದಿ ಉಪಕರಣಗಳಿವೆ. ನಾನು ಬಹಳ ಸಂಕಟಗಳನ್ನು ಅನುಭವಿಸುತ್ತಿದ್ದೇನೆ. ನನ್ನನ್ನು ಈ ಸಂಕಟದಿಂದ ಪಾರುಮಾಡು.

11. கடை நின் றமரர் கழல்தொழுது, நாளும்
இடை நின்ற வின்பத்த ராவர், — புடைநின்ற
நீரோத மேனி நெடுமாலே, நின்னடியை
யாரோத வல்லா ரவர்.

ಕಡೈನಿನ್ಱಮರರ್ ಕೞಲ್ ತೊೞುದು, ನಾಳುಮ್
ಇಡೈನಿನ್ಱ ಇನ್ಬತ್ತರಾವರ್, — ಪುಡೈನಿನ್ಱ
ನೀರೋದ ಮೇನಿ ನೆಡುಮಾಲೇ, ನಿನ್ನಡಿಯೈ
ಯಾರೋದ ವಲ್ಲಾರವರ್.

ಅಮರರ್ அமரர் = ದೇವತೆಗಳು, ಕಡೈ கடை = ಬಾಗಿಲಲ್ಲಿ, ನಿನ್ಱು நின்று = ನಿಂತು, ಕೞಲ್ ತೊೞುದು கழல் தொழுது = ಅವರ ಪಾದಗಳನ್ನು ಪೂಜಿಸಿ, ನಾಳುಮ್ நாளும் = ಯಾವಾಗಲೂ, ಇಡೈ ನಿನ್ಱ இடை நின்ற = ನಡುವೆ ಇರುವ, ಇನ್ಬತ್ತರ್ ಆವರ್ இன்பத்தர் ஆவர் = ಸುಖವನ್ನು (ಆನಂದವನ್ನು) ಅನುಭವಿಸುವವರು ಆಗುತ್ತಾರೆ. ಪುಡೈ ನಿನ್ಱ புடை நின்ற = ಸುತ್ತುವರಿದು ನಿಂತಿರುವ, ನೀರೋದ ಮೇನಿ நீரோத மேனி = ಸಮುದ್ರದ ದೇಹಕಾಂತಿಯುಳ್ಳ, ನೆಡುಮಾಲೇ நெடுமாலே = ಸರ್ವೇಶ್ವರನೇ, ನಿನ್ ಅಡಿಯೈ நின் அடியை = ನಿನ್ನ ತಿರುವಡಿಗಳನ್ನು, ಯಾರ್ ಓದ ವಲ್ಲಾರ್ ಅವರ್ யார் ஓத வல்லார் அவர் = ಅನುಸಂಧಿಸಿ ಅರಿತುಕೊಳ್ಳಬಲ್ಲವರು ಯಾರೋ?

ಕೆಳಮಟ್ಟದ ದೇವತೆಗಳ ಬಾಗಿಲಲ್ಲಿ ನಿಂತು, ಅವರ ಪಾದಗಳನ್ನು ಪೂಜಿಸಿ, ಯಾವಾಗಲೂ ನಡುವೆ ಇರುವ ಸುಖಾನಂದವನ್ನು ಅನುಭವಿಸುವವರು ಆಗುತ್ತಾರೆ. ಸುತ್ತುವರಿದು ನಿಂತಿರುವ ಸಮುದ್ರದ ದೇಹಕಾಂತಿಯುಳ್ಳ ಸರ್ವೇಶ್ವರನೇ, ನಿನ್ನ ತಿರುವಡಿಗಳನ್ನು ಯಾರು ಅನುಸಂಧಿಸಿ ಅರಿತುಕೊಳ್ಳಬಲ್ಲವರು ಯಾರೋ? (11)

ಹಿಂದಿನ ಪಾಶುರದಲ್ಲಿ ಭಗವಂತನ ಅವತಾರಗಳ ಮಹಿಮೆಯುಳ್ಳನೆಂದೂ, ಅವನ ತಿರುವಡಿಗಳ ವೈಶಿಷ್ಟ್ಯವೇನೆಂದೂ ಹೇಳಲಾಯಿತು. ಆ ವಿಷಯವನ್ನೇ ಇಲ್ಲಿ ಮುಂದುವರಿಸಲಾಗಿದೆ-

ಆೞ್ವಾರರು ಹೇಳುತ್ತಾರೆ: ಭಗವಂತ, ಜನರಲ್ಲಿ ಅನೇಕರು ಕೆಳಮಟ್ಟದ ದೇವತೆಗಳನ್ನು ಪೂಜಿಸುತ್ತಾರೆ. ಅವರ ಬಾಗಿಲು ಕಾಯುತ್ತಾರೆ. ಅವರ ಪಾದಗಳನ್ನು ಪೂಜಿಸುತ್ತಾರೆ. ಆನಂದಿಸುತ್ತಾರೆ. ಇದರಿಂದ ಅವರಿಗೆ ಒದಗಿ ಬರುವುದು ಸಾಮಾನ್ಯ ಸುಖಾನಂದವೇ. ಅದು ಶಾಶ್ವತವಲ್ಲದ್ದು. ಆದರೆ, ಭಗವಂತ, ಹೊಳೆಯುವ ಕಡಲದಂತೆ,

Garani Srinivasan

ಶಂಕೆಯುಕ್ತವಾದ ದೇಹಶಂಕೆಯುಳ್ಳವನೇ, ಸರ್ವೇಶ್ವರನೇ, ನಿನ್ನ ಕಿರುಪಡಿಗಳ ಮುಂದೆಯನ್ನು ಅಂಟುಕೊಂಡು, ಅನುಸಂಧಿಸಿ, ~~ಶಾಶ್ವ~~ ಶಾಶ್ವತವಾದ ಆನಂದವನ್ನು ಅನುಭವಿಸುವವರಾದರೂ ಯಾರು?

12. அவரிவரென்றில்லை யரவணையான் பாதம்,
எவர் வணங்கி யேத்தாதா ரெண்ணில், – பவரும்
செழுங்கதிரோ னொண் மலரோன் கண்ணுதலோனன்றே,
தொழுந்தகையார் நாளும் தொடர்ந்து.

ಅವರಿವ ರೆನ್ರಿಲ್ಲೈ ಯರವಣೈಯಾನ್ ಪಾದಮ್,
ಎವರ್ ವಣಂಗಿ ಯೇತ್ತಾದಾ ರೆಣ್ಣಿಲ್, – ಪವರುಮ್
ಶೆಳುಂಗದಿರೋ ನೊಣ್ ಮಲರೋನ್ ಕಣ್ಣುದಲೋನನ್ರೇ,
ತೊಳುನ್ದಗೈಯಾರ್ ನಾಳುಮ್ ತೊಡರ್ನ್ದು.

ಅವರ್ ಇವರ್ அவர் இவர் = ಅವರು, ಇವರು, ಎನ್ರು என்று = ಎಂದು, ಇಲ್ಲೈ இல்லை = ಇಲ್ಲವೇ ಇಲ್ಲ, ಅರವು ಅಣೈಯಾನ್ அரவு அணையான் = ಸರ್ಪವನ್ನು ಹಾಸಿಗೆಯಾಗಿ ಉಳ್ಳವನ, ಪಾದಮ್ பாதம் = ಕಿರುಪಡಿಗಳನ್ನು, ವಣಂಗಿ வணங்கி = ನಮಸ್ಕರಿಸಿ (ಪೂಜಿಸಿ), ಏತ್ತಾದಾರ್ ஏத்தாதார் = ಸ್ತುತಿಸಿದವರು, ಎಣ್ಣಿಲ್ எண்ணில் = ಎಣಿಸಿ (ಲೆಕ್ಕಿಸಿ) ನೋಡಿದರೆ, ಎವರ್ எவர் = ಯಾರಿದ್ದಾರೆ? ಪವರುಮ್ பவரும் = ಹುಟ್ಟುವ, ಶೆಳು செழு = ಸುಂದರನಾದ, ಕದಿರೋನ್ கதிரோன் = ಸೂರ್ಯನೂ, ಒಣ್ ஒண் = ಶ್ರೇಷ್ಠವಾದ, ಮಲರೋನ್ மலரோன் = ಪುಷ್ಪದವನೂ, (ಹೂವಿನಲ್ಲಿ ಹುಟ್ಟಿದವನೂ), ಕಣ್ ನುದಲೋನ್ கண் நுதலோன் = ಹಣೆಯಲ್ಲಿ ಕಣ್ಣುಳ್ಳವನೂ, ಅನ್ರೇ அன்றே = ಅಲ್ಲವೇ, ತೊಳುಮ್ தொழும் = ಪೂಜಿಸುವುದಕ್ಕೆ, ತಕೈಯಾರ್ தகையார் = ಅರ್ಹರಾದವರು, ನಾಳುಮ್ நாளும் = ಯಾವಾಗಲೂ, ತೊಡರ್ನ್ದು தொடர்ந்து = ಬೆಂಬತ್ತಿ.

ಸರ್ಪವನ್ನು ಹಾಸಿಗೆಯಾಗಿ ಉಳ್ಳವನ ಕಿರುಪಡಿಗಳನ್ನು ನಮಸ್ಕರಿಸಿ, ಪೂಜಿಸಿ, ಸ್ತುತಿಸಿದವರು, ಹಾಗೆಯೇ ಎಣಿಸಿ ನೋಡಿದರೆ ಅವರು ಇವರು ಎಂದು ಯಾರೂ ಇಲ್ಲವೇ ಇಲ್ಲ. ಹುಟ್ಟುವ ಸುಂದರನಾದ ಸೂರ್ಯನೂ; ಅತಿ ಶ್ರೇಷ್ಠವಾದ ಹೂವಿನಲ್ಲಿ ಹುಟ್ಟಿದವನೂ, ಹಣೆಗಣ್ಣನೂ, ಯಾವಾಗಲೂ ಅವನನ್ನು ಪೂಜಿಸುವುದಕ್ಕೆ ಬೆಂಬತ್ತಿ ಬಿದ್ದಿರುವರಲ್ಲವೇ?

Garani Srinivasan

హిందిన పాశురద విషయవన్నే ఇల్లి ముందువరిసలాగిదె. దేవతెగళెల్లరూ కెళమట్టదవరు. ఎల్లరూ సర్వేశ్వరనాద శ్రీమన్నారాయణనన్ను ఆశ్రయిసిరువవరు. ఉదాహరణెగె సృష్టి కర్తృత్వవన్ను పడెదిరువ నారాయణనూ, భగవంతన నాభికమలదల్లి సృష్టి మాడల్పట్టిరువ చతుర్ముఖనూ, హణెగణ్ణనెనిసిద రుద్రనూ — ఎల్లరూ భగవంతన తిరువడిగళన్నాశ్రయిసి, అవుగళన్ను పూజిసలు కాలుకట్టి నింతిరువవరు!

సర్పవన్ను హాసిగెయాగి ఉళ్ళవను (అరవు అణైయాన్) — శ్రీమహావిష్ణు - శ్రీమన్నారాయణ.

తావరెయాద హూవినవను (పూ మలరోన్) — చతుర్ముఖ బ్రహ్మ

హణెగణ్ణనాదవను (కణ్ణుదలోన్) — హణెయల్లి కణ్ణుళ్ళ రుద్రను.

ఆళ్వారరు హేళుత్తారె: చతుర్ముఖను, రుద్రను, నారాయణను మొదలాద స్వప్రకాశ ప్రతిష్ఠెయుళ్ళవరు భగవంతనాద శ్రీమన్నారాయణనన్ను ఆశ్రయిసిరువాగ, ఇంద్రాది దిక్పాలకరూ ఇన్నితర కెళమట్టద దేవతెగళూ మత్తారన్ను ఆశ్రయిసబేకు? ఎల్లరూ సర్వేశ్వరనాద భగవంతనన్నే అల్లవే ఆశ్రయిసబేకాదద్దు? ఎష్టెష్టు చింతిసి నోడిదరూ నమగె ఆశ్రయక్కె బేకాద దైవవే ఇల్ల. ఆద్దరింద ఆ సర్వేశ్వరన తిరువడిగళన్నే ఎల్లరూ ఆశ్రయిసతక్కద్దు.

13. தொடரெடுத்த மால்யானை சூழ்கயம் புக்கஞ்சி,
படரெடுத்த பைங்கமலம் கொண்டு, அன்-றிடரடுக்க
ஆழியான் பாதம் பணிந்தன்றே, வானவர் கோன்
பாழிதானெய்திற்றுப் பண்டு.

తొడరెడుత్త మాల్యానై శూళ్కయమ్ పుక్కంజి,
పడరెడుత్త పైఙ్గమలఙ్గొణ్డు, అన్-ఱిడరడుక్క

Garani Srinivasan

ಆಲಿಯಾನ್ ಪಾದಮೇ ಪಣಿನ್ದನ್ ಅನ್ರೇ, ವಾನವರ್ ಕೋನ್
ಪಾಲಿ ದಾನೆಯ್ದಿತ್ತು ಪ್ಪಣ್ಣು.

ತೊಡರ್ ಎಡುತ್ತ தொடர் நடுக்க = ಉಂಬಾಲಕರನ್ನು ಕೃಜಿಸಿದ, ಯಾನೈ மாயப் பாம்பை = ಮುದ್ದಾನೆಯು (ದಲಗನು), ಕೂಲ್ கொம்பு = ದುಷ್ಟ ವಂದಿರುವ, ಕಯಮ್ கயம் = ಸರೋವರವನ್ನು, ಪುಕ್ಕು 4 க்கு = ಪ್ರವೇಶಿಸಿ, அஞ்ச அஞ்சி = ಭಯಪಟ್ಟು. ಪಿಡರ್ ಎಡುತ್ತ படர் நடுக்க = ದಳಗಳನ್ನು ಬಿಸ್ತರಿಸಿದ, ಪ್ಪೆ ಯ = ಸುಂದರವಾದ, ಕಮುಲಮೂ ಕೊಣ್ಣು கமலம் கொண்டு = ಕಮಲದ ಹೂವನ್ನು ಎತ್ತಿಕೊಂಡು, ಅನ್ನು அன்று = ಅಂದು, (ಅಂದಿನ), ಇಡರ್ இடர் = ಸಂಕಟವನ್ನು, ಅಡುಕ್ಕ அடுக்க = ನಿವಾರಿಸುವುದಕ್ಕಾಗಿ, ಆಲಿಯಾನ್ ஆழியான் = ಚಕ್ರಾಯುಧಧಾರಿಯ, ಪಾದಮೂ பாதம் = ತಿರುವಡಿಗಳನ್ನು, ಪಣಿನ್ದ ಅನ್ರೇ பணிந்து அன்றே = ಪೂಜಿಸಿ ಅಲ್ಲವೇ, ಪಣ್ಣು பண்டு = ಹಿಂದಿನ ಕಾಲದಲ್ಲಿ, ವಾನವರ್ ಕೋನ್ வானவர் கோன் = ನಿತ್ಯಸೂರಿಗಳ ಒಡೆಯನ ಪಾಲಿ பாழி = ಸ್ಥಳವನ್ನು (ಪರಮಪದವನ್ನು), ತಾನ್ ಎಯ್ದುತ್ತು தான் எய்திற்று = ತಾನು ಸೇರಿದ್ದು.

ಉಂಬಾಲಕರನ್ನು ಕೃಜಿಸಿದ ದಲಗನು ದುಷ್ಟವಂದಿರುವ ಸರೋವರವನ್ನು ಪ್ರವೇಶಿಸಿ, ಭಯಪಟ್ಟು, ಚೆನ್ನಾಗಿ ಅರಳಿದ ಶೋಭಿಸಿನ ಕಮಲದ ಹೂವನ್ನು ಎತ್ತಿಕೊಂಡು, ಅಂದು ಬಂದ ಸಂಕಟವನ್ನು ನಿವಾರಿಸುವುದಕ್ಕಾಗಿ ಚಕ್ರಾಯುಧಧಾರಿಯ ತಿರುವಡಿಗಳನ್ನು ಪೂಜಿಸಿಯಲ್ಲವೇ, ಹಿಂದಿನ ಕಾಲದಲ್ಲಿ, ನಿತ್ಯಸೂರಿಗಳ ಒಡೆಯನ ಸ್ಥಳವಾದ ಪರಮಪದವನ್ನು ತಾನು (13)
ಸೇರಿದ್ದು?

ಸರ್ವೇಶ್ವರನನ್ನು ಮಾತ್ರವೇ ಬಿಡದೆ ಆಶ್ರಯಿಸುವುದರಿಂದ ಎಲ್ಲ ಬಗೆಯ ಸುಖ ಸಂತೋಷಗಳೂ ಪ್ರಾಪ್ತವಾಗುವುವೆಂಬ ವಿಷಯವನ್ನು ಹಿಂದಿನ ಪಾಶುರದಲ್ಲಿ ಹೇಳಲಾಯಿತು. ಈ ಪಾಶುರದಲ್ಲಿ ಅದಕ್ಕೆ ಒಂದು ನಿದರ್ಶನವಾಗಿ ಗಜೇಂದ್ರ ಮೋಕ್ಷದ ಕಥೆಯನ್ನು ಹೇಳಲಾಗುತ್ತಿದೆ.

ಹಿಂದಿನ ಕಾಲದಲ್ಲಿ ಇಂದ್ರದ್ಯುಮ್ನನೆಂಬ ಪಾಂಡ್ಯರಾಜನಿದ್ದ. ಅವನು ರಾಜರ್ಷಿ. ಆಶ್ರಮವಾಸಿಯಾಗಿ, ಮಹಾವಿಷ್ಣು ಭಕ್ತನಾಗಿ, ಸದಾ ಭಗವಂತನನ್ನು ಸ್ಮರಿಸಿ ನುತಿಸುವುದರಲ್ಲೇ ಕಾಲ ಕಳೆಯುತ್ತಿದ್ದನು. ಒಂದು ದಿನ, ಅವನು ಭಗವದಾರಾಧನೆಯ ಕಲ್ಪಗಳಲ್ಲಿ ಮಗ್ನನಾಗಿದ್ದಾಗ,

Garani Srinivasan

ಅಗಸ್ತ್ಯ ಮಹಾ ಮುನಿಗಳು ತಮ್ಮ ಶಿಷ್ಯವೃಂದದೊಂದಿಗೆ ಅಲ್ಲಿಗೆ ಬಂದರು. ತನ್ನ ಪೂಜಾ ಕ್ರಮದಲ್ಲಿಯೇ ಮಗ್ನನಾಗಿದ್ದ ಅರಸನಿಗೆ ಮುನಿವರ್ಯರನ್ನು ಸತ್ಕರಿಸಲು ಸಾಧ್ಯವಾಗಲಿಲ್ಲ. ಇದನ್ನು ಕಂಡು ಮುನಿಗಳಿಗೆ ಕೋಪ ಬಂತು. ಅಹಂಕಾರದ ಸ್ವಭಾವವುಳ್ಳ ಅರಸನು ಆನೆಯಾಗಲಿ ಎಂದು ಶಪಿಸಿ ಹೊರಟು ಹೋದರು. ಇಂದ್ರದ್ಯುಮ್ನನಿಗೆ ಆನೆಯ ಜನ್ಮ ಬಂತು. ಆದರೆ, ತನ್ನ ಹಿಂದಿನ ಜನ್ಮದ ವಾಸನೆಯಿಂದ ಭಗವತ್ಸೇವೆ ಮುಂದುವರೆಯುತ್ತಿದ್ದಿತು. ಎಲ್ಲಿ ಸುಂದರವಾದ ಕಮಲದ ಹೂಗಳನ್ನು ನೋಡಿದರೂ, ಅವುಗಳನ್ನು ಕಿತ್ತು ಆದರದಿಂದ ಅದನ್ನು ಭಗವಂತನಿಗೆ ಅರ್ಪಿಸುತ್ತಿದ್ದನು. ಹೀಗೆ ನಡೆಯುತ್ತಾ, ಆನೆಯಾಗಿಯೇ ಜೀವಿಸುತ್ತಿರುವಾಗ, ಒಂದು ದಿನ, ಆ ಗಜೇಂದ್ರನು ದೊಡ್ಡ ಸರೋವರಕ್ಕೆ ಬಂದನು. ಅಲ್ಲಿ ಅರಳಿದ ದಿವ್ಯವಾದ ಕಮಲದ ಹೂಗಳನ್ನು ಭಗವಂತನಿಗೆ ಅರ್ಪಿಸುವುದಕ್ಕಾಗಿ, ಸರೋವರದೊಳಕ್ಕೆ ಬಲುದೂರ ನುಗ್ಗಿ ಹೋದನು. ಅಲ್ಲೊಂದು ಮೊಸಳೆ ಕಾದಿತ್ತು. ಗಜೇಂದ್ರನ ಕಾಲನ್ನು ಬಲವಾಗಿ ಹಿಡಿದುಕೊಂಡಿತು. ಆನೆಗೂ ಮೊಸಳೆಗೂ ಹೋರಾಟ ನಡೆಯಿತು. ಬಹುಕಾಲ ನಡೆಯಿತು. ಆನೆಯ ಬಲ ಕುಗ್ಗುತ್ತಾ ಬಂತು. ಆಗ, ಗತ್ಯಂತರವಿಲ್ಲದೆ, ಗಜೇಂದ್ರನು ಒಂದು ಕಮಲದ ಹೂವನ್ನು ಸೊಂಡಿಲಲ್ಲಿ ಎತ್ತಿಕೊಂಡು, "ಆದಿಮೂಲಾ, ನೀನೇ ಗತಿ" ಎಂದು ಕಡು ದೈನ್ಯದಿಂದ ಬೇಡಿದನು. ಭಗವಂತನು ಕನಿಕರಗೊಂಡು ಗರುಡಾರೂಢನಾಗಿ ಅಲ್ಲಿಗೆ ಧಾವಿಸಿ ಬಂದ. ತನ್ನ ಕೈಯ ಚಕ್ರಾಯುಧವನ್ನು ಪ್ರಯೋಗಿಸಿ, ಮೊಸಳೆಯ ಕಂಠವನ್ನು ಕತ್ತರಿಸಿ ಹಾಕಿ, ಗಜೇಂದ್ರನನ್ನು ಸಂಕಟದಿಂದ ಪಾರು ಮಾಡಿದನು. ಭಗವಂತನ ಚಕ್ರಾಯುಧಕ್ಕೆ ಸಿಲುಕಿದ ಮೊಸಳೆಯಾಗಿದ್ದ ಶಾಪಗ್ರಸ್ತನಾದ ಗಂಧರ್ವನೇ. ಹಿಂದೆ ದೇವಲನೆಂಬ ಮಹರ್ಷಿಯನ್ನು ಅವಮಾನಗೊಳಿಸಲು, ಆತನು ಧ್ಯಾನಾಸಕ್ತನಾಗಿದ್ದ ಕಾಲದಲ್ಲಿ ಆತನ ಕಾಲನ್ನೆಳೆದ ಕಾರಣದಿಂದ, ದೇವಲನು ಗಂಧರ್ವನಿಗೆ (ಹೂಹೂ ಎಂಬುವನು) ಮೊಸಳೆಯಾಗೆಂದು ಶಪಿಸಿದ್ದನು. ಅವನಿಗೂ, ಈ ದಿವ್ಯ ಸಮಯ ಒದಗಿ, ಭಗವಂತನ ಚಕ್ರಾಯುಧ ಅವನನ್ನು ಶಾಪ ಮುಕ್ತನನ್ನಾಗಿಸಿತು. ಹೀಗೆ, ಇಂದ್ರದ್ಯುಮ್ನನು ಶಾಪವನ್ನು ಕಳೆದುಕೊಂಡು ಪರಮ ಪದವನ್ನೇ ಸೇರಿದನು. ಹೂಹೂ ಗಂಧರ್ವನು ತನ್ನ ಲೋಕವನ್ನು ಸೇರಿದನು.

ಆಳ್ವಾರರು ಹೇಳುತ್ತಾರೆ: ಗಜೇಂದ್ರನು ಭಗವಂತನನ್ನು ಒಂದೇ ರೀತಿಯಲ್ಲಿ ಆಶ್ರಯಿಸಿ ಪೂಜಿಸಿ ಪ್ರಾರ್ಥಿಸಿದ್ದರಿಂದಲ್ಲವೇ ಅವನಿಗೆ ಶಾಪ ಮೋಚನೆಯೂ, ಪರಮ ಪದವಾಪ್ತಿಯೂ ದೊರೆತದ್ದು? ಉಚ್ಚ ನೀಚವೆಂಬ ತಾರತಮ್ಯ ಇಲ್ಲದಂತೆ, ಯಾರಾದರೂ ಭಗವಂತನಲ್ಲಿ ಭಕ್ತಿ ಮಾಡಿ ಮುಕ್ತರಾಗಬಹುದಲ್ಲವೇ?

14. பண்டிப் பெரும்பதியை யாக்கி, பழிபாவம்
கொண்டிங்கு வாழ்வாரைக் கூறாதே, — எண்டிசையும்
பேர்த்தகர நான்குடையான் பேரோதிப் பேதைகாள்,
தீர்த்தகர ராமின் திரிந்து.

ಪಣ್ಡಿಪ್ ಪೆರುಮ್ ಪದಿಯೈ ಯಾಕ್ಕಿ, ಪಳಿ ಪಾವಮ್
ಕೊಣ್ಡಿಙ್ಗು ವಾಳ್ ವಾರೈಕ್ ಕೂಱಾದೇ, — ಎಣ್ಡಿಶೈಯುಮ್
ಪೇರ್ತ್ತಕರ ನಾನ್ಕುಡೈಯಾನ್ ಪೇರೋದಿಪ್ ಪೇದೈಗಾಳ್,
ತೀರ್ತ್ತಕರ ರಾಮಿನ್ ತಿರಿನ್ದು.

ಪಣ್ಡಿ பண்டி = ಬಂಡಿಯನ್ನು, ಪೆರುಮ್ பெரும் = ದೊಡ್ಡದಾದ, ಪದಿಯೈ பதியை = ಸ್ಥಳವನ್ನಾಗಿ, ಆಕ್ಕಿ ஆக்கி = ಮಾಡಿಕೊಂಡು, ಪಳಿ பழி = ನಿಂದೆ, ಪಾವಮ್ பாவம் = ಪಾಪವನ್ನು, ಕೊಣ್ಡು கொண்டு = ಹೇಳಿಕೊಂಡು, ಇಙ್ಗು இங்கு = ಈ ಲೋಕದಲ್ಲಿ, ವಾಳ್ವಾರೈ வாழ்வாரை = ಬಾಳುವವರನ್ನು, ಕೂಱಾದೇ கூறாதே = ಹೊಗಳಿ ಹೇಳದೆ, ಎಣ್ ದಿಶೈಯುಮ್ எண் திசையும் = ಎಂಟು ದಿಕ್ಕುಗಳಲ್ಲೂ, ಪೇರ್ತ್ತ பேர்த்த = ವಿಸ್ತರಿಸಿದ, ಕರ ನಾನ್ಕು கர நான்கு = ನಾಲ್ಕು ಬಾಹುಗಳನ್ನು, ಉಡೈಯಾನ್ உடையான் = ಉಳ್ಳವನ, ಪೇರ್ ಓದಿ பேர் ஓதி = ತಿರುನಾಮಗಳನ್ನು ಪಠಿಸುತ್ತಾ, ಪೇದೈಗಾಳ್ பேதைகாள் = ಅಜ್ಞಾನಿಗಳೇ, ತೀರ್ತ್ತಕರರ್ ಆಮಿನ್ தீர்த்தகரர் ஆமின் = ತೀರ್ಥಂಕರರಾಗಿರಿ, ತಿರಿನ್ದು திரிந்து = ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸುತ್ತಾ.

ಬಂಡಿಯನ್ನು ದೊಡ್ಡ ಸ್ಥಳವನ್ನಾಗಿ ಮಾಡಿಕೊಂಡು, ನಿಂದೆ ಪಾಪವನ್ನು ಹೇಳಿಕೊಂಡು, ಈ ಲೋಕದಲ್ಲಿ ಬಾಳುವವರನ್ನು ಕೊಂಡಾಡದಂತೆ, ಎಂಟು ದಿಕ್ಕುಗಳಲ್ಲೂ ವಿಸ್ತರಿಸಿದ ನಾಲ್ಕು ಬಾಹುಗಳನ್ನುಳ್ಳವನ ತಿರುನಾಮಗಳನ್ನು ಪಠಿಸುತ್ತಾ, ಅಜ್ಞಾನಿಗಳೇ, ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ತೀರ್ಥಂಕರರಾಗಿರಿ. (14)

ಈ ಪಾಶುರದಲ್ಲಿ ಜ್ಞಾನಿ ಅಜ್ಞಾನಿ ಇರುವ ಭೇದವನ್ನು ವಿವರಿಸಲಾಗುತ್ತದೆ.

'ಬಂಡಿ' ಎಂದರೆ ರಥ — ಸಂಸಾರವೆಂಬ ರಥ: ಇದು ಲೋಕದ ಎಲ್ಲ ಜನ ಜೀವನ. ಅದನ್ನು ಶಾಶ್ವತವೆಂದೂ, ಸುಖಮಯವೆಂದೂ (ಆಶ್ರಯಿಸಿ), ಅದನ್ನು ಬೆಳೆಸಿಕೊಂಡು ಹೋಗುವುದೇ ಪರಮ ಕರ್ತವ್ಯವೆಂದೂ, ಹಾಗೆ

Garani Srinivasan

ನಡೆದುಕೊಳ್ಳುವರೋ ಮರಣಾನಂತರದ ಭಾವನೆ, ಅವರ ನೆಲೆಯಿಲ್ಲ ಕೇವಲ ಕಾಲಯಾಪನೆ ಮಾಡುವುದು — ಎಲ್ಲ ರೀತಿಯಲ್ಲೂ ಅಜ್ಞಾನವೇ. ಇಂಥ ಜನರನ್ನು ಕೊಂಡಾಡಿ ಕಾಲಕಳೆಯುವುದು ಬಲು ದೊಡ್ಡ ಕೆಲಸವೆಂದು ಭಾವಿಸುವುದು ಅಜ್ಞಾನವೇ.

"ಎಣ್ಡಿಶೈಯುಮ್ ಮೇತ್ತ ತರನಾನ್ ಪುಟ್ಟೈಯಾನ್" — ದಿವ್ಯಾರ್ಥ ವಿವರಣೆ. ಶ್ರೀವಿಕ್ರಮಾವತಾರಿಯಾದ ಪರಮೇಶ್ವರನ ವಿವರಣೆ. ಭಗವಂತನು ಶ್ರೀವಿಕ್ರಮನಾಗಿ ಬೆಳೆದಾಗ, ತನ್ನ ನಾಲ್ಕು ತೋಳುಗಳನ್ನು ಎಂಟುದಿಕ್ಕುಗಳಲ್ಲಿಯೂ ಹರಡಿ ಎಲ್ಲೆಲ್ಲೂ ವ್ಯಾಪಿಸಿಕೊಂಡಿರತಕ್ಕವನು.

ಆಳ್ವಾರರು ಹೇಳುತ್ತಾರೆ: ಜ್ಞಾನಿಯಾದವನು ಇಹಲೋಕದ ಬಾಳ್ವೆಯಲ್ಲಿಯೇ ಮುಳುಗಿ ಕೆಲವು ಜನರನ್ನು ನಂಬಿ, ಅವರನ್ನಾಶ್ರಯಿಸಿ ಕೆಡಬಾರದು. ಈ ಬಗೆಯ ಜೀವನದಿಂದ ಬರುವುದು ನಿಂದೆ, ಅಪವಾದ, ದಾರಿದ್ರ್ಯ ಮತ್ತು ಪಾಪಗಳೇ. ಬರಬರುತ್ತ ಇವು ಭರಿಸಲಾರದ ಹೊರೆಯಾಗಿ ಕಂಡುಬರುತ್ತದೆ. ಅದಕ್ಕೆ ಬದಲಾಗಿ, ಸರ್ವವ್ಯಾಪಿಯಾದ ಪರಮೇಶ್ವರನ ತಿರುವಡಿಗಳನ್ನಾಶ್ರಯಿಸಿ, ಅವನ ತಿರುನಾಮಗಳನ್ನು ಎಡೆಬಿಡದಂತೆ ಪಠಿಸುತ್ತಾ, ನಾನಾ ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸುತ್ತಾ, ಅಲ್ಲಿ ಭಗವಂತನನ್ನು ಕೀರ್ತಿಸುತ್ತಾ, ಪವಿತ್ರ ಬಾಳ್ವೆ ನಡೆಸಿ, ಉದ್ಧಾರಗೊಳ್ಳಬೇಕು.

15. திரிந்தது வெஞ்சமத்து தேர் கடவி, அன்று
பிரிந்தது சீதையை மான் பின் போய், — புரிந்ததுவும்
கண் பள்ளி கொள்ள அழகியதே, நாகத்தின்
தண் பள்ளி கொள்வான் றனக்கு.

ತಿರಿನ್ದದು ವೆಂಜಮತ್ತು ತೇರ್ ಕಡವಿ, ಅನ್ರು
ಪಿರಿನ್ದದು ಶೀತ್ತೈಯೈ ಮಾನ್ ಪಿನ್ ಪೋಯ್, — ಪುರಿನ್ದದುವುಮ್
ಕಣ್ ಪಳ್ಳಿ ಕೊಳ್ಳ ಅಳಗಿಯದೇ, ನಾಗತ್ತಿನ್
ತಣ್ ಪಳ್ಳಿ ಕೊಳ್ವಾನ್ ತನಕ್ಕು.

ವೆಮ್ ಶಮತ್ತು வெம் சமத்து = ಘೋರ ಯುದ್ಧದಲ್ಲಿ, ತೇರ್ ಕಡವಿ தேர் கடவி = ರಥವನ್ನು ನಡೆಸುತ್ತಾ, ತಿರಿನ್ದದುಮ್ திரிந்ததும் = (ಯುದ್ಧರಂಗದಲ್ಲಿ) ಅಲೆದಾಡಿದ್ದು, ಅನ್ರು அன்று = ಅಂದು, ಮಾನ್ ಪಿನ್ ಪೋಯ್ மான் பின் போய் = ಜಿಂಕೆಯ ಹಿಂದೆ ಹೋಗಿ, ಶೀತ್ತೈಯೈ சீதையை = ಸೀತೆಯಿಂದ, ಪಿರಿನ್ದದುಮ್ பிரிந்ததும் =

Garani Srinivasan

ಅದಲ್ಲದ್ದನ್ನೂ, ಕಣ್ ವಳ್ಳಿಕೊಳ್ಳ ಕಣ್ ಪಣ್ಣಿ ಕೊಣ್ಣಾ = ನೆಲದಲ್ಲಿ ಮಲಗುವುದನ್ನ, ಪ್ರಣ್ಣದುಮ್ಮ ಪುರಿಂದತ್ತುಯುಮ್ = ಅಂಕುಶದಿಂ ತದ್ದನ್ನೂ, ನಾದತ್ತಿನ್ ನಾಗಕ್ಕಿನ್ = ನಾಗೇಂದ್ರನ, (ಮೇಲೆ) ಕಣ್ ವಳ್ಳಿಕೊಳ್ವಾನ್ ಕಣ್ ಪಣ್ಣಿ ಕೊಣ್ಣವಾಣ್ = ಬಿಳಿಯಾದ ನಿದ್ರೆಯನ್ನು (ಪವಡಿಸು) ತನಕ್ಕು ಕಣಕ್ಕೆ = ಸ್ವಾಮಿಗೆ, ಅಲ್ಲಿಯಿಯದೇ ಅಪ್ಪಡಿಯೇ = ನಾನ ದಾದದ್ದೇ (ಹೊಂದಿಕೊಳ್ಳಲಿಕ್ಕದ್ದೇ) (ಕಲ್ಪದ್ದೇ).

ಘೋರ ಯುದ್ಧದಲ್ಲಿ ರಥವನ್ನ ನಡೆಸುತ್ತಾ ಅಲೆದಾಡಿದ್ದು, ಅಂದು, ಜಿಂಕೆಯ ಬಂದ ಹೋಗಿ ಬಿಳಿಯನ್ನಗಲಿದ್ದು, ನೆಲದಲ್ಲಿ ಮಲಗುವುದನ್ನು ಅಂಕುಶಿಂದದ್ದು, ನಾಗೇಂದ್ರನ ಮೇಲೆ ಬಿಳಿಯಾದ ಪವಡಿಸುವವನಿಗೆ (15) ನಾನ ದಾಸನಲ್ಲದ್ದೇ.

ಬಂದಿನ ಕಾಲದಲ್ಲಿ, ಭೂಲೋಕದಲ್ಲಿ ಭಗವಂತನು ಅರ್ಚಾವತಾರಿಯಾಗಿ ನೆಲಸಿರುವ ವಿವಿಧ ಪವಿತ್ರ ಕ್ಷೇತ್ರಗಳಿಗೆ ಪ್ರಯಾಣ ಬೆಳಸಿ, ಅಲ್ಲಲ್ಲಿಯೇ ಸಂಬಂಧಿಸಿದಂತೆ ಅವನ ಲೀಲೆಗಳನ್ನೆಲ್ಲಾ ಸ್ಮರಿಸಿಕೊಳ್ಳುತ್ತಾ, ಭಗವಂತನನ್ನ (ಅರ್ಚಾವತಾರಿಯನ್ನು) ಸಂದರ್ಶಿಸಿ, ಸ್ತುತಿಸಿ ಆನಂದಿಸಿ, ಕೃತಾರ್ಥರಾಗಬೇಕೆಂದರು ಆಳ್ವಾರರು.

ಈಗ ಭೂಲೋಕವಾಸಿಗಳಿಗೆ ಭಗವಂತ ಭೂಲೋಕವಾಸಿಗಳಿಗಾಗಿ ಮಾಡಿ ತೋರಿಸಿರುವ ಅನುಭವದ ಕೆಲವು ನಿದರ್ಶನಗಳನ್ನು ಹೇಳುತ್ತಾರೆ.

"ತೇರ್ನ್ದದು ಪಂಜವರ್ಕ್ಕು ತ್ತೇರ್ ಕಡವಿ" — ಇದು ಶ್ರೀಕೃಷ್ಣಾವತಾರದ ವಿಷಯ. ಭಗವಂತನು ಪಾಂಡವರ ಪಕ್ಷ ವಹಿಸಿ, ಅರ್ಜುನನ ಸಾರಥಿಯಾಗಿ, ಅವನ ರಥವನ್ನ, ಮಹಾಭಾರತ ಯುದ್ಧಭೂಮಿಯಲ್ಲೆಲ್ಲಾ ನಡೆಸುತ್ತಾ, ಅಲೆದಾಡಿದನು. ಅದು ಅರ್ಜುನನನ್ನ ರಕ್ಷಿಸುವುದಕ್ಕಾಗಿಯೇ ಹೊರತು, ತನ್ನ ಮೇಲೆ ಶತ್ರುಗಳು ಪ್ರಯೋಗಿಸುವ ಅಂಬಿನ ಆಘಾತದಿಂದ ತನ್ನನ್ನ ಲೆಕ್ಕಿಸುವುದಕ್ಕಲ್ಲ. ತನ್ನ ಪ್ರಿಯಭಕ್ತನನ್ನು ಸಂಕಟದಿಂದ ಪಾರುಮಾಡುವುದೇ ಭಗವಂತನ ಕರ್ತವ್ಯವಲ್ಲವೇ? ಜಗತ್ತಿಗೆ ಇದನ್ನ ಎತ್ತಿ ತೋರಿಸಬೇಡವೇ?

"ಪಿರನ್ದದು ಶೀತ್ತೈಯಿಲ್ ಮಾನ್ ಪಿನ್ ಪೋಯ್" — ಇದು ರಾಮಾವತಾರದ ವಿಷಯ. ಪಿತೃವಾಕ್ಯ ಪಾಲನೆಗಾಗಿ ಶ್ರೀರಾಮನು ಹದಿನಾಲ್ಕು ವರ್ಷಗಳು ವನವಾಸಕ್ಕೆಂದು ಕಾಡಿಗೆ ಹೋದನು. ಅವನ ಜೊತೆಯಲ್ಲಿ ಅವನ ಧರ್ಮಪತ್ನಿಯಾದ ಸೀತೆಯೂ, ಅನುಜನಾದ ಲಕ್ಷ್ಮಣನೂ ಹೋದರು. ಅವರು ತಾಪಸಿಗಳಂತೆ ಪಂಚವಟಿಯಲ್ಲಿ

ಪಾಪಮುಕ್ತರಾದರು. ರಾವಣನಿಂದ ಪ್ರೇರಿತನಾದ ಮಾರೀಚನು ಚಿನ್ನದ ಜಿಂಕೆಯು ರೂಪದಲ್ಲಿ ಅವರ ಪರ್ಣಶಾಲೆಯ ಮುಂದೆ ಸುಳಿದಾಡಿದನು. ಸೀತೆ ಇದನ್ನು ಕಂಡು ಆಕರ್ಷಿತಳಾದಳು. ತನಗೆ ಅದನ್ನು ತಂದು ಕೊಡಬೇಕೆಂದು ಗಂಡನನ್ನು ಬೇಡಿದಳು. ಶ್ರೀರಾಮನು ಅದನ್ನು ಹಿಂಬಾಲಿಸಿಕೊಂಡು ಬಹು ದೂರ ಹೋದದ್ದರಿಂದಲೂ, ಮಾರೀಚನ ವಂಚನೆಯ ಕೂಗಿನಿಂದಲೂ, ಶ್ರೀರಾಮನು ಸೀತೆಯಿಂದ ಅಗಲಬೇಕಾಯಿತು.

"ನಾಡತ್ತಿನ್ ತನ್ ಪಿಳ್ಳೆಕ್ಕೊಳ್ವಾನ್ ಪಿನತ್ತು" — ನಾಗೇಂದ್ರನನ್ನು ಹಾಸಿಗೆಯಾಗಿ ಮಾಡಿಕೊಂಡು, ಹಿತವಾಗಿ ~~ಅವ~~ ಪವಡಿಸಿ ಯೋಗನಿದ್ರೆಯಲ್ಲಿರುವವನು ಭಗವಂತ.

ಆಳ್ವಾರರು ಕೇಳುತ್ತಾರೆ: ನಾಗೇಂದ್ರನನ್ನು ಮೆತ್ತನೆಯ ಹಾಸಿಗೆಯಾಗಿ ಮಾಡಿಕೊಂಡಿರುವ ಭಗವಂತ ನಿರ್ಲಿಪ್ತನಾಗಿ ಪವಡಿಸುವುದರ ಬದಲಾಗಿ, ಅವತಾರಗಳನ್ನೆತ್ತಿ, ಭೂಲೋಕವಾಸಿಗಳ ಹಾಗೆಯೇ ಕಷ್ಟಸುಖಗಳನ್ನು ಅನುಭವಿಸುತ್ತ ಇರುವುದು ಹಠವೇ ಅಲ್ಲವೇ? ತಾನೂ ಸಾಮಾನ್ಯ ಮನುಷ್ಯನಂತೆಯೇ ಎಂದು ತೋರಿಸುವುದಕ್ಕೇ ಅಲ್ಲವೇ?

16. தனக்கடிமை பட்டது தானறியா னேலும்,
மனத்தடைய வைப்பதாம் மாலை, — வனத்திடரை
ஏரியாம் வண்ண மியற்று மிது வல்லால்,
மாரியார் பெய்கிற்பார் மற்று.

ತನಕ್ಕಡಿಮೈ ಪಟ್ಟದು ತಾನಱಿಯಾನೇಲುಮ್,
ಮನತ್ತಡೈಯ ವೈಪ್ಪದಾಮ್ ಮಾಲೈ, — ವನತ್ತಿಡರೈ
ಏರಿಯಾಮ್ ವಣ್ಣ ಮಿಯಟ್ರುಮಿದು ವಲ್ಲಾಲ್,
ಮಾರಿಯಾರ್ ಪೆಯ್ಗಿಱ್ಪಾರ್ ಮಟ್ರು.

ತನಕ್ಕು தனக்கு = ತನಗೆ (ಚೇತನನಿಗೆ), ಅಡಿಮೈ அடிமை = ಸೇವೆಯು (ಶೇಷತ್ವವು), ಪಟ್ಟದು பட்டது = ಕೂಡಿಬಂದಿರುವುದು ಎಂಬುದನ್ನು, ತಾನ್ தாண் = ತಾನು, ಅಱಿಯಾನ್ ಏಲುಮ್ அறி யாண் ஏலும் = ತಿಳಿಯದೆ ಇದ್ದರೂ ಸಹ, ಮನತ್ತು மனத்து = ಮನದಲ್ಲಿ, ಅಡೈಯ அடைய = ಸೇರುವ, ಮಾಲೈ மாலை = ಭಗವಂತನನ್ನು, ವೈಪ್ಪದು ಆಮ್ வைப்பது ஆம் = (ಅಲ್ಲಿಯೇ) ಇರಿಸಿ ಕೊಳ್ಳುವುದು ಯುಕ್ತವಾದುದು, ವನಮ್ வனம் = ಕಾಡಿನಲ್ಲಿ,

Garani Srinivasan

ತಿದರ್ಕ್ಕೆ ಕ್ಕಿಡಂದಾ = ಮೇಡು ಪ್ರದೇಶವನ್ನು (ಇಳಿಜಾರನ್ನು), ಪೆರಿ ಆಮ
ರಾಗಿ ತ್ತಾಂ = ಪರಿಯುನ್ನಾಗಿರುವ (ಕೆರೆಯ ಕಟ್ಟೆಯನ್ನಾಗಿರುವ), ವಣ್ಣಾಮ
ವಣ್ಣಣ್ಣಾಂ = ಅಲೆಯು, ಇಯ್ಯುಮ್ಮಾ (ಯ್)ಉತ್ರುಂ = ಗುಂಡಿ
ಹೊಡೆಯುವುದು, ಇದು ತಿತ್ತು = ಈ ಕೆಲಸ, ಅಲ್ಲಾಲ್ ಅಲ್ಲಾಗಲ್ =
ಅಲ್ಲದೆ, ಮುಟ್ಟು ಮಟ್ರು = ಮತ್ತೆ, ಮಾರಿ ಮಾರಿ = ಮಳೆಯನ್ನು,
ಪೆಯ್ ಉಡುಪಾರ್ ಪೆಯ್ಕಿನ್ರಾರ್ = ಸುರಿಸುವವರು, ಯಾರ್ ಯಾರ್
= ಯಾರು?

(ಚೇತನನಾದ) ತನಗೆ ಸೇವೆಯು (ಶೇಷತ್ವವು) ಕೂಡಿಬರುವುದು ಎಂಬುದನ್ನು ತಾನು ಅರಿತುಕೊಳ್ಳದೆ ಇದ್ದರೂ, ಮನದಲ್ಲಿ ನೆಲೆಸಿರುವ ಭಗವಂತನನ್ನು ಅಲ್ಲಿಂದಲೇ ಇಂಗಿಸಿಕೊಳ್ಳುವುದು ಯುಕ್ತವಾಗುವುದು, ಕಾಡಿನಲ್ಲಿ ಮೇಡು ಪ್ರದೇಶವನ್ನು (ಇಳಿಜಾರನ್ನು) ಕೆರೆಯ ಕಟ್ಟೆಯನ್ನಾಗಿರುವ ಅಲೆಯು ಗುಂಡಿ ಹೊಡೆಯುವುದು ಈ ಕೆಲಸ. (16)
ಮತ್ತೆ ಮಳೆಯನ್ನು ಸುರಿಸುವವರು ಯಾರು?

ಹಿಂದಿನ ಪಾಶುರದಲ್ಲಿ ಭಗವಂತನು ಚೇತನನ ವಿಷಯದಲ್ಲಿ ಮಾಡುವುದೇನು ಎಂಬುದನ್ನು ಆಳ್ವಾರರು ವಿವರಿಸಿದ್ದಾರೆ. ತನ್ನ ಕಡೆಗೆ ಚೇತನನನ್ನು ಆಕರ್ಷಿಸಿಕೊಳ್ಳುವುದಕ್ಕಾಗಿ ಭಗವಂತನು ಎಲ್ಲ ಬಗೆಯ ಉಪಾಯಗಳನ್ನು ಬಳಸುತ್ತಾನೆ. ತಾನು ಅವತಾರಗಳನ್ನೆತ್ತುತ್ತಾನೆ. ಭೂಲೋಕವಾಸಿಗಳಂತೆಯೇ, ಅವನೂ ಕಷ್ಟಸುಖಗಳನ್ನು, ಅವರ ನಡುವೆ ಇದ್ದುಕೊಂಡು, ಅನುಭವಿಸುತ್ತಾನೆ. ಸಾಮಾನ್ಯ ಮನುಷ್ಯನಂತೆ ತಾನು ಅತ್ಯಂತ ಸಾಮೀಪವರ್ತಿಯೆಂದು ತೋರಿಸುವುದಕ್ಕಾಗಿಯೇ ಇಷ್ಟೆಲ್ಲ ನಡೆಸುವುದು.

ಈ ಪಾಶುರದಲ್ಲಿ ಹಿಂದಿನ ವಿಷಯವನ್ನೇ ಹೇಳುವುದರಲ್ಲಿ ಆಳ್ವಾರರು ಒಂದು ಹೆಜ್ಜೆ ಮುಂದಕ್ಕೆ ಇಡುತ್ತಾರೆ. ಇಲ್ಲಿ ಚೇತನನ ಕರ್ತವ್ಯವೇನು ಎಂಬುದನ್ನು ತಿಳಿಯ ಹೇಳುತ್ತಾರೆ.

ಪಾಶುರದಲ್ಲಿ ಎರಡು ಭಾಗಗಳು ಎದ್ದು ಕಾಣುತ್ತವೆ. ಮೊದಲನೆಯದು ಭಗವಂತನಿಗೂ ಚೇತನನಿಗೂ ಇರುವ ಸಂಬಂಧವನ್ನು ಕುರಿತದ್ದು. ಎರಡನೆಯದು, ಅದಕ್ಕೆ ತಕ್ಕದಾಗಿ ಹೊಂದಿಕೆಯಿರುವ ಜಾಗ್ರತ್ತನಲ್ಲಿ ನಡೆಯುವ ಕೆಲಸ. ಒಂದು ಇನ್ನೊಂದಕ್ಕೆ ಪುಷ್ಟಿ ಕೊಡುವಂಥದ್ದು.

ಮೊದಲು ನಿದರ್ಶನವನ್ನು ಎತ್ತಿಕೊಳ್ಳೋಣ. ಅದರಲ್ಲಿ ಎರಡು ಕೆಲಸಗಳಿವೆ. ಒಳ್ಳೆಯ ಮಳೆಬೀಳುವ ಸ್ಥಳವನ್ನು ಕಂಡುಕೊಂಡು ಅಲ್ಲಿ ಕೆರೆಯನ್ನು ಸಿದ್ಧಪಡಿಸುವುದು.. ಕೆರೆಯಲ್ಲಿ ನೀರು ತುಂಬುವಕ್ಕೆ

ಅತ್ಯಾವಶ್ಯಕವಾದ ಮಳೆ ಬೀಳುವುದು. ಈ ಎರಡೂ ಮುಖ್ಯವೇ ಆದರೂ, ಯಾವುದರ ಆಧಾರವಿಲ್ಲದೆ ಹೋದರೆ ಮತ್ತೊಂದು ಕಾರ್ಯ ಫಲಿಸುವುದಿಲ್ಲ ಎಂಬುದೇ ಇಲ್ಲಿ ಮನವರಿಕೆ ಮಾಡಿಕೊಡಬೇಕಾದ ಮುಖ್ಯಾಂಶ.

ಕಾಡಿನಲ್ಲಿ ದಟ್ಟ ಮಳೆ ಬೀಳುವುದು ಸಹಜವೇ. ಎಲ್ಲಿಂದಲೋ ಶೇಖರವಾದೀ. ಆದ್ದರಿಂದ, ಕಾಡಿನಲ್ಲಿ ಮೋಡವು ಪ್ರದೇಶವನ್ನು ಆವರಿಸಿ, ಅಲ್ಲಿ ಗುಂಡಿ ತೋಡುವುದು, ಕೆರೆಯ ಕಟ್ಟೆಯನ್ನು ಭದ್ರವಾಗಿ ಸಿದ್ಧಪಡಿಸುವುದು ಒಂದು ಮುಖ್ಯ ಕೆಲಸವೇ ಆಯಿತು. ಇಷ್ಟು ಸಿದ್ಧವಾದ ಮಾತ್ರಕ್ಕೆ ಕೆರೆ ಸಿದ್ಧವಾಯಿತೇ? ಅದರಲ್ಲಿ ನೀರು ತುಂಬಿತೇ? ಅದಕ್ಕೆ ಮೂಲಾಧಾರವಾದ ಮಳೆ ಬಂದರಲ್ಲವೇ ಅಲ್ಲಿ ನೀರು ಹರಿದು ಬಂದು ಕೆರೆ ತುಂಬುವುದು? ಕೆರೆ ಕಟ್ಟೆಯನ್ನು ಸಿದ್ಧಪಡಿಸುವ ಶ್ರಮಸಾಧನೆಯನ್ನು ನಡೆಸಬಹುದು. ಅಷ್ಟು ಮಾತ್ರಕ್ಕೆ ಪರ್ಜನ್ಯದೇವನು ಮಳೆಯನ್ನು ಬಿಡುತ್ತಾನೆಯೇ? ಅವನನ್ನು ಒಲಿಸಿಕೊಳ್ಳಬೇಡವೇ? ಅವನ ಔದಾರ್ಯವನ್ನು ಗಳಿಸಿಕೊಳ್ಳಬೇಡವೇ? ಆಗ ತಾನೆ ಮಳೆ ಬೀಳುವುದು?

ಮೇಲಿನ ವಿಷಯದಂತೆಯೇ ಇದೆ ಚೇತನ ಮತ್ತು ಭಗವಂತನ ಸಂಬಂಧ. ತಾನು ಭಗವಂತನ ಶೇಷನೆಂದೂ, ಭಗವದ್ದಾಸ್ಯವು ತನಗೆ ಅನಿವಾರ್ಯವೆಂದೂ ಚೇತನ ತಿಳಿದುಕೊಳ್ಳಬೇಕು. ಮತ್ತು, ತನ್ನ ಹೃದಯ ಮಂದಿರವನ್ನು ಸಿದ್ಧಗೊಳಿಸಿ ಅಲ್ಲಿ ಭಗವಂತನನ್ನು ನೆಲೆಗೊಳಿಸಿಕೊಳ್ಳುವುದಕ್ಕೆ ಯತ್ನಿಸಬೇಕು. ಈ ಎರಡು ಕೆಲಸಗಳ ಜೊತೆಗೆ ಚೇತನನಿಗೆ ಪರಿಜ್ಞಾನವು ಅವಶ್ಯಕ. ಒಂದನ್ನು ಮತ್ತೊಂದನ್ನು ಮಾಡುವುದು ಶ್ರಮಸಾಧನೆಯೇ ಆಗುತ್ತದೆ. ಇವುಗಳ ಜೊತೆಗೆ ಭಗವತ್ಕೃಪೆಯೂ ಭಗವಂತನ ಔದಾರ್ಯವೂ ಸಮ್ಮಿಳಿತವಾಗಿ ಲಭ್ಯವಾದಾಗಲೇ ಚೇತನನಿಗೆ ಬ್ರಹ್ಮಾನಂದ ಲಭಿಸುವುದು.

ಆಳ್ವಾರರು ಹೇಳುತ್ತಾರೆ: ಭಗವಂತನು ಶೇಷಿ. ಚೇತನ ಅವನ ಶೇಷ. ಈ ಶೇಷ-ಶೇಷೀ ಭಾವವನ್ನು ಚೇತನನು ಅರಿತುಕೊಳ್ಳಬೇಕು. ಭಗವದ್ದಾಸ್ಯವೇ ಚೇತನನ ಮುಖ್ಯ ಕರ್ತವ್ಯ. ಇದಲ್ಲದೆ, ಚೇತನನು ಭಗವಂತನನ್ನು ತನ್ನ ಹೃದಯ ಮಂದಿರದಲ್ಲಿ ನೆಲೆಗೊಳಿಸಲು ಸರ್ವಪ್ರಯತ್ನ ಮಾಡಬೇಕು. ಹೀಗೆ ಸಿದ್ಧವಾದ ಚೇತನನ ಮೇಲೆ ಭಗವಂತನು ಪರಮೌದಾರ್ಯವನ್ನು ತೋರುತ್ತಾನೆ. ಅವನಿಗೆ ಬ್ರಹ್ಮಾನಂದಾನುಭವವನ್ನು ಒದಗಿಸಿಕೊಡುತ್ತಾನೆ.

Garani Srinivasan

17. மற்றாரியலாவார் வானவர் கோன் மாமலரோன்,
சுற்றும் வணங்கும் தொழிலானை, - ஒற்றைப்
பிறையிருந்த செஞ்சடையான் பின்சென்று, மாலைக்
குறையிரந்து தான்முடித்தான் கொண்டு.

ಮಟ್ರಾರಿಯಲಾವಾರ್ ವಾನವರ್ ಕೋನ್ ಮಾಮಲರೋನ್,
ಶುಟ್ರುಮ್ ವಣಙ್ಗುಮ್ ತೊಳಿಲಾನೈ, - ಒಟ್ರೈ
ಪ್ಪಿಱೈಯಿರುನ್ದ ಶೆಂಜಡೈಯಾನ್ ಪಿನ್ ಶೆನ್ಱು, ಮಾಲೈ
ಕ್ಕುಱೈಯಿರನ್ದು ತಾನ್ ಮುಡಿತ್ತಾನ್ ಕೊಣ್ಡು.

ಮಟ್ರು ಆರ್ மற்று ஆர் = ಬೇರೆ ಯಾರು, ಇಯಲ್ இய ல் = ಆಶ್ರಯಿಸಿ ಶಕ್ತವರು, ಆವಾರ್ ஆவார் = ಆಗುತ್ತಾರೆ? ವಾನವರ್ ಕೋನ್ வானவர் கோன் = ದೇವತೆಗಳ ಒಡೆಯನೂ, ಮಾಮಲರೋನ್ மாமலரோன் = ವಿಶಿಷ್ಟವಾದ ಹೂವಿನಲ್ಲಿ ಹುಟ್ಟಿದವನೂ, ಶುಟ್ರುಮ್ சுற்றும் = ಎಲ್ಲಾ ಕಡೆಗಳಿಂದಲೂ, ವಣಙ್ಗುಮ್ வணங்கும் = ನಮಸ್ಕರಿಸುವ (ಅಡ್ಡಬೀಳುವ), ತೊಳಿಲಾನೈ தொழிலானை = (ಅರ್ಹವಾದ) ಕಾರ್ಯಗಳುಳ್ಳವನನ್ನು, ಒಟ್ರೈ ಪಿಱೈ ஒற்றைப் பிறை = ಬಾಲಚಂದ್ರನನ್ನು, ಇರುನ್ದ இருந்த = ಇಟ್ಟ, ಶೆಂಜಡೈಯಾನ್ செஞ்சடையான் = ಕೆಂಜಡೆಯವನು, ಪಿನ್ ಶೆನ್ಱು பின்சென்று = ಹಿಂದೆ ಹೋಗಿ (ಅನುಸರಿಸಿ), ಮಾಲೈ மாலை = ಭಗವಂತನನ್ನು, ಕುಱೈ குறை = ಕೊರತೆ, ಇರನ್ದು இரந்து = ಯಾಚಿಸಿ, ತಾನ್ தான் = ತಾನು, ತನ್ನ ಕೊರತೆಗಳನ್ನು ಹೇಳಿಕೊಂಡು, ಕೊಣ್ಡು கொண்டு = (ಭಗವಂತನ) ಆಶ್ರಯವನ್ನು ಪಡೆದುಕೊಂಡು, ಮುಡಿತ್ತಾನ್ முடித்தான் = ತನ್ನ ಕರ್ತವ್ಯವನ್ನು ನೆರವೇರಿಸಿದನು.

ಬೇರೆ ಯಾರು ಆಶ್ರಯಿಸಿ ಶಕ್ತರಾಗುತ್ತಾರೆ? ದೇವತೆಗಳ ಒಡೆಯನೂ, ವಿಶಿಷ್ಟವಾದ ಹೂವಿನಲ್ಲಿ ಹುಟ್ಟಿದವನೂ ಎಲ್ಲಾ ಕಡೆಗಳಿಂದಲೂ ಅಡ್ಡಬೀಳುವುದಕ್ಕೆ ಅರ್ಹವಾದವನನ್ನು ಆಶ್ರಯಿಸಿದ್ದಾರೆ. ಬಾಲಚಂದ್ರನನ್ನುಳ್ಳ ಕೆಂಜಡೆಯವನು (ಭಗವಂತನನ್ನು) ಅನುಸರಿಸಿ ಹೋಗಿ, ಭಗವಂತನನ್ನು ಬೇಡಿ, ತನ್ನ ಕೊರತೆಗಳನ್ನು ತಾನು ಆಶ್ರಯವನ್ನು ಪಡೆದುಕೊಂಡು ತನ್ನ ಕರ್ತವ್ಯವನ್ನು ನೆರವೇರಿಸುತ್ತಾನೆ.

ಹಿಂದಿನ ಪಾಶುರದಲ್ಲಿ ಭಗವಂತನ ಶ್ರೀ ಮತ್ತು ಔದಾರ್ಯಗಳ

Garani Srinivasan

ಗಾಗಿ ಅವನನ್ನು ಆಶ್ರಯಿಸಿ, ಅವನಿಗೆ ದಾಸ್ಯನಡಸಬೇಕೆಂಬುದನ್ನು ಆಳ್ವಾರರು ಹೇಳಿದರು.

ಈಗ ಹೇಳುವುದು ಭಗವಂತನೊಬ್ಬನೇ ಆಶ್ರಯಕ್ಕೆ ತಕ್ಕವನು. ಅವನ ಹೊರತು ಬೇರೆ ಯಾರೂ ಅಂಥವರಲ್ಲ ಎಂಬುದನ್ನು.

ದೇವತೆಗಳ ಒಡೆಯ - ದೇವೇಂದ್ರ; ವಿಶಿಷ್ಟರಾದ ಜ್ಞಾನಿಗಳ ಹುಟ್ಟಿದವನು - ಚತುರ್ಮುಖ ಬ್ರಹ್ಮ; ಭಗವಂತನ ನಾಭಿಕಮಲದಲ್ಲಿ ಹುಟ್ಟಿ ಅದನ್ನೇ ಮನೆ ಮಾಡಿಕೊಂಡಿರುವವನು. ಬಾಲಚಂದ್ರನನ್ನು ಅಲಂಕಾರವಾಗಿ ಇಟ್ಟುಕೊಂಡಿರುವವನು ರುದ್ರನು. ಇವರೆಲ್ಲ ಭಗವಂತನನ್ನೇ ಆಶ್ರಯಿಸಿರುವವರು.

ಆಳ್ವಾರರು ಹೇಳುತ್ತಾರೆ: ದೇವೇಂದ್ರನೂ, ಚತುರ್ಮುಖನೂ ಭಗವಂತನನ್ನು ನೇರವಾಗಿ ಸಂದರ್ಶಿಸಲು ಸಾಧ್ಯವಾದವರಾಗಿ, ಬೇರೆ ಬೇರೆ ಕಡೆಗಳಲ್ಲಿ ನಿಂತು (ಭಗವಂತನ ಅರ್ಚಾವತಾರಗಳಲ್ಲಿ ನಿಂತು), ಭಗವಂತನಿಗೆ ಅಡ್ಡಬಿದ್ದು, ಅವನನ್ನಾಶ್ರಯಿಸಿ, ಅವನ ಕೃಪೆಗೆ ಪಾತ್ರರಾದ ತ್ತಾರೆ. ಬಾಲಚಂದ್ರನನ್ನಿಟ್ಟುಕೊಂಡಿರುವವನಾದ ರುದ್ರನು, ಭಗವಂತನನ್ನು ಸಂಭಾವಿಸಿ, ತನ್ನ ಕೋರಿಕೆಗಳನ್ನು ಅವನಲ್ಲಿ ನಿವೇದಿಸಿಕೊಂಡು, ಅವನ್ನು ಬೇಡಿ, ಅವನ ಕೃಪೆಗೆ ಪಾತ್ರನಾದನು. ಹೀಗಿರುವಲ್ಲಿ, ಭಗವಂತನಲ್ಲದೆ, ಯಾರಾದರೂ, ಆಶ್ರಯಕ್ಕೆ ತಕ್ಕವರು ಬೇರೆಯಾರಿದ್ದಾರೆ?

18. கொண்ட துலகம் குறளுருவாய்க் கோளரியாய்,
ஒண்டிறலோன் மார்வத் துகிர்வைத்தது,— உண்டதுவும்
தான் கடந்த வேழுலகே தாமரைக்கண் மாலொருநாள்,
வான் கடந்தான் செய்த வழக்கு.

ಕೊಂಡದುಲಗಮ್ ಕುಱಳುರುವಾಯ್ ಕ್ಕೋಳರಿಯಾಯ್,
ಒಣ್ಡಿಱಲೋನ್ ಮಾರ್ವತ್ತುಹಿರ್ ವೈತ್ತದು,— ಉಣ್ಡದುವುಮ್
ತಾನ್ ಕಡನ್ದ ವೇೞುಲಗೇ ತಾಮರೈಕ್ಕಣ್ ಮಾಲೊರುನಾಳ್,
ವಾನ್ ಕಡನ್ದಾನ್ ಶೆಯ್ದ ವೞಕ್ಕು.

ಕುಱಳ್ ಉರು ಆಯ್ (குறள் உரு ஆய்) = ವಾಮನವಟುವಿನ ರೂಪವನ್ನು ತಳೆದು, ಉಲಗಮ್ (உலகம்) = ಲೋಕಗಳನ್ನೆಲ್ಲ, ಕೊಣ್ಡದು (கொண்டது) = ಅಳೆದುಕೊಂಡದ್ದೂ, ಕೋಳ್ ಅರಿ ಆಯ್

கோள் அரி ஆய = ಬಲಿಷ್ಠನಾದ ನರಸಿಂಹಾವತಾರಿಯಾಗಿ, ಹಿರಣ್
ತಿಲಲನ್ ರಾಣ್ திறலோன் = ಅದ್ಭುತವಾದ ಶಕ್ತಿಯುಳ್ಳ
ವನ, ಮಾರ್ವತ್ತು மார்வத்து = ಎದೆಯಲ್ಲಿ, ಉಗಿರ್ ವೈತ್ತದುಮ
உகிர் வைத்ததும் = ತೈ ಉಗುರನ್ನು ನಾಟಿದ್ದು, ತಾನ್ ಕಡಂದ
தான் கடந்த = ತಾನು ಅಳೆದುಕೊಂಡ, ಏಳ್ ಉಲಕೈ ರಾಷ್ಟ್ರ
உலகை = ಏಳು ಲೋಕಗಳನ್ನು, ಒರುನಾಳ್ ரு(ந)நாள் = ಒಂದು
ದಿನ, ಉಣ್ಣದುವುಮ உண்டதுவும் = ತಾನು ಕಬಳಿಸಿದ್ದು,
ತಾಮರೈಕ್ಕಣ್ ಮಾಲ್ தாமரைக்கண் மால் = ತಾವರೆಯಂತೆ
(ವಿಶಾಲವೂ ಆಕರ್ಷಕವೂ ಆದ) ಕಣ್ಣುಗಳುಳ್ಳ ಸರ್ವೇಶ್ವರನು,
ವಾನ್ ಕಡಂದಾನ್ வான் கடந்தான் = ಆಕಾಶವನ್ನೇ ಮೀರಿದವನು,
ಶೆಯ್ದ ಶெய்த = ಮಾಡಿದ, ವಳಿಕ್ಕು வழக்(கு) = ನ್ಯಾಯವಿದ್ದರೆ.

ವಾಮನ ವಟುವಿನ ರೂಪವನ್ನು ತಳೆದು ಲೋಕಗಳೆಲ್ಲವನ್ನೂ ಅಳೆದುಕೊಂಡದ್ದು, ಬಲಿಷ್ಠನಾದ ನರಸಿಂಹಾವತಾರಿಯಾಗಿ ಅದ್ಭುತವಾದ ಶಕ್ತಿಯುಳ್ಳವನ ಎದೆಯಲ್ಲಿ ತನ್ನ ತೈ ಉಗುರನ್ನು ನಾಟಿದ್ದು, ತಾನು ಅಳೆದುಕೊಂಡ ಏಳು ಲೋಕಗಳನ್ನು ಒಂದು ದಿನ ತಾನು ಕಬಳಿಸಿದ್ದು ಆಕಾಶವನ್ನೇ ಮೀರಿದವನಾದ ತಾವರೆಯಂತೆ ಕಣ್ಣುಗಳುಳ್ಳ ಸರ್ವೇಶ್ವರನು ಮಾಡಿದ ನ್ಯಾಯವಿದ್ದರೆ. (18)

ಹಿಂದಿನ ಕಾಲದಲ್ಲಿ ಭಗವಂತನೊಬ್ಬನನ್ನೇ ಎಲ್ಲರೂ ಆಶ್ರಯಿಸಿದ್ದರು. ಅವನೇ ಸರ್ವೇಶ್ವರ ಎಂಬುದನ್ನು ಆಳ್ವಾರರು ಹೇಳಿದರು.

ಭಗವಂತನಾಗಿ ಅವನು ಮಾಡಿದ್ದೆಲ್ಲವೂ ನ್ಯಾಯಸಮ್ಮತ, ತನಗಾಗಿ ಅಲ್ಲ ಎಂಬುದನ್ನು ಅವರು ನಿರ್ಧರಿಸುತ್ತಾರೆ.

ಮೂರು ಅವತಾರಗಳನ್ನು ಇಲ್ಲಿ ಉದ್ಧರಿಸಲಾಗಿದೆ. ಮೊದಲನೆಯದು ವಾಮನಾವತಾರ. ಎರಡನೆಯದು ನರಸಿಂಹಾವತಾರ. ಮೂರನೆಯದು ಪ್ರಳಯಕಾಲದ್ದು. ಒಂದೊಂದರಲ್ಲಿ ಒಂದೊಂದು ವೈಶಿಷ್ಟ್ಯ ಕಂಡುಬರುತ್ತದೆ.

ಕೇಳಿದ್ದನ್ನು ಕೊಡುವ ಬ್ರಹ್ಮಚಾರಿಯಾಗಿ ಬಲಿಚಕ್ರವರ್ತಿಯ ಯಾಗಶಾಲೆಗೆ ಬಂದು, ತನ್ನ ಹೆಜ್ಜೆಯಲ್ಲಿ ಮೂರು ಹೆಜ್ಜೆಯ ನೆಲವನ್ನು ಬೇಡಿ, ಅವನಿಂದ ಅದನ್ನು ಪಡೆದುಕೊಂಡ ಕೂಡಲೇ ಮಹಾದ್ಭುತ ತ್ರಿವಿಕ್ರಮನಾಗಿ ಬೆಳೆದು, ಏಳು ಲೋಕಗಳನ್ನೂ ಎರಡೇ ಹೆಜ್ಜೆಗಳಲ್ಲಿ

ಅಳೆದುಕೊಂಡದ್ದು. ಇದು ವಂಚನೆಯಲ್ಲವೇ?

ಹಿರಣ್ಯಕಶಿಪುವಿನ ಬುದ್ಧಿ ಚಾತುರ್ಯವನ್ನು ಮೆಚ್ಚಿ, ನರಹರಿಯ ಅವತಾರವನ್ನು ತಳೆದದ್ದು. ಅವನು ತನ್ನ ಕನಸಿನಲ್ಲೂ ಕಂಡು ಕೇಳರಿಯದ ಈ ವಿಚಿತ್ರ ರೂಪದಲ್ಲೂ ಅಪ್ರತಿಮ ಪರಾಕ್ರಮ ಎನಿಸಿದ ಅವನನ್ನು ಕೊಂದದ್ದಾದರೂ ಹೇಗೆ? ತನ್ನ ಕೈಉಗುರುಗಳನ್ನೇ ಆಯುಧವನ್ನಾಗಿ ಮಾಡಿಕೊಂಡು ಹಿರಣ್ಯಕಶಿಪುವಿನ ಎದೆಯನ್ನು ಅದರಿಂದ ಬಗೆದು ಸೀಳಿಹಾಕಿದ್ದು! ಎಂಥ ಅದ್ಭುತ ಪ್ರದರ್ಶನ!

ಕಡೆಯದಾಗಿ, ತಾನೇ ಸೃಷ್ಟಿಸಿ, ರಕ್ಷಿಸುತ್ತಿದ್ದ, ತಾನೇ ಅಳೆದ ತನ್ನದೆಂದು ತೋರಿಸಿದ ಬ್ರಹ್ಮಾಂಡವನ್ನು ಒಂದೇ ಗುಟುಕಿಗೆ ಕಬಳಿಸಿ ಲಯಕರ್ತನೆನಿಸಿದ್ದು ಪರಮಾದ್ಭುತ ಪ್ರಸಂಗ!

"ವಾನ್ ಕಡನ್ದಾನ್" — ಭಗವಂತನು ಆಕಾಶವನ್ನು ಎಲ್ಲ ಬಗೆಯಲ್ಲೂ ಮೀರಿದವನು. ಆಕಾಶದಂತೆ ಸರ್ವವ್ಯಾಪಿಯಾಗಿರುವುದು ಮಾತ್ರವಲ್ಲದೆ, ಅದೆಲ್ಲವನ್ನೂ ತನ್ನ ನಾಭಿಯಲ್ಲಿಯೇ ಅಡಗಿಸಿಕೊಂಡಿರುವ ಪರಾಕ್ರಮಿ ಅವನು.

ಆಳ್ವಾರರು ಹೇಳುತ್ತಾರೆ: ಭಗವಂತನು ನಡೆಸುವ ಕೆಲಸಗಳೆಲ್ಲವೂ ನ್ಯಾಯಬದ್ಧವಾದವು. ವಾಮನ ವಟುವಾಗಿ ಬಲಿಚಕ್ರವರ್ತಿಯನ್ನು ವಂಚಿಸಿ, ಅವನಿಂದ ಪಡೆದ ದಾನವನ್ನು ತ್ರಿವಿಕ್ರಮನಾಗಿ ಬೆಳೆದು ಅಳೆದುಕೊಂಡದ್ದಾಗಲಿ, ತನ್ನನ್ನು ಯಾವ ರೀತಿಯಲ್ಲೂ ಮೀರಿಸುವವರಿಲ್ಲವೆಂದು ಬೀಗುತ್ತಿದ್ದ ಗರ್ವಿಷ್ಠನಾದ ಹಿರಣ್ಯಕಶಿಪುವನ್ನು ನಂಬಲಸಾಧ್ಯ ನರಹರಿಯ ರೂಪವನ್ನು ತಳೆದು ತನ್ನ ಕೈಉಗುರುಗಳಿಂದಲೇ ಅವನ ಎದೆಯನ್ನು ಬಗೆದು ಸೀಳಿ ಕೊಂದದ್ದಾಗಲಿ, ತನ್ನದೇ ಆದ ಬ್ರಹ್ಮಾಂಡವನ್ನು ಪ್ರಳಯಕಾಲದಲ್ಲಿ ತಾನೇ ನುಂಗಿಹಾಕಿದ್ದಾಗಲಿ, ಎಷ್ಟೇ ವಿಸ್ಮಯಕರವೆಂದರೂ, ಅದು ಅವನ ಸಹಜವಾದ ಕೆಂದರೂ — ಎಲ್ಲವೂ ನ್ಯಾಯಬದ್ಧವಾದ ಲೀಲೆಗಳೇ.

19, வழக்கன்று கண்டாய் வலி சகடம் செற்றாய்,
வழக்கென்று நீ மதிக்க வேண்டா, —குழக்கன்று
தீவிளவின் காய்க்கெறிந்த தீமை திருமாலே,
பார்விளங்கச் செய்தாய் பழி.

ವಳಕ್ಕನ್ಱು ಕಣ್ಡಾಯ್ ವಲಿ ಶಕಡಮ್ ಶೆಱ್ಱಾಯ್,
ವಳಕ್ಕನ್ಱು ನೀ ಮದಿಕ್ಕ ವೇಣ್ಡಾ, – ಕುಳಕ್ಕನ್ಱು
ತೀವಿಳವಿನ್ ಕಾಯ್‌ಕ್ಕೆಱಿನ್ದ ತೀಮೈ ತಿರುಮಾಲೇ,
ಪಾರ್ ವಿಳಙ್ಗ ಶೆಯ್ದಾಯ್ ಪಳಿ.

ಅನ್ಱು அன்று = ಅಂದು, ವಳಕ್ಕು வழக்கு = (ಧರ್ಮವನ್ನು) ನ್ಯಾಯವನ್ನು, ಕಣ್ಡಾಯ್ கண்டாய் = ಕಂಡುಕೊಂಡೆ, ವಲಿ வலி = ಬಲಿಷ್ಠವಾದ, ಶಕಡಮ್ சகடம் = ಶಕಟವನ್ನು, ಶೆಱ್ಱಾಯ್ செற்றாய் = ಕೊಂದು ಹಾಕಿದೆ, ವಳಕ್ಕನ್ಱು வழக்கன்று = (ಇದು) ವಿವಾದಾಸ್ಪದ ಎಂದು, ನೀ நீ = ನೀನು, ಮದಿಕ್ಕ ವೇಣ್ಡಾ மதிக்க வேண்டா = ಭಾವಿಸಬೇಡ, ಕುಳಕ್ಕನ್ಱು குழக்கன்று = ಎಳೆಗರುವನ್ನು, ತೀ ವಿಳವಿನ್ தீ விளவின் = ಕೆಟ್ಟ ಬೇಲದ, ಕಾಯ್‌ಕ್ಕು காய்க்கு = ಕಾಯಿಗಳಿಗೆಂದು, ಎಱಿನ್ದ எறிந்த = ಬೀಸಿ ಎಸೆದ, ತೀಮೈ தீமை = ಚೇಷ್ಟೆ ಸ್ವಭಾವದ, ತಿರುಮಾಲೇ திருமாலே = ಸರ್ವೇಶ್ವರನೇ, ಪಾರ್ பார் = ಭೂಮಂಡಲವನ್ನೇ, ವಿಳಙ್ಗ விளங்க = ಬೆಳಗುವಂತೆ, ಶೆಯ್ದಾಯ್ செய்தாய் = ಮಾಡಿದೆ, ಪಳಿ பழி = ತಪ್ಪು.

ಅಂದು, ಧರ್ಮ(ನ್ಯಾಯ)ವನ್ನು ಕಂಡುಕೊಂಡೆ. ಬಲಿಷ್ಠವಾದ ಶಕಟವನ್ನು ಕೊಂದು (ಮುರಿದು) ಹಾಕಿದೆ. ಇದು ವಿವಾದಾಸ್ಪದ ಎಂದು ನೀನು ಭಾವಿಸಬೇಡ. ಎಳೆಗರುವನ್ನು ಕೆಟ್ಟ ಬೇಲದ ಕಾಯಿಗಳಿಗಾಗಿ ಬೀಸಿ ಎಸೆದ ಚೇಷ್ಟೆ ಸ್ವಭಾವದ ಸರ್ವೇಶ್ವರನೇ, ಭೂಮಂಡಲವನ್ನೇ ಬೆಳಗಿಸುವಂತೆ ತಪ್ಪು ಮಾಡಿದೆ. (19)

ಹಿಂದಿನ ಪಾಶುರದಲ್ಲಿ ಭಗವಂತನ ಧರ್ಮ ಯಾವುದು, ಯಾವುದು ಅವನ ಪದ್ಧತಿ ಎಂಬುದನ್ನು ವಿವರಿಸಲಾಯಿತು.

ಈಗ, ಅಂಥ ಪದ್ಧತಿಯನ್ನು ಭಗವಂತನು ಕಂಡುಕೊಂಡದ್ದು ಯಾವಾಗ ಎಂಬುದನ್ನೂ ಅದು ಅವನಿಗೆ ಸಹಜವಾದದ್ದೇ ಎಂಬುದನ್ನೂ ತಿಳಿಯ ಹೇಳಲಾಗುತ್ತಿದೆ. ಅತಿಸುಂದರವಾದ ಸಂದರ್ಭಕ್ಕೆ ಇದು ಅವಕಾಶಕೊಟ್ಟಿದೆ.

ಇಲ್ಲಿ ಮೂರು ನಿದರ್ಶನಗಳನ್ನು ಕೊಡಲಾಗಿದೆ. ಒಂದೊಂದೂ ಭಗವಂತನ ಚೇಷ್ಟೆಯ ಸ್ವಭಾವವನ್ನು ತೋರಿಸುತ್ತದೆ. ಎಲ್ಲವೂ ಭಗವಂತನ ಶ್ರೀಕೃಷ್ಣಾವತಾರದ ಪ್ರಸಂಗಗಳೇ.

ಮೊದಲನೆಯದು ಶಕಟಾಸುರ ಸಂಹಾರ. ಶ್ರೀಕೃಷ್ಣನು ನಂದಗೋಕುಲದಲ್ಲಿ ಬೆಳೆಯುತ್ತಿದ್ದಾಗ, ಅವನನ್ನು ಎಳೆಯ ಕಂದನಾಗಿ

ಇರುವಾಗಲೇ, ಅವನನ್ನು ಕೊಲ್ಲಲು ಶಕಟಾಸುರನನ್ನು ಕಂಸನು ಅಲ್ಲಿಗೆ ಕಳುಹಿಸಿಕೊಟ್ಟನು. ಆ ಅಸುರನು ಬಂಡಿಯ ರೂಪದಲ್ಲಿ ಬಂದ. ಮಗು ಮಲಗಿರುವಾಗ ಅದರ ಮೇಲೆ ಹರಿದು ಅದನ್ನು ಕೊಲ್ಲಬೇಕೆಂದು ಹವಣಿಸಿ ಮುನ್ನುಗ್ಗಿ ಬರುತ್ತಿರುವುದನ್ನು ಶಿಶುವಾದ ಕೃಷ್ಣನು ಕಂಡುಕೊಂಡು, ತನ್ನ ಪುಟ್ಟ ಕಾಲನ್ನು ಝಾಡಿಸುವುದರಿಂದಲೇ, ಆ ಶಕಟವನ್ನು ಪುಡಿ ಪುಡಿ ಮಾಡಿದನು. ಶಿಶುವು ಆಟವಾಡುವ ರೀತಿಯಲ್ಲೇ ಕಾಲನ್ನು ಝಾಡಿಸಿ, ~~ಕಾ~~ ಬಲಿಷ್ಠನಾದ ರಾಕ್ಷಸನನ್ನು ಕೊಲ್ಲುವ ಚೇಷ್ಟೆ ಎಂಥ ಆಶ್ಚರ್ಯಕರ!

ಶ್ರೀಕೃಷ್ಣನು ಸ್ವಲ್ಪ ದೊಡ್ಡವನಾದಾಗ, ಗೋವಳ ಬಾಲಕರ ಜೊತೆಯಲ್ಲಿ ತಾನೂ ದನಕರುಗಳನ್ನು ಮೇಯಿಸಲು ಕಾಡಿಗೆ ಹೋಗುತ್ತಿದ್ದದ್ದು ವಾಡಿಕೆ! ಒಂದು ದಿನ ಅವರೆಲ್ಲರೂ ಬೇಲದವನಕ್ಕೆ ಬಂದರು. ಬಾಲಕರಿಗೆ ಬೇಲದ ಹಣ್ಣುಗಳ ಮೇಲೆ ಆಶೆಯಾಯಿತು. ಆ ಬೇಲದ ಮರಗಳ ನಡುವೆ ~~ಅದೇ ರೀತಿಯ~~ ಬಂದು ಸೇರಿ ಬೇಲದ ಮರವಾಗಿಯೇ ಒಬ್ಬ ರಾಕ್ಷಸ - ಅವನು ~~ಕ~~ ಕಪಿತ್ಥಾಸುರ. ಕೃಷ್ಣನು ಅಲ್ಲಿಗೆ, ತನ್ನ ಬಳಿಗೆ, ಬಂದಾಗ, ಅವನನ್ನು ಕೊಲ್ಲಬೇಕೆಂದು ಅವನ ಹವಣಿಕೆ! ಅದೇ ಸಮಯದಲ್ಲಿ, ಕರುಗಳ ನಡುವೆ ಕರುವಿನ ರೂಪದಲ್ಲಿ ಮತ್ತೊಬ್ಬ ರಾಕ್ಷಸ. ಅವನು ವತ್ಸಾಸುರ. ಈ ಎರಡು ಕೆಟ್ಟ ಯೋಜನೆಗಳನ್ನು ಶ್ರೀಕೃಷ್ಣ ಕಂಡುಕೊಂಡ. ಎಳೆಗರು~~ವನ್ನು~~ವಿನ ~~ಬಾಲ~~ ಹಿಂಗಾಲುಗಳನ್ನು ಬಲವಾಗಿ ಹಿಡಿದುಕೊಂಡ. ಅದನ್ನು ಗರಗರನೆ ಚೆನ್ನಾಗಿ ತಿರುಗಿಸಿದ. ಆ ಮೇಲೆ ಅದನ್ನು ಆ ಕೆಟ್ಟ ಬೇಲದ ಮರದ ಮೇಲಕ್ಕೆ ಬೀಸಿ, ಎಸೆದ. ಇದರಿಂದ ಒಂದೇ ಬಾರಿಗೆ ಇಬ್ಬರು ರಾಕ್ಷಸರೂ ಸತ್ತುಹೋದರು. ಬೇಲದ ಹಣ್ಣುಗಳೂ ಹೇರಳವಾಗಿ ಉದುರಿದವು. ಬಾಲಕರು ಅವುಗಳನ್ನು ತಿಂದು ಆನಂದಪಟ್ಟರು.

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನೇ, ನೀನು ಎಳೆಯ ಶಿಶುವಾಗಿರುವಾಗಲೇ ನಿನ್ನ ಧರ್ಮವೇನೆಂದು ಅರಿತುಕೊಂಡೆ. ಆಗಲೇ ಶಕಟವನ್ನು ನಿನ್ನ ಪುಟ್ಟ ಕಾಲಿನಿಂದ ಒದೆದು ಕೊಂದು ಹಾಕಿದೆ. ಹಾಗೆಯೇ ಎಳೆಗರುವನ್ನು ಕೆಟ್ಟ ಬೇಲದ ಮರದ ಮೇಲಕ್ಕೆ ಎಸೆದು, ಇಬ್ಬರು ರಾಕ್ಷಸರನ್ನು ಕೊಂದು ಹಾಕಿದೆ. ಎಂಥ ಚೇಷ್ಟೆಗಳು ನಿನ್ನವು! ~~ಇವು~~ ಇದರಲ್ಲಿ ಯಾವ ಅಪಾಯಕ್ಕೂ ಅವಕಾಶವಿಲ್ಲ. ನಿನ್ನೀ ಚೇಷ್ಟೆಗಳನ್ನು ಕುರಿತು ಹೇಳಿ, ಕೇಳಿ, ಕೊಂಡಾಡುತ್ತಾ, ಜನ ಈ ಭೂಮಂಡಲವನ್ನೇ ಬೆಳಗಿಸುತ್ತಾರೆ, ಕಂಡೆಯಾ!

'వలుక్కు' (வழக்கு) ఎంబదక్కె 'వద్దశ', 'రీతి', 'క్రమ', 'ధర్మ', 'న్యాయ', 'నీతి', 'సంయమ', 'వివాద', 'సమృద్ధి' – ఎందు ముంతాద అర్థబరుత్తదె.

20. பழிபாவம் கையகற்றிப் பல்காலும் நின்னை,
வழிவாழ்வார் வாழ்வராம் மாதோ, – வழுவின்றி
நாரணன்றன் நாமங்கள் நன்குணர்ந்து நன்கேத்தும்,
காரணங்கள் தாமுடையார் தாம்.

పళి పావమ్ కైయగత్రి పల్కాలుమ్ నిన్నై,
వళి వాళ్వార్ వాళ్వరామ్ మాదో, – వళువిన్రి
నారణన్ తన్ నామఙ్గళ్ నన్గుణర్న్దు నన్గేత్తుమ్,
కారణఙ్గళ్ తాముడైయార్ తామ్.

వళు ఇన్రి வழு இன்றி = స్వల్పవూ అవకాశకొడదంతె, (ఎడెబిడదంతె), నారణన్ తన్ நாரணன் தன் = శ్రీమన్నారాయణన, నామఙ్గళ్ நாமங்கள் = నామగళన్ను, నన్గు ఉణర్న్దు நன்கு உணர்ந்து = చెన్నాగి అరితుకొండు, నన్గు ఏత్తుమ్ நன்கு ஏத்தும் = చెన్నాగి (అర్థవత్తాగి, రాగపూర్ణవాగి) స్తుతిసువ, కారణఙ్గళ్ காரணங்கள் = కారణగళన్ను, తాముడైయార్ தாம் உடையார் = తావు ఉళ్ళవరాగి, తామ్ தாம் = తావు, పళి பழி = అపవాదవన్ను, పావమ్ பாவம் = పాపవన్ను, కై అగత్రి கை அகற்றி = కయ్యింద నీగికొండు, పల్ కాలమ్ பல காலம் = బహుకాల, నిన్నై நின்னை = నిన్నన్ను, వళి వాళ్వార్ வழி வாழ்வார் = పూజిసి బాళువవరు, వాళ్వర్ ఆమ్ మాదో வாழ்வர் ஆம் மாதோ = నిజవాగి బాళువవరే ఆగుత్తారె, ఆశ్చర్యవల్ల.

ఎడెబిడదంతె శ్రీమన్నారాయణన దివ్యనామగళన్ను చెన్నాగి అరితుకొండు, అవుగళన్ను రాగపూర్ణవాగి (అర్థవత్తాగి) స్తుతిసువ కారణగళన్ను తావు ఉళ్ళవరాగిరువవరు, తావు

ಅಪವಾದವನ್ನೂ ಪಾಪವನ್ನೂ ತಮ್ಮಿಂದ ನೀಗಿಕೊಂಡು, ಬಹುಕಾಲ ನಿನ್ನನ್ನೇ ಪೂಜಿಸುತ್ತಾ ಬಾಳುವವರು ನಿಜವಾಗಿಯೂ ಬಾಳುವವರೇ (20) ಆಗುತ್ತಾರೆ, ಆಶ್ಚರ್ಯವಲ್ಲ.

ಹಿಂದಿನ ಪಾಶುರದಲ್ಲಿ, ಭಗವಂತನು ನಡೆಸುವ ದುಷ್ಟ ಶಿಕ್ಷಣ ಕಾರ್ಯವನ್ನು, ಅದಕ್ಕೆ ಕಾರಣವಾದ ಶಿಷ್ಟರಕ್ಷಣ ಕಾರ್ಯವನ್ನು ಆಳ್ವಾರರು ಭಗವಂತನ 'ಧರ್ಮ' ಎಂದೂ, ಅವನ 'ಸಹಜಸ್ವಭಾವ' ಎಂದೂ ಹೇಳಿದರು.

ಈಗ, ಭಗವನ್ನಾಮ ಸಂಕೀರ್ತನೆಯಿಂದ ಬರುವ ಒಳ್ಳೆಯದೇನು ಎಂಬುದನ್ನು ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮಿ, ನಿನ್ನ ದಿವ್ಯನಾಮಗಳನ್ನು ಚೆನ್ನಾಗಿ ಅರಿತುಕೊಂಡು, ಅವುಗಳನ್ನು ಎಡೆಬಿಡದಂತೆ ಉಚ್ಚರಿಸುತ್ತಾ, ಕೀರ್ತಿಸುತ್ತಾ ಆನಂದಿಸುವ ಭಕ್ತರಿದ್ದಾರೆ. ಅವರ ಮೇಲೆ ಯಾವ ಬಗೆಯ ಅಪವಾದವೂ ಬರುವುದಿಲ್ಲ. ಅವರು ತಿಳಿದಾಗಲಿ ತಿಳಿಯದೆಯಾಗಲಿ ಮಾಡಿದ ನಡೆಸಿದ ಯಾವ ಪಾಪವೂ ಅವರನ್ನಂಟುವುದಿಲ್ಲ. ಅದಕ್ಕೆಲ್ಲ ಅವರು ಭಗವನ್ನಾಮ ಸಂಕೀರ್ತನೆಯೊಂದೇ ಕಾರಣ. ಅದು ಅವರನ್ನು ಈ ಲೋಕದ ಬಾಳ್ವೆಯಲ್ಲಿ ಪಾರಲೌಕಿಕರನ್ನಾಗಿ, ಮುಕ್ತರನ್ನಾಗಿ ಮಾಡುತ್ತದೆ. ನಿಜವಾದ ಬಾಳ್ವೆ ಎಂದರೆ ಅದೇ.

21. தாமுளரே தம்முள்ளம் முள்ளுளதே, தாமரையின்
பூவுளதே யேத்தும் பொழுதுண்டே, - வாமன்
திருமருவு தாள்மருவு சென்னியரே, செவ்வே
அருநரகம் சேர்வ தரிது.

ತಾಮುಳರೇ ತಮ್ಮುಳ್ಳ ಮುಳ್ಳುಳದೇ, ತಾಮರೈಯಿನ್
ಪೂವುಳದೇ ಯೇತ್ತುಮ್ ಪೊಳುದುಣ್ಡೇ, - ವಾಮನ್
ತಿರುಮರುವು ತಾಳ್ಮರುವು ಶೆನ್ನಿಯರೇ, ಶೆವ್ವೇ
ಅರುನರಗಮ್ ಶೇರ್ವ ದರಿದು.

ತಾಮ್ ಉಳರೇ தாம் உளரே = (ಭಕ್ತರಾದವರು) ತಾವು ಇರುವರಲ್ಲ, ತಮ್ ಉಳ್ಳಮ್ தம் உள்ளம் = ತಮ್ಮ ಮನಸ್ಸು, ಉಳ್ ಉಳದೇ உள் உளதே = ಅಂತರಂಗದಲ್ಲಿಯೇ ನೆಲೆಗೊಂಡಿರುವುದಲ್ಲ, ತಾಮರೈಯಿನ್ ಪೂ ಉಳದೇ தாமரையின் பூ உளதே = ಸರೋವರಗಳಲ್ಲಿ ತಾವರೆ ಹೂಗಳು ಸಮೃದ್ಧಿಯಾಗಿ ಇರುವುದಲ್ಲ, ಏತ್ತುಮ್

Garani Srinivasan

ஏத்துதும் = (ಭಗವಂತನನ್ನು) ಭಜಿಸಿ ಪೂಜಿಸುವುದಕ್ಕೆ, ಹೋಲುವದು ಉಂಟೇ
பொழுது உண்டே = ವೇಳೆ ಇದೆಯಲ್ಲ, ವಾಮನ್ [illegible] =
ವಾಮನ ಮೂರ್ತಿಯ, ತಿರು திரு = ಸೌಂದರ್ಯವು, ಮರುವು மருவு =
ಆಶ್ರಯಿಸಿರುವ, ತಾಳ್ தாள் = ತಿರುವಡಿಗಳನ್ನು, ಮರುವು மருவு =
ಆಶ್ರಯಿಸಿರುವ (ಹೊತ್ತಿರುವ), ಚೆನ್ನಿಯರೋ சென்னியரோ = ~~ತಲೆ~~ ತಲೆ
ಯುಳ್ಳವರಲ್ಲ, ಚೆವ್ವೇ செவ்வே = (ಅರಾ) ನೇರವಾಗಿ (ಸರಿಯಾಗಿ),
ಅರು ನರಕಮ್ அரு நரகம் = ಕ್ರೂರವಾದ ನರಕವನ್ನು, ಸೇರ್ವದು
சேர்வது = ಸೇರುವುದು, ಅರಿದು அரிது = ಅಪರೂಪ (ಅಸಾಧ್ಯ)

ಭಕ್ತರಾದ ತಾವು ಇರುವರು. ತಮ್ಮ ಮನಸ್ಸು ತಮ್ಮ ಅಂತರಂಗದಲ್ಲಿಯೇ ನೆಲೆಗೊಂಡಿರುವುದು. ತಮಗೆ ಭಗವಂತನನ್ನು ಪೂಜಿಸಲು ಸರೋವರಗಳಲ್ಲಿ ತಾವರೆ ಹೂಗಳು ಸಮೃದ್ಧಿಯಾಗಿರುವುದು. ಭಗವಂತನನ್ನು ಭಜಿಸಿ ಪೂಜಿಸಲು ತಮಗೆ ವೇಳೆ ಇದ್ದೇ ಇದೆ. ತಾವು ವಾಮನ ಮೂರ್ತಿಯ ಸುಂದರವಾದ ತಿರುವಡಿಗಳನ್ನು ತಮ್ಮ ತಲೆಯ ಮೇಲೆ ಹೊತ್ತಿರುವವರು. ಆದ್ದರಿಂದ, ತಾವು ಕ್ರೂರವಾದ ನರಕವನ್ನು ಸೇರುವುದು ಅಸಾಧ್ಯವೇ. (21)

ಭಕ್ತನ (ನಿಜವಾದ) ಬಾಳ್ವೆಯನ್ನು ಈ ಪಾಶುರದಲ್ಲೂ ಮುಂದುವರಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ಭಕ್ತನಾದವನು ಇತರ ಎಲ್ಲರಂತೆ ಇಹಲೋಕದಲ್ಲಿ ಬಾಳುತ್ತಾನೆ. ಆದರೆ, ಅವನ ಜೀವನ ಇತರರದಂತಲ್ಲ. ಅವನು ತನ್ನ ಇಂದ್ರಿಯಗಳನ್ನು ಪ್ರಾಪಂಚಿಕ ಸುಖದ ಕಡೆಗೆ ಹೋಗಗೊಡುವುದಿಲ್ಲ. ಅವು ಭಗವಂತನ ಕಾರ್ಯಕ್ಕೇ ಎಂದು ತೆಗೆದಿದ್ದಾನೆ. ಅದಕ್ಕೇ ಅವುಗಳನ್ನು ಈಡುಮಾಡುತ್ತಾನೆ. ಅವನ ಮನಸ್ಸು ಅಂತರಂಗದಲ್ಲಿರುವ ಪರಮಾತ್ಮನಲ್ಲಿ ನೆಲೆಗೊಂಡಿರುತ್ತದೆ. ಸರೋವರಗಳಲ್ಲಿರುವ ತಾವರೆ ಹೂಗಳೂ, ಇನ್ನಿತರ ಕಡೆಗಳಲ್ಲಿ ಬೆಳೆಯುವ ಸುಂದರ [illegible] ಪುಷ್ಪಗಳೂ ಭಗವಂತನ ಪೂಜೆಗೆಂದೇ ಅವರ ದೃಢನಂಬಿಕೆ. ಅದಕ್ಕಾಗಿಯೇ ಅವರು ಅದನ್ನು ~~ಬಳಸು~~ ಬಳಸುತ್ತಾರೆ. ಭಗವಂತನನ್ನು ಪೂಜಿಸಲು ಅವರಿಗೆ ಕಾಲ ಸಮೃದ್ಧಿಯಾಗಿದೆ. ಯಾವೊಂದು ಕ್ಷಣವನ್ನೂ ಅವರು ಹಾಳು ಮಾಡುವುದಿಲ್ಲ. ಭಗವಂತನ ದಿವ್ಯ-ಸುಂದರವಾದ ತಿರುವಡಿಗಳನ್ನೇ ಅವರು ಆಶ್ರಯಿಸಿದ್ದಾರೆ. ಅವುಗಳನ್ನು ಸದಾ ತಮ್ಮ ತಲೆಯ ಮೇಲೆ ಹೊತ್ತಿರುತ್ತಾರೆ. ಅಂಥವರಿಗೆ ನರಕವಾಸ ಎಂಬುದು ಅಸಾಧ್ಯವೇ. ಅವರು, ಈ ಜನ್ಮ ಕಳೆದ ಬಳಿಕ ಹೋಗುವುದು ನೇರವಾಗಿ ಪರಮಪದಕ್ಕೇ!

Garani Srinivasan

22. அரிய தெளிதாகு மாற்றலால் மாற்றி,
பெருகு முயல்வாரைப் பெற்றால், — கரியதோர்
வெண் கோட்டு மால்யானை வென்று முடிக்கின்றே,
தண் கோட்டு மாமலரால் தாழ்ந்து.

ಅರಿಯ ದೆಳಿದಾಗು ಮಾಟ್ರಲಾಲ್ ಮಾಟ್ರಿ,
ಪೆರುಗು ಮುಯಲ್ ವಾರೈ ಪೆಟ್ರಾಲ್, — ಕರಿಯದೋರ್
ವೆಣ್ ಕೋಟ್ಟು ಮಾಲ್ ಯಾನೈ ವೆನ್ರು ಮುಡಿಕ್ಕಿನ್ರೋ,
ತಣ್ ಕೋಟ್ಟು ಮಾಮಲರಾಲ್ ತಾಳ್ನ್ದು.

ಅರಿಯದು அரியது = ಅಸಾಧ್ಯವಾದದ್ದಾದರ, ಎಳಿದು ಆದು ಮಾ ನாளிது ஆகும் = ಸುಲಭವಾಗುತ್ತದೆ, ಆಟ್ರಲಾಲ್ ஆற்றலால் = ಶಕ್ತಿಯಿಂದ, ಮಾಟ್ರಿ மாற்றி = ನೀಗಿಸಿ (ಕಳೆದು), ಮುಯಲ್ ವಾರೈ முயல்- ಪೆರುಗು பெருகு = ವೃದ್ಧಿಹೊಂದುವ, ಮುಯಲ್ ವಾರೈ முயல்வாரை = ಉತ್ಸಾಹವುಳ್ಳವರನ್ನು (ಭಗವಂತನನ್ನು), ಪೆಟ್ರಾಲ್ பெற்றால் = ಪಡೆದುಕೊಂಡರೆ, ಕರಿಯದು ಓರ್ கரியதோர் = ಕಪ್ಪಗಿರುವ ಒಂದು, ವೆಣ್ ಕೋಡು வெண் கோடு = ಬಿಳಿಯ ದಂತಗಳುಳ್ಳ, ಮಾಲ್ ಯಾನೈ மால் யானை = ಮದ್ದಾನೆಯು, ತಣ್ ಕೋಡು தண் கோடு = ತಂಪಾದ ದಳವುಳ್ಳ, ಮಾ மா = ದೊಡ್ಡ, ಮಲರಾಲ್ மலரால் = ತಾವರೆ ಹೂವಿನೊಂದಿಗೆ, ತಾಳ್ನ್ದು தாழ்ந்து = ಅಡ್ಡಬಿದ್ದು (ಶರಣುಬಂದು), ವೆನ್ರು வென்று = ಜಯಿಸಿ, ಮುಡಿಕ್ಕಿನ್ರೋ முடிக்கின்றே = ಇಷ್ಟಾರ್ಥವನ್ನು ನೆರವೇರಿಸಿಕೊಂಡಿತಲ್ಲವೇ?

ಶಕ್ತಿಯಿಂದ ನೀಗಿಸುವ, ವೃದ್ಧಿಹೊಂದುವ ಉತ್ಸಾಹವುಳ್ಳ ಭಗವಂತನನ್ನು ಪಡೆದುಕೊಂಡರೆ, ಅಸಾಧ್ಯವಾದದ್ದಾದರ ಸುಲಭವಾಗುತ್ತದೆ. ಬಿಳಿಯ ದಂತದ ಕರಿಯ ಮದ್ದಾನೆಯು ತಂಪಾದ ದಳವುಳ್ಳ ದೊಡ್ಡ ತಾವರೆ ಹೂವಿನೊಂದಿಗೆ ಅಡ್ಡಬಿದ್ದು, (ಶತ್ರುವನ್ನು) ಜಯಿಸಿ, ತನ್ನ ಇಷ್ಟಾರ್ಥವನ್ನು ನೆರವೇರಿಸಿಕೊಂಡಿತಲ್ಲವೇ? (22)

ಹಿಂದಿನ ಪಾಶುರದಲ್ಲಿ ಭಗವಂತನನ್ನು ಆಶ್ರಯಿಸುವುದರಿಂದ ಚೇತನನಿಗೆ ಈ ಜನ್ಮ ಕಳೆದ ಬಳಿಕ ನರಕ ಬಾಧೆಗೆ ಅವಕಾಶವಿರುವುದಿಲ್ಲ ಎಂದು ಹೇಳಲಾಯಿತು. ಇಲ್ಲಿ ಹೇಳುವುದು, ಅವನನ್ನಾಶ್ರಯಿಸಿ

Garani Srinivasan

ದವರಿಗೆ ಇದೇ ಜೀವನದಲ್ಲೇ ಅಸಾಧ್ಯವೆನಿಸುವುದು ಯಾವುದೂ ಇಲ್ಲ ದಂತೆ ಎಲ್ಲವೂ ಸುಲಭವಾಗಿ ನಡೆಯುತ್ತದೆ ಎಂಬುದನ್ನು.

ಆಳ್ವಾರರು ಹೇಳುತ್ತಾರೆ: ಭಗವಂತನ ಸರ್ವಶಕ್ತತ್ವವನ್ನು ಜೀವನರನ್ನು ಉದ್ಧರಿಸುವುದರಲ್ಲಿ ಅವನಿಗಿರುವ ಅಮಿತೋತ್ಸಾಹವನ್ನು ಅರಿತುಕೊಂಡು, ಅವನನ್ನಾಶ್ರಯಿಸಿ, ಅವನನ್ನು ಪಡೆದುಕೊಂಡರೆ, ಈ ಲೋಕದ ಜೀವನವೂ ಸುಖಮಯವಾಗುತ್ತದೆ. ~~ಈ ಜೀವನದಲ್ಲಿ~~ ಅಸಾಧ್ಯವೆನಿಸುವುದು ಯಾವುದೂ ಇರುವುದಿಲ್ಲ. ಎಲ್ಲವೂ ಸುಲಭವೇ ಆಗುತ್ತದೆ. ಗಜೇಂದ್ರನ ಕಷ್ಟನಿವಾರಣೆ ಇದಕ್ಕೆ ಒಂದು ನಿದರ್ಶನ. ಬಿಳಿಯ ದಂತದ ಆ ಕರಿಯ ಮದ್ದಾನೆಯು ಸರೋವರದಲ್ಲಿ ಅರಳಿದ್ದ ದೊಡ್ಡ ಕಮಲದ ಹೂವನ್ನು ಒಮ್ಮನದಿಂದ ಭಗವಂತನಿಗೆ ಅರ್ಪಿಸಿ ಅಡ್ಡಬಿದ್ದದ್ದರ ಫಲವೇ ಅಲ್ಲವೇ ಅದು ಅದರ ಶತ್ರುವಾದ ಮೊಸಳೆಯ ಹಿಡಿತದಿಂದ ಪಾರಾದದ್ದು? ಭಗವಂತನು ಅದರ ಮೊರೆಯನ್ನು ಕೇಳಿದ. ಅಲ್ಲಿಗೆ ಧಾವಿಸಿ ಬಂದ. ತನ್ನ ಚಕ್ರಾಯುಧವನ್ನು ಪ್ರಯೋಗಿಸಿದ. ಮೊಸಳೆಯನ್ನು ಸಂಹರಿಸಿ, ಆನೆಯ ಸಂಕಟವನ್ನು ನೀಗಿಸಿದ.

23. தாழ்ந்து வரங்கொண்டு தக்க வகைகளால்,
வாழ்ந்து கழிவாரை வாழ்விக்கும், - தாழ்ந்த
விளங்கனிக்குக் கன்றெறிந்து வேற்றுருவாய், ஞாலம்
அளந்தடிக்கீழ்க் கொண்ட அவன்.

ತಾೞ್ನ್ದು ವರಙ್ಗೊಣ್ಡು ತಕ್ಕ ವಹೈಹಳಾಲ್,
ವಾೞ್ನ್ದು ಕೞಿವಾರೈ ವಾೞ್ವಿಕ್ಕುಮ್, - ತಾೞ್ನ್ದ
ವಿಳಙ್ಗನಿಕ್ಕುಕ್ ಕನ್ಱೆಱಿನ್ದು ವೇಱ್ಱುರುವಾಯ್, ಞಾಲಮ್
ಅಳನ್ದಡಿಕ್ಕೀೞ್ಕ್ ಕೊಣ್ಡವನ್.

ತಾೞ್ನ್ದು தாழ்ந்து = ಆಶ್ರಯಿಸಿ (ಭಜಿಸಿ, ಪೂಜಿಸಿ, ನಮ್ರತೆಯಿಂದ), ವರಙ್ಗೊಣ್ಡು வரம் கொண்டு = ಭಗವಂತನಿಂದ ವರವನ್ನು ಪಡೆದುಕೊಂಡು, ತಕ್ಕ தக்க = ಯೋಗ್ಯವಾದ, ವಹೈಹಳಾಲ್ வகைகளால் = ರೀತಿಯಲ್ಲಿ, ವಾೞ್ನ್ದು வாழ்ந்து = ಬಾಳುತ್ತಾ, ಕೞಿವಾರೈ கழி வாரை = ಜೀವನವನ್ನು ಕಳೆಯುವವರನ್ನು (ಮರಣಹೊಂದುವವರನ್ನು), ವಾೞ್ವಿಕ್ಕುಮ್ வாழ்விக்கும் = (ನಿಜವಾಗಿಯೂ) ಬಾಳಗೊಳಿಸುವನು, ತಾೞ್ನ್ದ தாழ்ந்த = ಹಣ್ಣುಗಳ ಭಾರದಿಂದ ಬಗ್ಗಿದ, ವಿಳಾ விளா =

ಚೇಲದ, ಕನಿಕ್ಕು கனிக்கு = ಹಣ್ಣುಗಳಿಗಾಗಿ, ಕನ್ಱು கன்று = ಕರುವನ್ನು, ಎಱಿನ್ದ எறிந்த = ಬೀಸಿದವನೂ, ವೇಱು ಉರು ಆಯ್ வேறு உருவாய் = ಬೇರೆ ರೂಪವನ್ನು ಧರಿಸಿ, ಞಾಲಮುಮ್ ஞாலமும் = ಭೂಮಿಯನ್ನು, ಅಳನ್ದು அளந்து = ಅಳೆದುಕೊಂಡು, ಅಡಿಕೀಳ್ அடி கீழ் = ತಿರುವಡಿಗಳ ಕೆಳಗೆ, ಕೊಣ್ಡ கொண்ட = ತಂದುಕೊಂಡ, ಅವನ್ அவன் = ಆ ಭಗವಂತನು.

ಹಣ್ಣುಗಳ ಭಾರದಿಂದ ಬಗ್ಗಿದ ಚೇಲದ ಹಣ್ಣುಗಳಿಗಾಗಿ ಕರುವನ್ನು ಬೀಸಿದವನೂ, ಬೇರೆ ರೂಪವನ್ನು ಧರಿಸಿ ಭೂಮಿಯನ್ನು ಅಳೆದುಕೊಂಡು (ಅವನನ್ನು) ತಿರುವಡಿಗಳ ಕೆಳಗೆ ತಂದುಕೊಂಡ ಆ ಭಗವಂತನು (ಭಜಿಸಿ, ಪೂಜಿಸಿ, ನಮಸ್ಕರಿಯಿಂದ) ಆಶ್ರಯಿಸಿ, ವರವನ್ನು ಪಡೆದುಕೊಂಡು, ಯೋಗ್ಯವಾದ ರೀತಿಯಲ್ಲಿ ಬಾಳುತ್ತಾ ಜೀವನವನ್ನು ಕಳೆಯುವವರನ್ನು (ಮರಣ ಹೊಂದುವವರನ್ನು) ನಿಜವಾಗಿಯೂ ಬಾಳಗೊಳಿಸುವನು. (23)

ಹಿಂದಿನ ಪಾಶುರದಲ್ಲಿ ಭಕ್ತನಿಗೆ ಬರುವ ಇಹ ಜೀವನದ ಸೌಲಭ್ಯವನ್ನು ತೋರಿ ಹೇಳಲಾಯಿತು. ಭಕ್ತನ ಮುಂದಿನ ಜೀವನವೂ ಶಾಶ್ವತಾನಂದವನ್ನು ದೊರಕಿಸಿ ಕೊಡುವಂತಾಗುವುದೆಂದು ಇಲ್ಲಿ ಹೇಳಲಾಗುತ್ತದೆ.

"ಕಾಯುನ್ದ ವಿಳಙ್ಗನಿಕ್ಕು ಕನ್ಱೆಱಿನ್ದ" — ಕಾಡಿನಲ್ಲಿ ಚೇಲದ ಮರದ ರೂಪದಲ್ಲಿ ಕಪಿತ್ಥಾಸುರನಿದ್ದ. ಎಳೆಗರುವಿನ ರೂಪದಲ್ಲಿ ವತ್ಸಾಸುರನಿದ್ದ. ಬಾಲಕೃಷ್ಣನು ಇಬ್ಬರನ್ನೂ ಒಂದೇ ಬಾರಿಗೆ ನಾಶಮಾಡಿದನು. ಕರುವನ್ನು ಅದರ ಹಿಂಗಾಲುಗಳಿಂದ ಹಿಡಿದುಕೊಂಡು, ಗರಗರನೆ ತಿರುಗಿಸಿ, ಅದನ್ನು ಚೇಲದ ಮರದ ಮೇಲೆ ಬೀಳುವಂತೆ ಬೀಸಿ ಎಸೆದು ಎರಡನ್ನೂ ನಾಶಮಾಡಿದನು.

"ವೇಱುರುವಾಯ್ ಞಾಲಮುಮ್ ಅಳನ್ದು" — ಭಗವಂತನು ತನ್ನ ನಿಜರೂಪವನ್ನು ಮರೆಸಿಕೊಂಡು, ವಾಮನ ವಟುವಾಗಿ, ಬಲಿಚಕ್ರವರ್ತಿಯ ಯಾಗಶಾಲೆಗೆ ಬಂದು, ತನ್ನ ಪುಟ್ಟ ಹೆಜ್ಜೆಯಲ್ಲಿ ಮೂರು ಹೆಜ್ಜೆಗಳ ನೆಲವನ್ನು ಯಾಚಿಸಿ, ಅದನ್ನು ಪಡೆದುಕೊಂಡ ಕೂಡಲೇ, ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದೇ ಹೆಜ್ಜೆಯಿಂದ ಭೂಮಂಡಲವನ್ನೆಲ್ಲ ಆವರಿಸಿ ಅಳೆದುಕೊಂಡನು.

"ಅಡಿಕ್ಕೀಳ್ ಕೊಣ್ಡವನ್" — ಭಗವಂತನು ತ್ರಿವಿಕ್ರಮನಾಗಿ ತನ್ನ ಒಂದು ಹೆಜ್ಜೆಯಿಂದ ಭೂಲೋಕವನ್ನು ಮತ್ತೊಂದು ಹೆಜ್ಜೆಯಿಂದ ಮೇಲಣ ಏಳು ಲೋಕಗಳನ್ನು ಅಳೆದುಕೊಂಡು ಬಿಟ್ಟನು. ತನ್ನ ಮೂರನೆಯ

ಹೆಜ್ಜೆಯನ್ನು ಇಡಲು ಬೇರೆ ಸ್ಥಳವಿಲ್ಲದ್ದರಿಂದ, ಬಲಿ ಚಕ್ರವರ್ತಿಯು ತನ್ನ ತಲೆಯನ್ನು ಬಗ್ಗಿಸಿ, ನಮ್ರನಾಗಿ, ಅದನ್ನು ತನ್ನ ತಲೆಯ ಮೇಲೆ ಇಡಬೇಕೆಂದು ಬೇಡಿಕೊಂಡನು. ಹಾಗೆಯೇ ಮಾಡಿ, ಭಗವಂತನು ಬಲಿಚಕ್ರವರ್ತಿಯನ್ನು ಅನುಗ್ರಹಿಸಿದನು.

ಆಳ್ವಾರರು ಹೇಳುತ್ತಾರೆ: ಭಗವಂತ ಪರಮೋದಾರ. ಯಾರು ಅವನ ತಿರುವಡಿಗಳನ್ನು ನಮ್ರತೆಯಿಂದ ಆಶ್ರಯಿಸಿ, ಭಜಿಸಿ, ಪೂಜಿಸುತ್ತಾರೋ ಅವರ ಬಾಳ್ವೆಯನ್ನೇ ಶಾಶ್ವತವನ್ನಾಗಿಸುತ್ತಾನೆ. ಒಂದು ರೂಪದಲ್ಲಿ ಬಂದು, ಬಲಿ ಚಕ್ರವರ್ತಿಯಲ್ಲಿ ಮೂರಡಿ ನೆಲವನ್ನು ಯಾಚಿಸಿ, ಪಡೆದುಕೊಂಡ ಬಳಿಕ, ಮತ್ತೊಂದು ರೂಪದಲ್ಲಿ ಅದನ್ನು ಅಳೆದುಕೊಳ್ಳುವಾಗ, ನಮ್ರತೆಯಿಂದ ತಲೆಬಾಗಿ ಕುಳಿತಿದ್ದ ಬಲಿಯ ತಲೆಯ ಮೇಲೆ ತನ್ನ ತಿರುವಡಿಯನ್ನಿರಿಸಿ, ಅವನನ್ನು ಶಾಶ್ವತವಾಗಿ ಅನುಗ್ರಹಿಸಿದನಲ್ಲವೇ?

24. அவன் கண்டாய் நன்னெஞ்சே யாரருளும் கேடும்,
அவன் கண்டாயைம்புலனாய் நின்றான், — அவன் கண்டாய்
காற்றுத்தீ நீர்வான் கருவரை மண், காரோதச்
சீற்றத்தீ யாவானும் சென்று.

ಅವನ್ ಕಣ್ಡಾಯ್ ನನ್ನೆಂಜೇ ಯಾರರುಳುಮ್ ಕೇಡುಮ್,
ಅವನ್ ಕಣ್ಡಾಯ್ಯೈಮ್ಬುಲನಾಯ್ ನಿನ್ಱಾನ್, — ಅವನ್ ಕಣ್ಡಾಯ್
ಕಾಱ್ಱುತ್ತೀ ನೀರ್ ವಾನ್ ಕರುವರೈ ಮಣ್, ಕಾರೋದ
ಚೀಱ್ಱತ್ತೀ ಯಾವಾನುಮ್ ಶೆನ್ಱು.

ನಲ್ ನೆಂಜೇ நல் நெஞ்சே = (ನನ್ನ) ಒಳ್ಳೆಯ ಮನಸ್ಸೇ, ಯಾರ್ (ಆರ್) யார் (ஆர்) = ಯಾರು, ಅರುಳುಮ್ அருளும் = ಪೂರ್ಣ ಕೃಪೆಯನ್ನೂ, ಕೇಡುಮ್ கேடும் = (ಅದಿಲ್ಲದೆ ಬರುವ) ಸಂಸಾರ ಬಂಧನವನ್ನೂ ಪಡೆಯುವರೋ, ಅವನ್ ಕಣ್ಡಾಯ್ அவன் கண்டாய் = ಅಂಥ ಅವನನ್ನು (ಭಗವಂತನನ್ನು) ಕಂಡೆಯಾ, ಅವನ್ ಕಣ್ಡಾಯ್ அவன் கண்டாய் = ಅವನೇ ಕಂಡೆಯಾ, ಐಮ್ಬುಲನ್ ஐம்புலன் = ಪಂಚೇಂದ್ರಿಯಗಳು, ಆಯ್ ஆய் = ಆಗಿ, ನಿನ್ಱಾನ್ நின்றான் = ಇದ್ದಾನೆ,

Garani Srinivasan

ಅವನ್ ಕಣ್ಡಾಯ್ அவன் கண்டாய் = ಅವನೇ ಕಂಡೆಯಾ, ಕಾಱ್ಱು
காற்று = ವಾಯು, ತೀ தீ = ಅಗ್ನಿ, ನೀರ್ நீர் = ನೀರು, ವಾನ್ வான்
= ಆಕಾಶ, ಮಣ್ ಮண் = ಮಣ್ಣು, ಕರು ವರೈ கருவரை = ಕಱಿಯ
ಬಂಡೆ (ಪರ್ವತ), ~~ಶೆನ್ಱು~~ ಶೆನ್ಱು சென்று = ಕಡೆಯಕಾಲದಲ್ಲಿ (ಹೋಗಿ),
ಕಾರ್ ಓದಮುಮ್ கார் ஓதம் = ಕಾಮುಗಿಲಂತಿರುವ (ಕಪ್ಪುಬಣ್ಣದ) ಕಡಲು,
ಶೀಱ್ಱಮುಮ್ ತೀ சீற்றம் தீ = ಸುಟ್ಟು ಭಸ್ಮಮಾಡುವ ಅಗ್ನಿ (ಪ್ರಳಯಾಗ್ನಿ)
ಯೂ, ಆವಾನ್ ஆவான் = ಆಗುವವನು.

ನನ್ನ ಒಳ್ಳೆಯ ಮನಸ್ಸೇ, ಯಾರ ಪೂರ್ಣಕೃಪೆಯನ್ನು (ಅದಿಲ್ಲದೆ ಬರುವ) ಸಂಸಾರ ಬಂಧನವನ್ನು ಪಡೆಯುವೆವೋ ಅವನನ್ನು ಕಂಡೆಯಾ! ಪಂಚೇಂದ್ರಿಯಗಳೂ ಆಗಿರುವವನೂ ಅವನೇ ಕಂಡೆಯಾ! ವಾಯು, ಅಗ್ನಿ, ನೀರು, ಆಕಾಶ, ಮಣ್ಣು, ಕಱಿಯ ಪರ್ವತ ಆಗಿರುವವನೂ, ಕಾಮುಗಿಲಂತ ಕಪ್ಪುಬಣ್ಣದ ಕಡಲೂ (ಪ್ರಳಯಜಲ), ಸುಟ್ಟುಭಸ್ಮಮಾಡುವ ಅಗ್ನಿ (ಪ್ರಳ (24)
ಯಾಗ್ನಿ)ಯೂ ಆಗುವವನೂ ಅವನೇ ಕಂಡೆಯಾ!

~~ಭಗವಂತನನ್ನು~~ ತನ್ನನ್ನು ಆಶ್ರಯಿಸಿದವರನ್ನು ರಕ್ಷಿಸುವ ಹೊಣೆ ಹೊತ್ತಿರುವವನು ಭಗವಂತ ಎಂದು ಹಿಂದಿನ ಪಾಶುರದಲ್ಲಿ ಹೇಳಲಾಯಿತು. ~~ಇಲ್ಲಿ~~, ಜಗತ್ತಿನಲ್ಲಿ ಸರ್ವವೂ ಅವನೇಯಾಗಿ ವ್ಯಾಪಿಸಿರುವ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಾಗಿರುವ ~~ವ~~ ಭಗವಂತನ ಪೂರ್ಣಕೃಪೆಗಾಗಿ ಚೇತನನು ಶ್ರಮಿಸಬೇಕೆಂದು ಇಲ್ಲಿ ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ನನ್ನ ಒಳ್ಳೆಯ ಮನಸ್ಸೇ, ಭಗವಂತನೇ ಪಂಚೇಂದ್ರಿಯಗಳಾಗಿ ಇರುವವನು. ಅವನೇ ಪಂಚಭೂತಗಳಾಗಿ ಇರುವವನು. ಸೃಷ್ಟಿಯ ಎಲ್ಲಾ ಚೇತನ ಅಚೇತನ ವಸ್ತುಗಳಾಗಿರುವವನೂ ಅವನೇ. ಕಡೆಯಲ್ಲಿ ಪ್ರಳಯ ಜಲವೂ, ಪ್ರಳಯಾಗ್ನಿಯೂ ಆಗುವವನೂ ಅವನೇ ಕಂಡೆಯಾ!

25. சென்ற திலங்கை மேல் செவ்வே தன் சீற்றத்தால்,
கொன்ற திராவணனைக் கூறுங்கால், — நின்றதுவும்
வேயோங்கு தண் சாரல் வேங்கடமே, விண்ணவர் தம்
வாயோங்கு தொல் புகழான் வந்து.

ಶೆನ್ಱು ತಿಲಙ್ಗೈ ಮೇಲ್ ಶೆವ್ವೇದನ್ ಶೀಱ್ಱತ್ತಾಲ್,
ಕೊನ್ಱ ತಿರಾವಣನೈ ಕ್ಕೂಱುಙ್ಗಾಲ್, — ನಿನ್ಱದುವುಮ್
ವೇಯೋಙ್ಗು ತಣ್ಶಾರಲ್ ವೇಙ್ಗಡಮೇ, ವಿಣ್ಣವರ್ ತಮ್
ವಾಯೋಙ್ಗು ತೊಲ್ ಪುಗಳಾನ್ ವನ್ದು.

Garani Srinivasan

ಶೆನ್ಱದು சென்றது = ಹೋದದ್ದು, ಇಲಙ್ಗೈ ಮೇಲ್ இலங்கை மேல் = ಲಂಕೆಯ ಮೇಲೆ, ಶೆವ್ವೇ செவ்வே = ನೇರವಾಗಿ, ತನ್ ಶೀಱ್ಱತ್ತಾಲ್ தன் சீற்றத்தால் = ತನ್ನ ಮಹಾಕೋಪದಿಂದ, ಕೊನ್ಱದು கொன்றது = ಕೊಂದದ್ದು, ಇರಾವಣನೈ இராவணனை = ರಾವಣನನ್ನು, ಕೂಱುಙ್ಗಾಲ್ கூறுங்கால் = ಹೇಳಬೇಕೆಂದರೆ, ನಿನ್ಱದುವುಮ್ நின்றதுவும் = ನಿಂತಿರುವುದು (ನೆಲಸಿರುವುದು), ವೇಯೋಙ್ಗು வேய் ஓங்கு = ಬಿದಿರು ಎತ್ತರವಾಗಿ ಬೆಳೆದಿರುವ, ತಣ್ ಶಾರಲ್ தண் சாரல் = ತಂಪಾದ ತಪ್ಪಲುಗಳುಳ್ಳ, ವೇಙ್ಗಡಮೇ வேங்கடமே = ತಿರುವೇಂಕಟಗಿರಿಯಲ್ಲಿ, ವಿಣ್ಣವರ್ ತಮ್ விண்ணவர் தம் = ದೇವತೆಗಳ, ತೊಲ್ ಪುಗಳಾನ್ தொல் புகழான் = ಅನಾದಿ ಕೀರ್ತಿವಂತನಾದ ಸರ್ವೇಶ್ವರನು, ವನ್ದು வந்து = ಬಂದು.

ದೇವತೆಗಳ ಅನಾದಿ ಕೀರ್ತಿವಂತನಾದ ಸರ್ವೇಶ್ವರನು ಹೋದದ್ದು ತನ್ನ ಮಹಾಕೋಪದಿಂದ ಲಂಕೆಯ ಮೇಲೆ (ದಾಳಿಗೆ). (ಅಲ್ಲಿ) ಕೊಂದದ್ದು ರಾವಣನನ್ನು, ಹೇಳಹೋದರೆ. ಬಂದು ನೆಲಸಿದ್ದು ಬಿದಿರು ಎತ್ತರವಾಗಿ ಬೆಳೆದಿರುವ ತಂಪಾದ ತಪ್ಪಲುಗಳುಳ್ಳ ತಿರುವೇಂಕಟಗಿರಿಯಲ್ಲಿ. (25)

ಈ ಪಾಶುರದಲ್ಲಿ ಭಗವಂತನ ದುಷ್ಟ ಶಿಕ್ಷಣ ಕಾರ್ಯವನ್ನು ಶಿಷ್ಟ-ರಕ್ಷಣ ಕಾರ್ಯವನ್ನು ಕುರಿತು ಹೇಳಲಾಗುತ್ತದೆ.

ಭಗವಂತನ ಅವತಾರಗಳೆಲ್ಲವೂ ದುಷ್ಟ ಶಿಕ್ಷಣ ಮತ್ತು ಶಿಷ್ಟ-ರಕ್ಷಣಕ್ಕಾಗಿಯೇ. ಶ್ರೀರಾಮನಾಗಿ ಅವತರಿಸಿದಾಗ ರಾವಣನು ಲಂಕೆಯಲ್ಲಿ ಪ್ರಬಲ ದುಷ್ಟನಾಗಿ ಮೆರೆಯುತ್ತಿದ್ದ. ಮೋಸದಿಂದ ಸೀತಾದೇವಿಯನ್ನು ಅಪಹರಿಸಿಕೊಂಡು ಹೋಗಿ ಲಂಕೆಯಲ್ಲಿ ಸೆರೆಯಲ್ಲಿಟ್ಟ ಕಾರಣವನ್ನು ಮುಂದು ಮಾಡಿಕೊಂಡು, ರಾವಣನನ್ನು ಕೊಂದು ಹಾಕಲು ಶ್ರೀರಾಮನು ಕಡುಕೋಪದಿಂದ ದುರ್ಗಮವಾಗಿದ್ದ ಲಂಕಾಪಟ್ಟಣಕ್ಕೆ ಮುತ್ತಿಗೆ ಹಾಕಿ, ರಾವಣನನ್ನು ಅವನ ಅನುಯಾಯಿಗಳಾದ ರಾಕ್ಷಸಪರಿವಾರದವನ್ನು ಕೊಂದು ಹಾಕಿದನು. ಇದು ಭಗವಂತನ ದುಷ್ಟನಿಗ್ರಹ ಕಾರ್ಯ.

ಜಗತ್ತಿನ ಭಕ್ತಕೋಟಿಯನ್ನು ಉದ್ಧರಿಸುವುದಕ್ಕಾಗಿಯೇ ಭಗವಂತನು ಈಗ ತಿರುವೇಂಕಟಗಿರಿಯ ಮೇಲೆ ಬಂದು ನೆಲಸಿದ್ದಾನೆ. ಅಲ್ಲಿ ಅವನನ್ನು ಸಂದರ್ಶಿಸಿ ಎಲ್ಲರೂ ಉದ್ಧಾರಗೊಳ್ಳಬಹುದು.

ಭಗವಂತನ ಕರುಣೆ ಔದಾರ್ಯಗಳು, ಸರ್ವಶಕ್ತತ್ವ ಎಷ್ಟು ಅಪಾರ!

Garani Srinivasan

26. வந்தித் தவனை வழிநின்ற ஐம்பூதம்,
ஐந்து மகத்தடக்கி யார்வமாய், – உந்திப்
படியமரர் வேலையான் பண்டமரர்க் கீந்த,
படியமரர் வாழும் பதி.

ವನ್ದಿತ್ತವನೈ ವಳಿನಿನ್ಱ ಐಮ್ಬೂತಮ್,
ಐನ್ದು ಮಹತ್ತಡಕ್ಕಿ ಯಾರ್ವಮಾಯ್, – ಉನ್ದಿ
ಪ್ಪಡಿಯಮರರ್ ವೇಲೈಯಾನ್ ಪಣ್ಡಮರರ್ಕ್ಕೀನ್ದ,
ಪಡಿಯಮರರ್ ವಾಳುಮ್ ಪದಿ.

ವನ್ದಿತ್ತು வந்தித்து = ನಮಸ್ಕರಿಸಿ, ಅವನ್ನೈ அவனை = ಅವನನ್ನು (ಭಗವಂತನನ್ನು), ವಳಿ ನಿನ್ಱ வழி நின்ற = ಬಾಗಿಲಲ್ಲಿ (ಹೊರಗಡೆ) ನಿಂತಿರುವ, ಐಮ್ಬೂತಮ್ ಐನ್ದುಮ್ ஐம்பூதம் ஐந்தும் = ಪಂಚಭೂತಗಳನ್ನು, ಪಂಚೇಂದ್ರಿಯಗಳನ್ನು, ಅಹತ್ತು ಅಡಕ್ಕಿ அகத்து அடக்கி = ಒಳಗಡೆಯೇ ಅಡಗಿಸಿ, ಆರ್ವಮಾಯ್ ஆர்வம் ஆய் = ಭಕ್ತಿ ಪೂರ್ವಕವಾಗಿ, ಉನ್ದಿ உந்தி = ಮುನ್ನುಗ್ಗಿ, ಪಡಿ படி = ಮೆಟ್ಟಿಲುಗಳನ್ನು, ಅಮರರ್ அமரர் = ಹತ್ತುವವರಾ, ವೇಲೈಯಾನ್ வேலையான் = ಕಡಲಲ್ಲಿರುವವನು (ಭಗವಂತನು), ಪಣ್ಡು ಅಮರರ್ಕ್ಕು = ಪುರಾತನ ದೇವತೆಗಳಿಗೆ, ಈನ್ದ ஈந்த = ಕೊಟ್ಟ, ಪಡಿ ಅಮರರ್ படி அமரர் = ಭೂದೇವತೆಗಳು, ವಾಳುಮ್ வாழும் = ಬಾಳುವ, ಪದಿ பதி = ತಿರುಪತಿ.

ಹೊರಗೆ ಕಾದು ನಿಂತಿರುವ ಪಂಚಭೂತಗಳನ್ನು ಪಂಚೇಂದ್ರಿಯಗಳನ್ನು ಒಳಗಡೆಯೇ ಅಡಗಿಸಿ, ಭಕ್ತಿ ಪೂರ್ವಕವಾಗಿ (ಅವನನ್ನು ವಂದಿಸಿ,) ಮುನ್ನುಗ್ಗಿ, ಮೆಟ್ಟಿಲುಗಳನ್ನು ಹತ್ತುವವರಾ, ಕಡಲಲ್ಲಿರುವವನು (ಭಗವಂತನು) ಪುರಾತನ ದೇವತೆಗಳಿಗೆ ಕೊಟ್ಟ, ಭೂದೇವತೆಗಳಿಗೆ ~~ಬಾಳಲು~~ ಅನುಕೂಲವಾದ, ತಿರುಮಲೈ ತಿರುಪತಿ. (26)

ಹಿಂದಿನ ಪಾಶುರದಲ್ಲಿ ತಿರುಮಲೆ ತಿರುಪತಿಯ ಹಿರಿಮೆಯನ್ನು ಹೇಳಲಾಯಿತು. ಅದನ್ನೇ ಈಗ ಇಲ್ಲಿ ಮುಂದುವರಿಸಲಾಗುತ್ತಿದೆ.

~~ತಿರುಪತಿ~~ ತಿರುವೇಂಕಟಾಚಲವು ಎಂಥದ್ದು? ಅದು ಪ್ರಕೃತಿ ರಮ್ಯವಾದದ್ದು. ಪಂಚಭೂತಗಳು ಅಲ್ಲಿ ಶಾಂತವಾಗುತ್ತವೆ. ಸುಂದರ ಪ್ರಕೃತಿಯು ಬೆಟ್ಟದ ಮೇಲೆ ಎಲ್ಲೆಲ್ಲಿಂದ ನೋಡಿದರೂ ಪ್ರೇಕ್ಷಕರನ್ನು ಆಕರ್ಷಿಸುವಂಥದ್ದು. ಪಂಚೇಂದ್ರಿಯಗಳು ಒಳಗೆ ಪಂಚಭೂತಗಳೊಂದಿಗೆ ಹೊಂದಿಕೊಂಡು ಹೊರಗಡೆಯೇ ಆನಂದಿಸುವಂತೆ ಆಗುತ್ತದೆ. ಪರ್ವತ ಶಿಖರದಲ್ಲಿ ನೆಲೆಸಿರುವ

ಭಗವಂತನ ಕಡೆಗೆ ಮನಸ್ಸು ಹೋಗದಂತೆ ಮಾಡುತ್ತವೆ.

ಮಾನವ ದೇಹ ಪಂಚಭೂತಗಳಿಂದ ಆದದ್ದು. ಪಂಚೇಂದ್ರಿಯಗಳು ಅದಕ್ಕೆ ಕವಾಟಗಳು. ಹೊರಗಿನ ಜಗತ್ತಿನೊಡನೆ ಸಂಬಂಧವನ್ನು ಅವು ಕಲ್ಪಿಸುತ್ತವೆ. ಇಂದ್ರಿಯಗಳು ಸದಾ ಹೊರಗೆ ಇದ್ದು ಹೊರ ವಿದ್ಯಮಾನಗಳೊಡನೆ ತಗುಲಿಕೊಂಡಿರಬೇಕೆಂಬುದೇ ಅವುಗಳ ಕೆಲಸ. ಭಗವಂತನ ಕಡೆಗೆ ಮನಸ್ಸು ಹರಿಯುವುದಕ್ಕೆ ಪಂಚೇಂದ್ರಿಯಗಳನ್ನು ದೇಹದಿಂದ ಹೊರಗೆ ಕೆಲಸ ಮಾಡಲು ಬಿಡದಂತೆ, ಅವುಗಳನ್ನು ಮೊದಲು ಕಡೆಗಟ್ಟಬೇಕು.

ತಿರುಮಲೆ ಬೆಟ್ಟದ ಮೇಲೆ ಅತ್ಯುನ್ನತ ಶಿಖರದಲ್ಲಿ ಭಗವಂತನು ನೆಲೆಸಿದ್ದಾನೆ. ಪಾಲ್ಗಡಲಲ್ಲಿ ನಿದ್ರಿಸುತ್ತಾ ಪವಡಿಸಿರುವ ಬದಲಾಗಿ, ನಿಲುಕಲು ಯಾರಿಗೂ ಅವಕಾಶವಾಗದಂತೆ, ಸ್ವಾಮಿಯು ಪ್ರತ್ಯಕ್ಷವಾಗಿರುವ ಶಿಖರದಲ್ಲಿ ನೆಲಸಿದ್ದಾನೆ. ಪುರಾತನ ದೇವತೆಗಳು ಸುಲಭವಾಗಿ, ನೇರವಾಗಿ ಬಂದು ಭಗವಂತನ ಅಡಿದಾವರೆಗಳನ್ನು ಪೂಜಿಸಲು ಅನುಕೂಲವಾಗಲೆಂದು. ಅಲ್ಲದೆ, ಭಕ್ತಜನರು, ಸ್ವಾಮಿಯನ್ನು ಸಂದರ್ಶಿಸಿ, ತಮ್ಮ ಭಕ್ತಿಯ ಪ್ರಣಾಮಗಳನ್ನು ಅರ್ಪಿಸಲೆಂದು.

ಆಳ್ವಾರರು ಹೇಳುತ್ತಾರೆ: ತಿರುವೇಂಕಟಗಿರಿಯ ತಪ್ಪಲಿನಲ್ಲಿಯೇ ಮಗ್ನರಾಗಿರುವುದರ ಬದಲಾಗಿ, ಭಕ್ತಜನರು ಬೆಟ್ಟದ ಅತ್ಯುನ್ನತ ಶಿಖರದಲ್ಲಿ ನೆಲಸಿರುವ ಕ್ಷೀರಾಬ್ಧಿಶಯನನಾದ ಸ್ವಾಮಿಯನ್ನು ನೋಡಲು ಉತ್ಸುಕರಾಗುತ್ತಾರೆ. ಅವರು ಬೆಟ್ಟದ ಅಡಿಯಲ್ಲಿಯೇ ಭಗವಂತನ ತಿರುವಡಿಗಳಿಗೆ ಎರಗಿ, ಭಕ್ತಿಪೂರ್ವಕವಾಗಿ ಒಂದೊಂದೇ ಮೆಟ್ಟಿಲನ್ನು ಹತ್ತಿ ಹೋಗುತ್ತಾರೆ. ಅವರು ತಮ್ಮ ಪಂಚೇಂದ್ರಿಯಗಳನ್ನು ಪ್ರಚೋದಿಸುವ ರಮ್ಯವಾದ ಪ್ರಕೃತಿಯ ಸೊಬಗಿನ ಕಡೆಗೆ ಮನ ಹರಿಯುವುದರ ಬದಲಾಗಿ, ಅವುಗಳನ್ನು ತಮ್ಮೊಳಗೇ ಅಡಗಿಸಿಟ್ಟುಕೊಂಡು, ಭಗವಂತನಲ್ಲಿಯೇ ಮನವನ್ನು ನೆಟ್ಟಿರುತ್ತಾರೆ. ಪುರಾತನ ಕಾಲದಿಂದಲೂ, ದೇವತೆಗಳು ದಿನವೂ ಬಂದು ಭಗವಂತನ ತಿರುವಡಿಗಳಿಗೆ ವಂದಿಸಿ ಹೋಗಲು ಅನುಕೂಲವಾಗಿ ನೆಲಸಿರುವ, ಮತ್ತು ಜ್ಞಾನಿಗಳು ಸನ್ನಿಧಿಯಲ್ಲಿಯೇ ನೆಲಸಿ ತಮ್ಮ ಬಾಳನ್ನು ಶುದ್ಧವಾಗಿ ಸವೆಸುವುದಕ್ಕೆ ಸಿದ್ಧರಾಗಿರುವ ಭಗವತ್ಸನ್ನಿಧಿಯನ್ನು ಸಮೀಪಿಸಿ, ಹರ್ಷದಿಂದ ಪುಲಕಿತರಾಗಿ, ದಿವ್ಯಮಂಗಳ ವಿಗ್ರಹವನ್ನು ಕಂಡು, ಭಕ್ತ್ಯಾದರಗಳಿಂದ ಭಗವಂತನನ್ನು ನಮಿಸಿ ಕೃತಾರ್ಥರಾಗುತ್ತಾರೆ. ತಿರುವೇಂಕಟಗಿರಿಯ ಹಿರಿಮೆಯೇ ಇದು.

27. பதியமைந்து நாடிப் பருத்தெழுந்த சிந்தை,
மதியுரிஞ்சி வான்முகடு நோக்கி, – கதிமிகுத்தங்
கோல் தேடி யோடும் கொழுந்ததே போன்றதே,
மால் தேடி யோடும் மனம்.

ಪದಿಯಮೈನ್ದು ನಾಡಿ ಪ್ಪೆರುತ್ತೆಳುನ್ದ ಶಿನ್ದೈ,
ಮದಿಯುರಿಂಜಿ ವಾನ್ ಮುಕಡು ನೋಕ್ಕಿ, — ಕದಿಮಿಕುತ್ತು
ಅಂಗೋಲ್ ಕೊಡಿ ಯೇಱುಮಾ ಕೊಳುನ್ದದೇ ಪೋಲ್ಆದೇ,
ಮಾಲ್ ಕೊಡಿ ಯೇಱುಮಾ ಮನಮೇ.

ಪದಿ பதி = ಶಿರುವಶಿಯನ್ನು, ಅಮೈನ್ದು அமைந்து = ಸೇರಿ, ನಾಡಿ நாடி = ಆಶಿಸಿ, ಪೆರುತ್ತು பெருத்து = ಉಬ್ಬಿ, ಎಳುನ್ದ எழுந்த = ಮೇಲಕ್ಕೇರಿದ, ಶಿನ್ದೈ சிந்தை = ಚಿಂತನೆಯು, ಮದಿ மதி = ಚಂದ್ರನನ್ನು, ಉರಿಂಜಿ உரிஞ்சி = ಸವರಿಕೊಂಡು, ವಾನ್ ಮುಕಡು வான் முகடு = ಬ್ರಹ್ಮಾಂಡದ ಮೇಲ್ಛಾವಣಿಯನ್ನು (ಮಂಟಪವನ್ನು), ನೋಕ್ಕಿ நோக்கி = ನೋಡಿ, ಕದಿ கதி = ವೇಗವನ್ನು (ಗತಿಯನ್ನು), ಮಿಕುತ್ತ மிகுத்த = ಹೆಚ್ಚಿಸಿದ, ಅಮ ಕೋಲ್ அம் கோல் = ಸುಂದರವಾದ ಧ್ವಜಸ್ತಂಭವನ್ನು, ಕೊಡಿ கொடி = ಹಿಡುಕೊಂಡು, ಏಱುಮಾ ஏறும் = ಏಱುವ, ಕೊಳುನ್ದು ಅದೇ ಪೋಲ್ಆದೇ கொழுந்து அதே போலாதே = ಧ್ವಜವೋ ಎಂಬಂತೆ, ಮಾಲ್ மால் = ಸರ್ವೇಶ್ವರನನ್ನು, ಕೊಡಿ கொடி = ಹಿಡುಕೊಂಡು, ಏಱುಮಾ ஏறும் = ಏಱುತ್ತಿರುವ, ಮನಮೇ மனமே = ಮನಸ್ಸು.

ಶಿರುವಶಿಯನ್ನು ಸೇರಿ, ಆಶೆಯಿಂದ ಉಬ್ಬಿ ಮೇಲಕ್ಕೇರಿದ ಚಿಂತೆಯು ಕೂಡಿ, ಚಂದ್ರನನ್ನು ಸವರಿಕೊಂಡು ಬ್ರಹ್ಮಾಂಡದ ಮೇಲ್ಛಾವಣಿಯನ್ನು ನೋಡಿ, ವೇಗವನ್ನು ಹೆಚ್ಚಿಸಿ ಭಗವಂತನನ್ನು ಹಿಡುಕೊಂಡು ಏಱುತ್ತಿರುವ ಮನಸ್ಸು ಸುಂದರವಾದ (ದೃಢವಾದ) ಧ್ವಜಸ್ತಂಭವನ್ನು ಹಿಡುಕೊಂಡು ಏಱುತ್ತಿರುವ (27)
ಧ್ವಜವೋ ಎಂಬಂತೆ ಇದೆ.

ಹಿಂದಿನ ಎರಡು ಪಾಶುರಗಳಲ್ಲಿ ಶಿರುವಶಿಯ ಮಹಿಮೆಯನ್ನು ವಿವರಿಸಿ ಹೇಳಲಾಯಿತು. ಇಲ್ಲಿ ಭಗವಂತನನ್ನು ಕಂಡುಕೊಳ್ಳಬೇಕೆಂಬ ಮನಸ್ಸಿನ ಅಮಿತಾಸಕ್ತಿಯನ್ನು ಕುರಿತು ಹೇಳಲಾಗುತ್ತಿದೆ.

ಧ್ವಜ ಚಂಚಲವಾದದ್ದು. ಹಾರಾಡುತ್ತಲೇ ಇರುವಂಥದ್ದು. ಎಷ್ಟು ಎತ್ತರದಲ್ಲಿ ಸಾಧ್ಯವಾದರೆ, ಆ ಎತ್ತರದಲ್ಲಿ ಅದು ಹಾರಾಡುತ್ತಿರಬೇಕು. ಆದರೆ, ಅದಕ್ಕೆ ಆಧಾರವಾದ ಧ್ವಜಸ್ತಂಭ ಇಲ್ಲದೆ ಹೋದರೆ, ಅದು ಎತ್ತರದಲ್ಲಿ ಹಾರಾಡುವುದಾದರೂ ಹೇಗೆ? ಸ್ತಂಭ ದೃಢವಾದದ್ದು. ಸ್ಥಿರವಾಗಿ, ಎತ್ತರದಲ್ಲಿ ನಿಂತಿರತಕ್ಕದ್ದು. ಅದರ ತುದಿಯಲ್ಲಿಯೇ ಧ್ವಜವನ್ನು ಅದು ಎತ್ತಿ ಹಿಡಿದು ಹಾರಾಡುವಂತೆ ಮಾಡುತ್ತದೆ. ಅದೆಷ್ಟೇ ಸುಂದರವಾದದ್ದಾದರೂ, ~~ಅದನ್ನು~~ ಅಲ್ಲಿ ಆಡುವ ಧ್ವಜದಿಂದ ಅದನ್ನು ಮರೆಮಾಡಿಕೊಳ್ಳುತ್ತದೆ. ಧ್ವಜಸ್ತಂಭದ ಆಧಾರವಿಲ್ಲದೆ ಧ್ವಜ ಎತ್ತರಕ್ಕೆ ಏರುವುದಾಗಲಿ, ಅಲ್ಲಿ ಗಂಭೀರವಾಗಿ ಹಾರಾಡುವುದಾಗಲಿ, ಸಾಧ್ಯವಿಲ್ಲ.

ಹಾಗೆಯೇ ಮನಸ್ಸೂ ಚಂಚಲ. ತನ್ನ ಆಸೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ಅದು ಎಲ್ಲೆಲ್ಲಿಗೆ ಬೇಕಾದರೂ, ಎಷ್ಟೆಷ್ಟು ವೇಗದಲ್ಲಿ ಬೇಕಾದರೂ ಚಲಿಸಬಹುದು. ಆದರೆ, ಧ್ಯಾನಕ್ಕೆ ಅದರ ಆಧಾರಸ್ತಂಭದಂತೆ, ಮನಸ್ಸಿಗೂ ಒಂದು ಆಧಾರ ಬೇಕೇ ಬೇಕು. ಆಗಲೇ ಅದು ತನ್ನ ಮನೋರಥವನ್ನು ಪೂರ್ಣಗೊಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಆಳ್ವಾರರು ಹೇಳುತ್ತಾರೆ: ನನ್ನ ಮನಸ್ಸು ನನಗಿಂತಲೂ ಮುಂಚಿತವಾಗಿಯೇ ತಿರುಮಲೆಯ ಶಿಖರವನ್ನು ಸೇರಿತು. ಭಗವಂತನನ್ನು ಕಂಡು ಬಹುವ ಮುದದಾಸೆಯಿಂದ ಉಬ್ಬಿ ಹೋಗಿತ್ತು. ಆ ಆತುರದಲ್ಲಿ ಅಲ್ಲಿಯೇ ನೆಲಸಿರುವ ತಿರುವೇಂಕಟಪತಿಯನ್ನು ಕಂಡುಕೊಳ್ಳದೆ, ಅದು ಬೆಟ್ಟದ ತುದಿಯನ್ನು ಬಿಟ್ಟು ಇನ್ನೂ ಮೇಲಕ್ಕೆ ಏರಿತು. ಅದಕ್ಕೆ ಸಮೀಪದಲ್ಲಿಯೇ ಇತ್ತು ಚಂದ್ರಮಂಡಲ. ಅದನ್ನೂ ದಾಟಿಕೊಂಡು ಇನ್ನೂ ಮೇಲಕ್ಕೇರಿತು. ಬ್ರಹ್ಮಾಂಡದ ಮೇಲ್ಛಾವಣಿಯನ್ನೂ ನಿಲುಕಿತು. ಅದನ್ನು ಭೇದಿಸಿಕೊಂಡು, ~~ಪರಮ~~ ~~ಪ~~ ಅದರಿಂದಾಚೆಗೆ ಇರುವ ಪರಮಪದವನ್ನೂ ಸೇರಿ ಭಗವಂತನನ್ನು ಸಂದರ್ಶಿಸಿ ಬರುವುದೇನೋ ಎಂಬಂತೆ! ಆದರೆ, ಅದಕ್ಕೆ ಭಗವತ್ಕೃಪೆ ಬೇಡವೇ? ಅದಿಲ್ಲದೆ, ಭಗವಂತನ ದರ್ಶನ ಲಾಭವಾದರೂ ಸಾಧ್ಯವಾಗುವುದು ಹೇಗೆ?

28. மணத்துள்ளான் வேங்கடத்தான் மாகடலான், மற்றும்
நினைப்பரி நீளரங்கத் துள்ளான், — எனைப்பலரும்
தேவாதி தேவனெனப் படுவான், — முன்னொரு நாள்
மாவாய் பிளந்த மகன்.

ಮನತ್ತುಳ್ಳಾನ್ ವೇಙ್ಗಡತ್ತಾನ್ ಮಾಕಡಲಾನ್, ಮಟ್ರುಮ್
ನಿನೈಪ್ಪರಿ ನೀಳರಙ್ಗತ್ತುಳ್ಳಾನ್, — ಎನೈಪ್ಪಲರುಮ್
ದೇವಾದಿದೇವನೆನಪ್ಪಡುವಾನ್, — ಮುನ್ನೊರು ನಾಳ್
ಮಾವಾಯ್ ಪಿಳನ್ದ ಮಹನ್.

ಮನತ್ತು மணத்து = ಮನದಲ್ಲಿಯೇ, ಉಳ್ಳಾನ್ உள்ளான் = ಇದ್ದಾನೆ, ವೇಙ್ಗಡತ್ತಾನ್ வேங்கடத்தான் = ತಿರುವೇಂಕಟಗಿರಿಯ ಸ್ವಾಮಿಯೂ, ಮಾಕಡಲಾನ್ மா கடலான் = ವಿಸ್ತಾರವಾದ ಪಾಲ್ಗಡಲಲ್ಲಿ ಪವಡಿಸಿರುವವನು, ಮಟ್ರುಮ್ மற்றும் = ಅಲ್ಲದೆ, ನಿನೈಪ್ಪು நினைப்பு = ಚಿಂತನೆಗೆ, ಅರಿ அரி = ಅಂದಾಗದ, ನೀಳ್ நீள் = ವಿಸ್ತಾರವಾದ, ಅರಙ್ಗತ್ತು ಉಳ್ಳಾನ್ அரங்கத்து

Garani Srinivasan

உள்ளான் = ದೇವಾಲಯದಲ್ಲಿ ಇರುವವನು, ಎನ್ನ ಪಲರುಮ್
நாளும் பலரும் = ಎಲ್ಲಾ ಅನೇಕರೂ, ದೇವಾದಿದೇವನ್
ಎನಪ್ಪಡುವಾನ್ தேவாதி தேவன் எனப்படுவான் =
ದೇವಾದಿದೇವ ಎನ್ನಲ್ಪಡುವವನು, ಮುನ್ ಒರುನಾಳ್ முன்
ஒருநாள் = ಒಂದೆ ಒಂದು ~~ದಿನ~~ ಕಾಲದಲ್ಲಿ, ಮಾ ವಾಯ್ மா வாய் =
ಕುದುರೆಯ ಬಾಯನ್ನು, ಪಿಳನ್ದ பிளந்த = ಸೀಳಿದ, ಮಗನ್
மகன் = ಬಾಲಕನೂ ಆದವನು.

ತಿರುವೇಂಕಟಮಲೆಯಲ್ಲಿ ನೆಲಸಿರುವವನು, ವಿಸ್ತಾರವಾದ ಪಾಲ್ಗಡ ಲಲ್ಲಿ ಪವಡಿಸಿರುವವನು, ಅಲ್ಲದೆ, ಜಗತ್ತಿಗೆ ಅಂದವಾಗಿರುವ ವಿಶ್ವರಂಗ ದಲ್ಲಿರುವವನು. (ಶ್ರೀರಂಗದಲ್ಲಿ ನೆಲಸಿರುವವನು), ಎಲ್ಲಾ ಅನೇಕರಿಂದ ಲೂ ದೇವಾಧಿದೇವ ಎನ್ನಲ್ಪಡುವವನು, ಒಂದೆ ಒಂದು ಕಾಲದಲ್ಲಿ ಕುದುರೆಯ ಬಾಯನ್ನು ಸೀಳಿದ ಬಾಲಕನಾದವನು - ನನ್ನ ಮನದಲ್ಲಿಯೇ (28)
ಇದ್ದಾನೆ!

ಹಿಂದಿನ ಪಾಶುರದಲ್ಲಿ ಭಗವಂತನನ್ನು ಕಾಣುವುದರಲ್ಲಿ ಮನಸ್ಸಿನ ಪರದಾಟವನ್ನೂ ಆತುರವನ್ನೂ, ಅದಕ್ಕೆ ತಕ್ಕಂತೆ ಅದರ ಅತಿವೇಗದ ಹೇಳಲಾಯಿತು.

ಈ ಪಾಶುರದಲ್ಲಿ ಭಗವಂತನನ್ನು ಅಂತರಂಗದಲ್ಲೇ ಇಟ್ಟುಕೊಂಡು ಅವನಿಗಾಗಿ ಹೊರಗೆ ಬೇರೆ ಬೇರೆ ಕಡೆಗಳಲ್ಲಿ ಹುಡುಕುತ್ತಾ ಹೋಗುವುದು ಹುಚ್ಚುತನ ಎಂಬುದನ್ನು ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತನು ತಿರುವೇಂಕಟಗಿರಿಯ ಶಿಖರದಲ್ಲಿ ದಿವ್ಯಸುಂದರನಾದ ಅರ್ಚಾವತಾರಿಯಾಗಿ ನೆಲಸಿದ್ದಾನೆ. ಅವನು ಜನಪ್ರಿಯನಾಗಿ ವಿಸ್ತಾರವಾದ ಪಾಲ್ಗಡಲಲ್ಲಿ ಪವಡಿಸಿದ್ದಾನೆ. ಯೋಗಿಗಳಿ ಗೆ ಎಟುಕದಂಥ ವಿಶ್ವವೆಂಬ ನಾಟಕರಂಗದಲ್ಲಿ ಎಲ್ಲ ಕಡೆಯೂ ಅವನಿ ದ್ದಾನೆ. ಶ್ರೀರಂಗ ಮುಂತಾದ ಪವಿತ್ರ ದೇವಾಲಯಗಳಲ್ಲಿ ಕಂಗೊಳಿಸುತ್ತಾನೆ. ವೇದ ಶಾಸ್ತ್ರಾದಿಗಳನ್ನು ಕೂಲಂಕಷವಾಗಿ ಅರಿತಿರುವ ವಿದ್ವನ್ಮಣಿಗಳೆಲ್ಲರೂ ಅವನನ್ನು 'ದೇವಾಧಿದೇವ' ಎನ್ನುತ್ತಾರೆ. ಒಂದೆ ಒಂದು ಕಾಲದಲ್ಲಿ ಅವನೇ ಶ್ರೀಕೃಷ್ಣನಾಗಿ ಅವತರಿಸಿದ್ದ. ಆಗ, ಅವನಿನ್ನೂ ಬಾಲಕನಾಗಿದ್ದಾಗಲೇ, ತನ್ನನ್ನು ವಂಚಿಸಿ ಕೊಲ್ಲಲು ~~ಬಂದ~~ ಕುದುರೆಯ ರೂಪದಲ್ಲಿ ಬಂದ ಕೇಶಿ ಎಂಬ ರಾಕ್ಷಸನನ್ನು, ಅವನ ಬಾಯನ್ನು ತನ್ನ ಕೈಗಳಿಂದಲೇ ಹರಿದು, ಅಗಲಿಸಿ, ಕೊಂದು ಹಾಕಿದನು. ಅಂಥ ಮಹಾಮಹಿಮನು ನನ್ನ ಅಂತರಂಗದಲ್ಲೇ ನೆಲಸಿದ್ದಾನೆ. ಅವನನ್ನು ಹುಡುಕಿಕೊಂಡು ನಾನು ಎಲ್ಲಿಗೂ ಹೋಗಬೇಕಾಗಿಲ್ಲ.

29. மகனாகக் கொண்டெடுத்தாள் மாண்பாய கொங்கை,
அகனார உண்பனென் றுண்டு, — மகனைத்தாய்
தேறாத வண்ணம் திருத்தினாய், தென்னிலங்கை
நீறாக எய்தழித்தாய் நீ.

ಮಗನಾಗ ಕೊಂಡೆಡುತ್ತಾಳ್ ಮಾಣ್ಬಾಯ ಕೊಙ್ಗೈ,
ಅಗನಾರ ಉಣ್ಬನೆನ್ಱುಣ್ಡು, — ಮಗನೈತ್ತಾಯ್
ತೇಱಾದ ವಣ್ಣಮ್ ತಿರುತ್ತಿನಾಯ್, ತೆನ್ನಿಲಙ್ಗೈ
ನೀಱಾಗ ಎಯ್ದಳಿತ್ತಾಯ್ ನೀ.

ಮಗನ್ ಆಗ மகன் ஆக = ತನ್ನ ಮಗನೇ ಎಂಬಂತೆ, ಕೊಂಡು கொண்டு = ಭಾವಿಸಿ, ಎಡುತ್ತಾಳ್ எடுத்தாள் = ಮೊಲೆಯನ್ನು ಕೊಡಲು ಎತ್ತಿಕೊಂಡಳು, ಮಾಣ್ಬು ಆಗ மாண்பு ஆக = ಸುಂದರವಾಗಿರುವ, ಕೊಙ್ಗೈ கொங்கை = (ಅವಳ) ಮೊಲೆಯನ್ನು, ಅಗನ್ ಆರ அகன் ஆர = ಹೊಟ್ಟೆ ತುಂಬುವಷ್ಟು, ಉಣ್ಬನ್ உண்பன் = ಉಣ್ಣುವೆನು, ಎನ್ಱು ಉಣ್ಡು என்று உண்டு = ಎಂದು ಉಂಡು, ಮಗನೈ மகனை = ಮಗನನ್ನು, ತಾಯ್ தாய் = ತಾಯಿಯು ನಂಬದಂತೆ ಮಾಡಿ, ತೇಱಾದ ವಣ್ಣಮ್ தேறாத வண்ணம் = ನಂಬದಂತೆ ಮಾಡಿದ ಆಕೆಯನ್ನು, ತಿರುತ್ತಿನಾಯ್ திருத்தினாய் = ಮಾರ್ಪಡಿಸಿದೆ. ತೆನ್ ಇಲಙ್ಗೈ தென் இலங்கை = ಲಂಕಾಪಟ್ಟಣವು, ನೀಱು ಆಗ நீறு ஆக = ಸುಟ್ಟು ಬೂದಿಯಾಗುವಂತೆ, ಎಯ್ದು எய்து = ಬಾಣಪ್ರಯೋಗ ಮಾಡಿ, ಅಳಿತ್ತಾಯ್ ನೀ அழித்தாய் நீ = ಅದನ್ನು ನಾಶಪಡಿಸಿದೆ ನೀನು.

(ನಿನ್ನನ್ನು) ತನ್ನ ಮಗನೇ ಎಂದು ಭಾವಿಸುವಂತೆ ಮೊಲೆಯನ್ನುಣಿಸಲು ಎತ್ತಿಕೊಂಡಳು. ಸುಂದರವಾಗಿರುವ ಅವಳ ಮೊಲೆಯನ್ನು ಹೊಟ್ಟೆ ತುಂಬ ಉಣ್ಣುವಂತೆ ಉಂಡು, ಮಗನನ್ನು ತಾಯಿಯು ನಂಬದಂತೆ ಮಾಡಿದ ಆಕೆಯನ್ನು ಮಾರ್ಪಡಿಸಿದೆ. ಲಂಕಾಪಟ್ಟಣವು ಸುಟ್ಟು ಬೂದಿಯಾಗುವಂತೆ ಬಾಣಪ್ರಯೋಗ ಮಾಡಿ, ಅದನ್ನು ನೀನು ನಾಶಪಡಿಸಿದೆ. (29)

ಹಿಂದಿನ ಪಾಶುರದಲ್ಲಿ ಆಳ್ವಾರರು ಭಗವಂತನ ಅದ್ಭುತ ಲೀಲೆಯನ್ನು ಕೊಂಡಾಡಿದರು. ಇಲ್ಲಿ ಅದನ್ನೇ ಅವರು ಮುಂದುವರಿಸುತ್ತಾರೆ.

ಈ ಪಾಶುರದಲ್ಲಿ ಶ್ರೀಕೃಷ್ಣಾವತಾರ, ರಾಮಾವತಾರಗಳ ದುಷ್ಟನಿಗ್ರಹದ ಬಗೆಗಿನ ನಿದರ್ಶನವನ್ನು ಚಮತ್ಕಾರಪೂರ್ಣವಾಗಿ ಕೊಡುತ್ತಾರೆ.

ಶ್ರೀಕೃಷ್ಣನು ಎಲ್ಲರೂ ಕಂದನಾಗಿರುವಾಗಲೇ, ಅವನನ್ನು ಕೊಲ್ಲಲು ನಂದಗೋಕುಲಕ್ಕೆ ಪೂತನಿ ಎಂಬ ರಾಕ್ಷಸಿ ಬಂದಳು. ಅವನ ತಾಯಿಯಾದ ಯಶೋದೆಯ ದಾಗಿಯೇ ಮಾರುವೇಷದಿಂದ ಅಲ್ಲಿಗೆ ಬಂದು, ಶಿಶುವಾದ ಕೃಷ್ಣನನ್ನು, ನಿಜವಾದ ತಾಯಿ ತನ್ನ ಮಗುವಿಗೆ ಹಾಲು-ಊಡಿಸುವಂತೆಯೇ, ಎತ್ತಿಕೊಂಡಳು. ಶ್ರೀಕೃಷ್ಣನು ಅವಳ ಸುಂದರವಾದ ಮೊಲೆಯನ್ನು ಆತುರದಿಂದ, ತನ್ನ ಹೊಟ್ಟೆ ತುಂಬುವಷ್ಟು ದಾಹ ಕುಡಿಯುವಂತೆ ಉಣ್ಣುತ್ತಾ, ಅವಳ ಪ್ರಾಣವನ್ನು ಹೀರಿ, ಅವಳನ್ನು ಕೊಂದುಬಿಟ್ಟನು. ಕೆಲಕ್ಷಣಗಳ ತರುವಾಯ, (ನಿಜವಾದ) ತಾಯಿ ಯಶೋದೆ ಅಲ್ಲಿಗೆ ಬಂದಳು. ರಾಕ್ಷಸಿ ಸತ್ತು ಬಿದ್ದಿರುವುದನ್ನೂ, ತನ್ನ ಕಂದನು ಅವಳ ಮೊಲೆಯಲ್ಲೇ ಆಡಿಕೊಂಡಿರುವುದನ್ನೂ ಕಂಡು, ಏನನ್ನೂ ನಂಬದಾದಳು. ಮಗುವಿನಲ್ಲಿ ತನಗೆ ಉಕ್ಕಿ ಬಂದ ವಾತ್ಸಲ್ಯದಿಂದ ಅವನನ್ನು ಬಾಚಿ ಎತ್ತಿಕೊಂಡು, ದೃಷ್ಟಿ ತೆಗೆದು, ಮುದ್ದಿಸಿದಳು. ಎಂಥ ಮಾಯಗಾರ ಕೃಷ್ಣ!

ಶ್ರೀರಾಮನು ದುಷ್ಪ್ರವೇಶವೆನಿಸಿದ ಲಂಕಾಪಟ್ಟಣವನ್ನು ಪ್ರವೇಶಿಸಿ, ತನ್ನ ಬಿಲ್ಲು ಬಾಣಗಳ ಸಹಾಯದಿಂದಲೇ ರಾವಣಾದಿ ದುಷ್ಟರಾಕ್ಷಸ ಕುಲವನ್ನೇ ನಿರ್ಮೂಲ ಮಾಡಿ, ಲಂಕೆಯನ್ನು ನಾಶಮಾಡಿದನು.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀನು ಪೂತನಿಯನ್ನು ಸಂಹರಿಸಿದ್ದು, ನಿನ್ನ ತಾಯಿ ಯಶೋದೆ ತನ್ನ ಕಣ್ಣನ್ನೇ ನಂಬಲಾರದಂತೆ ಮಾಡಿದ್ದು, ನಿನ್ನ ಅಂಬುಗಳಿಂದಲೇ ಲಂಕಾಪಟ್ಟಣವನ್ನು ನಿರ್ನಾಮಗೊಳಿಸಿದ್ದು ಎಂಥ ಅದ್ಭುತವಲ್ಲವೇ!

30. நீயன்றுலகளந்தாய் நீண்ட திருமாலே,
நீயன்றுலகிடந்தாயென்பரால், — நீயன்று
காரோத முன் கடைந்து பின்னடைத்தாய் மாகடலை,
போரோத மேனிப் பிரான்.

ನೀಯನ್ ಉಲಹಳನ್ದಾಯ್ ನೀಣ್ಡ ತಿರುಮಾಲೇ,
ನೀಯನ್ ಉಲಹಿಡನ್ದಾಯೆನ್ಬರಾಲ್, — ನೀಯನ್ರು
ಕಾರೋದ ಮುನ್ ಕಡೈನ್ದು ಪಿನ್ನಡೈತ್ತಾಯ್ ಮಾಕಡಲೈ,
ಪೋರೋದ ಮೇನಿ ಪ್ಪಿರಾನ್.

ನೀ நீ = ನೀನು, ಅನ್ರು அன்று = ಅಂದು, ಉಲಹು ಅಳನ್ದಾಯ್ உலகு அளந்தாய் = ಲೋಕಗಳನ್ನು (ಭೂಲೋಕವನ್ನು)

Garani Srinivasan

ಅಳೆದುಕೊಂಡೆ, ನೀಣ್ಡ ತೋಣ್ಟ = ಅತ್ಯುನ್ನತ, ತಿರುಮಾಲೇ ತಿ(ರು)மா
ಲೇ = ಸರ್ವೇಶ್ವರನೇ, ನೀನ್ = ನೀನು, ಅನ್ಱು அன்று =
ಅಂದು, ಉಲಗು ಉಳ(க) = ಭೂಮಂಡಲವನ್ನು, ಇಡನ್ದಾಯ್ இடந்
தாய் = ಗಿಡಿದು ಮೇಲಕ್ಕೆತ್ತಿದೆ, ಎನ್ಬರಾಲ್ நண்பரால் = ಎನ್ನು
ತ್ತಾರಲ್ಲವೇ, ನೀನ್ = ನೀನು, ಅನ್ಱು அன்று = ಅಂದು, ಕಾರ್ಟಿದ
ಮಾ கார் ஓதம் = ಕರಿಯ ಕಡಲನ್ನು, ಮುನ್ முன் = ಮೊದಲು,
ಮಾ ಕಡ ಕಡ್ಡನ್ನು கடைந்து = ಕಡೆದು, ಪಿನ್ பின் = ಅನಂತರ, ಮಾ ಕಡ
ಲ್ಲೆ மா கடலை = ವಿಸ್ತಾರವಾದ ಕಡಲನ್ನು, ಅಡೈತ್ತಾಯ್ அடை
த்தாய் = ಅಡಗಿಸಿಟ್ಟೆ, ಪ್ರೇರಿತವಾ போர் ஓதம் =(ಭ
ಯಂಕರವಾಗಿ) ಅಲೆಗಳು ಅಪ್ಪಳಿಸುತ್ತಿರುವ ಕಡಲನಂತೆ, ಮೇನಿ மே
ணி = ದೇಹಕಾಂತಿಯುಳ್ಳ, ಪಿರಾನ್ பிரான் = ಸ್ವಾಮಿಯೇ.

ಕದಡಿದ ಕಡಲಿನಂತೆ ದೇಹಕಾಂತಿಯುಳ್ಳ ಸ್ವಾಮೀ, ನೀನು ಅಂದು ಭೂಮಿಯನ್ನು ಅಳೆದುಕೊಂಡೆ ಎನ್ನುತ್ತಾರಲ್ಲ! ನೀನು ಭೂಮಂಡಲವನ್ನು ಗಿಡಿದು ಮೇಲಕ್ಕೆತ್ತಿದೆ ಎನ್ನುತ್ತಾರಲ್ಲ! ನೀನು ಅಂದು ಕರಿಯ ಕಡಲನ್ನು ಮೊದಲು ಕಡೆದು, ಅನಂತರ, ವಿಸ್ತಾರವಾದ (30) ಕಡಲನ್ನು ಅಡಗಿಸಿಟ್ಟೆ ಎನ್ನುತ್ತಾರಲ್ಲ!

ಈ ಪಾಶುರದಲ್ಲಿ ಭಗವಂತನ ಅದ್ಭುತ ಲೀಲೆಯ ಇನ್ನು ಕೆಲವು ನಿದರ್ಶನಗಳನ್ನು ಬಲು ಸ್ವಾರಸ್ಯವಾಗಿ ಆಳ್ವಾರರು ಹೇಳುತ್ತಾರೆ.

"ನೀಯನ್ಱು ಉಲಗಳನ್ದಾಯ್" — ಭಗವಂತನು ವಾಮನನಾಗಿ ಬಲಿ ಚಕ್ರವರ್ತಿಯ ಯಾಗಶಾಲೆಗೆ ಬಂದು, ಮೂರು ಹೆಜ್ಜೆಗಳ ನೆಲವನ್ನು ಯಾಚಿಸಿ, ಅದನ್ನು ಪಡೆದುಕೊಂಡ ಕೂಡಲೇ ಮಹೋನ್ನತ ತ್ರಿವಿಕ್ರಮನಾಗಿ ಬೆಳೆದು, (ಭಗವಂತನು) ತನ್ನ ಒಂದು ಹೆಜ್ಜೆಯನ್ನು ಎತ್ತಿಟ್ಟು, ಭೂಮಿಯನ್ನೆಲ್ಲಾ ಆವರಿಸಿ, ಅದನ್ನು ಅಳೆದುಕೊಂಡುಬಿಟ್ಟನು. ಮತ್ತೊಂದು ಹೆಜ್ಜೆಯಿಂದ ಮೇಲಣ ಮೇಲು ಲೋಕಗಳನ್ನು ಅಳೆದುಕೊಂಡುಬಿಟ್ಟನು.

"ನೀಯನ್ಱು ಉಲಗಿಡನ್ದಾಯ್" — ಹಿರಣ್ಯಾಕ್ಷನು ಭೂಮಿಯನ್ನು ಅಪಹರಿಸಿಕೊಂಡು ಹೋಗಿ, ಕಡಲಲ್ಲಿ ಅಡಗಿಸಿಕೊಂಡಾಗ, ಭಗವಂತನು ಮಹಾವರಾಹನಾಗಿ ಅವತರಿಸಿ, ಕಡಲಲ್ಲಿ ಮುಳುಗಿ, ಹಿರಣ್ಯಾಕ್ಷನನ್ನು ಕೊಂದು, ತನ್ನ ಕೋರೆ ಹಲ್ಲಿನಿಂದ ಭೂಮಿಯನ್ನು ಗಿಡಿದು ಮೇಲಕ್ಕೆತ್ತಿ ಅದನ್ನು ಅದರ ಸ್ಥಾನದಲ್ಲಿ ನೆಲೆಗೊಳಿಸಿದನು.

"ನೀಯನ್ಱು ಕಾರೋದ ಮುನ್ ಕಡೈನ್ದು" — ದೂರ್ವಾಸ ಮಹರ್ಷಿ

Garani Srinivasan

ಕೊಟ್ಟ ಶಾಪದಿಂದ ದೇವೇಂದ್ರನ ಸಕಲ ಸಂಪತ್ತೂ ಕಡಲ ಪಾಲಾಯಿತು. ಅವನಿಗೆ ಬಂದ ದುರ್ಗತಿಯನ್ನು ನೀಗಿಸಲು ಭಗವಂತನು ಸಮುದ್ರಮಥನದ ಕಾರ್ಯವನ್ನು ದೇವಾಸುರರಿಂದ ಮಾಡಿಸಿದನು. ಮಂದರ ಪರ್ವತವನ್ನು ಕಡಗೋಲನ್ನಾಗಿಯೂ, ವಾಸುಕಿಯನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿ, ಪರ್ವತದಡಿಯಲ್ಲಿ ಭಗವಂತನೇ ಸ್ವತಃ ಕೂರ್ಮನಾಗಿ ನಿಂತು, ಸಮುದ್ರದಲ್ಲಿ ಅದನ್ನು ಎತ್ತಿಹಿಡಿದು, ಸಮುದ್ರವನ್ನು ಕಡೆಯಿಸಿದನು. ಇದರಿಂದ ದೇವೇಂದ್ರನ ಸಂಪತ್ತೆಲ್ಲವೂ ಅವನಿಗೆ ಮತ್ತೆ ಲಭ್ಯವಾಯಿತು. ಸಮುದ್ರಮಥನದಿಂದ ಅಮೃತವು ಲಭ್ಯಿಸಿ, ಅದರಿಂದ ದೇವತೆಗಳಿಗೆ ಅಮರತ್ವವನ್ನು ತಂದಿತು.

"ಪಿನ್ನತ್ತೆತಾಯ್ ಮಾ ಕಡಲ್" — ಅಂತಹ ವಿಖ್ಯಾತವು ಮಹಾ ಕಡಲಿನಿಂದ ಆವೃತವಾಗಿ ಅದು ನಿಲುಕುವುದಕ್ಕೆ ದುಸ್ಸಾಧ್ಯವಾಗಿತ್ತು. ಶ್ರೀರಾಮನಿಗೆ ಕಡಲು ಸುಲಭವಾಗಿ ದಾಟಲಾಗದೆ ಹೋದದ್ದರಿಂದ, ಅದಕ್ಕೆ ಬೆಟ್ಟಗಳಿಂದ ಒಡ್ಡುಕಟ್ಟಿ, ಕಡಲ ರಭಸವನ್ನು ಅಡಗಿಸಿದನು.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಸರ್ವೇಶ್ವರ, ನಿನ್ನ ಅದ್ಭುತ ಲೀಲೆಯನ್ನು ವರ್ಣಿಸಲಸದಳ. ಒಂದೆ ನೀನು ಭೂಮಂಡಲವನ್ನೇ ನಿನ್ನ ಒಂದು ಹೆಜ್ಜೆಯಿಂದ ಆವರಿಸಿ ಅಳೆದು ಕೊಂಡು ಬಿಟ್ಟೆ. ಇನ್ನೊಂದು ಸಲ ಕಡಲಲ್ಲಿ ಅಡಗಿಹೋಗಿದ್ದ ಭೂಮಂಡಲವನ್ನೇ ಸಿಡಿದು ಮೇಲಕ್ಕೆತ್ತಿದೆ. ವಿಸ್ತಾರವಾದ ಕಡಲನ್ನು ಕಡೆಯಿಸಿದೆ. ಅದಕ್ಕೆ ಸೇತುವೆ ಕಟ್ಟಿದೆ. ಮಹೋನ್ನತನಾದ ಸರ್ವೇಶ್ವರ ನೀನೇ. ನಿನ್ನ ದೇಹಕಾಂತಿ ಅಲೆಗಳಿಂದ ಕದಡಿದ ಕಡಲಿನ ಕಾಂತಿಯುಳ್ಳ.

31. பிரானென்று நாளும் பெரும்புலரி யென்றும்,
குராநற் செழும் போது கொண்டு, — வராகத்
தணியுருவன் பாதம் பணியுமவர் கண்டீர்,
மணியுருவம் காண்பர் மகிழ்ந்து.

ಪಿರಾನೆನ್ರು ನಾಳುಮ್ ಪೆರುಮ್ಬುಲರಿ ಯೆನ್ರುಮ್,
ಕುರಾನರ್ ಶೆಳುಮ್ ಪೋದು ಕೊಣ್ಡು, — ವರಾಹ
ತ್ತಣಿಯುರುವನ್ ಪಾದಮ್ ಪಣಿಯುಮವರ್ ಕಣ್ಡೀರ್,
ಮಣಿಯುರುವಮ್ ಕಾಣ್ಬರ್ ಮಹಿಳ್ನ್ದು.

ಪಿರಾನ್. ಎನ್ರು பிரான் என்று = 'ಸ್ವಾಮೀ' ಎಂದು, ನಾಳುಮ್ நாளும் = (ಪ್ರತಿದಿನವೂ) ಯಾವಾಗಲೂ, ಪೆರುಪುಲರಿ ಎನ್ರುಮ್ பெரும்புலரி என்றும் = ಸುಪ್ರಭಾತ ಎಂದು, ಕುರಾ குரா = ಕುರಾ ವೃಕ್ಷದ, ಪರಿಮಳವುಳ್ಳ

ನಲ್ ನೀರ = ಉತ್ತಮವಾದ, ತೆಳು ಗಸ(4) = ಶೋಭಿಸುವ, ಹೊಳೆಯು
ತ್ತಿರುವ போது கொண்டு(5) = ಹೂಗಳನ್ನು ತೆಗೆದುಕೊಂಡು,
ವರಾಹತ್ತು வராகத்து = ಮಹಾವರಾಹನ, ಅಣಿ அணி = ಸುಂ
ದರವಾದ, ಉರುವನ್ உருவன் = ರೂಪವುಳ್ಳವನ, ಪಾದಮೂ பாதம்
= ತಿರುವಡಿಗಳನ್ನು, ಪಣಿಯುಮ ಅವರ್ பணியும் அவர் = ಪೂ
ಜಿಸಿ ನಮಸ್ಕರಿಸುವವರು, ಕಣ್ಡೀರ್ கண்டீர் = ಕಂಡಿರಾ, ಮಣಿ
ಉರುವಮೂ மணி உருவம் = (ಭಗವಂತನ) ದಿವ್ಯಸುಂದರಮೂ
ರ್ತಿಯನ್ನು (ರೂಪವನ್ನು), ಮಹಿಳ್ನ್ದು ಕಾಣ್ಬರ್ மகிழ்ந்து காண்
பர் = ಆನಂದದಿಂದ ಕಾಣುತ್ತಾರೆ (ಕಂಡು ಆನಂದಿಸುತ್ತಾರೆ).

'ಸ್ವಾಮಿ' ಎಂದು ಪ್ರತಿದಿನವೂ (ಯಾವಾಗಲೂ) ಸುಪ್ರಭಾತ (ಇಂದ್ರೆ ಸುವಾಸನ) ಎಂದು ಕರ್ಪೂರವೃಷ್ಟದ ಪರಿಮಳವುಳ್ಳ ಉತ್ತಮವಾದ ಶೋಭಿಸುವ ಹೂಗಳನ್ನು ತೆಗೆದುಕೊಂಡು ಮಹಾವರಾಹದ ಸುಂದರವಾದ ರೂಪವುಳ್ಳವನ ತಿರುವಡಿಗಳನ್ನು ಪೂಜಿಸಿ ನಮಸ್ಕರಿಸುವವರು ಭಗವಂತನ ದಿವ್ಯ ಸುಂದರ ರೂಪವನ್ನು ಕಂಡು ಆನಂದಿಸುತ್ತಾರೆ ಕಂ (31)
ಡಿರಾ.

ಈ ಪಾಶುರದಲ್ಲಿ ಭಗವಂತನ ಮಹೋಪಕಾರವನ್ನು ಕುರಿತು ಕೃತಜ್ಞನಾಗಿ, ಸ್ವಾಮಿಯ ತಿರುವಡಿಗಳನ್ನು ಅನುದಿನವೂ ಪೂಜಿಸುತ್ತಾ ಬರುವವರ ಜನ್ಮ ಸಾರ್ಥಕವಾಗುವುದೆಂಬುದನ್ನು ಇಲ್ಲಿ ಹೇಳಲಾಗುತ್ತದೆ.

"ವರಾಹತ್ತಣಿಯುರುವನ್ ಪಾದಮೂ ಪಣಿಯುಮವರ್" – ಭಗವಂತನು ಹಿರಣ್ಯಾಕ್ಷನನ್ನು ಸಂಹರಿಸಲು 'ಮಹಾವರಾಹ'ನಾಗಿ ಅವತರಿಸಿದನು. ಆದ್ದರಿಂದ, "ಮಹಾವರಾಹನಾಗಿ ಅವತರಿಸಿ ದುಷ್ಟದಮನ ಮಾಡಿ ಶಿಷ್ಟೋದ್ಧಾರಕನಾದ ಭಗವಂತನ ತಿರುವಡಿಗಳನ್ನು ಭಕ್ತಿನಿಂದ ಪೂಜಿಸುವವರು" ಎಂದು ಇದಕ್ಕೆ ಹೇಳಬಹುದು.

"ಮಣಿಯುರುವಮ್ ಕಾಣ್ಬರ್ ಮಹಿಳ್ನ್ದು" – ಮಹಾವರಾಹನ ರೂಪವನ್ನೇ ಬೇರಾವುದೇ ಭಕ್ತಿ ಪ್ರಾರ್ಥನೆಯಾಗಿ ಪೂಜಿಸುವವರಿಗೆ ಭಗವಂತನು ತೋರುವನು. ತನ್ನ ದಿವ್ಯ ಸುಂದರ ರೂಪವನ್ನೇ ತೋರುವನು. ಹೀಗಾಗಿ, ಅವರು (ಆ ಭಕ್ತರು) ಸ್ವಾಮಿಯನ್ನು ಮನಸಾರ ಕಂಡು ಆನಂದಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮಿ, ಪರಮೋಪಕಾರಿಯೇ, ಎಂದು ಬಗೆಬಗೆಯಾಗಿ ಭಗವಂತನನ್ನು ಕೊಂಡಾಡುತ್ತಾ, ಪ್ರತಿ-

Garani Srinivasan

ದಿನವೂ ಮುಂಜಾನೆಯೇ ಎದ್ದು, ಅರಳುವ ಸುಂದರವಾದ
ಹೂಗಳನ್ನು ಬಿಡಿಸಿ ತಂದು, ಭಗವಂತನ ತಿರುವಡಿಗಳನ್ನು ಭಕ್ತರ
ಗಳಿಂದ ಭಜಿಸಿ ಪೂಜಿಸುವವರಿಗೆ ಭಗವಂತನು ತನ್ನ ದಿವ್ಯದಿಂ
ದರಶನವನ್ನು ನೀಡುತ್ತಾನೆ. ಅದನ್ನು ಕಂಡು ಅವರು ಆನಂದಿಸು
ತ್ತಾರೆ.

32\. மகிழ்ந்தது சிந்தை திருமாலே, மற்றும்
மகிழ்ந்ததுன் பாதமே போற்றி, — மகிழ்ந்த
தழலாழி சங்க மவை பாடி யாடும்,
தொழிலாகம் சூழ்ந்து துணிந்து

ಮಹಿಳ್ನ್ದದು ಶಿನ್ದೈ ತಿರುಮಾಲೇ, ಮಱ್ಱುಮ್
ಮಹಿಳ್ನ್ದದುನ್ ಪಾದಮೇ ಪೋಱ್ಱಿ, — ಮಹಿಳ್ನ್ದ
ತಳಲಾಳಿ ಶಙ್ಗ ಮವೈ ಪಾಡಿ ಯಾಡುಮ್,
ತೊಳಿಲಾಹಮ್ ಶೂಳ್ನ್ದು ತುಣಿನ್ದು:

ತಿರುಮಾಲೇ திருமாலே = ಸರ್ವೇಶ್ವರನೇ, ಶಿನ್ದೈ சிந்தை = ನನ್ನ ಚಿಂತನೆಯು (ಮನಸ್ಸು), ಮಹಿಳ್ನ್ದದು மகிழ்ந்து = ಆನಂದಗೊಂಡಿತು, ಮಱ್ಱುಮ್ மற்றும் = ಮತ್ತು, ~~ ಉನ್ உன் = ನಿನ್ನ, ಪಾದಮೇ ಪೋಱ್ಱಿ பாதமே போற்றி = ತಿರುವಡಿಗಳನ್ನೇ ಸ್ತುತಿಸಿ, ಮಹಿಳ್ನ್ದದು மகிழ்ந்தது = ಆನಂದಿಸಿತು, ಮಹಿಳ್ನ್ದದು மகிழ்ந்தது = ಆನಂದಗೊಂಡಿತು, ಅಳಲ್ ಆಳಿ அழல் ஆழி = ಕೆಂಡವನ್ನುಗುಳುವ ಚಕ್ರಾಯುಧ, ಶಙ್ಗಮ್ சங்கம் = ಶಂಖ, ~~ ಅವೈ அவை = ಅವುಗಳನ್ನು, ಪಾಡಿ பாடி = ಕೊಂಡಾಡಿ, ಆಡುಮ್ ஆடும் = ಕುಣಿದಾಡುವ, ತೊಳಿಲ್ தொழில் = ಕಾರ್ಯದಲ್ಲಿ, ಆಹಮ್ ஆகம் = (ನನ್ನ) ದೇಹವು, ಶೂಳ್ನ್ದು சூழ்ந்து = ಸುತ್ತಿ, ತುಣಿನ್ದು துணிந்து = ಉತ್ಸಾಹಗೊಂಡು.

ಸರ್ವೇಶ್ವರನೇ, ನನ್ನ ಚಿಂತನೆಯು (ಮನಸ್ಸು) ಆನಂದಗೊಂಡಿತು ಮತ್ತು ನಿನ್ನ ತಿರುವಡಿಗಳನ್ನೇ ಸ್ತುತಿಸಿ ಆನಂದಿಸಿತು. ನನ್ನ ದೇಹ ಜ್ವಲಿಸುವ ~~ ಚಕ್ರಾಯುಧವನ್ನು ಶಂಖವನ್ನು ಕೊಂಡಾಡಿ, ಕುಣಿದಾಡುವ ಕಾರ್ಯದಲ್ಲಿ ಉತ್ಸಾಹಗೊಂಡು ಸುತ್ತಿ ಆನಂದಿಸಿತು. (32)

ಈ ಲೋಕದಲ್ಲಿ ಭಗವಂತನಲ್ಲಿ ಭಕ್ತಿ ಮಾಡುವ ರೀತಿಯನ್ನು

ಆಳ್ವಾರರು ಹೇಳುತ್ತಾರೆ. ಮನಸ್ಸು, ಇಂದ್ರಿಯಗಳು, ದೇಹವು ಒಮ್ಮತದಿಂದ ಭಗವಚ್ಚಿಂತನೆಯಲ್ಲಿ ಮತ್ತು ಭಗವದ್ವಿಷಯಕವಾದ ಕಾರ್ಯಗಳಲ್ಲಿಯೇ ಕೂಡಿಕೊಂಡಾಗಲೇ ಭಕ್ತಿಯು ಪೂರ್ಣಫಲದಾಯಕ ವಾಗುವುದು ಎನ್ನುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಸರ್ವೇಶ್ವರನೇ, ನನ್ನ ಮನಸ್ಸು ನಿನ್ನ ಬಳಿಗೆ ಅಂಕುರಗೊಂಡದ್ದರಿಂದಲೂ, ನಿನ್ನನ್ನೇ ಎಡೆಬಿಡದೆ ಚಿಂತಿಸುತ್ತಿದ್ದುದರಿಂದಲೂ ಆನಂದಗೊಂಡಿತು. ಅದು ದೇಹ ಮತ್ತು ಇಂದ್ರಿಯಗಳಿಗೆ ಪ್ರೇರಕವಾಯಿತು. ನಾಲಗೆ ಭಗವಂತನನ್ನು ಸ್ತುತಿಸಿ ಕೊಂಡಾಡಿತು. ದುಷ್ಟನಿಗ್ರಹ ಕಾರ್ಯದಲ್ಲಿ ಬದ್ಧನಾಗಿರುವ ಚಕ್ರಾಯುಧ ವನ್ನು, ಶತ್ರುಗಳ ಎದೆಯನ್ನು ಕಲ್ಲೋಲಗೊಳಿಸುವಂತೆ ಮೊಳಗುವ ಶಂಖ ವನ್ನು ಹೊಗಳಿ ಹಾಡಿತು. ಈ ಕೊಂಡಾಟದಲ್ಲಿ ನನ್ನ ಇಡೀ ದೇಹವೇ ನಾಟ್ಯ ವಾಡಿತು. ಅದು ಉತ್ಸಾಹದಿಂದ, ಮುನ್ನುಗ್ಗಿ ಕುಣಿಕುಣಿದಾಡಿತು. ಆನಂದಿ ಸಿತು.

ಮನಸ್ಸು ಇಂದ್ರಿಯಗಳು ಪ್ರಾಪಂಚಿಕದಿಂದ ಬೇರ್ಪಟ್ಟು ಭಗವದ್ವಿಷಯದಲ್ಲಿ ಕೂಡಿದುವು. ಸರ್ವಥಾ ಒಮ್ಮತವಾಗಿ ಆನಂದದಲ್ಲಿ ತನ್ಮಯವಾದುವು.

33. துணிந்தது சிந்தை துழாய் அலங்கல், அங்கம்
அணிந்தவன் பேருள்ளத்துப் பல்கால், — பணிந்ததுவும்
வேய்பிறங்கு சாரல் விறல் வேங்கடவனையே,
வாய் திறங்கள் சொல்லும் வகை.

ತುಣಿಂದದು ಶಿಂದೈ ತುಳಾಯ್ ಅಲಂಗಲ್, ಅಂಗಮ್
ಅಣಿಂದವನ್ ಪೇರುಳ್ಳತ್ತುಪ್ ಪಲ್‌ಕಾಲ್, — ಪಣಿಂದದುವುಮ್
ವೇಯ್ ಪಿರಂಗು ಶಾರಲ್ ವಿರಲ್ ವೇಂಗಡವನೈಯೇ,
ವಾಯ್ ತಿರಂಗಳ್ ಶೊಲ್ಲುಮ್ ವಗೈ.

ಶಿಂದೈ சிந்தை = ನನ್ನ ಮನಸ್ಸು (ಚಿಂತನೆಯು), ತುಳಾಯ್ துழாய் = ತುಳಸಿಯ, ಅಲಂಗಲ್ அலங்கல் = ಹಾರವನ್ನು, ಅಣಿಂದವನ್ அணிந்தவன் = ಧರಿಸಿರುವವನ, ಪೇರ್ பேர் = ಹೆಸರನ್ನು (ತಿರುನಾಮಗಳನ್ನು), ಉಳ್ಳತ್ತು உள்ளத்து = ಅಂತರಂಗದಲ್ಲಿಯೇ, ಪಲ್‌ಕಾಲ್ பல்கால் = ಬಹುಕಾಲ, ತುಣಿಂದದು துணிந்தது = ಉತ್ಸಾಹಗೊಂಡಿತು, ಅಂಗಮ್ அங்கம் =

(ನನ್ನ) ದೇವರು, ಮಣಿನ್ದದು ಪಣಿನ್ದೇತ್ತು = ನಮಸ್ಕರಿಸಿರಿ, ಅದುವುಂ
ಅತ್ತುವುಂ = ಅದನ್ನೂ, ವೇಯ್ ತೋಯ್ = ಬಿದಿರು, ಪಿಣಙ್ಗು
ಪಿಱಙ್ಗು = ದಟ್ಟವಾಗಿ ಬೆಳೆದಿರುವ, ಶಾರಲ್ ಶಾರಲ್ = ತಪ್ಪಲಿನ,
ವಿಜಲ್ ಪಿಱಙ್ಗು = ವಿರಾಶ್ರಯಮಯಾದ, ವೇಙ್ಗಡತ್ತೈಯೇ ತೊಳುಂಗ
ಲ್ವಿಳಾ ತೊಳ = ತಿರುವೇಂಕಟದವನನ್ನೇಯೇ, ವಾಯ್ ಬಾಗ
= ನನ್ನ ಬಾಯಿ, ತಿರುನಾಮಙ್ಗಳ್ ಕಿಱಙ್ಗುಕಣ್ = (ತಿರುವೇಂಕಟನಾಥ)
ತಿರುನಾಮಗಳನ್ನು (ಬಿಧಗಳನ್ನು), ಶೊಲ್ಲುಮಾ ಶಾಸ್ತ್ರುಂ = ಹೇಳಲಿ
ವ, ವಣ್ಣೆ ಬಣಾಕ = ಬಗೆಗಳನ್ನು.

ನನ್ನ ಚಿಂತನೆಯು ತುಲಸಿಯ ಹಾರವನ್ನು ಧರಿಸಿದವನ ತಿರುನಾಮಗಳನ್ನು ಅಂತ್ಕರಣದಲ್ಲಿಯೇ ಚಿಂತಿಸುತ್ತಾ ಬಹುಕಾಲ ಉತ್ಸಾಹಗೊಂಡಿರು. ನನ್ನ ದೇವ (ಸ್ವಾಮಿಯನ್ನು) ನಮಸ್ಕರಿಸಿರಿ. ಅದೂ ಅಲ್ಲದೆ ಬಿದಿರು ದಟ್ಟವಾಗಿ ಬೆಳೆದಿರುವ ತಪ್ಪಲಿನ ವಿರಾಶ್ರಯಮಯಾದ ತಿರುವೇಂಕಟದವನ ತಿರುನಾಮಗಳ ಬ ನನ್ನ ಬಾಯಿ ಹೇಳುವ ಬಗೆಗಳನ್ನು ಬಹುಕಾಲ ಹೇಳಲಿ. (ಬಗೆಬಗೆಯಾಗಿ ಬಹುಕಾಲ ಹೇಳಲಿ). (33)

ಹಿಂದಿನ ಪಾಶುರದಲ್ಲಿ ಆಳ್ವಾರರು ಮನಸಾ ವಾಚಾ ಕಾಯಾ ಭಗವದ್ವಿಷಯವನ್ನು ಚಿಂತಿಸಿ ತೊಡಗುವುದರಿಂದ ಭಕ್ತಿ ಬೇರೂರುವುದೆಂದು ಹೇಳಿದರಷ್ಟೆ. ಈಗ ಅದನ್ನು ಮನಸ್ಸು ಚಿಂತಿಸುವುದೇ ಅದನ್ನೇ ಬಾಯಿ ಉಚ್ಚರಿಸಿ ತೊಡಗುವುದು. ಮತ್ತು ಅದನ್ನೇ ದೇಹ ಕಾರ್ಯಗಳಲ್ಲಿ ತೊಡಗಿಸುವುದು — ಈ ಭವ್ಯವಾದ ವಿಷಯವನ್ನು ಉಪನಿಷತ್ತು ಸಾರುವುವು. ಆಳ್ವಾರರು ಅದನ್ನೇ ತಮ್ಮ ಸರಳ ಸುಂದರ ಮಾತುಗಳಲ್ಲಿ ಇಲ್ಲಿ ಹೇಳುತ್ತಾರೆ.

ಮನುಷ್ಯನು ತನ್ನ ಚಿಂತನೆಯಲ್ಲಿ ಭಗವಂತನನ್ನೇ ಸದಾ ತುಂಬಿಕೊಂಡಿರಬೇಕು. ಸ್ವಾಮಿಯ ತಿರುನಾಮಗಳನ್ನು ಬಗೆಬಗೆಯಾಗಿ ಎಡಬಿಡದಂತೆ ಉಚ್ಚರಿಸುತ್ತಲೇ ಇರಬೇಕು. ಅವನು ಭಗವಂತನ ಮುಂದೆ ಅಡ್ಡಬೀಳುವುದೇ ಮುಂತಾದ ~~ನಾನಾ~~ ಭಗವದ್ವಿಷಯಂಕವಾದ ನಾನಾ ಕಾರ್ಯಗಳಲ್ಲಿ ತೊಡಗಿರಬೇಕು. ಭಕ್ತಿಯು ಪ್ರಾಣಕ್ಕೆ ಇದು ಅತ್ಯಗತ್ಯ.

"ತುಳಾಯಲಙ್ಗಲ್ ಅಣಿನ್ದವನ್' — ಬಾಡದ ವನಮಾಲೆಯನ್ನು ಧರಿಸಿರುವವನು ಭಗವಂತ - ಶ್ರೀಮನ್ನಾರಾಯಣ.

"ವೇಯ್ ಪಿಣಙ್ಗು ಶಾರಲ್" — ತಿರುವೇಂಕಟಗಿರಿ. ಅದರ ತಪ್ಪಲಲ್ಲಿ ಬಿದಿರು ಮೆಳೆ ತುಂಬ ಬೆಳೆದಿರುವುದು.

Garani Srinivasan

34. வகையா லவணி யிரந்தளந்தாய் பாதம்,
புகையால் நறுமலரால் முன்னே, - மிகவாய்ந்த
அன்பாக்கி யேத்தி யடிமைப்பட்டேனுனக்கு,
என்பாக்கியத்தா லினி.

ವಹೈಯಾ ಲವನಿ ಯಿರನ್ದಳನ್ದಾಯ್ ಪಾದಮ್,
ಪುಹೈಯಾಲ್ ನಱುಮಲರಾಲ್ ಮುನ್ನೇ, - ಮಿಹವಾಯ್ನ್ದ
ಅನ್ಬಾಕ್ಕಿ ಯೇತ್ತಿ ಯಡಿಮೈಪ್ಪಟ್ಟೇನುನಕ್ಕು,
ಎನ್ ಪಾಕ್ಕಿಯತ್ತಾ ಲಿನಿ.

ವಹೈಯಾಲ್ வகையால் = ಯುಕ್ತಿಯಿಂದ (ಉಪಾಯದಿಂದ), ಅವನಿ அவணி = ಭೂಮಿಯನ್ನು, ಇರನ್ದು இரந்து = ಯಾಚಿಸಿ, ಅಳನ್ದಾಯ್ அளந்தாய் = ಅಳೆದುಕೊಂಡವನಾದ (ನಿನ್ನ), ಪಾದಮ್ பாதம் = ತಿರುವಡಿಗಳನ್ನು, ಪುಹೈಯಾಲ್ புகையால் = ಧೂಪದಿಂದಲೂ, ನಱು நறு = ಒಳ್ಳೆಯ, ಮಲರಾಲ್ மலரால் = ಹೂಗಳಿಂದಲೂ, ಮುನ್ನೇ முன்னே = ಮೊದಲಿಂದಲೂ, ಮಿಹ மிக = ಚೆನ್ನಾಗಿ (ಬಹಳವಾಗಿ), ವಾಯ್ನ್ದ வாய்ந்த = ದೃಢವಾದ, ಅನ್ಬು அன்பு = ಪ್ರೀತಿಯನ್ನು (ಭಕ್ತಿಯನ್ನು), ಆಕ್ಕಿ ஆக்கி = ಉಂಟುಮಾಡಿಕೊಂಡು, ಏತ್ತಿ ஏத்தி = ಸ್ತುತಿಸಿ (ಪೂಜಿಸಿ), ಅಡಿಮೈಪ್ಪಟ್ಟೇನ್ ಉನಕ್ಕು அடிமைபட்டேன் உனக்கு = ನಿನ್ನ ದಾಸ್ಯ (ಸೇವಕನಾಗಿ) ಮಾಡಿದ್ದೇನೆ, ಎನ್ ಪಾಕ್ಕಿಯತ್ತಾಲ್ ಇನಿ என் பாக்கியத்தால் இனி = ಇನ್ನು ನನ್ನ ಭಾಗ್ಯದಿಂದಲೇ.

ಯುಕ್ತಿಯಿಂದ (ಉಪಾಯದಿಂದ) ಭೂಮಿಯನ್ನು ಯಾಚಿಸಿ ಅಳೆದುಕೊಂಡವನಾದ ನಿನ್ನ ತಿರುವಡಿಗಳನ್ನು ಮೊದಲಿಂದಲೂ ಧೂಪದಿಂದಲೂ, ಒಳ್ಳೆಯ ಹೂಗಳಿಂದಲೂ ಬಹಳ ದೃಢವಾದ ಭಕ್ತಿಯಿಂದಲೂ (ಭಕ್ತಿಯನ್ನುಂಟುಮಾಡಿಕೊಂಡು) ಸ್ತುತಿಸಿ, (ಪೂಜಿಸಿ), ಇನ್ನು, ನನ್ನ ಭಾಗ್ಯದಿಂದ ನಿನ್ನ ಪಾದಸೇವೆ ಮಾಡಿದ್ದೇನೆ. (34)

ಇಲ್ಲಿ ದೃಢವಾದ ಭಕ್ತಿಯನ್ನು ಪಡೆದುಕೊಳ್ಳುವುದಕ್ಕೆ 'ಉಪಾಯ' ವನ್ನು ಆಳ್ವಾರರು ಜನಸಾಮಾನ್ಯಕ್ಕೆ ಸೂಚಿಸುತ್ತಿದ್ದಾರೆ.

"ವಹೈಯಾಲ್ ಅವನಿಯಳನ್ದಾಯ್ ಪಾದಮ್" — ಭಗವಂತನು ಉಪಾಯವನ್ನು ಪ್ರಯೋಗಿಸಿ, ಬಲಿಚಕ್ರವರ್ತಿಯನ್ನು ತನ್ನ ಪಾದಸೇವಕನನ್ನಾಗಿ ಮಾಡಿಕೊಂಡನು. ವಾಮನನಾಗಿ ಬಂದು, ಸ್ವಲ್ಪ ನೆಲವನ್ನು ಯಾಚಿಸಿ

ವಿಷಯ. ಬಳಿಕ ಅದನ್ನು ಅಳೆಯುತ್ತೇನೆಂದು ತ್ರಿವಿಕ್ರಮನಾದನಷ್ಟೆ. ಆಗ, ಮಹಾಬಲಿಚಕ್ರವರ್ತಿಯು ಇಷ್ಟೆಯೆಂದೇಯೇ ತನ್ನ ತಿರುವಡಿಯನ್ನು ಅವನ ತಲೆಯ ಮೇಲಿರಿಸಿ, ಅವನಿಗೆ ಕೃಪೆ ಮಾಡಿದನು. ಈ ಕಾರ್ಯದಲ್ಲಿ, ಭಗವಂತನು ತನ್ನ ತಿರುವಡಿಯನ್ನು ಭೂಮಿಯನ್ನೆಲ್ಲಾ ವಿಸ್ತರಿಸಿ ಅಳೆಯುತ್ತಿರುವಾಗ, ಭೂಮಿಯ ಮೇಲಿನ ಜೀವರನ್ನೆಲ್ಲಾ ಅವರು ಬೇಡದೆಯೇ ಅನುಗ್ರಹಿಸಿದ್ದನ್ನು ಬಲ್ಲೆವು. ಜೀವರ ಭಾಗ್ಯವಿಶೇಷವೇ ಇದು ಎನ್ನಬೇಕು. ತಮಗಾಗಿ ಇದ ಈ ಭಾಗ್ಯ ದೊರೆತದೆಂಬುದು ಆಳ್ವಾರರು ಇಲ್ಲಿ ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀನು ಬಲಿಚಕ್ರವರ್ತಿಯ ಅರ್ಘ್ಯವನ್ನು ಉದಕದಿಂದ ಪಡೆದುಕೊಂಡಿದ್ದಲ್ಲದೆ, ಅವನನ್ನು ಉದ್ಧರಿಸಿದೆ. ಅವನಿಗೆ ನಿನ್ನ ತಿರುವಡಿಯ ನಿತ್ಯಸ್ಪರ್ಶದ ಭಾಗ್ಯ ಸ್ಫೂರ್ತಿ. ನಾನು ಮನಸ್ಸಿನಿಂದಲೂ ಧ್ಯಾನದಿಂದಲೂ, ವಿಶೇಷ ಪುಷ್ಪಗಳಿಂದಲೂ ನಿನ್ನ ತಿರುವಡಿಗಳನ್ನು ಅರ್ಚಿಸುತ್ತಲೇ ಬಂದೆ. ಅದರ ಪರಿಣಾಮವಾಗಿ ನನಗೆ ನಿನ್ನಲ್ಲಿ ದೃಢಭಕ್ತಿ ಲಭಿಸಿತು, ನಿನ್ನ ಕೃಪೆಯೂ ನನಗೆ ಲಭಿಸಿತು. ನಿನ್ನ ಪಾದಸೇವೆ ನನಗಾ ದೊರಕಿತು! ಇದು ನನ್ನ ಭಾಗ್ಯವೇ ಸರಿ.

35. இனிதென்பர் காம மதனிலு மாற்ற,
இனிதென்பர் தண்ணீரு மெந்தாய், – இனி
தென்று
காமநீர் வேளாதுநின் பெருமை வேட்பரேல்,
சேமநீ ராகும் சிறிது.

ಇನಿದೆನ್ಬರ್ ಕಾಮ ಮದನಿಲು ಮಾಱ್ಱ,
ಇನಿದೆನ್ಬರ್ ತಣ್ಣೀರು ಮೆನ್ದಾಯ್, – ಇನಿದೆನ್ಱು
ಕಾಮನೀರ್ ವೇಳಾದು ನಿನ್ ಪೆರುಮೈ ವೇಟ್ಪರೇಲ್,
ಶೇಮನೀರಾಗುಮ್ ಶಿಱಿದು.

ಇನಿದು ಎನ್ಬರ್ இனிது என்பர் = ಹಿತವಾದದ್ದು ಎನ್ನುತ್ತಾರೆ, ಕಾಮಮುಂ காமம் = ಕಾಮವು (ಆಶೆಯೆಂಬುದು), ಅದನಿಲುಮ್ அதனிலும் = ಅದಕ್ಕಿಂತಲೂ, ಆಱ್ಱ ஆற்ற = ಬಹಳ ಹೆಚ್ಚಾಗಿ, ಇನಿದು ಎನ್ಬರ್ இனிது என்பர் = ಹಿತವಾದದ್ದು ಎನ್ನುತ್ತಾರೆ, ತಣ್ಣೀರು தண்ணீரு = ತಣ್ಣೀರು ಎಂಬುದು, ಎನ್ ತಾಯ್ என் தாய் = ನನ್ನ ಸ್ವಾಮಿಯೇ, ಇನಿದು ಎನ್ಱು இனிது என்று = ಹಿತವಾದ್ದು

ಎಂದು, ಕಾಮ ನೀರ್ காம நீர் = ಕಾಮವನ್ನೂ ನೀರನ್ನೂ, ವೇಳಾದು
வேளாது = ಆಶಿಸದೆ, ನಿನ್ ನின் = ನಿನ್ನ, ಪೆರುಮೈ பெருமை =
ಹಿರಿಮೆಯನ್ನು, ವೇಟ್ಪರೇಲ್ வேட்பரேல் = ಆಶಿಸುವರಾದರೆ,
ಶೇಮಮಾ ನೀರ್ சேமம் நீர் = ಕ್ಷೇಮವೂ, ಗುಣವೂ (ಸ್ವಭಾವವೂ)
ಆಕುಮ್ ஆகும் = ಆಗುತ್ತದೆ, ಶಿರಿದು சிறிது = ಸ್ವಲ್ಪ.

ನನ್ನ ಸ್ವಾಮಿಯೇ, ಕಾಮ (ಆಶೆ) ಹಿತವಾದದ್ದು ಎನ್ನುತಾರೆ. ತಣ್ಣೀರು ಅದಕ್ಕಿಂತಲೂ ಬಹಳ ಹೆಚ್ಚು ಹಿತವೆನ್ನುತ್ತಾರೆ. ಕಾಮವನ್ನೂ ನೀರನ್ನೂ ಹಿತವಾದದ್ದೆಂದು ಆಶಿಸದೆ, ನಿನ್ನ ಹಿರಿಮೆಯನ್ನು ಆಶಿಸುವರಾದರೆ, ಸ್ವಲ್ಪ (35)
ಕ್ಷೇಮವೂ ಗುಣವೂ (ಸ್ವಭಾವವೂ) ಆಗುತ್ತದೆ.

ಈ ಪ್ರಕಾರದಲ್ಲಿ ಮನುಷ್ಯನಿಗೆ ನಿಜವಾಗಿಯೂ ಹಿತವಾದದ್ದು ಸಹಜವಾದದ್ದು ಯಾವುದು ಎಂಬುದನ್ನು ಆಳ್ವಾರರು ಸೂಚಿಸುತ್ತಾರೆ.

ಇಲ್ಲಿ ಎರಡು ರೀತಿಯ ಜನರನ್ನು ಲಕ್ಷಿಸಲಾಗಿದೆ. ಪ್ರಾಪಂಚಿಕರಲ್ಲಿ ಸಾಮಾನ್ಯರು, ವಿರಕ್ತರು ಎಂದು. ಸಾಮಾನ್ಯರು ಬಯಸುವುದು ಕಾಮ. ಪಂಚೇಂದ್ರಿಯಗಳಿಗೆ ಯಾವುದು ಹಿತವೋ ಅದು ಕಾಮ. ಶಬ್ದಾದಿ ವಿಷಯಗಳ ಕಡೆಗೆ ಮನಸ್ಸನ್ನು ಸೆಳೆಯುವುದು ಕಾಮ. ವಿರಕ್ತರಾದರೋ ಕಾಮಕ್ಕೆ ವಿರುದ್ಧವಾದವರು. ಅವರು ದೇಹವನ್ನು ನಾನಾ ರೀತಿಯಲ್ಲಿ ದಂಡಿಸಿ, ತಮ್ಮ ಮನಸ್ಸನ್ನು ಹತೋಟಿಯಲ್ಲಿಡಬಯಸುವವರು. ತಣ್ಣೀರು ಎಂಬುದು ವಿರಕ್ತರು ಬಳಸುವ ದೇಹದಂಡನೆಗೆ ಒಂದು ನಿದರ್ಶನ ಮಾತ್ರ. ದೇಹಕ್ಕೆ ಒಗ್ಗದೆ ಹೋದರೂ, ಎಂಥ ಕಾಲದಲ್ಲಾದರೂ ವಿರಕ್ತರು ತಣ್ಣೀರ ಸ್ನಾನವನ್ನೇ ಮಾಡುವರು. ಸಾಮಾನ್ಯರಿಗೆ ಕಾಮ ಹಿತವೆನಿಸಿದರೆ, ವಿರಕ್ತರಿಗೆ ತಣ್ಣೀರು ಹಿತವಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನನ್ನ ತಂದೆ, ಕೆಲವರು ಕಾಮವನ್ನು ಆಶಿಸುತ್ತಾರೆ. ಮತ್ತೆ ಕೆಲವರು ಇಂದ್ರಿಯಗಳಿಗೆ ಹಿತವಲ್ಲದ ತಣ್ಣೀರು ಮುಂತಾದವನ್ನು ಆಶಿಸುತ್ತಾರೆ. ಈ ಎರಡು ಮಾರ್ಗಗಳಿಗಿಂತಲೂ, ನಿನ್ನ ಹಿರಿಮೆಯನ್ನು ಆಶಿಸುವುದು ಹೆಚ್ಚು ಕ್ಷೇಮಕರವಾದದ್ದು ಮತ್ತು ಜೀವನಿಗೆ ಸಹಜವಾದ ಸ್ವಭಾವವೂ ಆಗುತ್ತದೆ.

36. சிறியார் பெருமை சிறிதின்க ணெய்தும்,
அறியாரும் தாமறியா ராவர், — அறியாமை
மண்கொண்டு மண்ணுண்டு மண்ணுமிழ்ந்த மாயனைன்று,
எண்கொண்டேன் னெஞ்சே யிரு.

ಶಿಱಿಯಾರ್ ಪೆರುಮೈ ಶಿಱಿದಿನ್ಕಣ್ ಎಯ್ದುಮಾಂ,
ಅಱಿಯಾರುಮ್ ತಾಮ್ ಅಱಿಯಾರಾವರ್, — ಅಱಿಯಾಮೈ
ಮಣ್ಕೊಣ್ಡು ಮಣ್ಣುಣ್ಡು ಮಣ್ಣುಮಿೞ್ನ್ದ ಮಾಯನೆನ್ಱು,
ಎಣ್ಕೊಣ್ಡೆನ್ ನೆಂಜೇ ಇರು.

ಶಿಱಿಯಾರ್ சிறியார் = ಚಿಕ್ಕವರ (ಅಲ್ಪರ), ಪೆರುಮೈ பெருமை = ಹಿರಿಮೆಯು (ದೊಡ್ಡತನವು), ಶಿಱಿದಿನ್ಕಣ್ சிறிதின்கண் = ಚಿಕ್ಕದರ ನಡುವೆಯೇ, ಎಯ್ದುಮಾ ஏய்தும் = ಹೋಗುತ್ತದೆ, ಅಱಿಯಾರುಮ್ அறியாரும் = ಅರಿಯದವರು (ಅಜ್ಞಾನಿಗಳು), ತಾಮ್ தாம் = ತಾವು. ಅಱಿಯಾರ್ ~~ಆವರ್~~ அறியார் ஆவர் = ಅರಿಯದವರೇ ಆಗುತ್ತಾರೆ, ಅಱಿಯಾಮೈ அறியாமை = ಯಾರಿಗೂ ತಿಳಿಯದ ದಾರಿಯಲ್ಲೇ, ಮಣ್ಕೊಣ್ಡು மண் கொண்டு = ಭೂಮಿಯನ್ನು ಪಡೆದುಕೊಂಡು, ಮಣ್ಣುಣ್ಡು மண் உண்டு = ಭೂಮಿಯನ್ನುಂಡು, ಮಣ್ಣುಮಿೞ್ನ್ದ மண் உமிழ்ந்த = ಭೂಮಿಯನ್ನು ಹೊರಕಕ್ಕಿದ, ಮಾಯನ್ ಎನ್ಱು மாயன் என்று = ಮಾಯನ್ ಎಂದು, ಎಣ್ಕೊಣ್ಡು எண் கொண்டு = ಭಾವಿಸಿಕೊಳ್ಳುತ್ತ, ಎನ್ ನೆಂಜೇ என் நெஞ்சே = ನನ್ನ ಮನವೇ, ಇರು இரு = ಇರು.

ಚಿಕ್ಕವರ (ಅಲ್ಪರ) ದೊಡ್ಡತನವು ಚಿಕ್ಕದರ ನಡುವೆಯೇ ಹೋಗುತ್ತದೆ. ಅರಿಯದವರು ತಾವು ಅರಿಯದವರೇ ಆಗುತ್ತಾರೆ. ಯಾರಿಗೂ ತಿಳಿಯದ (ಗೊತ್ತಾಗದ) ದಾರಿಯಲ್ಲೇ ಭೂಮಿಯನ್ನು ಪಡೆದುಕೊಂಡು, ಭೂಮಿಯನ್ನುಂಡು, ಭೂಮಿಯನ್ನು ಹೊರಕಕ್ಕಿದ ಮಾಯನೇ ಎಂದು ಭಾವಿಸಿಕೊಳ್ಳುತ್ತ, ನನ್ನ ಮನವೇ, ಇರು. (36)

ಹಿಂದಿನ ಪಾಶುರದಲ್ಲಿ ಲೋಕದ ಜನರನ್ನು ಮೂರು ಬಗೆಯಾಗಿ ವಿಂಗಡಿಸಿ ಹೇಳಲಾಯಿತು: ಅವರನ್ನು ಕಾಮಿಗಳು, ವಿರಕ್ತರು, ಭಕ್ತರು ಎಂದು. ಕಾಮಿಗಳೂ ವಿರಕ್ತರೂ ಪರಸ್ಪರ ವಿರುದ್ಧಗುಣದವರಾದರೂ ಭಕ್ತರಹಾಗೆ ಅವರಿಗೆ ಭಗವಂತನಲ್ಲಿ ಅನುರಕ್ತಿಯಿಲ್ಲ, ಎಂದು ಹೇಳಲಾಯಿತು.

ಈ ವಿಷಯವನ್ನು ಮತ್ತೊಂದು ರೀತಿಯಲ್ಲಿ ಈ ಪಾಶುರದಲ್ಲಿ ಹೇಳಲಾಗುತ್ತದೆ. ಇಲ್ಲಿಯೂ ಸಹ ಜನರನ್ನು ಮೂರು ಬಗೆಯಾಗಿ ವಿಂಗಡಿಸಿದ್ದಾರೆ. ಮೊದಲನೆಯ ಬಗೆಯವರು ಚಿಕ್ಕವರು ಅಥವಾ ಅಲ್ಪರು. ಅವರು ತಾವೇ ದೊಡ್ಡವರೆಂದೂ, ತಮ್ಮ ರೀತಿಯೇ ಶ್ರೇಷ್ಠವಾದದ್ದೆಂದೂ ಹೆಮ್ಮೆಪಡುತ್ತಾರೆ. ಅದಂತಾದರೇ ಅವರ ದೊಡ್ಡತನ. ಆ ಒಂದು ವೇ~~ಳೆ~~ ~~ಎಂದರೆ~~ ಅವರ ಆ ಅಲ್ಪತನದಲ್ಲೇ ಕಾಣಸಿಗುವುದು. ಎರಡನೆಯ ಬಗೆಯವರು 'ಅರಿಯದವರು'

ಅಥವಾ ಅಜ್ಞಾನಿಗಳು. ಅವರು ಏನೂ ಅರಿಯದವರು. ಅದೇ ಅವರ ಜನ್ಮ. ಜ್ಞಾನ ಪೆಂದಾಗಲಿ, ಜ್ಞಾನಿಗಳ ವಿಷಯವಾಗಲಿ ಅವರಿಗೆ ತಿಳಿಯದು.

ಮೂರನೆಯ ಬಗೆಯವರೇ ಭಗವದ್ವಿಷಯವಾಗಿ ಎಡೆಬಿಡದೆ ಚಿಂತಿಸುತ್ತಾ, ಭಗವಂತನಲ್ಲಿ ಭಕ್ತಿ ಮಾಡುತ್ತಾ ಆತ್ಮೋದ್ಧಾರದ ಕಡೆಗೆ ಗಮನ ಕೊಡುವವರು.

ಆಳ್ವಾರರು ಹೇಳುತ್ತಾರೆ: ನನ್ನ ಮನಸ್ಸೇ, ~~ನೀನು~~ ನನಗೆ ಅಲ್ಪರ ವಿದವಾದ ವ್ಯಾ ಬೇಡ. ಅರಿಯದವರ ಸಹವಾಸವೂ ಬೇಡ. ಭಗವಂತನ ಅದ್ಭುತ ಲೀಲೆಗಳನ್ನು ಸದಾ ಚಿಂತಿಸುತ್ತಾ ಕಾಲ ಕಳೆ. ಇದರಿಂದ ನಿನಗೆ ಒಳ್ಳೆಯ ದಾಗುತ್ತದೆ.

'ಅಱಿಯಾ ಮೆಯ್ ಮನ್ ಕೊಣ್ಡು" — ಯಾರಿಗೂ ಗೊತ್ತಾಗದ ರೀತಿಯಲ್ಲಿ ಭಗವಂತನು ತನ್ನ ವೇಷವನ್ನು ಮರೆಸಿಕೊಂಡು, ತೇಜಸ್ವಿಯಾದ ವಾಮನ ವಟುವಾಗಿ ಬಲಿ ಚಕ್ರವರ್ತಿಯ ಬಳಿಗೆ ಬಂದು, ಮೂರು ಹೆಜ್ಜೆಗಳ ನೆಲವನ್ನು ಯಾಚಿಸಿ, ಆನಂದ ಪಡೆದು ಕೊಂಡದ್ದು. ಮತ್ತು, ಮಹಾದ್ಭುತ ತ್ರಿವಿಕ್ರಮನಾಗಿ ಬೆಳೆದು, ಅದನ್ನು ಅಳೆದು ಕೊಂಡದ್ದು.

"ಮಣ್ ಉಣ್ಡು" — ಪ್ರಳಯ ಕಾಲ ಬಂದಾಗ, ಭಗವಂತನು ಭೂಮಿಯನ್ನು ಅದರ ಎಲ್ಲಾ ಚೇತನಾಚೇತನ ವಸ್ತುಗಳನ್ನು ಒಂದೇ ಗುಕ್ಕಿಗೆ ಕಬಳಿಸಿ ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಅವುಗಳನ್ನು ರಕ್ಷಿಸಿದ್ದು.

"ಮಣ್ ಉಮಿೞ್ನ್ದು" — ಮತ್ತೆ, ಸೃಷ್ಟಿಯ ಸಮಯ ಬಂದಾಗ, ಭಗವಂತನು ಭೂಮಿಯನ್ನು ಅದರ ಎಲ್ಲ ವಸ್ತುಗಳನ್ನು ಹೊರಹಾಕಿದ್ದು.

ಈ ಮೂರು ಕಾರ್ಯಗಳನ್ನು ಯಾರಿಗೂ ಗೊತ್ತಾಗದಂತೆ, ಯಾರೂ ಅರಿತುಕೊಳ್ಳದಂತೆ ನಡೆಸಿದ್ದರಿಂದಲೇ ಭಗವಂತನನ್ನು 'ಮಾಯನ್' (ಅದ್ಭುತನು) ಎಂದು ವರ್ಣಿಸುವರು.

37. இருந்தண் கமலத் திருமலரி னுள்ளே,
திருந்து திசைமுகனைத் தந்தாய், — பொருந்தி யநின்
பாதங்களேத்திப் பணியாவேல், பல்பிறப்பும்
ஏதங்க ளெல்லா மெமக்கு.

ಇರುನ್ದಣ್ ಕಮಲತ್ತಿರುಮಲರಿನುಳ್ಳೇ,
ತಿರುನ್ದು ತಿಶೈಮುಹನೈತ್ತನ್ದಾಯ್, — ಪೊರುನ್ದಿಯ ನಿನ್
ಪಾದಙ್ಗಳೇತ್ತಿಪ್ಪಣಿಯಾವೇಲ್, ಪಲ್ ಪಿಱಪ್ಪುಮ್
ಏದಙ್ಗಳೆಲ್ಲಾ ಮೆಮಕ್ಕು.

ಇರು இரு = ದೊಡ್ಡದಾದ, ಶೆನ್ செண = ಕೆಂಪಾದ, ಕಮಲತ್ತು
கமலத்து = ನಾಭಿ ಕಮಲದಲ್ಲಿ, ಇರು ಮಲರಿನ್ ಉಳ್ಳೇ இரு
மலரின் உள்ளே = ದೊಡ್ಡದಾದ ಕಮಲದ ಹೂವಿನಲ್ಲಿ, ತಿರುನ್ದ
திருந்து = ಸಮರ್ಥನಾದ, ತಿಶೈ ಮುಗನೈ திசைமுகனை =
ನಾಲ್ಕುಮುಖನನ್ನು, ತನ್ದಾಯ್ தந்தாய் = ಪಡೆದೆಯಲ್ಲವೇ (ಪಡೆದವನೇ),
ಪೊರುನ್ದಿಯ பொருந்திய = ಪಡೆದುಕೊಳ್ಳಬಹುದಾದ (ಹತ್ತಿರದಲ್ಲಿರುವ),
ನಿನ್ றின் = ನಿನ್ನ, ಪಾದಙ್ಗಳ್ பாதங்கள் = ತಿರುವಡಿಗಳನ್ನು,
ಏತ್ತಿ ஏத்தி = ಸ್ತುತಿಸಿ, ಪಣಿಯಾಯೇಲ್ பணியாயேல் = ಪೂಜಿಸಿ
ನಮಸ್ಕರಿಸದೆ ಹೋದರೆ, ಪಲ್ ಪಿಱಪ್ಪುಮ್ பல் பிறப்பும் =
ಹಲವಾರು ಜನ್ಮಗಳೂ, ಏದಙ್ಗಳ್ ஏதங்கள் = ಕಷ್ಟಾನುಭವಗಳು,
ಎಲ್ಲಾಮ್ ಎಮಕ್ಕು எல்லாம் எமக்கு = ಎಲ್ಲವೂ ನಮಗೆ.

ದೊಡ್ಡ ಕೆಂಪಾದ ನಾಭಿ ಕಮಲದಲ್ಲಿ ದೊಡ್ಡ ಕಮಲದ ಹೂವಿನಲ್ಲಿ ಸಮರ್ಥನಾದ ನಾಲ್ಕುಮುಖನನ್ನು ಪಡೆದವನೇ, ಸುಲಭವಾಗಿಯೇ ಇರುವ (ಪಡೆದುಕೊಳ್ಳಬಹುದಾದ) ನಿನ್ನ ತಿರುವಡಿಗಳನ್ನು ಸ್ತುತಿಸಿ ಪೂಜಿಸಿ ನಮಸ್ಕರಿಸದೆ ಹೋದರೆ, ~~ನಮ~~ ಹಲವಾರು ಜನ್ಮಗಳೂ ಕಷ್ಟಾನುಭವಗಳೂ ಎಲ್ಲವೂ (37) ನಮಗೆ (ಒದಗಿಬರುತ್ತವೆ).

ಹಿಂದಿನ ಪಾಶುರದಲ್ಲಿ ಭಗವಂತನನ್ನು ಭಜಿಸಿ ಪೂಜಿಸುವುದಲ್ಲದೆ, ಪ್ರಾಪಂಚಿಕ ಜೀವನದಲ್ಲಿ ಬೇಕೆನಿಸಿ ಬೇರೆ ಏನೇ ಇಲ್ಲವೆಂದೂ, ಯಾವ ಫಲವೂ ಇಲ್ಲವೆಂದೂ ಆಳ್ವಾರರು ಹೇಳಿದರು.

ಅದೇ ವಿಷಯವನ್ನೇ ಮುಂದುವರಿಸುತ್ತಾ, ಭಗವಂತನನ್ನು ಭಜಿಸಿ ಪೂಜಿಸದೆ ಹೋದರೆ ಬರುವ ಅನಾನುಕೂಲವೇನು ಎಂಬುದನ್ನು ಅವರು ಇಲ್ಲಿ ಹೇಳುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಭಗವಂತ, ನೀನು ಪರಮಸಮರ್ಥನು. ಸೃಷ್ಟಿ ~~ಕರ್ತನಾದ~~ ಕಾರ್ಯದಲ್ಲಿ ಸಮರ್ಥನಾದ ಚತುರ್ಮುಖ ಬ್ರಹ್ಮನನ್ನೇ ನೀನು ನಿನ್ನ ನಾಭಿಕಮಲದಲ್ಲಿ ಸೃಷ್ಟಿಸಿದೆ. ನಿನ್ನ ತಿರುವಡಿಗಳು ನಮಗೆ ಬಲು ಹತ್ತಿರದಲ್ಲಿವೆ. ಪಡೆದುಕೊಳ್ಳುವುದಕ್ಕೆ ಅವು ಸುಲಭಸಾಧ್ಯವಾಗಿವೆ. ಅಂಥವುಗಳನ್ನು ನಾವು ಪಡೆದುಕೊಳ್ಳದೆ ಹೋದೆವಾದರೆ, ನಮಗೆ ಹಲವಾರು ಜನ್ಮಗಳು, ಅವುಗಳು ನೀಡುವ ದುಃಖಾನುಭವವೂ ತಪ್ಪದೆ ನಾವು ಅನುಭವಿಸಲೇ ಬೇಕಾಗುತ್ತದೆ.

ಪುನರ್ಜನ್ಮದ ಸಂಕೋಲೆಯನ್ನೂ, ಪ್ರತಿ ಜನ್ಮದಲ್ಲೂ ಸಿದ್ಧವಾದ

Garani Srinivasan

ದುಃಖಾನುಭವವನ್ನು ತಪ್ಪಿಸಿಕೊಂಡು, ಮುಕ್ತರಾಗಬೇಕಾದರೆ, ಭಗವಂತನ ತಿರುವಡಿಗಳ ಆಶ್ರಯವೊಂದೇ ನೆಲೆಯಾಗಿರಾಯ ಎಂದರೆ.

38. நமக்கென் றிருநிதிய மேமாந்து தீராதே,
தமக்கென்றும் சார்வ மறிந்து,- நமக்கென்றும்
மாதவனே யென்னும் மனம்படைத்து, மற்றவன்பேர்
ஓதுவதே நாவினா லோத்து.

ಎಮಕ್ಕೆನ್ ಱಿರುನಿದಿಯ ಮೇಮಾನ್ದು ತೀರಾದೇ,
ತಮಕ್ಕೆನ್ಱುಮ್ ಶಾರ್ವ ಮಱಿನ್ದು,- ನಮಕ್ಕೆನ್ಱುಮ್
ಮಾದವನೇ ಯೆನ್ನುಮ್ ಮನಮ್ ಪಡೈತ್ತು, ಮಱ್ಱವನ್ ಪೇರ್
ಓದುವದೇ ನಾವಿನಾಲೋತ್ತು.

ಎಮಕ್ಕು ಎನ್ದು நமக்கு என்று = ನಮಗೆ ಎಂದು, ಇರುನಿಧಿಯುಮ್ இருநிதியம் = ಅಪಾರವಾದ ನಿಧಿಯನ್ನು, ಏಮಾನ್ದು ஏமாந்து = ಮೋಸಹೋಗಿ, ಇರಾದೇ தீராதே = ಇರದಂತೆ, ತಮಕ್ಕು தமக்கு = ತಮಗೆ, ಎನ್ದುಮ್ என்றும் = ಯಾವಾಗಲೂ, ಶಾರ್ವಮ್ சார்வம் = ರಕ್ಷಕನೆಯನ್ನು, ಅಱಿನ್ದು அறிந்து = ಅರಿತುಕೊಂಡು, ನಮಕ್ಕು நமக்கு = ನಮಗೆ, ಎನ್ದುಮ್ என்றும் = ಯಾವಾಗಲೂ, ಮಾದವನೇ மாதவனே = ಮಾಧವನೇ (ಶರಣ್ಯನು), ಎನ್ನುಮ್ என்னும் = ಎಂಬ, ಮನಮ್ மனம் = ಮನಸ್ಸನ್ನು, ಪಡೈತ್ತು படைத்து = ಉಂಟುಮಾಡಿಕೊಂಡು, ಮಱ್ಱು மற்று = ಮತ್ತೆ, ಅವನ್ ಪೇರ್ அவன் பேர் = ಅವನ ತಿರುನಾಮಗಳನ್ನು, ಓದುವದೇ ஓதுவதே = ಉಚ್ಚರಿಸುತ್ತಿರುವುದೇ (ಸಂಕೀರ್ತನ ಮಾಡುವುದೇ), ನಾವಿನಾಲ್ நாவினால் = ನಾಲಗೆಗೆ, ಒತ್ತು ஓத்து = ಒಪ್ಪಿಗೆಯಾಗತಕ್ಕದ್ದು.

ಅಪಾರವಾದ ನಿಧಿ ನಮಗೆ ಇದೆಯೆಂದು ಮೋಸಹೋಗದಿರದಂತೆ, ತಮಗೆ ಯಾವಾಗಲೂ ರಕ್ಷಕನೆಯನ್ನು ಅರಿತುಕೊಂಡು, ನಮಗೆ ಯಾವಾಗಲೂ ಮಾಧವನೇ ಶರಣು ಎಂಬ ಮನಸ್ಸನ್ನು ಪಡೆದುಕೊಂಡು, ಅವನ ತಿರುನಾಮಗಳನ್ನು ಉಚ್ಚರಿಸುತ್ತಿರುವುದೇ (ಸಂಕೀರ್ತನ ಮಾಡುವುದೇ) ನಾಲಗೆಗೆ ಒಪ್ಪಿಗೆಯಾದದ್ದು. (38)

ಭಗವಂತನನ್ನು ಭಜಿಸಿ ಪ್ರಾರ್ಥಿಸುವುದೇ ಇದು ಬಾಳಿಗೆ ಒಳಿತೆಂಬುದನ್ನು ಹಿಂದಿನ ಪಾಶುರದಲ್ಲಿ ಹೇಳಲಾಯಿತು. ಈ ಪಾಶುರದಲ್ಲಿ ಭಗವಂತನೇ ನಮಗೆ ರಕ್ಷಕನೆಂದೂ ಅವನಲ್ಲಿಯೇ ಶರಣಾಗಬೇಕೆಂದೂ

ಅವನ ತಿರುನಾಮಗಳನ್ನು ಎಣಿಸಬಾರದಂತೆ ಕೀರ್ತಿಸುತ್ತಲೇ ಇರಬೇಕೆಂದು ಹೇಳಲಾಗುತ್ತದೆ.

ಇದು ಜೀವನದಲ್ಲಿ ಸಂಪತ್ತು ಮುಖ್ಯ. ಅದನ್ನು ಅನೇಕಾನೇಕ ಕಳುಹಿಸಿಕೊಂಡು, ಜಗತ್ತಿನಲ್ಲಿ ಏನನ್ನು ಬೇಕಾದರೂ ಪಡೆದುಕೊಳ್ಳಬಹುದು. ಎಲ್ಲಾ ಸೌಖ್ಯಗಳಿಗೂ ಅದೇ ಆಧಾರ. ಹೀಗೆ ತಿಳಿಯುವವರು, ಅಂತೆಯೇ ಜೀವಿಸುವವರು ಅನೇಕ ಮಂದಿ.

ಇದು ಜೀವನ ಶಾಶ್ವತವಾದದ್ದಲ್ಲ. ಅದನ್ನು ಅದರಷ್ಟಕ್ಕೆ ಸೌಖ್ಯವನ್ನೇ ಆಶ್ರಯಿಸುವುದರ ಬದಲಾಗಿ, ಎಲ್ಲಾ ಸಂಪತ್ತಿಗೂ ಒಡೆಯರಾದ ಲಕ್ಷ್ಮೀದೇವಿಯ ಪತಿಯಾದ ಮಾಧವನನ್ನೇ ಶರಣೆಂದು ಆಶ್ರಯಿಸಿ, ಜೀವಿಸುವುದೇ ಶಾಶ್ವತ ಜೀವನ.

ಆಳ್ವಾರರು ಹೇಳುತ್ತಾರೆ: ನಮಗೆ ಅನೇಕವಾದ ನಿಧಿ ಇದೆಯಲ್ಲ; ಅದೇ ನಮಗೆ ರಕ್ಷಣೆ ಕೊಡುತ್ತದೆ ಎಂದು ಭಾವಿಸಿ ಅದರಿಂದ ಮೋಸಹೋಗಬಾರದು. ನಿಜವಾದ ರಕ್ಷಣೆಯಾವುದು ಎಂಬುದನ್ನು ಮನದಾರ ಅರಿತುಕೊಳ್ಳಬೇಕು. ಭಗವಂತನೇ ಶರಣ್ಯನು ಎಂಬುದನ್ನು ಮನಗಂಡು, ಅವನ ತಿರುನಾಮಗಳನ್ನು ಎಣಿಸದೆ ಕೀರ್ತಿಸುತ್ತಾ ಬಾಳನ್ನು ಸಾಗಿಸಬೇಕು. ನಾಲಿಗೆಗೆ ಅದೇ ಭೂಷಣ.

39. ஓத்தின் பொருள்முடிவு மித்தனையே, உத்தமன் பேர்
ஏத்துந் திறமறிமி னேழைகாள், — ஓத்ததனை
வல்லீரேல் நன்றதனை மாட்டீரேல், மாதவன் பேர்
சொல்லுவதே யோத்தின் சுருக்கு.

ಓತ್ತಿನ್ ಪೊರುಳ್ ಮುಡಿವು ಮಿತ್ತನೈಯೇ, ಉತ್ತಮನ್ ಪೇರ್
ಏತ್ತುನ್ದಿರಮರಿಮಿನ್ ಏೞೈಗಾಳ್, — ಓತ್ತದನೈ
ವಲ್ಲೀರೇಲ್ ನನ್ಱದನೈ ಮಾಟ್ಟೀರೇಲ್, ಮಾದವನ್ ಪೇರ್
ಶೊಲ್ಲುವದೇ ಯೋತ್ತಿನ್ ಶುರುಕ್ಕು.

ಓತ್ತಿನ್ ஓத்தின் = ವೇದಗಳ, ಪೊರುಳ್ பொருள் = ಅರ್ಥದ ಮುಡಿವುಮ್ முடிவும் = ಪೂರ್ಣಸಾರವೆಲ್ಲ, ಇತ್ತನೈಯೇ இத்தனையே = ಇಷ್ಟೇಯೇ, ಉತ್ತಮನ್ ಪೇರ್ உத்தமன் பேர் =

ಪುರುಷೋತ್ತಮನ ಹೆಸರುಗಳನ್ನು, ಏತ್ತುಮ್ ஏத்தும் = ಸ್ತುತಿಸುವ, ತಿಱಮ್ திறம் = ರೀತಿಯನ್ನು, ಅಱಿಮಿನ್ அறிமின் = ಅರಿತುಕೊಳ್ಳಿ, ಏೞೈಗಾಳ್ ஏழைகாள் = ಅಜ್ಞಾನಿಗಳಿರಾ, ಓತ್ತು ಅದನೈ ஓத்து அதனை = ವೇದಾಧ್ಯಯನ ಮುಂತಾದ ಕಾರ್ಯಗಳನ್ನು, ವಲ್ಲೀರೇಲ್ ~~[illegible]~~ வல்லீரேல் = ಬಲ್ಲವರು ನೀವಾದರೆ, ನನ್ಱು நன்று = ಚೆನ್ನಾಗಿ, ಅದನೈ அதனை = ಆ ಕಾರ್ಯವನ್ನು, ಮಾಟ್ಟೀರೇಲ್ மாட்டீர் ஏல் = ಮಾಡಲಾರಿರಾದರೆ, ಮಾದವನ್ ಪೇರ್ மாதவன் பேர் = ಮಾಧವನ ಹೆಸರುಗಳನ್ನು, ಸೊಲ್ಲುವದೇ சொல்லுவதே = ಉಚ್ಚರಿಸುತ್ತಿರುವುದೇ, ಓತ್ತಿನ್ ஓத்தின் = ವೇದಗಳ, ಸುರುಕ್ಕು சுருக்கு = ಸಾರಾಂಶ.

ಅಜ್ಞಾನಿಗಳೇ, ವೇದಗಳ ಅರ್ಥದ ಪೂರ್ಣಸಾರವೆಲ್ಲ ಇಷ್ಟೇಯೇ, ಪುರುಷೋತ್ತಮನ ಹೆಸರುಗಳನ್ನು ಸ್ತುತಿಸುವ ರೀತಿಯನ್ನು ಅರಿತುಕೊಳ್ಳಿ ಎಂಬುದು. ವೇದಾಧ್ಯಯನ ಮುಂತಾದ ಕಾರ್ಯಗಳನ್ನು ಬಲ್ಲವರು ನೀವಾದರೆ, ಚೆನ್ನಾಗಿ ಅದನ್ನು (ಆ ಕಾರ್ಯವನ್ನು) ಮಾಡಲಾರಿರಾದರೆ, ಮಾಧವನ ಹೆಸರುಗಳನ್ನು ಹೇಳುತ್ತಿರುವುದೇ ವೇದಗಳ ಸಾರಾಂಶ. (39)

ಭಗವಂತನನ್ನು ಶರಣು ಹೋಗುವುದೇ ಶಾಶ್ವತವಾದ ಜೀವನಕ್ಕೆ ದಾರಿ ಎಂದು ಹಿಂದಿನ ಪಾಶುರದಲ್ಲಿ ಹೇಳಲಾಯಿತು.

ಯಾರು ವಿದ್ಯಾವಂತರಾಗಿದ್ದರೂ ಸಹ, ಭಗವದ್ವಿಷಯದ ಕಡೆಗೆ ಮನಸ್ಸು ಕೊಡದೆ, ಶಾಶ್ವತ ಜೀವನದ ಮಾರ್ಗವನ್ನು ಹಿಡಿಯದೆ, ಇಂದ್ರಿಯಗಳಿಗೆ ಆಳಾಗಿ, ಅವುಗಳು ಸೆಳೆದು ಕೊಂಡು ಹೋಗುವ ವಿಷಯಾಸಕ್ತಿಯಲ್ಲಿ ಮುಳುಗಿ ಕೆಟ್ಟು, ಪುನರ್ಜನ್ಮದ ಸಂಕೋಲೆಯಿಂದ ಬಂಧಿತರಾಗುತ್ತಾರೋ ಅವರು ಅಜ್ಞಾನಿಗಳು. ಅಂಥ ಅಜ್ಞಾನಿಗಳನ್ನೇ ಆಳ್ವಾರರು ಇಲ್ಲಿ ಕೀಳವರೆಂದು ಕರೆಯುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಪ್ರಾಪಂಚಿಕ ಸುಖವನ್ನೇ ನಂಬಿ ನಡೆಯುವವರೇ, ನೀವು ವೇದಾಧ್ಯಯನವೇ ಮುಂತಾದ ವಿಧಿಯುಕ್ತಾದ ಕಾರ್ಯಗಳನ್ನು ಅರಿತವರಾದರೂ ಸರಿಯಾದ ತಿಳುವಳಿಕೆಯಿಲ್ಲದ ಅಜ್ಞಾನಿಗಳೇ ಆಗಿದ್ದೀರಿ. ವೇದಗಳು ವಿವರಿಸುವ ವಿಷಯವಾದರೂ ಏನು? ಪುರುಷೋತ್ತಮನ ತಿರುನಾಮಗಳನ್ನು ಸ್ತುತಿಸುತ್ತ ಇರಬೇಕೆಂದಲ್ಲವೇ? ನಿಮ್ಮ ವೇದಾಧ್ಯಯನಾದಿ ಕಾರ್ಯಗಳನ್ನು ಚೆನ್ನಾಗಿ ನಡೆಸ-

Garani Srinivasan

ಲಾಂಛನಾದರೆ, ಭಗವಂತನ ನಾಮಸಂಕೀರ್ತನೆಯನ್ನು ಎಡೆಬಿಡದೆ ಮಾಡು
ತ್ತಾ ಮುಂತಾಗಿ.

ವೇದಗಳನ್ನು ಕಲಿತು ಅವುಗಳ ಅಂತರಾರ್ಥವನ್ನು ಅರಿತುಕೊಳ್ಳ
ವುದಕ್ಕೆ ಕಳೆಯುವ ಕಾಲವನ್ನು ಪುರುಷೋತ್ತಮನ ನಾಮಸಂಕೀರ್ತನೆ ಮಾಡುತ್ತಾ
ಕಳೆಯುವುದು ಸುಲಭವಾಗಿ ಉದ್ಧಾರವಾಗುವ ಉಪಾಯ ಎಂಬುದು
ಇಲ್ಲಿರಬಹುದೇ?

40. சுருக்காக வாங்கிச் சுலாவிநின்று, ஐயார்
நெருக்காமுன் நீர்நினைமின் கண்டீர், - திருப்பொலிந்த
ஆகத்தான் பாதமறிந்தும், அறியாத
போகத்தாலில்லை பொருள்

ಶುರುಕ್ಕಾಗ ವಾಙ್ಗಿಚ್ ಚುಲಾವಿನಿನ್ಱು, ಐಯಾರ್
ನೆರುಕ್ಕಾಮುನ್ ನೀರ್ ನಿನೈಮಿನ್ ಕಣ್ಡೀರ್, - ತಿರುಪ್ಪೊಲಿನ್ದ
ಆಗತ್ತಾನ್ ಪಾದಮಱಿನ್ದುಮ್, ಅಱಿಯಾದ
ಪೋಗತ್ತಾಲಿಲ್ಲೈ ಪೊರುಳ್.

ಶುರುಕ್ಕ ಆಗ சுருக்கு ஆக = (ದೇಹವು) ಸುಕ್ಕು ಬೀಳುವಂತೆ,
ವಾಙ್ಗಿ வாங்கி = ಬಲಿತು, ಶುಲಾವಿ சுலாவி = (ದೇಹವೆಲ್ಲವೂ)
ಆವರಿಸಿಕೊಂಡು, ನಿನ್ಱು நின்று = ಇರುತ್ತಾ, ಐ ಆರ್ ஐ ஆர் =
ತುಂಬಿರುವ ಶ್ಲೇಷ್ಮವು, ನೆರುಕ್ಕಾಮುನ್ நெருக்காமுன் = ಬಿಗಿಸು
ವುದಕ್ಕೆ ಮುಂಚೆಯೇ, ನೀರ್ நீர் = ನೀವು, ನಿನೈಮಿನ್ ಕಣ್ಡೀರ್ நினை
மின் கண்டீர் = ನೆನೆಯಬೇಕು ಕಂಡಿರಾ, ತಿರು திரு = ಶ್ರೀದೇ
ವಿಯು, ಪೊಲಿನ್ದ பொலிந்த = ಪೊಳೆಯುತ್ತಿರುವ, ಆಗತ್ತಾನ್ ஆக
த்தான் = ವಕ್ಷವುಳ್ಳವನ, ಪಾದಮ್ பாதம் = ತಿರುವಡಿಗಳನ್ನು,
ಅಱಿನ್ದುಮ್ அறிந்தும் = ಅರಿತುಕೊಂಡಿದ್ದಾಗ್ಯೂ, ಅಱಿಯಾದ
அறியாத = ತಿಳಿಯಲಾಗದಂತೆ, (ಅರಿಯದವರದಾಗಿ), ಪೋಗ
ತ್ತಾಲ್ போகத்தால் = ವಿಷಯಾದಿ ಭೋಗಗಳಿಂದ, ಇಲ್ಲೈ ಪೊರುಳ್
இல்லை பொருள் = ಯಾವ ಪ್ರಯೋಜನವೂ ಇಲ್ಲ.

ದೇಹವು ಸುಕ್ಕು ಬೀಳುವಂತೆ ಬಲಿತು, ದೇಹವನ್ನೆಲ್ಲಾ ಆವರಿಸಿಕೊಂ
ಡು ಇರುತ್ತಾ ತುಂಬಿರುವ ಶ್ಲೇಷ್ಮವು ಕುತ್ತಿಗೆಯನ್ನು ಬಿಗಿಸುವುದಕ್ಕೆ
ಮುಂಚಿತವಾಗಿಯೇ, ನೀವು ಶ್ರೀದೇವಿಯು ಪೊಳೆಯುವ ವಕ್ಷಸ್ಥಳದವನ

Garani Srinivasan

ಪಾದಗಳನ್ನು ನೆನೆಯ ಬೇಕು ಕಂಡಿರಾ. ಅರಿತುಕೊಂಡಿದ್ದಾಗ್ಯೂ ಸಹ, ಕೆಳೆ ಯಾದವರದಾಗ್ ವಿಷಯಾದಿ ಭೋಗಗಳಿಂದ ಯಾವ ಪ್ರಯೋಜನ (40) ವೂ ಇಲ್ಲ.

ಈ ಪಾಶುರದಲ್ಲಿಯೂ ಭಗವನ್ನಾಮ ಸಂಕೀರ್ತನೆಯನ್ನು ನಡೆಸಲೇ ಬೇಕೆಂದು ಒತ್ತಾಯ ಪಡಿಸುತ್ತಿದ್ದಾರೆ. ಅದನ್ನು ಕಡೆಯ ಗಳಿಗೆಯ ವರೆಗೆ ತಳ್ಳಿ ಹಾಕದಂತೆ, ದೇಹ ದೃಢವಾಗಿ ಆರೋಗ್ಯವಾಗಿ ಇರುವಾಗಲೇ ಭಗವನ್ನಾಮವನ್ನು ನೆನೆಯಲೇ ಬೇಕು ಎನ್ನುತ್ತಾರೆ.

ಆಳ್ವಾರರು ಹೇಳುತ್ತಾರೆ: ಅಜ್ಞಾನಿಗಳಿರಾ, ಮುಪ್ಪು ಬರುವಾಗ ದೇಹ ಸುಕ್ಕು ಬೀಳುತ್ತದೆ. ಶಕ್ತಿ ಉಡುಗುತ್ತದೆ. ದೇಹದಲ್ಲಿ ಎಲ್ಲ ಕಡೆಯೂ ಕಫ ತುಂಬಿಕೊಳ್ಳುತ್ತದೆ. ಅದು ಕುತ್ತಿಗೆಗಾ ಬಂದು ಅಲ್ಲಿ ಕಂಠವನ್ನು ಬಿಗಿಸುತ್ತದೆ. ಆ ಕಡೆಯ ಗಳಿಗೆಯ ವರೆಗೂ ನೀವು ಸುಮ್ಮನಿರಬಾರದು. ಉದಾಸೀನ ಮಾಡಬಾರದು. ಅದಕ್ಕೆ ಮುಂಚೆಯೇ ಭಗವಂತನ ಎಂದರೆ ಶ್ರೀದೇವಿಯನ್ನು ವಕ್ಷಸ್ಥಲದಲ್ಲಿ ನಿತ್ಯವಾಗಿ ಉಳ್ಳವನ ನಾಮಗಳನ್ನು ಕೀರ್ತಿಸಲೇ ಬೇಕು, ಕಂಡಿರಾ. ವಿಷಯಾದಿ ಭೋಗಗಳಿಂದ ಯಾವ ಪ್ರಯೋಜನವೂ ಇಲ್ಲ. ಈ ವಿಷಯವನ್ನು ನೀವು ಅರಿತುಕೊಂಡಿದ್ದಾಗ್ಯೂ ಸಹ ಕೆಳವಳಿ ಇಲ್ಲದವರದಾಗ್ ವಿಷಯಾದಿ ಭೋಗಗಳಲ್ಲಿ ನರಕರಾಗಬೇಡಿ.

41. பொருளா லமருலகம் புக்கியல லாகாது—,
அருளா லறமருளு மன்றே,— அருளாலே
மாமறையோர்க் கீந்த மணிவண்ணன் பாதமே,
நீமறவேல் நெஞ்சே நினை.

ಪೊರುಳಾಂ ಲಮರುಲಗಮ್ ಪುಕ್ಕಿಯಲ ಲಾಗಾದು,
ಅರುಳಾಲ ಱಮರುಳು ಮನ್ರೋ,— ಅರುಳಾಲೇ
ಮಾಮಱೈಯೋರ್ಕ್ಕೀನ್ದ ಮಣಿವಣ್ಣನ್ ಪಾದಮೇ,
ನೀ ಮಱವೇಲ್ ನೆಂಜೇ ನಿನೈ.

ಪೊರುಳಾಲ್ பொருளால் = ಪುರುಷಾರ್ಥ ಸಂಬ ಉದ್ದೇಶದಿಂದ, (ಉಪಾಯದಿಂದ) ಅಮರುಲಗಮ್ அமருலகம் = ಸ್ವರ್ಗ ಲೋಕವನ್ನು, ಪುಕ್ಕು புக்கு = ಸೇರಲು, ಇಯಲಲ್ இயலல் = ಯತ್ನಿಸುವುದು, ಆಗಾದು ஆகாது = ಸಾಧ್ಯವಾಗುವುದಿಲ್ಲ, ಅರುಳಾನ್ அருளான் = ಕೃಪಾಳುವಾದ ಭಗವಂತನು, ಅಱಮ್ அறம் = ಪುಣ್ಯದಿಂದ, ಅರುಳುಮ್ ಅನ್ರೋ அருளும் அன்றே = ಕೃಪೆ ಮಾಡುವನಲ್ಲವೇ,

ಅರುಳಾಲೇ ಅ(ಗ್)ಣಾಗಲ = ಕೃಪೆಯಿಂದಲೇ, ಮಾ ಮಣ್ಣೈಯುಲಕಿಲ್
ಮಾ ಮಣ್ಣಾರ್ ಯೋರ್ಕ್(ಕ್) = ಮನುಷ್ಯರಿಗೆ, ಈನ್ದ ಗ(ನ್)ತ್ = ಕಲ
ಶಿಪದ (~~ ನೀಡಿದ), ಮಣಿವಣ್ಣನ್ ಪಾದಮೇ ಮಣ್ಣಿವಣ್ಣಣ್ಣ
ಪಾತ್ತುಮೇ = ಇಂದ್ರನೀಲ ಮಣಿಯ ಬಣ್ಣದವನ ಪಾದಗಳನ್ನೇ, ನೀ ಮೂಲ
ನೇಲ್ ನ್ ಮಣ್ಣಾರವು = ನೀನು ಮರೆಯದಂತೆ, ನೆಂಜೇ ಉ(ಗ್)ಕು(ಗ್)ಗೆ =
ಮನಸ್ಸೇ, ನಿನ್ನೈ (ಗ್)ಬಿಣ = ನೆನೆಯುತ್ತಿರು.

ಮನಸ್ಸೇ, ಉಪಾಯದಿಂದ (ಪುರುಷಾರ್ಥವೆಂಬ ಉದ್ದೇಶದಿಂದ) ಸ್ವರ್ಗಲೋಕವನ್ನು ಸೇರಲು ಯತ್ನಿಸುವುದು ಸಾಧ್ಯವಾಗುವುದಿಲ್ಲ. ಕೃಪಾಳುವಾದ ಭಗವಂತನು, ಪುಣ್ಯದಿಂದ ಕೃಪೆಮಾಡುವನಲ್ಲವೇ? ಕೃಪೆಯಿಂದಲೇ ಮನುಷ್ಯರಿಗೆ ಕರುಣಿಸಿ ನೀಡಿದ ಇಂದ್ರನೀಲ ಮಣಿಯ ಬಣ್ಣದವನ ಪಾದಗಳನ್ನೇ ನೀನು ಮರೆಯದಂತೆ ನೆನೆಯುತ್ತಿರು. (41)

ಹಿಂದಿನ ಪಾಶುರದಲ್ಲಿ ಆಳ್ವಾರರು ವಿಷಯಾಸಕ್ತಿಯ ಬಗೆಗೆ ಯೋಚಿಸಬಾರದೆಂದೂ, ಅದರಲ್ಲಿ ಮಗ್ನರಾಗಬಾರದೆಂದೂ ಹೇಳಿದರು.

ಈ ಲೋಕದಲ್ಲಿ ಹುಟ್ಟಿದ ಬಳಿಕ ಚತುರ್ವಿಧ ಪುರುಷಾರ್ಥಗಳನ್ನು ಕ್ರಮವಾಗಿ ಸಾಧಿಸಿಕೊಳ್ಳುವುದಕ್ಕೆ ಪ್ರಯತ್ನಿಸುವುದೇ ಬಾಳಿನ ಉದ್ದೇಶವೆಂದು ತಿಳಿಯುವುದರಿಂದಲೂ, ಮತ್ತು ಅವುಗಳನ್ನು ಸಾಧಿಸಿಕೊಳ್ಳುವುದರಿಂದ ನಮಗೆ ಸ್ವರ್ಗಪ್ರಾಪ್ತಿಯುಂಟಾಗುವುದು ಎಂಬ ಅಭಿಪ್ರಾಯದಿಂದಲ್ಲವೆಂದೂ, ನಾವು ಮಾಡಿದ ಪುಣ್ಯದಿಂದ ಭಗವಂತನು ನಮ್ಮಲ್ಲಿ ಕೃಪೆದೋರುವನೆಂದೂ, ಅವನ ಕೃಪೆಯು ಹೊರತು ನಮಗೆ ಗತ್ಯಂತರವಿಲ್ಲವೆಂದೂ, ಅವನ ಕೃಪೆಗಾಗಿಯೇ ನಾವು ಸದಾ ಪ್ರಯತ್ನಿಸಬೇಕೆಂದೂ ಆಳ್ವಾರರು ಇಲ್ಲಿ ಹೇಳುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಇಹಲೋಕದ ಬಾಳಿನಲ್ಲಿ ನಡೆಸಬೇಕಾದ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಬಗೆಯ ಉಪಾಯಗಳನ್ನು ಸಾಧಿಸಲು ಯತ್ನಿಸುವುದರಿಂದಲೇ ನಿನಗೆ ಸ್ವರ್ಗಪ್ರಾಪ್ತಿಯಾಗುವುದೆಂದೂ, ಅದು ಅಷ್ಟು ಸರಾಗವಾದದ್ದೆಂದೂ ಭಾವಿಸಬೇಡ. ಮಾಡಿದ ಪುಣ್ಯಕ್ಕೆ ಅನುಗುಣವಾಗಿ ಭಗವಂತನು ನಮಗೆ ಕೃಪೆಮಾಡುವನು. ಮನುಷ್ಯರೆಲ್ಲರೂ ಸಹ ಅವನ ಕೃಪೆಯಿಂದಲೇ ಅವನ ತಿರುವಡಿಗಳು ಲಭಿಸಿವೆ. ಆದ್ದರಿಂದ, ನೀನೂ ಸಹ ಅವನ ಕೃಪೆಗಾಗಿ ಪ್ರಯತ್ನಿಸು. ಅವನ

Garani Srinivasan

ತಿರುವಡಿಗಳನ್ನೇ ಎಡೆಬಿಡದೆ ಚಿಂತಿಸುತ್ತಿರು.

42. நினைப்பன் திருமாலை நீண்ட தோள் காண,
நினைப்பார் பிறப்பென்றும் நேரார், — மனைப்பால்
பிறந்தார் பிறந்தெய்தும் பேரின்ப மெல்லாம்,
துறந்தார் தொழுதாரத் தோள்

ನಿನೈಪ್ಪನ್ ತಿರುಮಾಲೈ ನೀಣ್ಡ ತೋಳ್ ಕಾಣ,
ನಿನೈಪ್ಪಾರ್ ಪಿಱಪ್ಪೆನ್ಱುಮ್ ನೇರಾರ್, — ಮನೈಪ್ಪಾಲ್
ಪಿಱನ್ದಾರ್ ಪಿಱನ್ದೆಯ್ದುಮ್ ಪೇರಿನ್ಬ ಮೆಲ್ಲಾಮ್,
ತುಱನ್ದಾರ್ ತೊೞುದಾರತ್ ತೋಳ್.

ತಿರುಮಾಲೈ திருமாலை = ಲಕ್ಷ್ಮೀನಾಥನಾದ ಶ್ರೀಮನ್ನಾರಾಯಣನನ್ನು, ನಿನೈಪ್ಪನ್ நினைப்பன் = ಚಿಂತಿಸುವುದಕ್ಕಾಗಿಯೂ (ಧ್ಯಾನಿಸುವುದಕ್ಕಾಗಿಯೂ), ನೀಣ್ಡ நீண்ட = ಉದ್ದನಾದ, ತೋಳ್ தோள் = ತೋಳುಗಳನ್ನು, ~~ಕಾಣುವುದ~~ ಕಾಣ காண = ಕಾಣುವುದಕ್ಕಾಗಿಯೂ, ನಿನೈಪ್ಪಾರ್ நினைப்பார் = ಚಿಂತಿಸುವವರು, ಪಿಱಪ್ಪು பிறப்பு = ಹುಟ್ಟನ್ನು, ಎನ್ಱುಮ್ என்றும் = ಎಂದಿಗೂ, ನೇರಾರ್ நேரார் = ಪಡೆಯುವುದಿಲ್ಲ, ಮನೈಪ್ಪಾಲ್ மனைப்பால் = ಸಂಸಾರದಲ್ಲಿಯೇ, ಪಿಱನ್ದಾರ್ பிறந்தார் = ಹುಟ್ಟಿದವರು, ಪಿಱನ್ದು பிறந்து = ಜನ್ಮವೆತ್ತಿ, ಎಯ್ದುಮ್ எய்தும் = ಪಡೆಯುವ, ಪೇರ್ ಇನ್ಬಮ್ பேர் இன்பம் = ಅತಿಶಯವಾದ ಆನಂದವನ್ನು, ಎಲ್ಲಾಮ್ எல்லாம் = ಎಲ್ಲವನ್ನೂ, ತುಱನ್ದಾರ್ துறந்தார் = ತೊರೆದವರಾಗಿದ್ದಾರೆ, ತೊೞುದಾರ್ தொழுதார் = ಭಜಿಸಿದವರು, ಅ-ತೋಳ್ அத்தோள் = ಆ ತೋಳುಗಳನ್ನು.

ಲಕ್ಷ್ಮೀನಾಥನನ್ನು ಧ್ಯಾನಿಸುವುದಕ್ಕಾಗಿಯೂ, ಅವನ ನೀಳವಾದ ತೋಳುಗಳನ್ನು ಕಾಣುವುದಕ್ಕಾಗಿಯೂ ಚಿಂತಿಸುವವರು ಎಂದಿಗೂ ಹುಟ್ಟನ್ನು ಪಡೆಯುವುದಿಲ್ಲ. ಆ ತೋಳುಗಳನ್ನು ಭಜಿಸಿದ ಸಂಸಾರದಲ್ಲಿಯೇ ಹುಟ್ಟಿದವರು ಜನ್ಮವೆತ್ತಿ ಪಡೆಯುವ ಅತಿಶಯವಾದ ಆನಂದವನ್ನು ಎಲ್ಲವನ್ನೂ ತೊರೆದವರಾಗಿದ್ದಾರೆ. (42)

ಹಿಂದಿನ ಪಾಶುರದಲ್ಲಿ ಭಗವತ್ಕೃಪೆಯೇ ಭಗವತ್ಪ್ರಾಪ್ತಿಗೆ ಉಪಾಯ ಎಂಬ ವಿಷಯವನ್ನು ಹೇಳಲಾಯಿತು. ಅದೇ ವಿಷಯವನ್ನು ಇಲ್ಲಿ

Garani Srinivasan

ಮುಂದು ಮಾಡಲಾಗುವುದು. ಭಗವಂತನನ್ನು ಧ್ಯಾನಿಸಿ, ಪೂಜಿಸುವವನಿಗೆ ಆಗುವ ಒಳ್ಳೆಯದೇನು, ಹಾಗೆ ಮಾಡದ ಸಂಸಾರಿಗಳಿಗೆ ಆಗುವ ಕೇಡೇನು ಎಂಬುದನ್ನು ಇಲ್ಲಿ ಹೇಳಲಾಗುತ್ತದೆ.

"ನಿನೈಪ್ಪನ್ ತಿರುಮಾಲೈ" — ಲಕ್ಷ್ಮೀನಾಥನನ್ನೇ ಎಡೆಬಿಡದೆ ಚಿಂತಿಸುವುದು, ಅವನ ಕಲ್ಯಾಣ ಗುಣ ಸ್ವಭಾವಗಳನ್ನೂ ಲೀಲಾ ವಿಶೇಷಗಳನ್ನೂ ಕೂಡ ಚಿಂತಿಸುವುದು, ಅವನ ದಿವ್ಯನಾಮಗಳನ್ನು ಜಪಿಸುವುದು — ಇದು ಒಂದು ಮಾರ್ಗ.

"ಶೀರ್ಕೆಳು ತೋಳ್ ಶೆಯ್" — ಭಗವಂತನ ತೋಳುಗಳು ಬಲು ಉದ್ದವಾಗಿಯುಂಟೆ. ಎಲ್ಲರಿಗಾ ರಕ್ಷಕನಾಗಿ, ಎಲ್ಲರಿಗಾ ಆಶ್ರಯ ಕೊಡುವವನಾಗಿ, ಅವರ ಕಷ್ಟ ದುಃಖಗಳ ನಿವಾರಕನಾಗಿ ಅವನಿಗೆ ಕಾಪಾಡಲಿರುವುದಕ್ಕೆ ಸ್ವಾಮಿಗೆ ಬಲು ಉದ್ದವಾದ ತೋಳುಗಳು ಬೇಡವೇ?

ಇಲ್ಲಿ ಎರಡು ಬಗೆಯ ಜನರನ್ನು ಆಳ್ವಾರರು ಎತ್ತಿ ತೋರಿಸಿದ್ದಾರೆ. ಭಗವಂತನನ್ನು ಸದಾ ಧ್ಯಾನಿಸುವುದು, ಅವನ ದಿವ್ಯಮಂಗಳ ರೂಪವನ್ನು ಕಾಣಲು ಕಾತರಪಡುವುದು, ಪ್ರಾಪಂಚಿಕ ಜೀವನದಲ್ಲಿ ಸಂಪೂರ್ಣ ವಿರಕ್ತಿ ತೋರುವುದು ಒಂದು ಬಗೆಯ ಜೀವನ. ಭಗವಂತನನ್ನು ಭಜಿಸುವ ವಿಷಯದಲ್ಲಿ ಅಸಡ್ಡೆ ತೋರುವುದು, ಸಾಂಸಾರಿಕ ಜೀವನದಲ್ಲಿಯೇ ಮುಳುಗಿ ತೇಲುವುದು — ಇದು ಇನ್ನೊಂದು ಬಗೆಯ ಜೀವನ.

ಆಳ್ವಾರರು ಹೇಳುತ್ತಾರೆ: ಯಾರು ಲಕ್ಷ್ಮೀನಾಥನಾದ ಭಗವಂತನನ್ನು ಸದಾ ಚಿಂತಿಸುತ್ತಿರುವರೋ, ಯಾರು ಅವನ ನಿಡಿದಾದ ತೋಳುಗಳ ಆಶ್ರಯವನ್ನು ಪಡೆದುಕೊಳ್ಳಲು ಯತ್ನಿಸುವರೋ ಅವರಿಗೆ ಪುನರ್ಜನ್ಮದ ಭಯವೇ ಇಲ್ಲ. ಅವರಿಗೆ ನಿರತಿಶಯಾನಂದವೇ ಇರುತ್ತದೆ. ಆದರೆ, ಯಾರು ಭಗವಂತನನ್ನು ಭಜಿಸದೆ, ಅದರಿಂದ ದೂರ ಹೋಗಿ, ಸಾಂಸಾರಿಕ ಜೀವನದಲ್ಲೇ ಇರಬಯಸುವರೋ ಅವರು ದುಃಖ ನೋವುಗಳ ಸರಣಿಯಲ್ಲಿಯೇ ತಮ್ಮ ಜೀವನವನ್ನು ಕಳೆಯುತ್ತಾ ತೊಳಲುತ್ತಾರೆ. ಅವರಿಗೆ ನಿರತಿಶಯಾನಂದವಾಗಲಿ, ಪರಮಪದವಾಗಲಿ, ಭಗವತ್ಕೈಂಕರ್ಯದ ಭಾಗ್ಯವಾಗಲಿ ಇರುವುದಿಲ್ಲ.

43. தோளிரண் டெட்டேழும் மூன்றும் முடியனைத்தும்,
தாளிரண்டும் வீழச் சரந்துரந்தான் – தாளிரண்டும்,
ஆர்தொழுவார் பாத மவைதொழுவ தன்றே, என்
சீர்கெழுதோள் செய்யுஞ் சிறப்பு.

Garani Srinivasan

ಕೋಲ್ಕಳಿರಣ್ಡೆಟ್ಟೇಯುಮ್ ಮೂನ್ಱುಮ್ ಮುಡಿಯನೈತ್ತುಮ್,
ಶಾರ್ಕಳಿರಣ್ಡುಮ್ ವಿಲ್ಲು ಶರಮ್ ತುರನ್ದಾನ್ — ಶಾರ್ಕಳಿರಣ್ಡುಮ್,
ಆರ್ ಶೇಯುವಾರ್ ಪಾದಮವೈ ಶೇಯುವದನ್ಱೋ, ಎನ್
ಶೀರ್ ಶೇಯು ಕೋಲ್ಕಳ್ ಶೆಯ್ಯುಂ ಶಿಱಪ್ಪು.

ಕೋಲ್ ಇರಣ್ಡು ಎಟ್ಟು ವಿಲ್ಲುಮ್ ಮೂನ್ಱುಮ್ கோள் இரண்டு எட்டு ஏழும் மூன்றும் = ಇಪ್ಪತ್ತು ಕೋಲುಗಳನ್ನು, ಮುಡಿ (முடி) = ಕಲೆಗಳು, ಅನೈತ್ತುಮ್ அனைத்தும் = ಎಲ್ಲವನ್ನು, ಶಾರ್ கள் = ಕಾಲುಗಳು, ಇರಣ್ಡುಮ್ இரண்டும் = ಎರಡನ್ನು, ವಿಲ್ಲು வில் = ಬೀಳುವಂತೆ, ಶರಮ್ சரம் = ಬಾಣಗಳನ್ನು, ತುರನ್ದಾನ್ துரந்தான் = ಪ್ರಯೋಗಿಸಿದವನ, ಶಾರ್ கள் = ಶಿರುವಡಿಗಳು, ಇರಣ್ಡುಮ್ இரண்டும் = ಎರಡನ್ನು, ಆರ್ ஆர் = ಯಾರು, ಶೇಯುವಾರ್ தொழுவார் = ಪೂಜಿಸುತ್ತಾರೋ, ಪಾದಮ್ ಅವೈ பாதம் அவை = (ಅವರ) ಆ ಪಾದಗಳನ್ನು, ಶೇಯುವದು ಅನ್ಱೋ தொழுவது அன்றோ = ಪೂಜಿಸುವುದು ಅಲ್ಲವೇ, ಎನ್ என் = ನನ್ನ, ಶೀರ್ ಶೇಯು ಕೋಲ್ಕಳ್ சீர் கெழு கோள்கள் = ಭಾಗ್ಯವಂತ ಸುಂದರ ಕೋಲುಗಳು, ಶೆಯ್ಯುಮ್ செய்யும் = ಮಾಡುವ, ಶಿಱಪ್ಪು சிறப்பு = ಶ್ರೇಷ್ಠವಾದ ಕೆಲಸ.

ಇಪ್ಪತ್ತು ಕೋಲುಗಳನ್ನು, ಎಲ್ಲಾ ಕಲೆಗಳನ್ನು, ಎರಡು ಕಾಲುಗಳನ್ನು ~~ಬೀಳುವಂತೆ~~ ಎಲ್ಲವನ್ನು ಬೀಳುವಂತೆ ಬಾಣಗಳನ್ನು ಪ್ರಯೋಗಿಸಿದವನ ಎರಡು ಶಿರುವಡಿಗಳನ್ನು ಯಾರು ಪೂಜಿಸುತ್ತಾರೋ, ಅವರ ಆ ಪಾದಗಳನ್ನು ಪೂಜಿಸುವುದು ಅಲ್ಲವೇ ನನ್ನ ಭಾಗ್ಯವಂತ ~~ಸುಂದರ~~ ಕೋಲುಗಳಾ ಮಾಡುವ (43)
ಶ್ರೇಷ್ಠವಾದ ಕೆಲಸ?

ಭಗವಂತನನ್ನು ಪೂಜಿಸುವದಕ್ಕಿಂತಲೂ, ಸ್ವಾಮಿಯ ಭಕ್ತರನ್ನು ಪೂಜಿಸುವುದು, ಅವರ ಪಾದಸೇವೆ ಮಾಡುವುದು ಒಂದು ಭಾಗ್ಯ. ನಮ್ಮ ದೇಹ ಮಾಡಬಲ್ಲದಾದ ಉತ್ತಮ ಕೆಲಸವೇ ಇದು - ಎಂಬುದನ್ನು ಈ ಪಾಶುರದಲ್ಲಿ ಹೇಳಲಾಗಿದೆ.

ಭಗವದ್ಭಕ್ತರ ದಾಸ್ಯ ನಡೆಸುವುದರಿಂದ ಅವರಲ್ಲಿ ನಮಗೆ ಭಕ್ತಿ ಗೌರವಗಳು ಹೆಚ್ಚುತ್ತವೆ. ಮತ್ತು ಅವರು ನಡೆಯುವ ದಾರಿಯನ್ನು ಅನುಸರಿಸುವ ಮನಸ್ಸಾಗುತ್ತದೆ. ಹಾಗೆ ಮಾಡುವುದರಿಂದ ನಮಗೂ ಅವರಂತೆ ಭಗವತ್ಸೇವೆ ಮಾಡುವಂತೆ ಬುದ್ಧಿ ಹುಟ್ಟುತ್ತದೆ. ನಾವೂ ಕ್ರಮೇಣ ಭಕ್ತರೇ ಆಗುತ್ತೇವೆ. ಭಾಗವತ ಸೇವೆಯ ಮಹಿಮೆ ಇದು ಎಂದು ಇಲ್ಲಿ ಹೇಳಲಾಗುತ್ತದೆ.

Garani Srinivasan

ಆಳ್ವಾರರು ಹೇಳುತ್ತಾರೆ: ಅಸಂಖ್ಯ ರಾಕ್ಷಸಯೋಧರ ರಾವಣಾಸುರನ ಹತ್ತು ತಲೆಗಳನ್ನು, ಇಪ್ಪತ್ತು ತೋಳುಗಳನ್ನು, ಎರಡು ಕಾಲುಗಳನ್ನು ತನ್ನ ಬಾಣಗಳಿಂದಲೇ ಕತ್ತರಿಸಿ ಹಾಕಿ ಅವನನ್ನು ನಿಗ್ರಹಿಸಿದ ಪರಮ ಸಮರ್ಥನಾದ ಶ್ರೀರಾಮನ ತಂ ಯಾದ ಭಗವಂತನ ತಿರುವಡಿಗಳನ್ನು ಆಶ್ರಯಿಸಿ, ಭಜಿಸಿ ಪೂಜಿಸುವವರು ಉತ್ತಮ ಭಕ್ತರು. ಅವರ ತಿರುವಡಿಗಳ ಸೇವೆಯನ್ನು ಮಾಡುವುದೇ ಶ್ರೇಷ್ಠವಾದ ಕೆಲಸ. ನನ್ನ ತೋಳುಗಳು ಅದನ್ನು ಮಾಡುವುದು ಎಂದಿಗೆ? ಎಂದು ಭಾಗ್ಯ.

ಭಗವತ್ಸೇವೆಯಷ್ಟೇ ಭಾಗವತ ಸೇವೆಯೂ ಶ್ರೇಷ್ಠ.

44. சிறந்தார்க் கெழுதுணையாம் செங்கண்மால் நாமம்,
மறந்தாரை மானிடமா வையேன், — அறந் தாங்கும்
மாதவனே யென்னும் மனம்படைத்து, மற்றவன்பேர்
ஓதுவதே நாவினா லுள்ளூ.

ಶಿಱನ್ದಾರ್ಕ್ಕೆಳು ತುಣೈಯಾಮ್ ಶೆಙ್ಗಣ್ ಮಾಲ್ ನಾಮಮ್,
ಮಱನ್ದಾರೈ ಮಾನಿಡಮಾ ವೈಯೇನ್, — ಅಱನ್ದಾಙ್ಗುಮ್
ಮಾದವನೇ ಯೆನ್ನುಮ್ ಮನಮ್ ಪಡೈತ್ತು, ಮಱ್ಱವನ್ ಪೇರ್
ಓದುವದೇ ನಾವಿನಾ ಲುಳ್ಳು.

ಶಿಱನ್ದಾರ್ಕ್ಕು சிறந்தார்க்கு = ಶ್ರೇಷ್ಠರಾದ ಭಕ್ತರಿಗೆ (ಭಾಗವತರಿಗೆ) ಎಳು எழு = ಉಜ್ಜೀವನಕ್ಕೆ, ತುಣೈ ಆಮ್ துணை ஆம் = ಸಹಾಯಕವಾಗುತ್ತದೆ, ಶೆಮ್ ಕಣ್ ಮಾಲ್ ನಾಮಮ್ செம் கண் மால் நாமம் = ಕೆಂದಾವರೆಯಂತೆ ಕಣ್ಣುಳ್ಳ ಭಗವಂತನ ನಾಮವು (ನಾಮಗಳು), (ಅವನ್ನು), ಮಱನ್ದಾರೈ மறந்தாரை = ಮರೆತವರನ್ನು, ಮಾನಿಡಮ್ ಆ மானிடம் ஆ = ಮನುಷ್ಯರಾಗಿ, ವೈಯೇನ್ வையேன் = ಭಾವಿಸೆನು, ಅಱಮ್ அறம் = ಧರ್ಮವನ್ನು, ತಾಙ್ಗುಮ್ தாங்கும் = ನಿರ್ವಹಿಸುವವನು (ರಕ್ಷಿಸುವನು), ಮಾದವನೇ மாதவனே = ಮಾಧವನೇ, ಎನ್ನುಮ್ என்னும் = ಎಂಬ, ಮನಮ್ ಪಡೈತ್ತು மனம் படைத்து = ಮನಸ್ಸನ್ನು ಪಡೆದು, ಮಱ್ಱು மற்று = ಅಲ್ಲದೆ, ಅವನ್ ಪೇರ್ அவன் பேர் = ಅವನ ತಿರುನಾಮಗಳನ್ನು, ಓದುವದೇ ஓதுவதே = ಹೇಳುತ್ತಿರುವುದೇ, ನಾವಿನಾಲ್ நாவினால் = ನಾಲಗೆಯಿಂದ, ಉಳ್ಳು உள்ளூ = ಮಾಡುತ್ತಿರು

ಕೆಂದಾವರೆಯಂತೆ ಕಣ್ಣುಳ್ಳ ಭಗವಂತನ ತಿರುನಾಮಗಳು ಶ್ರೇಷ್ಠರಾದ ಭಕ್ತರಿಗೆ/(ಭಾಗವತರಿಗೆ) ಉಜ್ಜೀವನಕ್ಕೆ ಸಹಕಾರಿಯಾಗುತ್ತವೆ. ಅವನ್ನು ಮರೆತವರನ್ನು ಮನುಷ್ಯರೆಂದು ಭಾವಿಸೆನು. ಧರ್ಮವನ್ನು ಸ್ಥಿರಪಡಿಸುವವನು (ರಕ್ಷಕನು) ಮಾಧವನೇ ಎಂಬ ಮನಸ್ಸನ್ನು ಪಡೆದು ಮತ್ತು ಅವನ ತಿರು-ನಾಮಗಳನ್ನು ಹೇಳುತ್ತಿರುವುದನ್ನೇ ನಾಲಗೆಯಿಂದ ಮಾಡಿಸುತ್ತಿರು. (44)

ಈ ಪಾಶುರದಲ್ಲಿ ಆಳ್ವಾರರು ತಮ್ಮ ಮನಸ್ಸಿಗೆ ಉಪದೇಶಿಸುತ್ತಿದ್ದಾರೆ.

ಯಾರು ಶ್ರೇಷ್ಠಮಾನವರೋ ಅವರು ಸ್ವತಃ ಯಾರಿಗೂ ನೇರವಾಗಿ ಬೋಧಿಸುವ ಗೋಜಿಗೆ ಹೋಗುವುದಿಲ್ಲ. ತಾವು ಏನನ್ನು ಬೇರೆಯವರಿಗೆ ಹೇಳಬಯಸುತ್ತಾರೋ ಅದನ್ನು ತಾವೇ ಆಚರಿಸಿ ಇತರರಿಗೆ ಮಾರ್ಗದರ್ಶನ ಮಾಡುತ್ತಾರೆ. ಆಳ್ವಾರರು ಈ ದರ್ಜೆಗೆ ಸೇರಿದವರು ಎಂಬುದಕ್ಕೆ ಇದು ನಿದರ್ಶನ.

ಆಳ್ವಾರರು ಹೇಳುತ್ತಾರೆ:- ಮನಸ್ಸೇ, ಶ್ರೇಷ್ಠರಾದ ಭಕ್ತರು (ಭಾಗವತರು) ಭಗವಂತನ ತಿರುನಾಮಗಳನ್ನು ತಮ್ಮ ಆತ್ಮೋದ್ಧಾರಕ್ಕೆ ಸಹಕಾರಿಯೆಂದು ತಿಳಿದು ಅವುಗಳನ್ನು ಎಡೆಬಿಡದಂತೆ ಅನುಸಂಧಿಸುತ್ತಾರೆ. ಭಗವಂತನ ದಿವ್ಯನಾಮಗಳನ್ನು ಹೇಳುವುದು ಆತ್ಮೋನ್ನತಿಗೆ ಸುಲಭೋಪಾಯ. ಈ ವಿಷಯವನ್ನು ಮರೆಯುವವರನ್ನು ನಾನು ಮನುಷ್ಯರೆಂದು ಪರಿಗಣಿಸುವುದಿಲ್ಲ. ಆದ್ದರಿಂದ, ಮನಸ್ಸೇ, ಧರ್ಮ ರಕ್ಷಕನು ಧರ್ಮಸಂಸ್ಥಾಪಕನು ಮಾಧವನೇ (ಲಕ್ಷ್ಮೀನಾಥನೇ) ಎಂಬ ಭಾವನೆಯನ್ನು ಚೆನ್ನಾಗಿ ತಿಳಿ; ಮತ್ತು ಅವನ ದಿವ್ಯನಾಮಗಳನ್ನು ಯಾವಾಗಲೂ ಹೇಳುತ್ತಿರುವುದನ್ನೇ ನಿನ್ನ ನಾಲಗೆಗೆ ಉಪದೇಶಿಸು ಮತ್ತು ಅದರಂತೆ ಬದಲ ಮಾಡಿಸು.

45. உளதென் றிறுமாவா ருண்டில் லையென்று,
தளர்தலதனருகும் சாரார், - அளவரிய
வேதத்தான் வேங்கடத்தான் விண்ணோர் முடி தோயும்,
பாதத்தான் பாதம் பயின்று

ಉಳದೆನ್ ಱಿಱುಮಾವಾರುಣ್ಡಿಲ್ಲೈಯೆನ್ಱು,
ತಳರ್ತಲದನರುಗುಮ್ ಶಾರಾರ್, - ಅಳವರಿಯ
ವೇದತ್ತಾನ್ ವೇಙ್ಗಡತ್ತಾನ್ ವಿಣ್ಣೋರ್ ಮುಡಿದೋಯುಮ್,
ಪಾದತ್ತಾನ್ ಪಾದಮ್ ಪಯಿನ್ಱು.

ಉಳ್ಳದು ಎನ್ರೆಯು ಉಣರ್ದು ನಾನ್ರು = ಇದೆ ಎಂದು, ಇಯುಮ
ಆವಾರ್ ಇರುಮ್ ಆವಾರ್ = ಹೆಮ್ಮೆ ಪಡುವುದಿಲ್ಲ, ಉಣ್ಣು ಇಲ್ಲೆತೆ
ಎನ್ರೆಯು ಉಣ್(ರ್) ಇಲ್ಲ ನಾಣ್ರು = ಇದ್ದದ್ದು ಇಲ್ಲ ಎಂದು,
ಕಳ್ಳರ್ಕಳ್ ಅದನ್ ಕುಣಾರ್ಕಳ್ ಅಕನ್ = ವೃದ್ಧಿ(ದುಃಖ)ಯನ್ನು,
ಅರುಳುಮ್ ಅಗುಕುಮ್ = ಅಂಟನ್ನು, ಶಾರಾರ್ ಶಾರಾರ್ = ಸೇರು
ವುದಿಲ್ಲ, ಅಳವು ಅಂಯ ಅಣಾವು ಅರಿಯ = ಅಳತೆಗೆ ಮೀರಿದ,
ವೇದತ್ತಾನ್ ವೇದಕ್ಕತ್ತಾನ್ = ವೇದಗಳಿಂದ ಹೇಳಲ್ಪಡುವವನು,
ವೇಙ್ಗಡತ್ತಾನ್ ವೆಙ್ಗಡತ್ತಾನ್ = ತಿರುವೇಂಕಟಗಿರಿಯಲ್ಲಿ
ನೆಲಸಿರುವವನು, ವಿಣ್ಣೋರ್ ಶಿರಣ್ ಶೋರ್ = ಪರಮಪದವಾಸಿಗಳ,
ಮುಡಿ ಶೇಲೆಯುಮ್ ಮುಡಿ ತೋಯುಮ್ = ತಲೆಗಳನ್ನು ಸ್ಪರ್ಶಿಸುವ,
ಪಾದತ್ತಾನ್ ಪಾದತ್ತಾನ್ = ತಿರುವಡಿಗಳುಳ್ಳವನು, ಅವನ,
ಪಾದಮ್ ಪಾದಮ್ = ತಿರುವಡಿಗಳನ್ನು, ಪಯಿನ್ರೆಯು ಪಯಿಣ್ರು =
ಆಶಿಸಿ ಸೇವೆ ಮಾಡುವವರು.

ಅಳತೆಗೆ ಮೀರಿದ ವೇದಗಳಿಂದ ಹೇಳಲ್ಪಡುವವನು, ತಿರುವೇಂಕಟಗಿರಿಯಲ್ಲಿ ನೆಲಸಿರುವವನು, ಪರಮಪದವಾಸಿಗಳ ತಲೆಗಳನ್ನು ಸ್ಪರ್ಶಿಸುವ ತಿರುವಡಿಗಳುಳ್ಳವನು ಆದ ಭಗವಂತನ ತಿರುವಡಿಗಳನ್ನು ಆಸೆಯಿಂದ ಸೇವೆ ಮಾಡುವವರು, ಇದೆ ಎಂದು ಹೆಮ್ಮೆ ಪಡುವುದಿಲ್ಲ. (45)
ಇದ್ದದ್ದು ಇಲ್ಲವೆಂದು ವೃದ್ಧಿಯ ಅಂಟನ್ನು ಮುಟ್ಟುವುದಿಲ್ಲ.

ಒಂದನೇ ಪಾಶುರದಲ್ಲಿ ಹೇಳಿದ ಭಗವದ್ಭಕ್ತರ ಲಕ್ಷಣಗಳನ್ನು ಇಲ್ಲಿಯೂ ಮುಂದುವರಿಸಲಾಗುತ್ತಿದೆ.

ಆಳ್ವಾರರು ಹೇಳುತ್ತಾರೆ: ವೇದಗಳು ಲೆಕ್ಕವಿಲ್ಲದಷ್ಟು. ಅವುಗಳೆಲ್ಲವುಗಳಿಂದಲೂ ಪ್ರಶಂಸಿಸಲ್ಪಡುವವನು ಭಗವಂತ. ಲೋಕದ ಜನರನ್ನು ಉದ್ಧರಿಸುವುದಕ್ಕಾಗಿ, ಅವನೇ, ಅರ್ಚಾವತಾರಿಯಾಗಿ, ತಿರುವೇಂಕಟಗಿರಿಯಲ್ಲಿ ನೆಲಸಿದ್ದಾನೆ. ಪರಮಪದವಾಸಿಗಳು ಅವನ ತಿರುವಡಿಗಳ ಪೂರ್ಣಾಶ್ರಯ ಪಡೆದವರು. ಅವರಾಗಿ ಬಂದ ತಿರುಮಲೆ ಕ್ಷೇತ್ರಕ್ಕೆ ಬಂದು, ಭಗವಂತನನ್ನು ದರ್ಶಿಸಿ, ಅವನ ಪಾದಗಳಿಗೆರಗಿ ಹೋಗುತ್ತಾರೆ. ಕೃಪಾನಿಧಿಯಾದ ಭಗವಂತನ ತಿರುವಡಿಗಳಿಗೆ ಭಕ್ತಿಯಿಂದಲೂ ಆಸೆಯಿಂದಲೂ ನಮಸ್ಕರಿಸಿ, ಪೂಜಿಸುವವರು ಯಾವಾಗಲೂ ಸಮಾಧಾನ ಹೊಂದುತ್ತಾರೆ. ಅವರಿಗೆ ಐಶ್ವರ್ಯ ಇದ್ದರೂ ಅದು ತಮಗೆ ಇದೆ ಎಂದು ಹೆಮ್ಮೆಪಡುವುದಿಲ್ಲ. ಒಂದು ವೇಳೆ ಅದು ಹೋದರೆ, ಇದ್ದದ್ದು

Garani Srinivasan

ಇಲ್ಲವಾಯಿತಲ್ಲ ಎಂದು ವ್ಯಥೆ ಪಡುವುದಿಲ್ಲ. ಅವರ ಮನಸ್ಸು ಸದಾ ನೆಮ್ಮದಿಯಿಂದಿರುತ್ತದೆ.

46. பயின்றதரங்கம் திருக்கோட்டி, பன்னாள்
பயின்றதுவும் வேங்கடமே, # பன்னாள் — பயின்ற
தணி திகழும் சோலை யணிநீர் மலையே,
மணி திகழும் வண்தடக்கை மால்

ಪಯಿನ್ರದರಙ್ಗಮ್ ತಿರುಕ್ಕೋಟ್ಟಿ, ಪನ್ನಾಳ್
ಪಯಿನ್ರದುವುಮ್ ವೇಙ್ಗಡಮೇ, ಪನ್ನಾಳ್ – ಪಯಿನ್ರ
ದಣಿ ತಿಗಳುಮ್ ಶೋಲೈ ಯಣಿ ನೀರ್ ಮಲೈಯೇ,
ಮಣಿ ತಿಗಳುಮ್ ವಣ್ ತಡಕ್ಕೈ ಮಾಲ್.

ಪಯಿನ್ರದು பயின்றது = ಸೇವೆಗಾಗಿ ಸಿದ್ಧವಾಗಿರುವುದು, ಅರಙ್ಗಮ್ அரங்கம் = ಶ್ರೀರಂಗದಲ್ಲಿ, ತಿರುಕ್ಕೋಟ್ಟಿ திருக்கோட்டி = ತಿರುಕ್ಕೋಟ್ಟಿಯೂರಲ್ಲಿ, ಪಲ್ ನಾಳ್ பல் நாள் = ಬಹುಕಾಲದಿಂದಲೂ, ಪಯಿನ್ರದುವುಮ್ பயின்றதுவும் = ಸೇವೆಗಾಗಿ ಸ್ಥಿರವಾಗಿರುವುದು, ತಿರುವೇಙ್ಗಡಮೇ திருவேங்கடமே = ತಿರುವೆಂಕಟಗಿರಿಯಲ್ಲಿಯೇ, ಪಲ್ ನಾಳ್ பல் நாள் = ಬಹುಕಾಲದಿಂದಲೂ, ಪಯಿನ್ರದು பயின்றது = ಸೇವೆಗಾಗಿ ಸ್ಥಿರವಾಗಿರುವುದು, ಅಣಿ அணி = ಸೌಂದರ್ಯವು, ತಿಗಳುಮ್ திகழும் = ಬೆಳಗುತ್ತಿರುವ, ಶೋಲೈ சோலை = ಶೋಲೈ ಮಲೈಯಲ್ಲಿ, ಅಣಿ அணி = ಸುಂದರವಾದ, ನೀರ್ ಮಲೈಯೇ நீர் மலையே = ತಿರುನೀರ್ ಮಲೈಯಲ್ಲಿ, ಮಣಿ மணி = ಇಂದ್ರನೀಲ ಮಣಿ, ತಿಗಳುಮ್ திகழும் = ಹೊಳೆಯುವಂತಿರುವ, ವಣ್ வண் = ಉದಾರಿಯಾದ, ತಡಕ್ಕೈ தடக்கை = ನೀಳ್ಗೈಯುಳ್ಳ, ಮಾಲ್ மால் = ಸರ್ವೇಶ್ವರನು.

ಇಂದ್ರನೀಲ ಮಣಿಯಂತೆ ಹೊಳೆಯುತ್ತಿರುವ ಔದಾರ್ಯ ತುಂಬಿದ ನೀಳ್ಗೈಯುಳ್ಳ ಸರ್ವೇಶ್ವರನು ಶ್ರೀರಂಗದಲ್ಲಿ, ತಿರುಕ್ಕೋಟ್ಟಿಯೂರಿನಲ್ಲಿ, ತಿರುವೆಂಕಟಗಿರಿಯಲ್ಲಿ, ಸೌಂದರ್ಯವು ಬೆಳಗುತ್ತಿರುವ ಶೋಲೈಮಲೈಯಲ್ಲಿ, ಮತ್ತು ಸೊಬಗಿನ ತಿರುನೀರ್ ಮಲೈಯಲ್ಲಿ ಬಹುಕಾಲದಿಂದಲೂ ಭಕ್ತರ ಸೇವೆಗಾಗಿ ಸ್ಥಿರವಾಗಿ ನೆಲೆಸಿದ್ದಾನೆ. (46)

ಇಲ್ಲಿ ನಾಲ್ಕು ಪವಿತ್ರ ಕ್ಷೇತ್ರಗಳ ಹೆಸರನ್ನು ಮಾತ್ರ ಎತ್ತಿಹೇಳಲಾಗಿದೆ. ಇವು ನಿದರ್ಶನಕ್ಕೆ ಮಾತ್ರವೇ. ಇತರ ದಿವ್ಯ ಕ್ಷೇತ್ರಗಳು

ಲೆಕ್ಕವಿಲ್ಲದಷ್ಟು ದೇಶದ ನಾನಾ ಕಡೆಗಳಲ್ಲಿ ಹರಡಿವೆ.

ಆಳ್ವಾರರು ಹೇಳುತ್ತಾರೆ: ಭಗವಂತನ ಕೃಪೆ, ಔದಾರ್ಯಗಳು ಎಷ್ಟು ಅಪಾರ! ದೇಶದ ಮೂಲೆ ಮೂಲೆಗಳಲ್ಲೂ ಹರಡಿರುವ ಭಕ್ತರು ತನ್ನನ್ನು ಸುಲಭವಾಗಿ ಕಂಡುಕೊಳ್ಳಲೆಂದು, ಭಕ್ತಿಯ ಸೇವೆಯನ್ನರ್ಪಿಸಲೆಂದು, ಭಗವಂತನು ಬಹು ಹಿಂದಿನಿಂದಲೂ, ಅರ್ಚಾವತಾರಿಯಾಗಿ, ದಿವ್ಯಸುಂದರ ಮೂರ್ತಿಯಾಗಿ ದೇಶದ ನಾನಾ ಕಡೆಗಳಲ್ಲಿ - 'ತಿರುಪತಿ'ಗಳಲ್ಲಿ, ಅಲ್ಲಿನ ಸುಪ್ರಸಿದ್ಧ ದೇವಾಲಯಗಳಲ್ಲಿ ಮೆರೆಯುತ್ತಿದ್ದಾನೆ. ಅವನ ದಿವ್ಯ ಸಂದರ್ಶನವನ್ನು ಪಡೆದು, ಕಣ್ಣುಗಳಿಂದ ಆನಂದಿಸಿ, ಭಕ್ತಿಯ ಸೇವೆಯನ್ನು ಸಲ್ಲಿಸಿ, ಕೃತಾರ್ಥರಾಗಬೇಕಷ್ಟೆ.

47. மாலை யரியுருவன் பாதமலரணிந்து,
காலை தொழுதெழுமின் கைகோலி, — ஞாலம்
அளந்திடந்துண்டுமிழ்ந்த வண்ணலை மற்றல்லால்,
உளங்கிடந்த வாற்றா லுணர்ந்து.

ಮಾಲೈ ಯರಿ ಯುರುವನ್ ಪಾದಮಲರಣಿನ್ದು,
ಕಾಲೈ ತೊಳುದೆಳುಮಿನ್ ಕೈಕೋಲಿ, - ಞಾಲಮ್
ಅಳನ್ದಿಡನ್ದುಣ್ಡುಮಿಳನ್ದ ವಣ್ಣಲೈ ಮಱ್ಱಲ್ಲಾಲ್,
ಉಳಙ್ಗಿಡನ್ದ ವಾಱ್ಱಾಲುಣರ್ನ್ದು.

ಮಾಲೈ மாலை = ಸಂಜೆಯಲ್ಲಿ, ಅರಿ ಉರುವನ್ அரி உருவன் = ನರಹರಿಯ ರೂಪವನ್ನು ತಳೆದವನ, ಪಾದಮ್ பாதம் = ತಿರುವಡಿಗಳನ್ನು, ಮಲರ್ மலர் = ಹೂಗಳಿಂದ, ಅಣಿನ್ದು அணிந்து = ಅಲಂಕರಿಸಿ, ಕಾಲೈ காலை = ಬೆಳಗ್ಗೆ, ತೊಳುದು தொழுது = ಪೂಜಿಸಿ, ಎಳುಮಿನ್ எழுமின் = ಉದ್ಧಾರಗೊಳ್ಳಿರಿ, ಕೈಕೋಲಿ கைகோலி = ಕೈಮುಗಿದು, ಞಾಲಮ್ ஞாலம் = ಭೂಮಿಯನ್ನು, ಅಳನ್ದು அளந்து = ಅಳೆದು, ಇಡನ್ದು இடந்து = ಅಗೆದು ಮೇಲೆತ್ತಿ, ಉಣ್ಡು உண்டு = ಕಬಳಿಸಿ, ಉಮಿಳನ್ದ உமிழ்ந்த = ಹೊರಹಾಕಿದ, ಅಣ್ಣಲೈ அண்ணலை = ಸರ್ವಸ್ವಾಮಿಯನ್ನು, ಮಱ್ಱು ಅಲ್ಲಾಲ್ மற்று அல்லால் = ಮತ್ತಲ್ಲದೆ, ಉಳಮ್ உளம் = ಅಂತರಂಗದಲ್ಲಿ, ಕಿಡನ್ದ கிடந்த = ನೆಲೆಸಿರುವ, ಆಱ್ಱಾಲ್ ஆற்றால் = ಪರಮ ಸಾಮರ್ಥ್ಯದಿಂದ, (ಪ್ರಯುಕ್ತದಿಂದ) ಉಣರ್ನ್ದು உணர்ந்து = ಅರಿತುಕೊಂಡು.

Gayani Srinivasan

ಭೂಮಿಯನ್ನು ಅಳೆದು, ಗೆದ್ದು, ಉಂಡು, ಉಗುಳಿದ (ಹೊರತೆಗೆದ) ಸರ್ವಸ್ವಾಮಿಯನ್ನು, ಮತ್ತಲ್ಲದೆ ಅಂತರಂಗದಲ್ಲಿ ನೆಲೆಸಿರುವವನನ್ನು ~~ಸಂಜೆ~~ ~~ಯಲ್ಲಿ ನರಹರಿಯ ರೂಪವನ್ನು ತಳೆ~~ ಪ್ರಯತ್ನದಿಂದ ಅರಿತುಕೊಂಡು, ಸಂಜೆಯಲ್ಲಿ ನರಹರಿಯ ರೂಪವನ್ನು ತಳೆದವನ ತಿರುವಡಿಗಳನ್ನು ಹೊಗಳಿರಿ, (47)
ಅಲಂಕರಿಸಿ, ಪೂಜಿಸಿ, ಸ್ತುತಿಮಾಡಿ, ಉದ್ಧಾರಗೊಳ್ಳಿರಿ.

ಹಿಂದಿನ ಪಾಶುರದಲ್ಲಿ ಭಗವಂತನನ್ನು ಭಕ್ತರು ದೇಶದ ನಾನಾ ಭಾಗಗಳಲ್ಲಿ ಹರಡಿರುವ ಪವಿತ್ರ ಕ್ಷೇತ್ರಗಳಲ್ಲಿ ಕಂಡು, ಪೂಜಿಸಿ, ಉದ್ಧಾರಗೊಳ್ಳಬೇಕೆಂದು ಹೇಳಲಾಯಿತು.

ಈ ಪಾಶುರದಲ್ಲಿ ಭಗವಂತನ ಸರ್ವರಕ್ಷಕತ್ವವನ್ನು ಕುರಿತು ಸ್ವಾರಸ್ಯವಾಗಿ ಹೇಳಲಾಗಿದೆ.

"ಞಾಲಮ್ ಅಳನ್ದಿಡನ್ದುಣ್ಡುಮಿಳನ್ದ ವಣ್ಣಲೈ" — ಭಗವಂತನ ನಾಲ್ಕು ವಿಚಿತ್ರವಾದ ಮತ್ತು ಅದ್ಭುತವಾದ ಕಾರ್ಯಗಳನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ: ಮೊದಲನೆಯದು ಭೂಮಿಯನ್ನು ಅಳೆದುಕೊಂಡ ವಿಷಯ: ಬಲಿಚಕ್ರವರ್ತಿಯು ಹೆಮ್ಮೆಯನ್ನು ಹೊಂದಲು ಅವನನ್ನು ದಂಡಿಸುವುದಕ್ಕಾಗಿಯೇ ಭಗವಂತನು ವಾಮನ ವಟುವಾಗಿ ಬಲಿಚಕ್ರವರ್ತಿಯ ಯಾಗಶಾಲೆಗೆ ಬಂದನು. ತನಗೆ ಮೂರು ಹೆಜ್ಜೆಗಳ ನೆಲವನ್ನು ಕೊಡೆಂದು ಅವನನ್ನು ಯಾಚಿಸಿದನು. ಅದನ್ನು ಅವನಿಂದ ಪಡೆದುಕೊಂಡ ಕೂಡಲೇ ಭಗವಂತನು ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದು ಹೆಜ್ಜೆಯನ್ನು ಭೂಮಂಡಲವನ್ನೆಲ್ಲಾ ವ್ಯಾಪಿಸಿ, ಅದನ್ನು ಅಳೆದುಕೊಂಡುಬಿಟ್ಟನು. ಎರಡನೆಯದು ಭೂಮಿಯನ್ನು ಗೆದ್ದದ್ದು: ಹಿರಣ್ಯಾಕ್ಷನು ಭೂಮಿಯನ್ನು ಕದ್ದೊಯ್ದು ಕಡಲಲ್ಲಿ ಅಡಗಿಸಿಕೊಂಡಾಗ, ಭಗವಂತನು ಮಹಾವರಾಹನಾಗಿ ಅವತರಿಸಿ, ಕಡಲನ್ನು ಹೊಕ್ಕು, ಹಿರಣ್ಯಾಕ್ಷನನ್ನು ಕೊಂದುಹಾಕಿ, ಭೂಮಿಯನ್ನು ತನ್ನ ಒಂದು ಕೋರೆಹಲ್ಲಿನಿಂದ ಹಿಡಿದು ಮೇಲಕ್ಕೆತ್ತಿ ಅದರ ಸ್ಥಾನದಲ್ಲಿ ನಿಲ್ಲಿಸಿದನು. ಮೂರನೆಯದು ಭೂಮಿಯನ್ನುಂಡ ವಿಷಯ: ಪ್ರಳಯಕಾಲ ಬಂದಾಗ, ಭಗವಂತನು ಭೂಮಿಯನ್ನು ಒಂದು ಗುಕ್ಕಿಗೆ ಕಬಳಿಸಿ, ತನ್ನ ಹೊಟ್ಟೆಯಲ್ಲಿಟ್ಟುಕೊಂಡು ಮತ್ತೊಂದು ಸೃಷ್ಟಿಸಮಯ ಬರುವವರೆಗೆ ಕಾಪಾಡಿದನು. ಕಡೆಯದಾಗಿ, ಭೂಮಿಯನ್ನು ಉಗುಳಿದ ವಿಷಯ: ತಾನು ಹೊಟ್ಟೆಯಲ್ಲಿಟ್ಟುಕೊಂಡು ಬಹುಕಾಲ ಕಾಪಾಡಿದ ಭೂಮಿಯನ್ನು ಭಗವಂತನು, ಸೃಷ್ಟಿಕಾಲ ಬಂದಕೂಡಲೇ ಯಥಾಸ್ಥಿತಿ ಅದನ್ನು ಹೊರತೆಗೆದನು.

ಈ ಎಲ್ಲ ಕಾರ್ಯಗಳಲ್ಲೂ ಭಗವಂತನು ಭೂಮಿಯನ್ನೂ ಅದರಲ್ಲಿನ

Garani Srinivasan

ಚರಾಚರ, ಚೇತನಾಚೇತನ ವಸ್ತುಗಳನ್ನೆಲ್ಲಾ ಸಂರಕ್ಷಿಸಿದನೆಂಬುದು ಮುಖ್ಯ.

"ಮಾಲ್ತ ಅಂಯುರುವನ್" — ಸಂಜೆಯ ಸಮಯದಲ್ಲಿ ಭಗವಾನ್ತನು ನರಸಿಂಹರೂಪವನ್ನು ತಳೆದ ವಿಷಯ ಇದು. ಹಿರಣ್ಯಕಶಿಪುವೆಂಬ ರಾಕ್ಷಸನು, ತನ್ನ ಮಗನೂ ಆದ ಪ್ರಹ್ಲಾದನನ್ನು ಬಹಳಾ ಹಿಂಸಿಸುತ್ತಿದ್ದನ್ನು ತಪ್ಪಿಸುವುದಕ್ಕಾಗಿಯೂ, ತಾನು ಸರ್ವವ್ಯಾಪಕನೆಂದೂ, ಭಕ್ತರು ಎಲ್ಲಿ ಬಯಸಿದರಲ್ಲಿ ಕಾಣುವನೆಂದೂ ತೋರಿಸುವುದಕ್ಕಾಗಿಯೂ ಭಗವಂತನು ನರಸಿಂಹ ಅವತಾರವನ್ನೆತ್ತಿದ್ದು. ಇಲ್ಲಿಯೂ ಸಹ ಭಗವಂತನ ರಕ್ಷಕತ್ವವನ್ನು ತೋರಿಸಲಾಗಿದೆ.

ಭಗವಂತನು ಎಲ್ಲರ ಅಂತರ್ಯಾಮಿಯಾಗಿದ್ದುಕೊಂಡು ಎಲ್ಲರನ್ನು ರಕ್ಷಿಸುವ ಭಾರವನ್ನು ಹೊತ್ತಿದ್ದಾನೆಂಬುದು ಸುಂದರವಾದ ವಿಷಯ. ಎಲ್ಲ ತಿಂತಲೂ ತಪ್ಪಬಾರದು.

ಆಳ್ವಾರರು ಹೇಳುತ್ತಾರೆ: ಜನರೇ, ಸರ್ವರಕ್ಷಕನಾದ ಭಗವಂತನು ಬ್ರಹ್ಮಾಂಡವನ್ನೇ ರಕ್ಷಿಸುವ ಹಾಗೆ, ಪ್ರತಿಯೊಬ್ಬನ ಅಂತರಂಗದಲ್ಲಿ ನೆಲಸಿ ರಕ್ಷಿಸುತ್ತಾನೆಂಬುದನ್ನು ಚೆನ್ನಾಗಿ ಅರಿತುಕೊಂಡು, ಅವನ ತಿರುವಡಿಗಳನ್ನು ಹೂವುಗಳಿಂದ ಅಲಂಕರಿಸಿ, ಅರ್ಚಿಸಿ, ಪೂಜಿಸಿ, ಉದ್ಧಾರಗೊಳ್ಳಿರಿ.

48. உணர்ந்தாய் மறைநான்கும் ஓதினாய் நீதி,
மணந்தாய் மலர்மகள் தோள் மாலே, — மணந்தாய் போய்
வேயிருஞ் சாரல் வியலிரு ஞாலஞ்சூழ்,
மாயிருஞ் சோலை மலை.

ಉಣರ್ನ್ದಾಯ್ ಮರೈನಾನ್ಗುಮ್ ಓದಿನಾಯ್ ನೀದಿ,
ಮಣನ್ದಾಯ್ ಮಲರ್ ಮಗಳ್ ತೋಳ್ ಮಾಲೇ, — ಮಣನ್ದಾಯ್ ಪೋಯ್
ವೇಯಿರುಂ ಶಾರಲ್ ವಿಯಲಿರು ಞಾಲಂ ಶೂಳ್,
ಮಾಯಿರುಂ ಶೋಲೈ ಮಲೈ.

ಮಾಲೇ மாலே = ಸರ್ವೇಶ್ವರನೇ, ಮರೈ ನಾನ್ಗುಮ್ மறை நான்கும் = ನಾಲ್ಕು ವೇದಗಳನ್ನೂ, ಉಣರ್ನ್ದಾಯ್ உணர்ந்தாய் = ತಿಳಿದವನೇ, (ನೀನು) ನೀದಿ ಓದಿನಾಯ್ (நீதி) ஓதினாய் = ಅವುಗಳನ್ನು ಅರಿತುಕೊಳ್ಳಲು ಬೇಕಾದ ಪ್ರಮಾಣಗಳನ್ನು ಕೃಪೆ ಮಾಡಿದೆ, ಮಲರ್ ಮಗಳ್ ತೋಳ್ மலர் மகள் தோள் = ಹೂವಿನಲ್ಲಿ ಹುಟ್ಟಿದವಳ ತೋಳುಗಳನ್ನು (ತಾಯಿಯನ್ನು)

Garani Srinivasan

ಮಣಾನ್ವಾಯ್ ಮರಾಂಗಾಯ್ = ಇಡಿದ (ಮಡುವಿಯಾದ), ವೇಲಯ್ ಇರುಮಾ
ದೆಯ್ இரும் = ಬಿದಿರು ಮೆಳೆ ತುಂಬಿರುವ, ಶಾರಲ್ ಚಾರಲ್ = ಬೆಟ್ಟದ
ತಪ್ಪಲಿನಿಂದಲೂ, ವಿಯಲ್ ವಿಯಲ್ = ವಿಚಿತ್ರವಾದ (ಅದ್ಭುತವಾದ), ಇಗಾಲಂ
ಞಾಲಂ = ನೆಲದಿಂದಲೂ, ಶೂಲರ್ ಶೂழ் = ಸುತ್ತುವರಿದಿರುವ, ಮಾ ಇರುಮಾ
ಶೋಲೈ ಮಲೈ ಮಾ இரும் ಶೋಲೈ ಮಲೈ = ಭಗವಂತನು (ದಿವ್ಯ
ರಕ್ಷಕನಾದ) ಇರುವ ಶೋಲೈ ಮಲೈ ಕ್ಷೇತ್ರದಲ್ಲಿ, ಮಣಾನ್ವಾಯ್ ಮರಾಂಗಾ
ಯ್ = ಆಶಿಸಿ ನೆಲಸಿರುವೆ.

ಸರ್ವೇಶ್ವರನೇ, ನಾಲ್ಕು ವೇದಗಳನ್ನು ತಿಳಿದವನು ನೀನು. ಅವುಗಳನ್ನು ಅರಿತುಕೊಳ್ಳಲು ಬೇಕಾದ ಷಡಂಗಗಳನ್ನು ಕೃಪೆಮಾಡಿದೆ. ಹೂವಿನಲ್ಲಿ ಹುಟ್ಟಿದವಳ ಕೈಹಿಡಿದೆ. ಬಿದಿರು ಮೆಳೆ ತುಂಬಿರುವ ಬೆಟ್ಟದ ತಪ್ಪಲಿನಿಂದಲೂ, ವಿಚಿತ್ರವಾದ (ಅದ್ಭುತವಾದ) ನೆಲದಿಂದಲೂ ಸುತ್ತುವರಿದಿರುವ (48)
ಮಾಲಿರುಂಜೋಲೈ ಮಲೈ ಕ್ಷೇತ್ರದಲ್ಲಿ ಆಶೆಯಿಂದ ನೆಲಸಿರುವೆ.

ಭಗವಂತನ ಕೃಪಾ ವೈಶಿಷ್ಟ್ಯವನ್ನು ಇಲ್ಲಿ ವಿವರಿಸಲಾಗಿದೆ.

"ಉಣರ್ನ್ದಾಯ್ ಮರುತ್ತಿನ್ ನಾನ್ಮರೈ" — ಆದಿಯಲ್ಲಿ ಭಗವಂತನು ತನ್ನ ನಾಭಿ ಕಮಲದಲ್ಲಿ ಚತುರ್ಮುಖ ಬ್ರಹ್ಮನನ್ನು ಸೃಷ್ಟಿಸಿದನು. ಅವನಿಗೆ ಸೃಷ್ಟಿಕಾರ್ಯ ನಡೆಸುವುದಕ್ಕಾಗಿ, ವೇದಗಳ ರೂಪದಲ್ಲಿ ಜ್ಞಾನವನ್ನು ಬೋಧಿಸಿದನು.

"ನೀಟಿ ಮಣಾನ್ವಾಯ್" — ವೇದಗಳನ್ನು ಅರಿತುಕೊಳ್ಳುವುದಕ್ಕೆ ಸಾಧನಗಳಾದ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ ಎಂಬ ಆರು ವೇದಾಂಗಗಳನ್ನು ಭಗವಂತನೇ ಕೃಪೆಮಾಡಿದನು.

"ಮಣಾನ್ವಾಯ್ ಮಲರ್ ಮಗಳ್ ಶೇರ್ಲ್" — ಕ್ಷೀರ ಸಮುದ್ರವನ್ನು ದೇವಾಸುರರಿಂದ ಭಗವಂತನು ಕಡೆಯಿಸಿದಾಗ, ~~ಅದರಲ್ಲಿ~~ ಅಂದು ಹುಟ್ಟಿದ ಅನೇಕ ಶ್ರೇಷ್ಠ ವಸ್ತುಗಳ ಪೈಕಿ, ಸುಂದರವಾದ ಕಮಲದ ಹೂವಿನಲ್ಲಿ ಲಕ್ಷ್ಮೀದೇವಿ ಉದ್ಭವಿಸಿದಳು. ಆಕೆ ಸರ್ವೇಶ್ವರನಾದ ಶ್ರೀಮನ್ನಾರಾಯಣನನ್ನು ವರಿಸಿದಳು.

"ವೇಯಿರುಮಾ ಶಾರಲ್ ವಿಯಲಿರುಮಾ ಞಾಲಮಾ ಶೂಳ್" — ತಿರುಮಾಲಿರುಂಜೋಲೈ ಮಲೈ ಕ್ಷೇತ್ರದ ವೈಭವವನ್ನು ಇದು ವರ್ಣಿಸುವುದು. ಬೆಟ್ಟದ ತಪ್ಪಲಲ್ಲಿ ಬಿದಿರು ಮೆಳೆಗಳು ತುಂಬಿ, ದಟ್ಟ ಪೊದೆಗಳು ಸುಲಭವಲ್ಲದ್ದಾಗಿ ಮಾಡಿವೆ. ಆದರೆ, ಬೆಟ್ಟದ ಮೇಲೆ, ಭಗವತ್ಸನ್ನಿಧಿಯನ್ನು

Garani Srinivasan

ಪ್ರಪಂಚಕ್ಕೆ ಮೂಡುವುದಕ್ಕಾಗಿ, ಮಟ್ಟವಾದ ನೆಲವಿದೆ.

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನೇ, ನೀನು ಚತುರ್ಮುಖ ಬ್ರಹ್ಮನಿಗೆ ನಾಲ್ಕು ವೇದಗಳನ್ನು ಉಪದೇಶಿಸಿ, ಅವನಿಂದ ಸೃಷ್ಟಿ ಕಾರ್ಯವನ್ನು ಮಾಡಿಸಿದೆ. ಆಮೇಲೆ ವೇದಗಳನ್ನು ಎಲ್ಲರಿಗಾಗಿ ಕೃಪೆಮಾಡಿದೆ. ಅರ್ಥಗಳನ್ನು ಸುಲಭವಾಗಿ ಅರಿತುಕೊಳ್ಳುವಂತೆ, ಅವಕ್ಕೆ ಆರು ವೇದಾಂಗಗಳನ್ನು ಕೃಪೆಮಾಡಿದೆ. ಸಕಲ ಸೌಭಾಗ್ಯಗಳಿಗೂ ಒಡೆಯಳೆನಿಸಿದ ಲಕ್ಷ್ಮೀದೇವಿಯೂ ನಿನ್ನನ್ನು ವರಿಸಿದಳು. ಭಕ್ತರಿಗೆ ಜ್ಞಾನವನ್ನು ನೀಡುವ ಸಂಪತ್ತನ್ನು ದಯೆ ನೀಡುವುದಕ್ಕಾಗಿ ತಿರುಮಾಲಿರುಂಜೋಲೈ ಮುಂತಾದ ದಿವ್ಯಕ್ಷೇತ್ರಗಳಲ್ಲಿ ಬಂದು ನೆಲಸಿದೆ. ನಿನ್ನ ಔದಾರ್ಯ ಎಷ್ಟು ಅಪಾರ!

49. மலையேழும் மாநிலங்க ளேழு மதிர,
குலைசூழ் குரைகடல்க ளேழும், — முலைசூழ்ந்த
நஞ்சுரத்துப் பெண்ணை நவின்றுண்ட நாவனென்று,
அஞ்சாதென் னெஞ்சே யழை.

ಮಲೈಯೇೞುಮ್ ಮಾನಿಲಙ್ಗಳೇೞು ಮದಿರ,
ಕುಲೈಶೂೞ್ ಕುರೈಕಡಲ್‌ಗಳೇೞುಮ್, — ಮುಲೈಶೂೞ್‌ನ್ದ
ನಂಜುರತ್ತುಪ್ ಪೆಣ್ಣೈ ನವಿನ್ರುಣ್ಡ ನಾವನೆನ್ರು,
ಅಂಜಾದೆನ್ ನೆಂಜೇ ಯೞೈ.

ಮಲೈ ಏೞುಮ್ மலை ஏழும் = ಏಳು ಕುಲಪರ್ವತಗಳೂ, ಮಾನಿಲಙ್ಗಳ್ ಏೞುಮ್ மாநிலங்கள் ஏழும் = ಏಳು ವಿಸ್ತಾರವಾದ ಭೂಮಿಗಳೂ (ಏಳು ದ್ವೀಪಗಳೂ), ಕುಲೈಶೂೞ್ குலைசூழ் = ಕರೆ(ದಡ)ಯಿಂದ ~~ಸುತ್ತು~~ ಸುತ್ತುವರಿದಿರುವ, ಕುರೈಕಡಲ್‌ಗಳ್ குரைகடல்கள் = ಭೋರ್ಗರೆಯುವ ಕಡಲುಗಳು, ಏೞುಮ್ ஏழும் = ಏಳೂ, ಅದಿರ அதிர = ಅದುರುವಂತೆ, ಮುಲೈಶೂೞ್‌ನ್ದ முலைசூழ்ந்த = ಮೊಲೆಯನ್ನು ಆವರಿಸಿರುವ, ನಂಜು நஞ்சு = ವಿಷದ, ಉರತ್ತು உரத்து = ಎದೆಯುಳ್ಳ, ಪೆಣ್ಣೈ பெண்ணை = ಹೆಣ್ಣನ್ನು, ನವಿನ್ರು நவின்று = ಮುದ್ದುಮುದ್ದಾಗಿ, ಉಣ್ಡ உண்ட = ಉಂಡ, ನಾವನ್ நாவன் = ಬಾಯುಳ್ಳವನು (ನಾಲಗೆಯುಳ್ಳವನು), ಎನ್ರು என்று = ಎಂದು, ಅಂಜಾದು அஞ்சாது = ಅಂಜದಂತೆ, ಎನ್ ನೆಂಜೇ என் நெஞ்சே = ನನ್ನ ಮನಸ್ಸೇ, ಅೞೈ அழை = ಕೂಗಿ ಕರೆ.

ನನ್ನ ಮನಸ್ಸೇ, ಮೊಲೆಯುಣ್ಣುವಂತಿರುವ ವಿಷದ ಎದೆಯುಳ್ಳ ಹೆಣ್ಣನ್ನು ಮುದ್ದುಮುದ್ದಾಗಿ ಉಂಡ ಬಾಯುಳ್ಳವನು ಎಂದು ಏಳು ಕುಲಪರ್ವತಗಳು, ಏಳು ದ್ವೀಪಗಳು, ಕರೆಯಿಂದ ಸುತ್ತುವರಿದಿರುವ ಭೋಗನಗರಿಯ ಏಳು (49)
ಕಡಲುಗಳು ಅದುರುವಂತೆ, ಅಂಜದೆ, ಹೋಗಿ ಕರೆ.

ಭಗವಂತನ ನಾನಾ ಲೀಲಾ ಪ್ರಸಂಗಗಳನ್ನು ನಿರ್ಭಯವಾಗಿ ವಿವರಿಸಿ ಹೇಳುತ್ತ ಕಾಲ ಕಳೆಯಬೇಕೆಂಬುದು ~~ಈ~~ ಪಾಶುರದ ವಿಷಯ.

"ಮುಲೈ ತೋಯ್ನ್ದ ನಂಜುರತ್ತು ಪೆಣ್ಣೈ ನವಿನ್ರುಣ್ಡವನ್" — ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದಾಗ, ಎಳೆಯ ಶಿಶುವಾಗಿರುವಾಗಲೇ ನಡೆದ ಲೀಲಾ ಪ್ರಸಂಗವಿದು. ಶ್ರೀಕೃಷ್ಣನನ್ನು ಕೊಲ್ಲುವುದಕ್ಕಾಗಿ ಪೂತನಿ ಎಂಬ ರಾಕ್ಷಸಿಯನ್ನು ಕಂಸನು ಕಳುಹಿಸಿದನು. ಅವಳು ನಂದಗೋಕುಲಕ್ಕೆ ಬಂದು, ಯಶೋದೆಯ ರೂಪದಲ್ಲಿ, ಶಿಶುವಾದ ಶ್ರೀಕೃಷ್ಣನನ್ನು ಎತ್ತಿಕೊಂಡು ತನ್ನ ವಿಷದ ಮೊಲೆಯನ್ನು ಕುಡಿಸಿದಳು. ಸರ್ವಜ್ಞನಾದ ಕೃಷ್ಣನು ವಿಷಕುಂಬದ ಅವಳ ಮೊಲೆಯನ್ನು, ಮುದ್ದುಮುದ್ದಾಗಿ, ಆಸಕ್ತಿಯಿಂದ, ಉಂಡುಬಿಟ್ಟನು. ಅವನಿಗೆ ವಿಷದ ಅಂಜಿಕೆಯುಂಟೆ? ಮೊಲೆಯೂಡಿಸಿ ಕೊಲ್ಲಲು ಬಂದಿದ್ದ ಪೂತನಿಯೇ ಸತ್ತು ಬಿದ್ದಳು.

"ಮಲೈಯೇಳುಮ್ ..... ಇತ್ಯಾದಿ" — ವ್ಯಾಖ್ಯೆಯಲ್ಲಿ ಏಳು ಕುಲಪರ್ವತಗಳೇ ಎಂದೂ, ಏಳು ದ್ವೀಪಗಳೇ ಎಂದೂ, ಏಳು ಮಹಾ ಕಡಲುಗಳೇ ಎಂದೂ ವರ್ಣಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ನನ್ನ ಮನಸ್ಸೇ, ಭಗವಂತನ ನಾನಾ ಲೀಲಾ ಪ್ರಸಂಗಗಳನ್ನು ಧಾರಾಳವಾಗಿಯೂ ನಿರ್ಭಯವಾಗಿಯೂ ಹೇಳಿಕೊಳ್ಳುತ್ತ ಭೂಮಂಡಲದ ಸಕಲ ವಸ್ತುಗಳೂ ಅದುರಿ, ಅಂಜುಕೊಳ್ಳುವಂತೆ ಹೋಗಿ ಕರೆ.

50. அழைப்பன் திருமாலை யாங்கவர்கள் சொன்ன,
பிழைப்பில் பெரும்பெயரே பேசி,- இழைப்பரிய
வாயவனை யாதவனை என்றவனை யார்முகப்பும்,
மாயவனை யென்று மதிக்கு.

ಅಳೈಪ್ಪನ್ ತಿರುಮಾಲೈ ಯಾಂಗವರ್ಗಳ್ ಶೊನ್ನ,
ಪಿಳೈಪ್ಪಿಲ್ ಪೆರುಮ್ ಪೆಯರೇ ಪೇಶಿ,- ಇಳೈಪ್ಪರಿಯ
ವಾಯವನೇ ಯಾದವನೇ ~~[illegible]~~ ಯೆನ್ರವನೇ ಯಾರ್ ಮುಗಪ್ಪುಮ್,
ಮಾಯವನೇ ಯೆನ್ರು ಮದಿತ್ತು.

ಅೞೈಪ್ಪನ್ அழைப்பன் = ಕೂಗಿ ಕರೆಯುತ್ತೇನೆ, ತಿರುಮಾಲೈ திருமாலை = ಸರ್ವೇಶ್ವರನನ್ನು, ಆಙ್ಗು ஆங்கு = ಅಲ್ಲಿ (ಆ ನಂದಗೋಕುಲದಲ್ಲಿ), ಅವರ್ಗಳ್ அவர்கள் = ಅವರು, ಚೊನ್ನ சொன்ன = ಹೇಳಿದ, ಪಿೞೈಪ್ಪಿಲ್ பிழைப்பில் = ಕಳಂಕವಿಲ್ಲದ (ಪರಿಶುದ್ಧವಾದ), ಪೆರುಮ್ ಪೆಯರೇ பெரும் பெயரே = ಶ್ರೇಷ್ಠವಾದ ಹೆಸರುಗಳನ್ನೇ, ಪೇಶಿ பேசி = ಹೇಳುತ್ತಾ, ಇೞೈಪ್ಪ್ இழைப்பு = ಸೂಕ್ಷ್ಮವಾದ ಪರಿಶೀಲನೆಗೂ, ಅರಿಯ அரிய = ಅಸಾಧ್ಯವಾದ, ಆಯವನೇ ஆயவனே = ಗೋಪಾಲನೇ, ಯಾದವನೇ யாதவனே = ಯಾದವನೇ, ಎನ್ಱು என்று = ಎಂದು, ಅವನೈ அவனை = ಅವನನ್ನು, ಯಾರ್ ಮುಗಪ್ಪುಮ್ யார் முகப்பும் = ಎಲ್ಲರ ಎದುರಲ್ಲೂ, ಮಾಯವನೇ ಎನ್ಱು மாயவனே என்று = ಮಾಯವನೇ ಎಂದು, ಮದಿತ್ತು மதித்து = ಆಸೆಯಿಂದ (ಅನುಸಂಧಾನ ಮಾಡಿಕೊಂಡು).

ಅಲ್ಲಿ (ಆ ನಂದಗೋಕುಲದಲ್ಲಿ) ಅವರು ಹೇಳಿದ ಗೋಪಾಲನೇ,
ಯಾದವನೇ, ಮಾಯವನೇ ಎಂದು ಕಳಂಕವಿಲ್ಲದ ಹೆಸರುಗಳನ್ನೇ ಎಲ್ಲರ
ಎದುರಲ್ಲೂ ಆಸೆಯಿಂದ (ಅನುಸಂಧಾನ ಮಾಡಿಕೊಂಡು) ಹೇಳುತ್ತಾ, (50)
ಸರ್ವೇಶ್ವರನನ್ನು ಕೂಗಿ ಕರೆಯುತ್ತೇನೆ.

ಭಗವಂತನ ಲೀಲಾ ವಿಶೇಷಗಳನ್ನೇ ಕೊಂಡಾಡುತ್ತಾ ಕಾಲಕಳೆಯಬೇಕೆಂಬುದು ಇಂದಿನ ಪಾಶುರದ ವಿಷಯ. ಇಲ್ಲಿ, ಭಗವಂತನ ಪರಮ ಪವಿತ್ರವಾದ ತಿರುನಾಮಗಳನ್ನು ಹೇಳುತ್ತಾ ಕಾಲಕಳೆಯಬೇಕೆಂದು ಹೇಳಲಾಗುತ್ತಿದೆ.

ನಂದಗೋಕುಲದ ಜನರಿಗೆ ಅವರ ಜೊತೆಯಲ್ಲೇ ಬೆಳೆಯುತ್ತಿದ್ದ ಶ್ರೀಕೃಷ್ಣನು ಭಗವದವತಾರವೆಂದು ಅರಿತವರಲ್ಲ. ಒಂದು ವೇಳೆ, ಹಾಗೆ ತಿಳಿದಿದ್ದರೂ ಸಹ, ಅವರು ಮೋಹಪರವಶರಾಗಿ ಅವನನ್ನು ತಮ್ಮಂತೆಯೇ ಸಾಮಾನ್ಯನೆಂಬಂತೆ ಗೋಪಾಲ, ಯಾದವ, ಮಾಯಾವಿ ಎಂದು ಮುಂತಾದ ಸಾಮಾನ್ಯವಾದ ಹೆಸರುಗಳಿಂದ ಕರೆಯುತ್ತಿದ್ದರು. ಒಂದೊಂದು ಹೆಸರೂ ಅನ್ವರ್ಥವಾದದ್ದು. ಗೋವುಗಳನ್ನು ಸಂರಕ್ಷಿಸುವವನಾದ್ದರಿಂದ ಅವನು ಗೋಪಾಲನಾದ. ~~[illegible]~~ ಯಾದವರ ಕುಲದಲ್ಲಿ ಹುಟ್ಟಿದ್ದರಿಂದ ಅವನು ಯಾದವ. ನಂಬಲಾಗದ ಅದ್ಭುತವಾದ ಲೀಲೆಗಳನ್ನು ನಡೆಸುತ್ತಿದ್ದನಾದ್ದರಿಂದ ಅವನು ಮಾಯಾವಿ — ಇತ್ಯಾದಿ.

ಆಳ್ವಾರರು ಹೇಳುತ್ತಾರೆ: ಬಂದೆ, ನಂದಗೋಕುಲದಲ್ಲಿ, ಗೋಪಿಯರ

Gadani Srinivasan

ನಡುವೆ ಬೆಳಗುತ್ತಿದ್ದ ಶ್ರೀಕೃಷ್ಣನನ್ನು ಅವರು ಕರೆಯುತ್ತಿದ್ದ ಶ್ಲಾಘನೀಯವಾದ
ಮತ್ತು ಪವಿತ್ರವಾದ 'ಗೋಪಾಲ', 'ಯಾದವ', 'ಮಾಯಾವಿ'- ಎಂಬ
ಹೆಸರುಗಳಿಂದಲೇ ನಾನು ಸರ್ವೇಶ್ವರನನ್ನು ಎಲ್ಲರ ಎದುರಲ್ಲೂ ಆಶ
ಆಸಕ್ತಿಗಳಿಂದ ಕೂಗಿ ಕರೆಯುತ್ತೇನೆ.

51. மதிக்கண்டாய் நெஞ்சே மணிவண்ணன் பாதம்,
மதிக்கண்டாய் மற்றவன் பேர்தன்னை, — மதிக்கண்டாய்
பேராழிநின்று பெயர்ந்து கடல் கடைந்த,
நீராழி வண்ணன் நிறம்

ಮದಿಕ್ಕಣ್ಡಾಯ್ ನೆಂಜೇ ಮಣಿವಣ್ಣನ್ ಪಾದಮ್,
ಮದಿಕ್ಕಣ್ಡಾಯ್ ಮಟ್ರವನ್ ಪೇರ್‌ತನ್ನೈ, — ಮದಿಕ್ಕಣ್ಡಾಯ್
ಪೇರಾಳಿ ನಿನ್ಱು ಪೆಯರ್‌ನ್ದು ಕಡಲ್ ಕಡೈನ್ದ,
ನೀರಾಳಿ ವಣ್ಣನ್ ನಿಱಮ್.

ಮದಿ ಕಣ್ಡಾಯ್ மதி கண்டாய் = ತಪ್ಪದೆ ಚಿಂತಿಸುತ್ತಿರು, ನೆಂಜೇ நெஞ்சே = ಮನಸ್ಸೇ, ಮಣಿವಣ್ಣನ್ ಪಾದಮ್ மணிவண்ணன் பாதம் = ನೀಲಮಣಿ ಕಾಂತಿಯ ಭಗವಂತನ ಪಾದವನ್ನು, ಮದಿ ಕಣ್ಡಾಯ್ மதிகண்டாய் = ಉಚ್ಚರಿಸುತ್ತಿರು, ಕಂಡೆಯಾ, ಮಟ್ರು மற்று = ಅಲ್ಲದೆ, ಅವನ್ ಪೇರ್‌ತನ್ನೈ அவன் பேர்தன்னை = ಅವನ ಹೆಸರುಗಳನ್ನು, ಮದಿ ಕಣ್ಡಾಯ್ மதிகண்டாய் = ಅನುಸಂಧಿಸು, ಕಂಡೆಯಾ, ಪೇರ್ ಆಳಿ ನಿನ್ಱು பேர் ஆழி நின்று = ವಿಸ್ತಾರವಾದ ಹಾಲ್ಗಡಲಿಂದ, ಪೆಯರ್‌ನ್ದು பெயர்ந்து = ಎಚ್ಚರಗೊಂಡು, ಕಡಲ್ ಕಡಲ் = ಹಾಲ್ಗಡಲನ್ನು, ಕಡೈನ್ದ கடைந்த = ಕಡೆದ (ಕಡೆಯುತ್ತಿದ್ದ), ನೀರಾಳಿ நீராழி = ನೀಲ ಕಡಲಿನ ವಣ್ಣನ್ வண்ணன் = ಬಣ್ಣದವನ, ನಿಱಮ್ நிறம் = ದೇಹ ಕಾಂತಿಯನ್ನು (ಸೌಂದರ್ಯವನ್ನು).

ಮನಸ್ಸೇ ನೀಲಮಣಿಕಾಂತಿಯ ಭಗವಂತನ ತಿರುವಡಿಗಳನ್ನು ಬಿಡದೆ ಚಿಂತಿಸುತ್ತಿರು. ಮತ್ತು, ಅವನ ತಿರುನಾಮಗಳನ್ನು ಉಚ್ಚರಿಸುತ್ತಿರು. ವಿಸ್ತಾರವಾದ ಹಾಲ್ಗಡಲಲ್ಲಿ ಯೋಗನಿದ್ರೆಯಿಂದ ಎಚ್ಚರಗೊಂಡು ಹಾಲ್ಗಡಲನ್ನು ಕಡೆಯುತ್ತಿದ್ದ ಕಡಲವರ್ಣದವನ ದೇಹ ಸೌಂದರ್ಯವನ್ನು ಅನುಸಂಧಿಸುತ್ತಿರು. (57)

ಭಗವಂತನನ್ನು ಮನಸಾ, ವಾಚಾ, ಕಾಯಾ ಎಡೆಬಿಡದೆ ಗಮನಿಸುತ್ತ ಇರಬೇಕೆಂದು ಇಲ್ಲಿ ಹೇಳಲಾಗುತ್ತದೆ.

Garani Srinivasan

ಆಳ್ವಾರರು ಹೇಳುತ್ತಾರೆ: ಮನಸ್ಸೇ ಭಗವಂತನ ದಿವ್ಯ ತಿರು-ಪಡಿಗಳನ್ನು ಬಿಡದೆ ಚಿಂತಿಸುತ್ತಿರು. ನಾಲಗೆಯ ಮೂಲಕ ಅವನ ಪವಿತ್ರ ತಿರುನಾಮಗಳನ್ನು ಉಚ್ಚರಿಸುತ್ತಿರು. ಅವನ ಭವ್ಯವಾದ ದೇಹ ಸೌಂದರ್ಯವನ್ನು ಬಿಡದೆ ಭಾವಿಸಿಕೊಂಡು ಆನಂದಿಸುತ್ತಿರು. ಕಾಯಾ, ವಾಚಾ, ಮನಸಾ ಎಂದರೆ ತ್ರಿಕರಣ ಪೂರ್ವಕವಾಗಿ ನೀನು ಮಾಡಬೇಕಾದದ್ದು ಇದು.

ಪಾಲ್ಗಡಲನ್ನು ದೇವಾಸುರರಿಂದ ಕಡೆಯಿಸಿದ್ದು, ದೇವತೆಗಳಿಗೆ ಅಮೃತವನ್ನೊದಗಿಸಿ, ಆ ಮೂಲಕ ಅವರನ್ನು ಅಮರರನ್ನಾಗಿಸುವುದಕ್ಕಾಗಿ. ದೇವತೆಗಳು ಪಾಲ್ಗಡಲಲ್ಲಿ ಪವಡಿಸಿ ಯೋಗನಿದ್ರೆಯಲ್ಲಿದ್ದ ಶ್ರೀಮನ್ನಾರಾಯಣನಲ್ಲಿ ಅಸುರರಿಂದ ತಮಗಾಗುತ್ತಿರುವ ಕೋಟಲೆಯಿಂದ ತಪ್ಪಿಸಬೇಕೆಂದು ಮೊರೆಯಿಟ್ಟುದರ ಪರಿಣಾಮವಾಗಿ, ಭಗವಂತನು ಈ ಕೆಲಸವನ್ನು ಮಾಡಿಸಿದನು.

52. நிறங்கரியன் செய்ய நெடுமலராள் மார்வன்,
அறம் பெரிய னாரதறிவார், — மறம்புரிந்த
வாளரக்கன் போல்வானை வானவர்கோன் தானத்து,
நீளிருக்கைக் குய்த்தான் நெறி.

ನಿಱಙ್ಗರಿಯನ್ ಶೆಯ್ಯ ನೆಡುಮಲರಾಳ್ ಮಾರ್ವನ್,
ಅಱಮ್ ಪೆರಿಯ ನಾರದಱಿವಾರ್, — ಮಱಮ್ ಪುರಿನ್ದ
ವಾಳರಕ್ಕನ್ ಪೋಲ್ವಾನೈ ವಾನವರ್ ಕೋನ್ ತಾನತ್ತು,
ನೀಳಿರುಕ್ಕೈಕ್ಕುಯ್ತ್ತಾನ್ ನೆಱಿ.

ನಿಱಮ್ ಕರಿಯನ್ நிறம் கரியன் = ಬಣ್ಣದಲ್ಲಿ ಕಪ್ಪಾಗಿ, ಶೆಯ್ಯ செய்ய = ಕೆಂಪಾದ, ನೆಡು நெடு = ದೊಡ್ಡ, ಮಲರಾಳ್ மலராள் = ಹೂವಿನವಳನ್ನು, ಮಾರ್ವನ್ மார்வன் = ವಕ್ಷಸ್ಥಲದಲ್ಲಿ ಧರಿಸಿದವನು, ಅಱಮ್ ಪೆರಿಯನ್ அறம் பெரியன் = ಅತಿಶಯವಾದ ಕೃಪೆಯುಳ್ಳವನು, ಎಂಬುದನ್ನು, ಆರ್ ಅದು ಅಱಿವಾರ್ ஆர் அது அறிவார் = ಅದನ್ನು ಯಾರು ಅರಿಯಬಲ್ಲರು, ಮಱಮ್ ಪುರಿನ್ದ மறம் புரிந்த = ಹಗೆತನವನ್ನು ತುಂಬಿಕೊಂಡಿದ್ದ, ವಾಳರಕ್ಕನ್ ಪೋಲ್ವಾನೈ வாளரக்கன் போல்வானை = ಕತ್ತಿಯ ಆಯುಧವನ್ನುಳ್ಳ ರಾಕ್ಷಸನನ್ನು (ರಾವಣಾಸುರನನ್ನು) ಹೋಲುವವನನ್ನು, ವಾನವರ್ ಕೋನ್ வானவர் கோன் = ದೇವತೆಗಳ ಒಡೆಯನ (ದೇವೇಂದ್ರನ), ತಾನತ್ತು தானத்து = ಸ್ಥಾನದಲ್ಲಿ, ನೀಳ್ நீள் =

Garani Srinivasan

ವಿಭೀಷಣರಾಲ, ಇರುಕ್ಕೆಲ್ಲ ಇರುಕ್ಕೈಕ್ಕು = ಇರುವುದಕ್ಕೊಂದು,
ಉಯಿರ್ತ್ತಾನ್ ಉಯ್ಯಕ್ಕೊಣ್ = ಉಳಿಸಿದವನ, ನೆಱಿ ಅನ್ಱಿ =
ಕೃಪಾತಿಶಯವನ್ನು (ಯಾರು ಅರಿಯಬಲ್ಲರು?)

ಬಣ್ಣದಲ್ಲಿ ಕಪ್ಪಾಗಿ, ದೊಡ್ಡ ಕೆಂದಾವರೆಯ ಹೂವಿನವುಗಳನ್ನು ಮಿಂಚು
ದಲ್ಲಿ ಧರಿಸಿದವನೂ, ಅತಿಶಯವಾದ ಕೃಪೆಯುಳ್ಳವನೂ ಎಂಬುದನ್ನು
ಯಾರು ಅರಿಯಬಲ್ಲರು? ದರ್ಶನವನ್ನು ತುಂಬಿಕೊಂಡಿದ್ದ ರಾವಣನ
ಮಗನನ್ನು ಕೊಲುವವನನ್ನು ದೇವತೆಗಳ ಒಡೆಯನ ಧ್ಯಾನದಲ್ಲಿ,
ಬಧರಾಲ ಇರುವುದಕ್ಕೊಂದು ಉದ್ಧರಿಸಿದವನ ಕೃಪಾತಿಶಯವನ್ನು (52)
(ಯಾರು ಅರಿಯಬಲ್ಲರು?)

ಭಗವಂತನ ಅತಿಶಯವಾದ ಕೃಪಾಗುಣವನ್ನು ಇಲ್ಲಿ ಕೊಂಡಾಡಲಾಗಿದೆ.
ಅದಕ್ಕೆ ತಕ್ಕ ನಿದರ್ಶನವೊಂದನ್ನೂ ಇಲ್ಲಿ ಕೊಡಲಾಗಿದೆ.

"ಮಱವೋ ಪಿಱನ್ದ ಮಾಳರಕ್ಕನ್ ಪೋಲ್ ಮಾನ್ತ್ರ....." – ಇದು ಆ ಮೂಲಕ
ಭಗವಂತನು ಬಲಿಚಕ್ರವರ್ತಿಯನ್ನುದ್ಧರಿಸಿದ ಬಗೆಯನ್ನು
ಭಗವಂತನ ಕೃಪಾತಿಶಯ(ಸ್ವಭಾವ)ವನ್ನು ಹೇಳುವ ವಿಷಯ. ಬಲಿಚಕ್ರವರ್ತಿ
ರಾವಣನ ಹಾಗೆ ರಾಕ್ಷಸ ವಂಶದವನು. ವಿಷ್ಣುವಿನಲ್ಲಿ ದರ್ಶನವುಳ್ಳವನು.
ಹೀಗೆ ರಾವಣನನ್ನು ಅವನ ಅಧರ್ಮಶೀಲವಾದ ಆಶಯವನ್ನು ಕೊಲಲತಕ್ಕವನು
ದೇವೇಂದ್ರನನ್ನು ರಕ್ಷಿಸಲು ಅದಿತಿಯನ್ನು ಅವನು ಗೆಲ್ಲಿಸಿಕೊಳ್ಳಬೇಕೆಂದು
ಹಟ ಹಿಡಿದವನು. ಒಂದಾನೊಂದು ಯಾಗವನ್ನು ಮಾಡುತ್ತಾ, ಅದಿತಿ
ಯನ್ನು ಗೆಲ್ಲಿಸಿಕೊಳ್ಳುವ ನಿಶ್ಚಯದಲ್ಲಿದ್ದವನು. ಇಂದ್ರಪದವನ್ನು ದೇವೇಂ
ದ್ರನಿಗೆ ಕೊಟ್ಟು ಕಾಪಾಡಿದಂತೆಯೂ ಬಲಿಚಕ್ರವರ್ತಿಗೆ ಅವನ ಪ್ರಾಣವುಳಿದ
ಇಂದ್ರಪದವನ್ನು ~~[illegible]~~ ದೊರಕಿಸಿಕೊಡುವಂತೆಯೂ ಭಗವಂತನು
ಬಲಿಚಕ್ರವರ್ತಿಗೆ ಕೃಪೆ ಮಾಡಿದನು.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಭಗವಂತನು ಕಾಮಿಸಿದ
ಲಂಕೆ ಆಕರ್ಷಣೀಯವಾದ ದೇಹವುಳ್ಳವನು. ನಿತ್ಯ ನಿಂತಿರುವ
ಲಕ್ಷ್ಮೀದೇವಿಯು ಅವನ ವಕ್ಷದಲ್ಲಿ ನೆಲಸಿದ್ದಾಳೆ. ಕೃಪೆಯುಳ್ಳ
ಭಗವಂತನನ್ನು ಮರೆಯುವರೇ ಇಲ್ಲ. ರಾಕ್ಷಸ ವಂಶದವ, ಶತ್ರುತ್ವ
ವನ್ನು ಸಾಧಿಸುವವನಾದ ಬಲಿಚಕ್ರವರ್ತಿಗೆ, ಅವನ ದರ್ಶನವನ್ನು
ಲೆಕ್ಕಿಸದಂತೆ, ಮೂರು ಲೋಕದ ಐಶ್ವರ್ಯವನ್ನು ಕೃಪೆಮಾಡಿ ಬಿಡಿಸಿ, (ಅವನ)
ಅವನನ್ನು ದೇವೇಂದ್ರನಿಗೆ ದಾಸನನ್ನಾಗಿ ಮಾಡಿದನು. ಅವನ(ಸ್ವಭಾವ) ಕೃಪೆಗೆ
ಇದೊಂದು ನಿದರ್ಶನ. ಮನಸ್ಸೇ, ನೀನು ಈ ಸ್ವಭಾವವನ್ನು ಗಮನಿಸು.

Garani Srinivasan

53. நெறியார் குழல்கற்றை முன்னின்று பின்தாழ்ந்து,
அறியாத் திளங்குகிரியென் றெண்ணி, — பிரியாது
பூங்கொடிகள் வைகும் பொருபுனல் குன்றென்னும்,
வேங்கடமே யாம் விரும்பும் வெற்பு.

ನೆಱಿಯಾರ್ ಕುೞಲ್‌ಕಱ್ಱೈ ಮುನ್ನಿನ್ಱು ಪಿನ್‌ತಾೞ್ನ್ದು,
ಅಱಿಯಾ ತಿಳಙ್ಗುಗಿರಿಯೆನ್ ಱೆಣ್ಣಿ, — ಪಿರಿಯಾದು
ಪೂಙ್ಗೊಡಿಗಳ್ ವೈಗುಮ್ ಪೊರುಪುನಲ್ ಕುನ್ಱೆನ್ನುಮ್,
ವೇಙ್ಗಡಮೇ ಯಾಮ್ ವಿರುಮ್ಬುಮ್ ವೆಱ್ಪು.

ನೆಱಿಯಾರ್ நெறியார் = ಸರಿಯಾದ ದಾರಿಯಲ್ಲಿ ನಡೆಯುವವರು, (ತಿರುವೇಂಕಟಗಿರಿಯ ಮಾರ್ಗದ ಯಾತ್ರಿಕರು), ಕುೞಲ್ குழல் = ಕೂದಲಿನ, ಕಱ್ಱೈ கற்றை = ಕುಚ್ಚು, ಮುನ್ನಿನ್ಱು முன் நின்று = ಮುಂಭಾಗದಿಂದ, ಪಿನ್ பின் = ಹಿಂದಕ್ಕೆ, ತಾೞ್ನ್ದು தாழ்ந்து = ಇಳಿಯಬಿದ್ದ (ಇದನ್ನು), ಅಱಿಯಾದು அறியாது = ತಿಳಿಯದೆ, ಇಳಙ್ಗುಗಿರಿ ಎನ್ಱು ಎಣ್ಣಿ இளங்குகிரி என்று எண்ணி = ಚಿಕ್ಕ ಬೆಟ್ಟವೆಂದು ಭಾವಿಸಿ, ಪಿರಿಯಾದು பிரியாது = (ಅದರಿಂದ) ಅಗಲದೇ ಇರುವುದರಿಂದ, ಪೂಙ್ಗೊಡಿಗಳ್ பூங்கொடிகள் = ಹೂವಿನ ಬಳ್ಳಿಗಳು, ವೈಗುಮ್ வைகும் = ಶಾಶ್ವತವಾಗಿ ಅಲ್ಲಿ ಏರಿಹಬ್ಬಿ, ಪೊರುಪುನಲ್ பொருபுனல் = (ಬೆಟ್ಟದ) ಝರಿಯ, ಕುನ್ಱೆನ್ನುಮ್ குன்றென்னும் = ಬೆಟ್ಟವೆಂಬ, ವೇಙ್ಗಡಮೇ வேங்கடமே = ತಿರುವೇಂಕಟಗಿರಿಯೇ, ಯಾಮ್ யாம் = ನಾವು, ವಿರುಮ್ಬುಮ್ விரும்பும் = ಆಶಿಸುವ, ವೆಱ್ಪು வெற்பு = ಪರ್ವತ.

ತಿರುವೇಂಕಟಗಿರಿಯ ಮಾರ್ಗದ ಯಾತ್ರಿಕರ ತಲೆಗೂದಲಿನ ಕುಚ್ಚು ಮುಂಭಾಗದಿಂದ ಹಿಂದಕ್ಕೆ ಇಳಿಯಬಿದ್ದಿರುವುದನ್ನು ಅರಿಯದೆ, ಅದೊಂದು (ಅದರಿಂದ) ಶಾಶ್ವತವಾಗಿ ಅಲ್ಲಿ ಏರಿಹಬ್ಬುವ ಝರಿಯ ಚಿಕ್ಕ ಬೆಟ್ಟವೇ ಎಂದು ಭಾವಿಸಿ, ಬೇರ್ಪಡದಂತೆ ಹೂವಿನ ಬಳ್ಳಿಗಳು ಹಬ್ಬಿರುವ ತಿರುವೇಂಕಟಗಿರಿಯೇ ನಾವು ಆಶಿಸುವ ಪರ್ವತ. (53)

ತಿರುವೇಂಕಟಗಿರಿಯ ವರ್ಣನೆಯನ್ನು ಉತ್ಪ್ರೇಕ್ಷೆಯೊಡನೆ ಕೂಡಿಸಿ,

Garani Srinivasan

ಇಲ್ಲ ~~ಹೇಳ~~ ಹೇಳಲಾಗದೆ.

ತಿರುವೇಂಕಟಗಿರಿಗೆ ಹೋಗುವ ಯಾತ್ರಿಕರಿಗೆ ಯಾವೊಂದು ಬಗೆಯ ಸಾರಿಗೆ ಸೌಕರ್ಯವೂ ಇಲ್ಲದ ಕಾಲ ಅದು. ಪ್ರಯಾಣ ಬಯಸಿದ್ದರೆ ಅವರು ಕಾಲ್ನಡಿಗೆಯಿಂದಲೇ ನಡೆದು ಮುಗಿಸಬೇಕಾದ ಕಾಲ ಅದು.

ತಿರುವೇಂಕಟಗಿರಿಗೆ ಯಾತ್ರಿಕರು ಹೋಗುವ ಮಾರ್ಗದಲ್ಲಿ ಅಲ್ಲಲ್ಲಿ ತಂಗಿದ್ದು, ಮುನ್ನಡೆದು ಹೋಗುತ್ತಾರಂತೆ. ಬೆಟ್ಟವನ್ನು ಮತ್ತು ಸ್ವಾಮಿಯ ಸನ್ನಿಧಿಯನ್ನು ಸೇರುವವರೆಗೂ ಅವರು ಜಡೆ ಬಿಟ್ಟಿರುತ್ತಾರಂತೆ. ಅವರ ತಲೆ ಕೂದಲ ಮುಂದಿನಿಂದ ಬಂದದ್ದು ಬೆಳೆದು ಬೆನ್ನ ಮೇಲೆ ತೂಗಾಡುತ್ತಿರುವುದಂತೆ. ಇದನ್ನು ಕಂಡು ಹೂವಿನ ಬಳ್ಳಿಗಳು ಸ್ಪರ್ಧೆಗಿಳಿಯುತ್ತವೆಯಂತೆ. ಅವರ ತಲೆಯನ್ನೇ ಬಂದು ಸೇರಬೇಕೆಂದು, ತಲೆಮಾರಿನ ಕಂಗಳನ್ನು ಬೆಟ್ಟದ ದಾರಿಗಳೆಲ್ಲಾ ಅವು ಪ್ರಯಾಣಿಸುತ್ತವೆಯಂತೆ. ಅವುಗಳಿಂದ ಆ ಬಳ್ಳಿಗಳು ಬೇರ್ಪಡಬಾರದೆಂಬಂತೆ ಅವರ ತಲೆಗಳ ಮೇಲೆಯೇ ಬೆಳೆದು ನಿಲ್ಲುತ್ತವೆಯಂತೆ. ಎಂಥ ~~ಉ~~ ಉತ್ಪ್ರೇಕ್ಷೆ! ಒಂದೇ ಬಾರಿಗೆ ಬೆಳೆದು ನಿಲ್ಲುತ್ತವೆಯಂತೆ. ಮರ್ಮವನ್ನು ಆವರಿಸಿಕೊಂಡು ಹೂವು ಬೆಳೆದು ಬಿಟ್ಟಿತೋ ಎಂಬ ಮರ್ಮವನ್ನು? ವೆಂಕಟೇಶ್ವರನಿಗೆ ಬಹುಕಾಲದಿಂದ ಹೂವು ಬೆಳೆಸಿತ್ತೆಂದೋ? ಬಂತೆಂದೋ?

54. வெற்பென்று இருஞ்சோலை வேங்கடமென்று
இவ்விரண்டும்,
நிற்பென்று நீமதிக்கும் நீர்மை போல், -
நிற்பென்று
உளங்கோயிலுள்ளம் வைத்துள்ளினேன்,
வெள்ளத்து
இளங்கோயில் கைவிடேலென்று.

ವೆಱ್ಪೆನ್ಱು ಇರುಂಜೋಲೈ ವೇಙ್ಗಡಮೆನ್ಱು ಇವ್ವಿರಣ್ಡುಮ್,
ನಿಱ್ಪೆನ್ಱು ನೀಮದಿಕ್ಕುಮ್ ನೀರ್ಮೈ ಪೋಲ್ - ನಿಱ್ಪೆನ್ಱು
ಉಳಙ್ಗೋಯಿಲುಳ್ಳಮ್ ವೈತ್ತುಳ್ಳಿನೇನ್, ವೆಳ್ಳತ್ತು
ಇಳಙ್ಗೋಯಿಲ್ ಕೈವಿಡೇಲೆನ್ಱು.

ವೆಱ್ಪು ಎನ್ಱು வெற்பு என்று = ಬೆಟ್ಟ ಎಂಬ, ಇರು ಚೋಲೈ இரு சோலை = ವಿಸ್ತಾರವಾದ (ದೊಡ್ಡದಾದ) ತಿರುಮಾಲಿರುಂ ಚೋಲೈ, ವೇಙ್ಗಡಮೆನ್ಱು வேங்கடமென்று = ತಿರುವೇಂಕಟಾಚಲ, ಇ-ಇರಣ್ಡುಮ್ இ-இரண்டும் = ಈ ಎರಡೂ, ನಿಱ್ಪು ಎನ್ಱು நிற்பு என்று = ನೆಲೆಸುವ ಸ್ಥಳವೆಂದು, ನೀ நீ = ನೀನು,

Garani Srinivasan

ಮದಿಕ್ಕುಮಾ மதிக்கும் = ಆಶಿಸಿರುವ, ನೀರ್ಮೈ ಪೋಲ್ நீர்
மை போல் = ಸ್ವಭಾವವುಳ್ಳ ದಾಗಿಯೂ, ನಿಱ್ಪು ಎನ್ನು
நிற்பு என்று = ನೆಲಸುವ ಸ್ಥಳವೆಂದು, ಉಳಮಾ ಕೋಯಿಲ್
உளம் கோயில் = ಹೃದಯವೆಂಬ ದೇಗುಲವನ್ನೂ, ಉಳ್ಳಮ್
உள்ளம் = ಮನಸ್ಸಿನಲ್ಲಿ, ವೈತ್ತು வைத்து = ಇಟ್ಟುಕೊಂಡು,
ಉಳ್ಳಿನೇನ್ உள்ளினேன் = ಪ್ರಾರ್ಥಿಸುತ್ತಿದ್ದೇನೆ, ವೆಳ್ಳತ್ತು
வெள்ளத்து = ~~[illegible]~~ ಶ್ವೇತ, ಇಳ ಕೋಯಿಲ್ இள கோ
யில் = ಎಳೆಯ ದೇಗುಲವನ್ನು, ಕೈವಿಡೇಲ್ ಎನ್ನು கைவி
டேல் என்று = ಕೈಬಿಡಬೇಡ ಎಂದು (ಪ್ರಾರ್ಥಿಸುತ್ತಿದ್ದೇನೆ).

ಚಿಕ್ಕ ಎಂದು ವಿಸ್ತಾರವಾದ ತಿರುಮಾಲಿರುಂಜೋಲೈ ಮತ್ತು ತಿರುವೆಂಕಟಂ, ಈ ಎರಡೂ ನೆಲೆಸುವ ಸ್ಥಳವೆಂದು ನೀನು ಆಶಿಸಿರುವ ~~ದಾಗಿಯೂ~~ ಸಹಜ ಸ್ವಭಾವವುಳ್ಳ ದಾಗಿಯೂ, (ನನ್ನ) ಹೃದಯ ದೇಗುಲವನ್ನು (ನೀನು) ನೆಲಸುವ ಸ್ಥಳವೆಂದು ಮನಸ್ಸಿನಲ್ಲಿ ಇಟ್ಟುಕೊಂಡು, ಶ್ವೇತ (ಈ) ಎಳೆಯ ದೇಗುಲವನ್ನು ಕೈಬಿಡಬೇಡವೆಂದು (ನಿನ್ನನ್ನು) ಪ್ರಾರ್ಥಿಸುತ್ತಿದ್ದೇನೆ. (54)

ಈ ಪಾಶುರದಲ್ಲಿ ಭಗವಂತನು ಬಂದು ನೆಲಸಲು ತಕ್ಕದಾಗಿ ಹೃದಯ ಮಂದಿರವನ್ನು ಆಕರ್ಷಕ ಸುಂದರವಾಗಿಯೂ, ಪವಿತ್ರವಾದ ಭಕ್ತಿ ಸಮೃದ್ಧವಾಗಿಯೂ ಮಾಡಿಕೊಂಡು, ಅಲ್ಲಿ ಬಂದು ನೆಲಸುವಂತೆ ಭಗವಂತನನ್ನು ~~[illegible]~~ ಹೃತ್ಪೂರ್ವಕವಾಗಿ ಪ್ರಾರ್ಥಿಸಿಕೊಳ್ಳಬೇಕೆಂದು ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮಿ, ಉನ್ನತವೂ, ವಿಶಾಲವೂ, ಪ್ರಕೃತಿ ರಮ್ಯವೂ, ಸುಂದರವೂ ಆದ ತಿರುಮಾಲಿರುಂಜೋಲೈ ಮಲೈ, ಮತ್ತು ತಿರುಮಲೆ ಎಂಬ ಎರಡು ಬೆಟ್ಟಗಳು ನಿನಗೆ ನೆಲಸಲು ಯೋಗ್ಯವಾದ ಪವಿತ್ರ ಮಂದಿರಗಳೆಂದು ನೀನು ಆಶಿಸಿರುವುದು ನಿನ್ನ ಸಹಜ ಸ್ವಭಾವವನ್ನು ತಿಳಿಸುತ್ತದೆ. ನನ್ನ ಹೃದಯವನ್ನೂ ಪವಿತ್ರವಾದ ಮಂದಿರವನ್ನಾಗಿಸಿದ್ದೇನೆ. ಅದರಲ್ಲಿ ಭಕ್ತಿಯ ಪ್ರವಾಹವನ್ನು ತುಂಬಿಕೊಂಡಿದ್ದೇನೆ. ~~ಈ~~ ಶ್ವೇತ ಸುಂದರವಾದ ನನ್ನ ಈ ಎಳೆಯ ಹೃದಯ ದೇಗುಲದಲ್ಲಿ ನೀನು ಬಂದು ನೆಲಸಬೇಕೆಂದೂ, ಬಳಿಕ, ಇಲ್ಲಿಂದ ಅಗಲಬಾರದೆಂದೂ ನಾನು ನಿನ್ನಲ್ಲಿ ದೀನನಾಗಿ ಪ್ರಾರ್ಥಿಸುತ್ತಿದ್ದೇನೆ.

Garani Srinivasan

55. என்று மறந்தறியேன் ஏழ்பிறப்பு மெய்ப்பொழுதும்,
நின்று நினைப்பொழியா நீர்மையால், - வென்றி
அடலாழி கொண்ட அறிவனே, இன்பக்
கடலாழி நீயருளிக் காண்

ಎನ್ರು ಮಱನ್ದಱಿಯೇನ್ ಏೞ್ ಪಿಱಪ್ಪು ಮೆಪ್ಪೊೞುದುಮ್,
ನಿನ್ರು ನಿನೈಪ್ಪೊೞಿಯಾ ನೀರ್ಮೈಯಾಲ್, - ವೆನ್ರಿ
ಅಡಲಾೞಿ ಕೊಣ್ಡ ಅಱಿವನೇ, ಇನ್ಬ
ಕ್ಕಡಲಾೞಿ ನೀಯರುಳಿಕ್ಕಾಣ್.

ಎನ್ರುಮ್ என்றும் = ಯಾವ ಕಾಲಕ್ಕೂ ದಲೂ (ಯಾವ ಸಮಯದಲ್ಲೂ), ಮಱನ್ದು ಅಱಿಯೇನ್ மறந்து அறியேன் = (ನಿನ್ನನ್ನು) ಮರೆತಿದ್ದದ್ದನ್ನು ಅರಿಯೆನು, ಏೞ್ ಪಿಱಪ್ಪುಮ್ ஏழ் பிறப்பும் = ಏಳು ಜನ್ಮಗಳ, ಎಪ್ಪೊೞುದುಮ್ எப்பொ(ழு)தும் = ಎಲ್ಲ ಕಾಲಗಳಲ್ಲೂ (ಎಲ್ಲ ಅವಸ್ಥೆಗಳಲ್ಲೂ), ನಿನ್ರು நின்று = ಸ್ಥಿರವಾಗಿ, ನಿನೈಪ್ಪು ಒೞಿಯಾ நினைப்பு ஒழியா = (ನಿನ್ನ) ಚಿಂತನೆಯು ಹೋಗದ, (ಚಿಂತನೆಯನ್ನು ಬಿಡದ), ನೀರ್ಮೈಯಾಲ್ நீர்மையால் = ಸಹಜ ಸ್ವಭಾವದಿಂದ, ಇರುವ, ವೆನ್ಱಿ வென்றி = ಜಯಗಳಿಸುವ, ಅಡಲ್ ಆೞಿ அடல் ஆழி = ಸಮರ್ಥವಾದ (ಶಕ್ತಿಪೂರ್ಣವಾದ) ಚಕ್ರಾಯುಧವನ್ನು, ಕೊಣ್ಡ கொண்ட = ಧರಿಸಿರುವ, ಅಱಿವನೇ அறிவனே = ಸರ್ವಜ್ಞನಾದ ಸ್ವಾಮಿಯೇ, ಇನ್ಬಕ್ಕಡಲ್ இன்பக்கடல் = ಆನಂದಸಾಗರದ, ಆೞಿ ஆழி = ದಡವನ್ನು, ನೀ நீ = ನೀನು, ಅರುಳಿಕ್ಕಾಣ್ அருளிக் காண் = ಕೃಪೆಮಾಡಬೇಕು.

ಜಯಗಳಿಸುವ ಶಕ್ತಿಪೂರ್ಣವಾದ ಚಕ್ರಾಯುಧವನ್ನು ಧರಿಸಿರುವ ಸರ್ವಜ್ಞನಾದ ಸ್ವಾಮಿಯೇ, ಯಾವ ಸಮಯದಲ್ಲೂ ನಿನ್ನನ್ನು ಮರೆತಿದ್ದದ್ದನ್ನು ಅರಿಯೆನು. ಏಳು ಜನ್ಮಗಳ, ಎಲ್ಲಾ ಕಾಲಗಳಲ್ಲೂ (ಎಲ್ಲಾ ಅವಸ್ಥೆಗಳಲ್ಲೂ) ಸ್ಥಿರವಾಗಿ ನಿನ್ನ ಚಿಂತನೆಯನ್ನು ಬಿಡದ ಸಹಜ ಸ್ವಭಾವದಿಂದ ಇರುವ ನನಗೆ ಆನಂದಸಾಗರದ ದಡವನ್ನು ನೀನು ಕೃಪೆಮಾಡಬೇಕು. (55)

ಈ ಪಾಶುರದಲ್ಲಿ ಭಗವತ್ಕೃಪೆಯನ್ನು ಯಾವ ರೀತಿಯಲ್ಲಿ ಸಂಪಾದಿಸಿಕೊಳ್ಳಬೇಕೆಂಬುದನ್ನು ಹೇಳಲಾಗುತ್ತದೆ.

ಭಗವಂತನು ಸರ್ವಜ್ಞ, ಸರ್ವಶಕ್ತ. ಅವನ ಕೈಯಲ್ಲಿರುವ ಚಕ್ರಾಯುಧವು ಎಂಥ ಶಕ್ತಿಶಾಲಿಯಾದ ಎದುರಾಳಿಯನ್ನಾದರೂ ಸೋಲಿಸಬಲ್ಲದು, ಸಂಹರಿಸಬಲ್ಲದು. ಅವನನ್ನಾಶ್ರಯಿಸಿ, ಜನ್ಮ ಜನ್ಮ

ಗಳಲ್ಲಿಯೂ ಅವನನ್ನು ಸಂತತ ಚಿಂತಿಸುತ್ತಾ, ಸೇವೆ ಮಾಡುತ್ತಾ, ದೃಢನಾ
ಅವನಲ್ಲಿ ಭಕ್ತಿ ಮಾಡುವುದನ್ನೇ ನಿಜ ಸ್ವಭಾವವಾಗಿ ಮಾಡಿಕೊಳ್ಳುವುದ
ರಿಂದ ಅವನ ಕೃಪೆಗೆ ಪಾತ್ರರಾಗಬಹುದು. ಆನಂದಸಾಗರದ ದಡವನ್ನು ಸೇರ
ಬಹುದು.

ಆಳ್ವಾರರು ಹೇಳುತ್ತಾರೆ: ಸರ್ವಜ್ಞನೂ ಸರ್ವಶಕ್ತನೂ ಆದ ಸ್ವಾಮಿ
ಯೇ, ನಿನ್ನನ್ನು ನಾನು ಏಳು ಜನ್ಮಗಳಿಂದಲೂ ಬಿಡದೆ ಆಶ್ರಯಿಸಿದ್ದೇನೆ.
ಯಾವಾಗಲೂ ನಿನ್ನ ಚಿಂತನೆ ಮಾಡುವುದನ್ನೇ ನನ್ನ ನಿಜಸ್ವಭಾವವಾಗಿ
ಮಾಡಿಕೊಂಡಿದ್ದೇನೆ. ಯಾವ ಸಮಯದಲ್ಲಿ, ಯಾವ ಅವಸ್ಥೆಯಲ್ಲಿ
ನಿನ್ನನ್ನು ನಾನು ಮರೆಯುವುದಿಲ್ಲ. ಆದ್ದರಿಂದ, ನೀನು ನನ್ನಲ್ಲಿ ಕೃಪೆಮಾಡಿ
ನನ್ನನ್ನು ಆನಂದಸಾಗರದ ದಡವನ್ನು ಸೇರಿಸು.

56. காணக்கழி காதல் கைமிக்குக் காட்டினால்,
நாணப்படுமென்றால் நாணுமே, - பேணிக்
கருமாலைப் பொன்மேனி காட்டாமுன் காட்டும்
திருமாலை நங்கள் திரு.

ಕಾಣಕ್ಕಳಿ ಕಾದಲ್ ಕೈಮಿಕ್ಕು ಕ್ಕಾಟ್ಟಿನಾಲ್,
ನಾಣಪ್ಪಡು ಮೆನ್ರಾಲ್ ನಾಣುಮೇ, - ಪೇಣಿ
ಕ್ಕರುಮಾಲ್ತ್ತೆ ಪ್ಪೊನ್ ಮೇನಿ ಕಾಟ್ಟಾಮುನ್ ಕಾಟ್ಟುಮ್,
ತಿರುಮಾಲ್ತ್ತೆ ನಙ್ಗಳ್ ತಿರು.

ಕಾಣ காண = ಕಾಣಬೇಕೆಂದು, ಕಳಿ கழி = ಅತಿಶಯವಾ
ಕಾದಲ್ காதல் = ಆಸೆಯನ್ನು, ಕೈಮಿಕ್ಕು கைமிக்கு = ಮೇಲಿಂ
ದ ಮೇಲೆ, ಕಾಟ್ಟಿನಾಲ್ காட்டினால் = ತೋರಿಸಿದರೆ, ನಾಣಪ್ಪಡು
ಮೆನ್ರಾಲ್ நாணப்படும் என்றால் = ಸಂಕೋಚವುಂ
ಟಾಗುವುದು ಎಂದರೆ, ನಾಣುಮೇ நாணுமே = ಸಂಕೋಚಪಡು
ವುದಕ್ಕೆ ಆದೀತೇ, ಪೇಣಿ பேணி = ಆಸೆಯಿಂದ ಆಶ್ರಯಿಸಿ,
ಕರುಮಾಲ್ತ್ತೆ கருமாலை = ಕಪ್ಪುಬಣ್ಣದ ಸ್ವಾಮಿಯು, (ತನ್ನ) ಪ್ಪೊನ್
ಮೇನಿ பொன் மேனி = ಸುಂದರವಾದ ರೂಪವನ್ನು, ಕಾಟ್ಟಾಮುನ್
காட்டாமுன் = ತೋರಿಸುವುದಕ್ಕೆ ಮುಂಚೆಯೇ, ಕಾಟ್ಟುಮ್
காட்டும் = ತೋರಿಸುತ್ತಾಳೆ, ತಿರುಮಾಲ್ತ್ತೆ திருமாலை = ಸರ್ವೇ
ಶ್ವರನನ್ನು, ನಙ್ಗಳ್ ತಿರು நங்கள் திரு = ನಮ್ಮ ಲಕ್ಷ್ಮೀದೇವಿ.

ಭಗವಂತನನ್ನು ಕಾಣಬೇಕೆಂಬ ಅತಿಶಯವಾದ ಆಸೆಯನ್ನು
ಮೇಲಿಂದ ಮೇಲೆ ತೋರಿಸುವುದಕ್ಕೆ ಸಂಕೋಚವುಂಟಾಗುವುದು

ಎಂದರೆ, ಹಾಗೆ ಸಂಕೋಚ ಪಡಬಹುದೇ? ತಪ್ಪು ಬದ್ಧನಾದ ಸ್ವಾಮಿಯು ತನ್ನ ಸುಂದರ ರೂಪವನ್ನು ತಾನೇ ತೋರಿಸುವುದಕ್ಕೆ ಮುಂಚೆ ತಾನೇ, ನಮ್ಮ ಲಕ್ಷ್ಮೀದೇವಿಯೇ ಸ್ವತಃ ಸರ್ವೇಶ್ವರನನ್ನು ತೋರಿಸುತ್ತಾಳೆ. (5

ಹಿಂದಿನ ಪಾಶುರದಲ್ಲಿ ಭಗವಂತನಲ್ಲಿ ನೇರವಾದ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ಆನಂದ ಸಾಗರದ ದಡವನ್ನು ಸೇರಿಸಬೇಕೆಂದು. ತನ್ನ ಪ್ರಾರ್ಥನೆ ಫಲಿಸುವುದಕ್ಕೆ ಮತ್ತೇನು ಮಾಡಬೇಕು? ಬರೀ ಪ್ರಾರ್ಥನೆ ಸಾಕೇ? ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಅವನ ದಿವ್ಯಸ್ವರೂಪವನ್ನು ಕಂಡು ಆನಂದಿಸಬೇಕು. ಸದಾ ಅವನ ಸೇವೆಯಲ್ಲಿ ತೊಡಗಬೇಕು. ಹೀಗೆ ಮಾಡುವುದೇ ಆನಂದ ಸಾಗರದಲ್ಲಿ ಓಲಾಡುವ ಬಗೆ.

ಈ ಸ್ಥಿತಿಯನ್ನು ಸದಾ ಪಡೆದುಕೊಳ್ಳುವುದು ಹೇಗೆ? ಭಗವಂತನನ್ನು ಕಾಣಬೇಕು ಎಂಬ ಅತಿಶಯವಾದ ಆಸೆಯನ್ನು ಮೇಲಿಂದ ಮೇಲೆ ತೋರ್ಪಡಿಸಬೇಕು. ಇದಕ್ಕೆ ಯಾವ ಬಗೆಯ ಸಂಕೋಚವನ್ನೂ ಪಡಬಾರದು. ಅಲ್ಲದೆ, ಭಗವಂತನ ಕೃಪೆಗೆ ನಾವು ಪಾತ್ರರಾಗುವಂತೆ ಮಾಡತಕ್ಕ ಮತ್ತೊಬ್ಬ ಹಿರಿಯ ವ್ಯಕ್ತಿಯನ್ನು ನಾವು ಆಶ್ರಯಿಸಬೇಕು. ಅಂಥ ಹಿರಿಯ ವ್ಯಕ್ತಿಯೇ ಲಕ್ಷ್ಮೀದೇವಿ.

ಆ ಮಹಾತಾಯಿ ದಯಾಸ್ವರೂಪಳು. ನಮ್ಮ ಅತಿಶಯವಾದ ಆಸಕ್ತಿಗೆ ಮಣಿದು, ನಮ್ಮ ವಿಷಯದಲ್ಲಿ ಭಗವಂತನನ್ನು ಒಲಿಸಿಕೊಂಡು, ನಮಗೆ ಆತನನ್ನು ತೋರಿಸುತ್ತಾಳೆ.

ಭಗವಂತನಲ್ಲಿ ಭಕ್ತನ ಬಗ್ಗೆ ಶಿಫಾರಸು ಮಾಡಿ, ಸ್ವಾಮಿಯನ್ನು ಭಕ್ತನ ಅನುಗ್ರಹಿಸಲು ಒಪ್ಪಿಸಿಕೊಳ್ಳುವ ಕೆಲಸಕ್ಕೆ "ಪುರುಷಕಾರ" ಎನ್ನುತ್ತಾರೆ. ಇಲ್ಲಿ ಶ್ರೀದೇವಿ "ಪುರುಷಕಾರಸ್ವರೂಪಳು!" ಆಕೆಯನ್ನು ಆಶ್ರಯಿಸುವುದರಿಂದ, ಭಗವಂತನನ್ನು, ಆ ಮೂಲಕ ಸಾಕ್ಷಾತ್ಕರಿಸಿಕೊಳ್ಳಬಹುದು.

ಆಳ್ವಾರರು ಹೇಳುತ್ತಾರೆ: ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಆಸೆಯನ್ನು ಅತಿಶಯವಾಗಿ ಬೆಳೆಸಿಕೊಂಡು, ಅದನ್ನು ಮೇಲಿಂದ ಮೇಲೆ ತೋರ್ಪಡಿಸುವುದಕ್ಕೆ ಸಂಕೋಚ ಪಡಬಾರದು. ಭಗವಂತನು ಸ್ವತಃ ತನ್ನ ದಿವ್ಯ ಸ್ವರೂಪವನ್ನು ನಮಗೆ ತೋರ್ಪಡಿಸುವುದಕ್ಕಿಂತ ಮುಂಚೆ ತಾನಾಗಿಯೇ, ನಮ್ಮ ಶ್ರೀದೇವಿಯೇ ನಮಗೆ ಅವನನ್ನು ನಮಗೆ ತೋರಿಸಬಲ್ಲಳು. ಆ ಮಹಾಮಾತೆಯನ್ನು ನಾವು ಮೊದಲು ಆಶ್ರಯಿಸಬೇಕು.

57. திருமங்கை நின்றருளும் தெய்வம் நாவாழ்த்தும்,
கருமங் கடைப்பிடிமின் கண்டீர், — உரிமையால்
ஏத்தினோம் பாதமிருந்தடக்கை யெந்தை பேர்,
நாற்றிசையுங் கேட்டீரே நாம்

ತಿರುಮಙ್ಗೈ ನಿನ್ರರುಳುಮ್ ದೆಯ್ವಮ್ ನಾವಾಳ್ತ್ತುಮ್,
ಕರುಮಙ್ಗಡೈಪ್ಪಿಡಿಮಿನ್ ಕಣ್ಡೀರ್, — ಉರಿಮೈಯಾಲ್
ಏತ್ತಿನೋಮ್ ಪಾದಮಿರುನ್ದಡಕ್ಕೈ ಯೆನ್ದೈ ಪೇರ್,
ನಾಟ್ರಿಶೈಯುಙ್ ಕೇಟ್ಟೀರೇ ನಾಮ್.

ತಿರುಮಙ್ಗೈ திருமங்கை = ಶ್ರೀದೇವಿಯು, ನಿನ್ರು நின்று = ಸ್ಥಿರವಾಗಿ ವಾಸಿಸುವಂತೆ, ಅರುಳುಮ್ அருளும் = ಕೃಪೆಮಾಡುವ, ದೆಯ್ವಮ್ தெய்வம் = ದೈವವಾದ ಭಗವಂತನನ್ನು (ಶ್ರೀಮನ್ನಾರಾಯಣನನ್ನು), ನಾವಾಳ್ತ್ತುಮ್ நாவாழ்த்தும் = ನಾಲಗೆಯಿಂದ ಸ್ತುತಿಸುತ್ತಾ, ಕರುಮಮ್ கருமம் = ಕರ್ತವ್ಯವನ್ನು, ಕಡೈಪ್ಪಿಡಿಮಿನ್ ಕಣ್ಡೀರ್ கடைப்பிடிமின் கண்டீர் = ಚೆನ್ನಾಗಿ ಅನುಸರಿಸಿಕೊಳ್ಳುವಿರಾ ಕಂಡಿರಾ, ಉರಿಮೈಯಾಲ್ உரிமையால் = ಕರ್ತವ್ಯಪೂರ್ವಕವಾಗಿ (ಸೇವಾಪೂರ್ವಕವಾಗಿ), ಏತ್ತಿನೋಮ್ ஏத்தினோம் = ಸ್ತುತಿಸುತ್ತೇವೆ (ಸ್ತುತಿಸುತ್ತೇವೆ), ಪಾದಮ್ பாதம் = ಆ ಸ್ವಾಮಿಯ ತಿರುವಡಿಗಳನ್ನು, ಇರು இரு = ವಿಸ್ತಾರವಾದ (ಬಲುದೊಡ್ಡ), ತಡಕ್ಕೈ தடக்கை = ನೀಳ್ಗೈಗಳನ್ನು, ಎನ್ದೈ எந்தை = ನಮ್ಮ ತಂದೆಯ (ನಮ್ಮ ಸ್ವಾಮಿಯ), ಪೇರ್ பேர் = ತಿರುನಾಮಗಳನ್ನು, ನಾಲ್ ತಿಶೈಯುಮ್ நாற்றிசையும் = ನಾಲ್ಕು ದಿಕ್ಕುಗಳಲ್ಲಿಯೂ, ಕೇಟ್ಟೀರೇ கேட்டீரே = ಕೇಳಿದಿರಲ್ಲವೇ, ನಾಮ್ நாம் = ನಾವು.

ಶ್ರೀದೇವಿಯು ಸ್ಥಿರವಾಗಿ (ಶಾಶ್ವತವಾಗಿ) ವಾಸಿಸುವಂತೆ ಕೃಪೆಮಾಡುವ ದೈವವಾದ ಭಗವಂತನನ್ನು (ಶ್ರೀಮನ್ನಾರಾಯಣನನ್ನು) ನಾಲಗೆಯಿಂದ ಸ್ತುತಿಸುತ್ತಾ, (ನಿಮ್ಮ) ಕರ್ತವ್ಯವನ್ನು ಚೆನ್ನಾಗಿ ಅನುಸರಿಸಿಕೊಳ್ಳುವವರಾಗಿ ಕಂಡಿರಾ. ನಾವಾದರೋ ಸೇವಾ ಕರ್ತವ್ಯಪೂರ್ವಕವಾಗಿ ಭಗವಂತನ ತಿರುವಡಿಗಳನ್ನು, ಬಲುದೊಡ್ಡ ನೀಳ್ಗೈಗಳನ್ನು ಸ್ತುತಿಸುತ್ತೇವೆ. ನಮ್ಮ ತಂದೆಯ (ಸ್ವಾಮಿಯ) ತಿರುನಾಮಗಳನ್ನು ನಾಲ್ಕು ದಿಕ್ಕುಗಳಲ್ಲಿಯೂ ನೀವು ಕೇಳಿದ್ದೀರಲ್ಲವೇ? (57)

ಹಿಂದಿನ ಪಾಶುರದಲ್ಲಿ ಭಗವಂತನ ಸಾಮರ್ಥ್ಯಕ್ಕೆ ಪ್ರಾಮುಖ್ಯತೆ.

Garani Srinivasan

ದ್ವಾರಲ್ಲಾದ ಶ್ರೀದೇವಿಯನ್ನು ಆಶ್ರಯಿಸುವುದು ಮೊದಲಕೆಲಸವೆಂದು ಹೇಳಲಾಯಿತು. ಆ ವಿಷಯವನ್ನೇ ಮುಂದುವರಿಸುತ್ತಾ ಇಲ್ಲಿ ಹೇಳ ಅರುವುದು ಭಗವಂತನ ಪರಮೋದಾರ್ಯ ಸ್ವಭಾವವನ್ನು. ಶ್ರೀದೇವಿಯನ್ನು ಭಗವಂತನು ತನ್ನ ವಕ್ಷಸ್ಥಲದಲ್ಲಿ ಶಾಶ್ವತವಾಗಿ ವಾಸವಾಗುವಂತೆ ಎಡೆಮಾಡಿಕೊಟ್ಟಿದ್ದಾನೆ. ಅವನ ತಿರುವಡಿಗಳನ್ನು, ಔದಾರ್ಯ ಪೂರ್ಣವಾದ ನಿಲ್ಲಿನ್ಗಳನ್ನು ಸ್ತುತಿಸಿ, ಪೂಜಿಸುವುದು ಭಕ್ತನ ಕರ್ತವ್ಯ. ಮತ್ತು ಸ್ವಾಮಿಯ ತಿರುನಾಮಗಳನ್ನು ಬಾಯತುಂಬ ಕೀರ್ತಿಸುತ್ತಿರಬೇಕು.

ಆಳ್ವಾರರು ಹೇಳುತ್ತಾರೆ: ಜನರೇ, ~~ನಾವು~~ ನಾವು ಭಗವಂತನ ತಿರುವಡಿಗಳನ್ನು ಅವನ ಬಲು ದೊಡ್ಡ ನಿಲ್ಲಿನ್ಗಳನ್ನು ದೇವಾಧಿ ವರರಾಗಿಯೂ, ನಮ್ಮ ಕರ್ತವ್ಯವೇ ಅದೆಂದು ಭಾವಿಸಿಕೊಂಡು (ಅರಿತುಕೊಂಡು) ಪೂಜಿಸುತ್ತಿರುತ್ತೇವೆ. ನಮ್ಮ ತಂದೆಯಾದ ಭಗವಂತನ ತಿರುನಾಮಗಳನ್ನು ನಾಲ್ಕು ದಿಕ್ಕುಗಳಲ್ಲಿಯೂ ಹರಡಿ ಎಲ್ಲೆಡೆ ಗಾ ಬಲ್ಲುವಂತೆಯೂ ಕೀರ್ತಿಸುತ್ತೇವೆ. ನೀವು ನಿಮ್ಮ ಹಾಗೆಯೇ ಮಾಡಬೇಕು. ಸ್ವಾಮಿಯು ಶ್ರೀದೇವಿಗೆ ಸ್ಥಾನಮಾಡಿ, ಆಕೆ ತನ್ನ ವಕ್ಷಸ್ಥಲದಲ್ಲಿ ನಿತ್ಯವಾಸ ಮಾಡುವಂತೆ ವಿಧಿ ಮಾಡಿದ್ದಾನೆ. ಅವನ ಔದಾರ್ಯವನ್ನು ತಿರುಣ್ಣಾವನ್ನು ಚೆನ್ನಾಗಿ ಸ್ತುತಿಸಿ. ನಿಮ್ಮ ಕರ್ತವ್ಯವನ್ನು ಅರಿತುಕೊಂಡು, ತನುಮನಗಳಿಂದ ಸ್ವಾಮಿಯನ್ನು ಪೂಜಿಸಿ.

ಶ್ರೇಷ್ಠರು ಯಾವುದನ್ನು ಮಾಡಿ ತೋರಿಸುತ್ತಾರೋ ಅದು ಇತರರಿಗೆ ಮಾರ್ಗದರ್ಶನವಾಗುತ್ತದೆ. ಅದನ್ನು ಮೇಲ್ಪಂಕ್ತಿಯಾಗಿ ಮಾಡಿಕೊಂಡು ಇತರರು ಉದ್ಧಾರಗೊಳ್ಳುತ್ತಾರೆ.

58. நாம் பெற்ற நன்மையும் நாமங்கை நண்ணுஞ் சுகத்து,
ஓம்பி யிருந்தெம்மை யோதுவித்து, — வேம்பின்
பொருள் நீர்மை யாயினும் பொன்னாழி பாடென்று,
அருள் நீர்மை தந்த வருள்

ನಾಮ್ ಪೆತ್ರ ನನ್ಮೈಯುಮ್ ನಾಮಙ್ಗೈ ನಣ್ಣುಂಜತ್ತು,
ಓಮ್ಬಿ ಯಿರುನ್ದೆಮ್ಮೈ ಯೋದುವಿತ್ತು, — ವೇಮ್ಬಿನ್
ಪೊರುಳ್ ನೀರ್ಮೈ ಯಾಯಿನುಮ್ ಪೊನ್ನಾಳಿ ಪಾಡೆನ್ಱು,
ಅರುಳ್ ನೀರ್ಮೈ ತನ್ದ ವರುಳ್.

Garani Srinivasan

ನಾಮ್ நாம் = ನಾವು, ಪೆಟ್ರ பெற்ற = ಪಡೆದ, ನನ್ಮೈಯುಮ್ நன்மையும் = ಸುಕೃತವು, ನಾಮಙ್ಗತ್ತ நாமங்காக = ನಾಲಗೆಯ ದೇವಿಯು (ಭಗವತಿಯು), ನಲ್ ನೆಂಜತ್ತು நல் நெஞ்சத்து = ಒಳ್ಳೆಯ ಮನಸ್ಸಿನಲ್ಲಿ, ಓಂಬಿ ஓம்பி = ಆಸೆಯಿಂದ, (ಆದರದಿಂದ), ಇರುನ್ದು இருந்து = ನೆಲಸಿ, ಎಮ್ಮೈ எம்மை = ನಮ್ಮನ್ನು, ಓದುವಿತ್ತು ஓதுவித்து = ಜ್ಞಾನವಂತರನ್ನಾಗಿ ಮಾಡಿ (ತಿಳುವಳಿಕೆಯುಳ್ಳವರನ್ನಾಗಿ ಮಾಡಿ) ವೇಮ್ಬಿನ್ வேம்பின் = ಬೇವಿನಂತೆ, ಪೊರುಳ್ பொருள் = ವಸ್ತುವಿನ, ನೀರ್ಮೈ ಆಯಿನುಮ್ நீர்மை ஆயினும் = ಸ್ವಭಾವವಾದರೂ ಸಹ, ಪೊನ್ ಆಳಿ பொன் ஆழி = ಸುಂದರವಾದ ಚಕ್ರಾಯುಧಧಾರಿಯನ್ನು, ಪಾಡನ್ನೋ பாடென்று = ಹಾಡುವಂತೆ, ಅರುಳ್ ನೀರ್ಮೈ அருள் நீர்மை = ಕೃಪೆಯನ್ನೇ ಸ್ವಭಾವವನ್ನಾಗಿ, ತನ್ದ தந்த = ಕರುಣಿಸಿದ, ಅರುಳ್ அருள் = ಸರ್ವೇಶ್ವರನ ಕೃಪೆಯೇ.

ನಾವು ಪಡೆದ ಸುಕೃತವು, ನಾಲಗೆಯ ದೇವಿಯು (ಭಗವತಿಯು) ಒಳ್ಳೆಯ ಮನಸ್ಸಿನಲ್ಲಿ ಆದರದಿಂದ ನೆಲಸಿ ನಮ್ಮನ್ನು ಜ್ಞಾನವಂತರನ್ನಾಗಿ ಮಾಡಿ, ಬೇವಿನಂತೆ ವಸ್ತುವಿನ ಸ್ವಭಾವವಾದರೂ ಸಹ, ಸುಂದರವಾದ ಚಕ್ರಾಯುಧಧಾರಿಯನ್ನು ಕುರಿತು ಹಾಡುವಂತೆ ಕೃಪೆಯನ್ನೇ ಸಹಜವಾಗಿ (58)
ಕರುಣಿಸಿದ ಸರ್ವೇಶ್ವರನ ಕೃಪೆಯೇ.

ನಮಗೆ ಪುರುಷಾರ್ಥವಾಗಿ ಬರುವುದಕ್ಕೆ ಅನುಕೂಲವಾಗುವಂತೆ ಶ್ರೀದೇವಿಯನ್ನು ಭಗವಂತನು ತನ್ನ ವಶದಲ್ಲಿಯೇ ಶಾಶ್ವತವಾಗಿ ಇಟ್ಟುಕೊಂಡಿದ್ದಾನೆ. ಇದು ಸ್ವಾಮಿಯ ಕೃಪೆ ಎಂಬುದು ಇಂದಿನ ಪಾಶುರದ ವಿಷಯ.

"ವೇಮ್ಬಿನ್ ಪೊರುಳ್ ಆಯಿನುಮ್" — ಇದರಲ್ಲಿ ಸುಂದರವಾದ ರೂಪಕವಿದೆ. ಬೇವಿನ ಮರದ ವಸ್ತು ಎಂದರೆ ಅದರ ಮೂಲವಸ್ತು. ಅದು ಕಹಿ. ತನ್ನ ಕಹಿ ಸ್ವಭಾವವನ್ನು ಸುಲಭವಾಗಿ ಅದು ಬಿಟ್ಟುಕೊಡುವುದಿಲ್ಲ ಬೇವಿನ ಮರ. ಹಾಗೆಯೇ, ಮನುಷ್ಯನ ಮೂಲ ಸ್ವಭಾವ ಭಗವದ್ವಿಷಯಗಳನ್ನು ಕುರಿತು ಇಷ್ಟಪಡದಿರುವುದೆ. ಅವನು ಇಂದ್ರಿಯಗಳಿಗೆ ವಶನಾಗಿ ಕ್ಷಣಿಕವಾದ ಪ್ರಾಪಂಚಿಕ ಸುಖವನ್ನೇ ಶಾಶ್ವತವಾದದ್ದೆಂದು ತಿಳಿಯುವನು. ಮತ್ತು ಅದನ್ನೇ ಹುಡುಕಿಕೊಂಡು ಹೋಗುವನು. ಭಗವತಿ ದೇವಿಯ ಕೃಪೆಯಿಂದ ಅವನು ಜ್ಞಾನವಂತನಾಗಿ, ಭಗವಂತನ ಕಡೆಗೆ ಮನಸ್ಸನ್ನು ಕೊಡುತ್ತಾನೆ.

'ನಾ ಮನ್ನ್ ನಾಮಂಗಳಾಕ' — ನಾಲಗೆಯಲ್ಲಿ ನೆಲೆ ನಿಂತ ದೇವತೆ — ಸರಸ್ವತಿ ದೇವಿ. ಅವಳ ಬಲದಲ್ಲದೆ ಜ್ಞಾನವಿಲ್ಲ. ಮನುಷ್ಯ ಜ್ಞಾನಯೋಗವು ವ್ಯರ್ಥ.

ಆಳ್ವಾರರು ಹೇಳುತ್ತಾರೆ: ಸ್ವಭಾವತಃ ನಾವು ಭಗವದ್ವಿಷಯವಾದ ಜ್ಞಾನವನ್ನು ಅರಿತವರಲ್ಲ. ಆದರೆ, ಸರಸ್ವತಿ ದೇವಿಯು ನಮ್ಮಲ್ಲಿ ಕೃಪೆದೋರಿದ್ದಾಳೆ. ನಮ್ಮನ್ನು ಜ್ಞಾನವಂತರನ್ನಾಗಿ ಮಾಡಿದ್ದಾಳೆ. ನಮಗೆ ಭಗವದ್ವಿಷಯವಾದ ಜ್ಞಾನವನ್ನು ನೀಡಿದ್ದಾಳೆ. ಅಲ್ಲದೆ, ಭಗವಂತನನ್ನು ಹೊಗಳಿ ಹಾಡುವಂತೆ ಮನಸ್ಸನ್ನುಂಟು ಮಾಡಿದ್ದಾಳೆ. ಇದು ನಮ್ಮ ಸುಕೃತ ವಿಶೇಷವೆಂದರೆ, ಶಾರದೆಯ ಕೃಪೆಯೂ ಸಹ ಸರ್ವೇಶ್ವರನಾದ ಭಗವಂತನ ಕೃಪೆಯಿಂದಲೇ ಬಂದದ್ದು.

59. அருள்புரிந்த சிந்தை யடியார் மேல் வைத்து,
பொருள் தெரிந்து காண்குற்றவப்போது, — இருள்திரிந்து
நோக்கினேன் நோக்கி நினைந்தேன தொண் கமலம்,
ஓக்கினே னென்னையுமங் கோர்ந்து.

ಅರುಳ್ ಪುರಿನ್ದ ಶಿನ್ದೈಯಡಿಯಾರ್ ಮೇಲ್ ವೈತ್ತು,
ಪೊರುಳ್ ತೆರಿನ್ದು ಕಾಣ್ ಕುತ್ತ್ರವಪ್ಪೋದು, — ಇರುಳ್ ತಿರಿನ್ದು
ನೋಕ್ಕಿನೇನ್ ನೋಕ್ಕಿ ನಿನೈನ್ದೇನದೊಣ್ ಕಮಲಮ್,
ಓಕ್ಕಿನೇ ನೆನ್ನೈಯುಮಂಗೋರ್ನ್ದು.

ಅರುಳ್ ಪುರಿನ್ದ அருள் புரிந்த = ಕೃಪೆಯಿಂದ ಕೂಡಿದ, ಶಿನ್ದೈ சிந்தை = ಚಿಂತನೆಯನ್ನು (ಮನಸ್ಸನ್ನು), ಅಡಿಯಾರ್ ಮೇಲ್ ವೈತ್ತು அடியார் மேல் வைத்து = ಪಾದಸೇವಕರ ಮೇಲಿಟ್ಟು, ಪೊರುಳ್ ತೆರಿನ್ದು பொருள் தெரிந்து = ಅದೇನೆಂದು ಯೋಗ್ಯ ವಸ್ತುವೆಂದು ತಿಳಿದು, ಕಾಣ್ ಕುತ್ತ್ರ காண் குற்ற = ಕಟಾಕ್ಷಿಸಲವರು, ಅಪ್ಪೋದು அப்போது = ಆ ಕಾಲದಲ್ಲಿ, ಇರುಳ್ ತಿರಿನ್ದು இருள் திரிந்து = ನನ್ನ (ಅಜ್ಞಾನವೆಂಬ) ಕತ್ತಲೆಯನ್ನು ಕಳೆದು, ನೋಕ್ಕಿನೇನ್ நோக்கினேன் = ನೋಡಿದೆನು, ನೋಕ್ಕಿ நோக்கி = ಗಮನಿಸಿ (ನೋಡಿ), ನಿನೈನ್ದೇನ್ நினைந்தேன் = ಧ್ಯಾನಿಸಿಕೊಂಡೆನು, ಅದು ಒಣ್ ಕಮಲಮ್ அது ஒண் கமலம் = ಅದೇನೆಂದು ಸುಂದರವಾದ ಕಮಲವೆಂದು (ಕಮಲದಂಥ ತಿರುವಡಿಯೆಂದು), ಎನ್ನೈಯುಮ್

எண்ணாயும் = ನನ್ನನ್ನು ದಿದ, ஆறும் ஆர்க்கு = ಅಲ್ಲಿ, ಓರನ್ನು ಶಾರ (ಅಂಕುರಿಂದು)
ந்து = ವಿಚಾರಿಸಿ (ಸಮಾಪಿಸಿ), ಒಕ್ಕನೇನ್ ಶಾಕ்களை ணண் = ಸಮರ್ಪಿ
ಸಿಕೊಂಡೆನು.

ಕೃಪೆಯಿಂದ ಕೂಡಿದ ಚಿಂತನೆಯುಳ್ಳ (ಮನಸ್ಸುಳ್ಳ) ಪಾಪಗಳ
ವಿಕರ ಮೂಲಗಳು, ಅದರಿಂದು ಯಾಲಿನ್ನ ವಸ್ತು ಎಂದು ತಿಳಿದು ಕಟಾಕ್ಷದ
ಅರಿವ ಆ ಕಾಲದಲ್ಲಿ, ಅಜ್ಞಾನವೆಂಬ (ನನ್ನ) ಕತ್ತಲೆಯುಳ್ಳ ಕಿಳರು
ಯೋಚಿಸಿ ನೋಡಿದೆನು. ಸಮನಿಸಿ ನೋಡಿ, ಅದರಿಂದು ಸುಂದರವಾದ
ಕಮಲದಂಥ ತಿರುವಡಿಯಿಂದು (ಪಾದಕಮಲವೆಂದು) ಅಂಕುರಿಂದು (59)
ನನ್ನನ್ನು ದಿದ ಅಲ್ಲಿ ಸಮರ್ಪಿಸಿಕೊಂಡೆನು.

ಕನ್ನ ಭಕ್ತರಲ್ಲಿ ಕೃಪೆ ತೋರಬೇಕೆಂದು ಭಗವಂತನು ಮನಸ್ಸು ಮಾಡಿ
ದ ಕೂಡಲೇ ಅವರ ಅಜ್ಞಾನ ಕೋಲಗುವುದು. ಅವರು ಭಗವಂತನ ತಿರುವಡಿ
ಗಳಲ್ಲಿ ಶರಣಾಗುತ್ತಾರೆ. ಅವುಗಳನ್ನು ಬಿಡದೆ ಆಶ್ರಯಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಕನ್ನನ್ನು ಕುರಿತು ನಾನಾ ಲೀಲೆಯಲ್ಲಿ
ಆಗಳುವ ಭಕ್ತರಲ್ಲಿ ಭಗವಂತನು ಕೃಪೆ ಮಾಡುತ್ತಾನೆ. ಕನ್ನ
ಅನುಗ್ರಹಕ್ಕೆ ಕಕ್ಕವರು ಎಂದು ಯೋಚಿಸುತ್ತಾನೆ. ಅಂಥ ಸಮಯವು
ಬಾಯಿತು. ಆಗಲೇ ನನ್ನ ಅಜ್ಞಾನ ಕೋಲಗಿಹೋಯಿತು. ಜ್ಞಾನವುಂಟಾ
ಯಿತು. ಆ ಭಗವಂತನ ತಿರುವಡಿಗಳನ್ನು ಕಂಡೆ. ಸುಂದರವಾದ ಕಮಲ
ಗಳಂತೆ ಅವು ಕಂಡವು. ಹಾಗೆ ಅವುಗಳನ್ನು ಅಂಕುರಿಂದು ಕೂಡಲೇ,
ಇತರ ಭಕ್ತರು ಮಾಡಿದಂತೆಯೇ, ನಾನೂ ಆ ಪಾದಕಮಲಗಳಲ್ಲಿ
ನನ್ನನ್ನು ಸಮರ್ಪಿಸಿಕೊಂಡೆ.

60\. ஓருருவனல்லை யொளியுருவம் நின்னுருவம்,
ஈருருவனென்ப ரிருநிலத்தோர், — ஓருருவம்
ஆதியாம் வண்ண மறிந்தாரவர் கண்டீர்,
நீதியால் மண் காப்பார் நின்று.

ಓರುರುವನಲ್ಲೈ ಯೊಳಿಯುರುವಮ್ ನಿನ್ನುರುವಮ್,
ಈರುರುವನೆನ್ಬ ರಿರುನಿಲತ್ತೋರ್, — ಓರುರುವಮ್
ಆದಿಯಾಮ್ ವಣ್ಣ ಮರಿನ್ದಾರವರ್ ಕಣ್ಡೀರ್,
ನೀದಿಯಾಲ್ ಮಣ್ ಕಾಪ್ಪಾರ್ ನಿನ್ರು.

ಓರ್ ಶಾರ = ಪರಿಚ್ಛೇದವುಳ್ಳ (ಅಳಿಯಲಸಾಧ್ಯವಾದ), ಉರುವನ್ ಅಲ್ಲೈ
உருவன் அல்லை = ರೂಪವುಳ್ಳವನು ನೀನಲ್ಲ, ಒಳಿ ಉರುವಮ್
ஒளி உருவம் = ಕಣ್ಣಿಗೆ ಕಾಣಿಸುವ ರೂಪ, ನಿನ್ ಉರುವಮ್ ನಿನ್
உருவம் = ನಿನ್ನ ರೂಪ, ಈರ್ ಉರುವನ್ ஈர் உருவன் = ಮಧುರವಾದ

Garani Srinivasan

ರೂಪವುಳ್ಳವನು, ಎನ್‌ಬರ್ ನಣ್ಬರ್ = ಎನ್ನುತ್ತಾರೆ. ಇರು ನಿಲತ್ತೋರ್ (ತಿ)ರು ತಿಲಕ್ಕತ್ತಾರ್ = ವಿಸ್ತಾರವಾದ ಭೂಮಿಯಲ್ಲಿರುವವರು, ಓರ್ ಉರುವಮಾಯ್ ಒರುವಂ = ಯೋಚಿಸಲಾಗದ (ಚಿಂತಿಸಲಾಗದ) ರೂಪ, ಆದಿ ಆವಾ ಆಕ್ಕಿ ಆಮ್ = ಎಲ್ಲಕ್ಕೂ ಆದಿಯಾಗುವ, ವಣ್ಣಾಮಾ ಮಣ್ಣಾಮ್ = ರೀತಿಯನ್ನು, ಅಯ್ಯನ್ಸಾರ್ ಅವರ್ ಕಣ್ಣಲ್ ಅಗ್ರಸಕ್ಕಾರ್ ಅಯರ್ ಕಾಣ್ಬರ್ = ಅರಿತುಕೊಂಡವರು ಕಂಡರೆ, ನೀದಿಯಾಲ್ ನ್ಕಿಯಾಲ್ = ನ್ಯಾಯವಾಗಿ,. ಮಣ್ ಮಣ್ = ಭೂಮಿಯನ್ನು, ಕಾಪ್ಪನ್ ನಿನ್‌ಱು ಕಾಪ್ಪಾಣ್ ನಿಣ್ಱು = ದೃಢವಾಗಿ ನಿಂತು ರಕ್ಷಿಸುತ್ತಾನೆ.

ನೀನು ಪರೀಕ್ಷೆಗೆ ನಿಲುಕದ (ಅರಿಯಲಸಾಧ್ಯವಾದ) ರೂಪವುಳ್ಳವನಲ್ಲ. ನಿನ್ನ ರೂಪ ಕಣ್ಣಿಗೆ ಕಾಣಿಸುವ ರೂಪ. ವಿಸ್ತಾರವಾದ ಭೂಮಿಯಲ್ಲಿ ವಾಸಿಸುವವರು ನೀನು ಮಧುರವಾದ (ಸೌಮ್ಯವಾದ) ರೂಪವುಳ್ಳವನು ಎನ್ನುತ್ತಾರೆ. ಯೋಚಿಸಲಾಗದ (ಚಿಂತಿಸಲಾಗದ) ರೂಪ ಎಲ್ಲಕ್ಕೂ ಆದಿಯಾಗುವ ರೀತಿಯನ್ನು ಅರಿತುಕೊಂಡವರು ಕಂಡರೆ, ದೃಢವಾಗಿ ನಿಂತು ನ್ಯಾಯವಾದ ರೀತಿಯಲ್ಲಿ ಭೂಮಿಯನ್ನು ರಕ್ಷಿಸುತ್ತಾನೆ. (60)

ತನ್ನ ಆಶ್ರಿತರಲ್ಲಿ ಕೃಪೆ ತೋರಿ ಅವರನ್ನು ಧ್ಯಾನಿಸುವುದೇ ಭಗವಂತನ ಚಿಂತನೆಯಂ ಬದು ಬಂದಿದ ವಿಶೇಷದ ವಿಷಯ.

ಇಲ್ಲಿ ಹೇಳಿರುವುದು ಭಗವಂತನ ಪರತ್ವ ಮತ್ತು ಸೌಲಭ್ಯ ಎಂಬ ಎರಡು ಸ್ವಭಾವಗಳನ್ನು.

ಭಗವಂತನ ರೂಪ ಯಾವುದು? ಅದನ್ನು ನೋಡಿ ಆನಂದಿಸಬಹುದೇ? ಯಾರಾದರೂ ತಿಳಿಯಬೇಕೇ? ಈ ವಿಷಯವನ್ನು ಸರಳವಾಗಿ ಸ್ವಾರಸ್ಯವಾಗಿ ಆಳ್ವಾರರು ಇಲ್ಲಿ ವಿವರಿಸಿದ್ದಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮಿ, ಭೂಮಿಯ ಜನರು ನಿನ್ನ ರೂಪ ಪರೀಕ್ಷೆಗೆ ನಿಲ್ಕುವುದಲ್ಲ, ಅತಿಸೂಕ್ಷ್ಮವಾದದ್ದು ಎನ್ನುತ್ತಾರೆ. ಆದರೆ, ನೀನು ಪರೀಕ್ಷೆಗೆ ನಿಲುಕದ, ಅರಿಯಲಸಾಧ್ಯವಾದ ರೂಪವುಳ್ಳವನಲ್ಲ. ನಿನ್ನ ರೂಪ ಕಣ್ಣಿಗೆ ಕಾಣಿಸುವಂತ ಮಧುರವಾದ ರೂಪ. ಯೋಚನೆಗೆ ಮೀರಿದ ನಿನ್ನ ರೂಪವೇ ಎಲ್ಲಕ್ಕೂ ಆದಿಯೆಂದು ನಿನ್ನನ್ನು ಅರಿತವರು ಹೇಳುತ್ತಾರೆ. ಸೃಷ್ಟಿಗೆ ಆಧಾರವಾದ ನೀನು ದೃಢವಾಗಿ ನಿಂತು, ನ್ಯಾಯವಾದ ರೀತಿಯಲ್ಲಿ ಎಲ್ಲವನ್ನೂ ರಕ್ಷಿಸಿರುವವನು.

ಓರ್ ಆಯ್ - ಎಂಬುದಕ್ಕೆ 'ಪರೀಕ್ಷೆಗೆ ನಿಲುಕುವ', 'ಅರಿಯುವ', 'ಯೋಚಿಸುವ' 'ತಿಳಿಯುವ' ಎಂದು ಅರ್ಥ ಬರುತ್ತದೆ.

ಒಳಿ ಆಣಿ - ಎಂಬುದಕ್ಕೆ 'ಪ್ರಕಾಶ', 'ದೃಷ್ಟಿ', 'ನೋಟ', 'ಕಿರಣ', 'ಜ್ಞಾನ' ಎಂದು ಅರ್ಥ ಬರುತ್ತದೆ.

Garani Srinivasan

ಕೀರ್ ಗಾರ್ — ಎಂಬುದಕ್ಕೆ 'ದೀಪ್ತ', 'ಶಕ್ತನಾದ', 'ಮಧುರನಾದ', 'ನುಣುಪಾದ' — ಎಂದು ಅರ್ಥಬರುತ್ತದೆ.

61. நின்ற தோர் பாதம் நிலம் புதைப்ப, நீண்ட தோள்
சென்றளந்த தென்பர் திசையெல்லாம், - அன்று
கருமாணியா யிரந்த கள்வனே, உன்னைப்
பிரமாணித்தார் பெற்ற பேறு.

ನಿನ್ಱದೋರ್ ಪಾದಮು ನಿಲಮು ಪುದೈಪ್ಪ, ನೀಣ್ಡದೋಳ್
ಶೆನ್ಱಳನ್ದ ದೆನ್ಬರ್ ತಿಶೈಯೆಲ್ಲಾಮು, - ಅನ್ಱು
ಕರುಮಾಣಿಯಾ ಯಿರನ್ದ ಕಳ್ವನೇ, ಉನ್ನೈಪ್
ಪ್ಪಿರಮಾಣಿತ್ತಾರ್ ಪೆಱ್ಱ ಪೇಱು.

ನಿನ್ಱದು நின்றது = ನೆಲದ ಮೇಲೆ ನಿಂತಂಥ, ಒರ್ ತೋರ್ = ಒಂದು ಪಾದಮು பாதம் = ತಿರುವಡಿಯು, ನಿಲಮು நிலம் = ಭೂ ಮಂಡಲವ ಪುದೈಪ್ಪು புதைப்பு = ಆವರಿಸಿಕೊಂಡು, ನೀಣ್ಡ நீண்ட = ಉದ್ದನಾದ, ತೋಳ್ தோள் = ತೋಳು, ~~[illegible]~~ ಅಳನ್ದದು ಎನ್ಬರ್ அளந்தது ಶೆನ್ಱು சென்று = ವಿಸ್ತರಿಸಿ, ಅಳನ್ದದು ಎನ್ಬರ್ = ಅಳೆದುಕೊಂಡಿತು ಎನ್ನುತ್ತಾರೆ. ತಿಶೈ ಎಲ್ಲಾಮು திசை என்பர் = ಅಳೆದುಕೊಂಡಿತು ಎನ್ನುತ್ತಾರೆ, ತಿಶೈ ಎಲ್ಲಾಮು எல்லாம் = ಎಲ್ಲಾ ದಿಕ್ಕುಗಳನ್ನು, ಅನ್ಱು அன்று = ಅಂದು, ಕರು கரு = (ಮಗುವಿನ ಹಾಗೆ) ಚಿಕ್ಕವನಾದ, ಮಾಣಿಯ மாணியா = ಬ್ರಹ್ಮಚಾರಿಯಾಗಿ, ಇರನ್ದ இரந்த = ಯಾಚಿಸಿದ, ಕಳ್ವನೇ கள்வனே = ವಂಚಕನೇ, ಉನ್ನೈ உன்னை = ನಿನ್ನನ್ನು, ಪಿರಮಾಣಿತ್ತಾರ್ பிரமாணித்தார் = ಒಪ್ಪಿಕೊಂಡವರು (ಆಶ್ರಯಿಸಿದವರು), ಪೇಱು பேறு = ಫಲ (ಪುರುಷಾರ್ಥ), ಪೆಱ್ಱ பெற்ற = ಪಡೆದ.

~~[illegible]~~

ನೆಲದ ಮೇಲೆ ನಿಂತ ಒಂದು ತಿರುವಡಿಯು ಭೂಮಂಡಲವನ್ನು ಆವರಿಸಿಕೊಂಡಿತು, ನಿನ್ನ ಉದ್ದನಾದ ತೋಳುಗಳು ವಿಸ್ತರಿಸಿ ಎಲ್ಲಾ ದಿಕ್ಕುಗಳನ್ನು ಅಳೆದುಕೊಂಡವು ಎನ್ನುತ್ತಾರೆ. ಅಂದು, ಚಿಕ್ಕ ಬ್ರಹ್ಮಚಾರಿಯಾಗಿ ಯಾಚಿಸಿದ ವಂಚಕನೇ ನಿನ್ನನ್ನು ಪ್ರಮಾಣೀಕರಿಸುವವರು ಪಡೆದ ಫಲ (ಇದೇ) ಆಗುವುದು. (61)

ತ್ರಿವಿಕ್ರಮನೇ ಭಗವಂತನ ಲೀಲೆ ಎಂಬುದನ್ನು ಪ್ರಮಾಣೀಕರಿಸುವುದಕ್ಕಾಗಿ ಈ ಪಾಶುರದಲ್ಲಿ ವಾಮನ-ತ್ರಿವಿಕ್ರಮನ ಕಾರ್ಯಗಳ ನಿದರ್ಶನವನ್ನು ಉದ್ಧರಿಸಲಾಗಿದೆ.

ಬಲಿಚಕ್ರವರ್ತಿಯು ನಡೆಸುತ್ತಿದ್ದ ಯಾಗದಲ್ಲಿ ಫಲವಾಗಿ, ದೇವೇಂದ್ರನು ತನ್ನ ಪದವಿಯನ್ನು ಕಳೆದುಕೊಳ್ಳುವ ಸಂದರ್ಭವೊದಗಿದಾಗ, ಭಗವಂತನು ತನ್ನ ಆಶ್ರಿತನಾದ ದೇವೇಂದ್ರನನ್ನು ರಕ್ಷಿಸುವುದಕ್ಕಾಗಿ, ವಾಮನವಟುವಾಗಿ ಬಲಿಚಕ್ರವರ್ತಿಯ ಯಾಗಶಾಲೆಯನ್ನು ಪ್ರವೇಶಿಸಿದನು. ಅವನನ್ನು ಮೂರು ಹೆಜ್ಜೆಗಳಷ್ಟು ನೆಲವನ್ನು ಕೊಡೆಂದು ಯಾಚಿಸಿದನು. ಅದನ್ನು ಪಡೆದುಕೊಂಡ ಕೂಡಲೆ, ಸ್ವಾಮಿಯು ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದು ಹೆಜ್ಜೆ ~~ಯನ್ನು~~ ಯಿಂದ ಭೂಮಂಡಲವನ್ನೆಲ್ಲಾ ಆವರಿಸಿಕೊಂಡನು. ಮತ್ತೊಂದು ಹೆಜ್ಜೆಯಿಂದ ಮೇಲಿನ ಎಲ್ಲಾ ಲೋಕಗಳನ್ನೂ ಆವರಿಸಿ ಅಳೆದುಕೊಂಡನು. ಮೂರನೆಯ ಹೆಜ್ಜೆಯನ್ನು ತನ್ನ ತಲೆಯ ಮೇಲೆ ಇಡುವಂತೆ ಬಲಿಚಕ್ರವರ್ತಿಯು ನಮ್ರತೆಯಿಂದ ಬೇಡಿಕೊಂಡಾಗ, ಆಶ್ರಿತನಾದ ಅವನನ್ನು ಪಾತಾಳಲೋಕದ ಒಡೆಯನನ್ನಾಗಿ ಅನುಗ್ರಹಿಸಿದನು.

ಪಾಶುರದಲ್ಲಿ ಭೂಮಂಡಲವನ್ನು ಅಳೆದುಕೊಂಡ ಒಂದು ಹೆಜ್ಜೆಯ ವಿಷಯವಿದೆ. ಆದರೆ, ಮೇಲಿನ ಲೋಕಗಳನ್ನು ಅಳೆದ ಮತ್ತೊಂದು ಹೆಜ್ಜೆಯ ವಿಷಯವಿಲ್ಲ. ಅದಕ್ಕೆ ಬದಲಾಗಿ ಎಲ್ಲಾ ದಿಕ್ಕುಗಳನ್ನೂ ಆ ವಿರಾಟ್ಪುರುಷನ ತೋಳುಗಳು ಆಕ್ರಮಿಸಿ (ಆವರಿಸಿ) ಕೊಂಡವು ಎಂಬುದೆ. ಭಗವಂತನು ಆಶ್ರಿತರಕ್ಷಣೆಗಾಗಿ "ವಂಚನೆ" ಮಾಡಿದನಲ್ಲವೇ. ಇದೆಲ್ಲ ಆಳ್ವಾರರು ವಿವರಿಸಿದ ಚಮತ್ಕಾರ ಎನ್ನಬಹುದು.

ಆಳ್ವಾರರು ಹೇಳುತ್ತಾರೆ: ಪುಟ್ಟ ಬ್ರಹ್ಮಚಾರಿಯ ರೂಪವನ್ನು ಧರಿಸಿ, (ಬಲಿಯಿಂದ) ವರವನ್ನು ಪಡೆದು, ಅದನ್ನು ತ್ರಿವಿಕ್ರಮನಾಗಿ ಅಳೆದುಕೊಂಡು ವಂಚನೆಮಾಡಿದೆ. ನಿನ್ನ ಒಂದು ತಿರುವಡಿಯು ಸ್ಥಿರವಾಗಿ ಭೂಮಂಡಲವನ್ನು ಆವರಿಸಿ ನಿಂತಿದೆ. ಆಶ್ರಿತರಿಗೆ ಆದರೆ ತೋರುವುದಕ್ಕಾಗಿ. ನಿನ್ನ ತೋಳುಗಳು ಎಲ್ಲಾ ದಿಕ್ಕುಗಳನ್ನೂ ಆವರಿಸಿವೆ. ನೀನು ಆಶ್ರಿತವತ್ಸಲನೆಂದು ಪ್ರಮಾಣೀಕರಿಸುವ ನಿನ್ನ ಚರಿತ್ರೆ ಪಡೆಯುವ ಪುರುಷಾರ್ಥ ನಿನ್ನ ತಿರುವಡಿಗಳ ಆಶ್ರಯ ಮತ್ತು ಅವುಗಳ ರಕ್ಷಣೆಯೇ ಆಗುವುದಷ್ಟೆ.

62. பேரொன்று முன்னறியேன் பெற்றறியேன்
பேதைமையால்,
மாலென்று சொல்லி வணங்கினேன், — ஏறின்
பெருத்தெருத்தங் கோடொசியப் பெண்ணசை
யின் பின்போய்,
எருத்திறுத்த நல்லாயரேறு.

Garani Srinivasan

ಪೇಱೊನ್ಱು ಮುನ್ನಱಿಯೇನ್ ಪೆಱ್ಱಱಿಯೇನ್ ಪೇದೈಮೈಯಾಲ್,
ಮಾಱೊನ್ಱು ಶೊಲ್ಲಿ ವಣಙ್ಗಿನೇನ್, — ಏಱಿನ್
ಪೆರುತ್ತೆರುತ್ತಙ್ಗೋಡೊಶಿಯ ಪೆಣ್ಣಾಶೈಯಿನ್ ಪಿನ್ಪೋಯ್,
ಎರುತ್ತಿಱುತ್ತ ನಲ್ಲಾಯರೇಱು.

ಪೇಱು ಒನ್ಱುಮ್ பேறு ஒன்றும் = ಯಾವೊಂದು ಪುರುಷಾರ್ಥ ವನ್ನೂ, ಮುನ್ முன் = ಮುಂಚಿತವಾಗಿ, ಅಱಿಯೇನ್ அறியேன் = ಅರಿವನಲ್ಲ, ಪೆಱ್ಱು ಅಱಿಯೇನ್ பெற்று அறியேன் = (ಅಂಥ ಪುರುಷಾರ್ಥವನ್ನು) ಪಡೆದವನಾಗಿ ಅರಿವನಲ್ಲ, ಪೇದೈಮೈಯಾಲ್ பேதைமையால் = ಅಜ್ಞಾನದಿಂದ, ಮಾಱು மாறு = ಬದಲಾಯಿಸು, ಎನ್ಱು ಶೊಲ್ಲಿ என்று சொல்லி = ಎಂದು ಹೇಳುತ್ತಾ, ವಣಙ್ಗಿನೇನ್ வணங்கினேன் = (ನಿನಗೆ) ನಮಸ್ಕರಿಸಿದೆನು, ಏಱಿನ್ ஏறின் = ವೃಷಭಗಳ, ಪೆರುತ್ತ பெருத்த = ದೊಡ್ಡ, ಎರುತ್ತಮ್ எருத்தம் = ಕುತ್ತಿಗೆಗಳನ್ನು, ಕೋಡು கோடு = ಕೊಂಬುಗಳನ್ನು, ಒಶಿಯ ஒசிய = ಮುರಿಯುವಹಾಗೆ, ಪೆಣ್ பெண் = ಸ್ತ್ರೀಯ, ನಶೈಯಿನ್ நசையின் = ಆಶೆಯ, ಪಿನ್ ಪೋಯ್ பின் போய் = ಹಿಂದೆ ಹೋಗಿ (ವಶನಾಗಿ), ಎರುತ್ತು எருத்து = ಆ ವೃಷಭಗಳನ್ನು, ಇಱುತ್ತ இறுத்த = ಮುರಿದುಹಾಕಿದ, ನಲ್ நல் = ವಿಲಕ್ಷಣನಾದ, ಆಯರ್ ಏಱು ஆயர் ஏறு = ಗೋವಳರ ವೃಷಭನೇ,

ಹೆಣ್ಣಿನ ಆಶೆಯ ವಶನಾಗಿ ವೃಷಭಗಳ ದೊಡ್ಡ ಕುತ್ತಿಗೆಗಳನ್ನು ಕೊಂಬುಗಳನ್ನು ಮುರಿದುಹಾಕುವಹಾಗೆ ಆ ವೃಷಭಗಳನ್ನೇ ಬಡಿದ ವಿಲಕ್ಷಣನಾದ ಗೋವಳರ ವೃಷಭನೇ, ಮುಂಚಿತವಾಗಿ ನನಗೆ ಯಾವೊಂದು ಪುರುಷಾರ್ಥವೂ ತಿಳಿಯದು. ಅದನ್ನು ಪಡೆದು ಕೊಳ್ಳುವ ರೀತಿಯೂ ತಿಳಿಯದು. ಅಜ್ಞಾನ ವಶನಾಗಿ ನನ್ನನ್ನು ಮಾರಿಸು (ಬದಲಾಯಿಸು) ಎಂದು ಹೇಳುತ್ತಾ (ನಿನ್ನ ತಿರುವಡಿಗಳಿಗೆ) ನಮಸ್ಕರಿಸಿದೆನು. (62)

ಇಲ್ಲಿ ಸೂಚಿಸಿರುವ ಕಥೆ ಶ್ರೀಕೃಷ್ಣಾವತಾರದ್ದು. ಶ್ರೀಕೃಷ್ಣನು ನೀಳೈ (ನಪ್ಪಿನ್ನೈದೇವಿ) ಎಂಬಾಕೆಯನ್ನು ವರಿಸಿದ್ದ. ನೀಳೈ ಯಾದವ ಕುಲದವಳು. ಆಕೆಯ ತಂದೆ ಏಳು ಗೂಳಿಗಳನ್ನು ಕೊಬ್ಬಿಸಿ ಸಾಕಿದ್ದನು. ಅವುಗಳನ್ನು ಯಾರು ಒಬ್ಬನೇ ಎದುರಿಸಿ, ನಿಂತು, ಕಟ್ಟಿಹಾಕುವನೋ ಅವನಿಗೆ ತನ್ನ ಮಗಳಾದ ನೀಳೈಯನ್ನು ಕೊಟ್ಟು ಮದುವೆ ಮಾಡುವುದಾಗಿ ಘೋಷಿಸಿದ್ದನು. ಶ್ರೀಕೃಷ್ಣನು ಅಲ್ಲಿಗೆ ಹೋಗಿ, ಒಬ್ಬನೇ ಏಳು ಗೂಳಿಗಳನ್ನು ಜಯಿಸಿ,

Garani Srinivasan

ಕಟ್ಟಿಹಾಕಿದನು. ಮತ್ತು, ತನ್ನ ಮೇಲಿನ ಕುಲ್ಕ ನಾದ ಐಶ್ವರ್ಯವನ್ನು ಮರೆಮಾಡಿ
ದನು.

ಪುರುಷಾರ್ಥಗಳು ನಾಲ್ಕು — ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ
ವು. ಒಂದಕ್ಕೊಂದು ಹೊಂದಿಕೊಂಡು, ಮಾನವನ ಉನ್ನತಿಯನ್ನು ಕೋರುವ
ಹಂತಗಳವು. ಮನುಷ್ಯನು ಇವುಗಳನ್ನು ಕುರಿತು ಚೆನ್ನಾಗಿ ಅರಿತುಕೊಂಡು,
ಅನುಷ್ಠಾನದಲ್ಲಿ ತಂದುಕೊಂಡು, ಅಂತಿಮ ಪುರುಷಾರ್ಥವಾದ ಮೋಕ್ಷಕ್ಕಾ
ಗಿ ಎಲ್ಲ ವಿಧದಲ್ಲೂ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಪುರುಷಾರ್ಥ
ಗಳ ಸಂಬಂಧ ತಿಳಿಯದೆ, ಅವುಗಳನ್ನು ಪಡೆದುಕೊಳ್ಳುವ ಬಗೆಯ
ನ್ನು ಅರಿಯದೆ ಅವನು ಮಾಡುವುದಾದರೂ ಏನು?

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನನಗೆ ಪುರುಷಾರ್ಥಗಳ
ಸಂಬಂಧ ತಿಳಿಯದು. ಅವುಗಳನ್ನು ಹೇಗೆ ಪಡೆಯಬೇಕೆಂದೂ
ತಿಳಿಯದು. ನಾನು ಅಜ್ಞಾನಿ. ನಾನು ಬದಲಾವಣೆ ಹೊಂದಬೇಕೆಂಬು
ದೊಂದೇ ನನಗೆ ತಿಳಿದದ್ದು. ಹುಟ್ಟುಸಾವುಗಳ ಪುನರಾವರ್ತನೆಯ
ಅನುಭವದಿಂದ ನಾನು ಬಿಡುಗಡೆ ಹೊಂದಬೇಕು. ಅದಕ್ಕಾಗಿ, ನಿನ್ನ
ತಿರುವಡಿಗಳನ್ನು ಆಶ್ರಯಿಸಿದ್ದೇನೆ. ನನ್ನ ಬಾಳನ್ನು ಬದಲಾಯಿಸು
ಎಂದು ಬೇಡಿಕೊಳ್ಳುತ್ತಿದ್ದೇನೆ.

ಶರಣಾಗತಿ ಯಿಂದ ಮೋಕ್ಷ ಅತಿ ಸುಲಭವಾಗಿ ಲಭಿಸು
ವುದು ಎಂಬುದು ಇಲ್ಲಿಯ ತತ್ತ್ವ.

63. ஏறேழும் வென்றடர்த்த வெந்தை, எரியுருவத்
தேறேறி பட்ட விடுசாபம், — பாறேறி
யுண்டதலை வாய்நிறையக் கோட்டங்கை
யொண்குருதி,
கண்ட பொருள் சொல்லில் கதை.

ಏಱೇಳುಮ್ ವೆನ್ಱಡರ್ತ್ತ ವೆನ್ದೈ, ಎರಿಯುರುವ
ತ್ತೇಱೇಱಿ ಪಟ್ಟ ಇಡುಶಾಪಮ್, — ಪಾಱೇಱಿ
ಯುಣ್ಡದಲೈ ವಾಯ್ ನಿಱೈಯಕ್ ಕೋಟ್ಟಙ್ಗೈ ಯೊಣ್ಗುರುದಿ,
ಕಣ್ಡಪೊರುಳ್ ಶೊಲ್ಲಿಲ್ ಕದೈ.

ಏೞ್ ಏಱುಮ್ ஏற் ஏழும் = ಏಳು ವೃಷಭಗಳನ್ನು, ವೆನ್ಱು
வென்று = ಜಯಿಸಿ, ಅಡರ್ತ್ತ அடர்த்த = ಅದುಮಿದ, ಎನ್ದೈ
எந்தை = ಸ್ವಾಮಿಯು, ಎರಿ ಉರುವತ್ತು எரி உருவத்து =

Garani Srinivasan

ಬೆಂಕಿಯಂತೆ ಹೊಳೆಯುವ ರೂಪವುಳ್ಳ, விடை ஏறு = ವೃಷಭ
ವನ್ನು, வெட்டி ஏறி = ಕೊಂದವನು, இட்ட பட்ட = ಅನುಭವಿಸಿದ,
ಬಿಡು ಶಾಪಮೋ அரன் சாபம் = ಎಲ್ಲರೂ ಕೈಬಿಟ್ಟ ಶಾಪವನ್ನು,
ಪಾಯು பாறு = ಅಲೆದಾಟವನ್ನು, வெட்டி ஏறி = ಅನುಭವಿಸುತ್ತ,
ಉಣ್ಣ உண்ட = ಉಣ್ಣ, ಕಲ್ಲೆ ಮಾಯ್ கழிவாய = ಕಪಾಲವನ್ನು,
ತುಂಬುವಂತೆ, ಕೊಳದು கோர் = ಬಗ್ಗದ
ನಿಟ್ಟೆಯ நிறைய = ತುಂಬುವಂತೆ, ಶೋಭಿಸುವ ಕೈಯಿಂದ, ಬಾಗಿ
(ಬಾಗಿದ), ಅಮರ್ ಕೈ அம்மா = ಶೋಭಿಸುವ ಕೈಯಿಂದ, ತುರುದಿ குருதி = ರಕ್ತದಿಂದ, ಕೊಣ್ಣ = ಶುದ್ಧವಾದ (ನೀಗಿನಾದ), ತಂದ ವಿಷಯವನ್ನು, ಕೊಲ್ಲ್
ಪೊರುಳ್ ಕண்ட அபார்ன் = ತಂದ ವಿಷಯವನ್ನು, ಶಕ್ತಿ கணை = ಶಕ್ತಿಯೇ
ஆகாத்தின் = ಹೇಳುವುದಕ್ಕೆ,
ಆಗುವುದು.

ಏಳು ವೃಷಭಗಳನ್ನು ಕೊಂದು ಅಡಗಿಸಿದ ಮಿಯು ಬೆಂಕಿಯಂತೆ ಹೊಳೆಯುವ ರೂಪವುಳ್ಳ ವೃಷಭವನ್ನು ಕೊಂದವನು ಅನುಭವಿಸಿದ ಎಲ್ಲರೂ ಕೈಬಿಟ್ಟ ಶಾಪವನ್ನು ಅಲೆದಾಟದಿಂದ ಅನುಭವಿಸುತ್ತ ಉಣ್ಣ ಕಪಾಲವನ್ನು ತುಂಬುವಂತೆ ಬಾಗಿದ (ಬಗ್ಗದ) ಶೋಭಿಸುವ ಕೈಯಿಂದ ಶುದ್ಧವಾದ (ನೀಗಿನಾದ) ರಕ್ತದಿಂದ ತಂದ ವಿಷಯವನ್ನು ಹೇಳುವುದಕ್ಕೆ ಶಕ್ತಿಯೇ ಆಗುವುದು. (63)

ಏಳು ವೃಷಭಗಳನ್ನು ಭಗವಂತನು ಶ್ರೀ ಕೃಷ್ಣನಾಗಿ ಅವತರಿಸಿ, ಕೊಂದು ಅಡಗಿಸಿದ ವಿಷಯವನ್ನು ಹಿಂದಿನ ಪಾಶುರದಲ್ಲಿ ವಿವರಿಸಲಾಗಿದೆ. ಇಲ್ಲಿ ಹೇಳಲಾಗುವ ಶಕ್ತಿ ಪರಶಿವನಿಗೆ ಬಂದ ಶಾಪದ ಮತ್ತು ಅದರ ನಿವಾರಣೆಯ ವಿಷಯ.

ಪರಶಿವನಿಗೆ ಐದ್ದವು ಹಿಂದೆ, ಚತುರ್ಮುಖ ಬ್ರಹ್ಮನಿಗೆ, ತಲೆಗಳಿದ್ದವಂತೆ. ಶಿವನು ಬ್ರಹ್ಮನ ಒಂದು ತಲೆಯನ್ನು ಚಿವುಟಿ ಹಾಕಿದನಂತೆ. ಆ ತಲೆ ಕೆಳಕ್ಕೆ ಬೀಳದಂತೆ ಶಿವನ ಕೈಗೇ ಅಂಟಿಕೊಂಡು ಬಿಟ್ಟಿತಂತೆ. ಹೀಗೆ ಬ್ರಹ್ಮನು ಶಪಿಸಿದನಂತೆ: ಶಿವನು ಎಲ್ಲೆಲ್ಲೂ ಬೀದಿ ಬಳಲು ತಿರುಗು, ಕಪಾಲವನ್ನು ಹಿಡಿದು ಯಾಚಿಸಿ ತಿಂದು ಜೀವಿಸಬೇಕೆಂದು. ಬಹಳ ಖಿನ್ನನಾದ ಶಿವನ ಈ ಬ್ರಹ್ಮಹತ್ಯಾದೋಷ ಮತ್ತು ಶಾಪದಿಂದ ಬಿಡುಗಡೆ ಹೊಂದುವುದಕ್ಕೆ ಬಂದು ಅತಿ ಶೋಚಿಸುತ್ತಾನಂತೆ. ತನ್ನ ಭಿಕ್ಷಾಟನೆಯ ಕಾಲದಲ್ಲಿ ಎಂದು ಆ ಕಪಾಲ ತುಂಬುವುದೋ ಆ ಕ್ಷಣದಲ್ಲೇ ಅದು ಕೈಯಿಂದ ಕಳಚಿ ಬಿದ್ದು ಹೋಗುವುದಾಗಿತ್ತು.

Garani Srinivasan

ಶಿವನು ಒಬ್ಬನೇ ಅಲೆದಾಡಿದರೂ ಕಪಾಲವನ್ನು ತುಂಬುವ ಸ್ಥಿತಿಯಲ್ಲಿ, ಮೂರು ಲೋಕ
ಗಳಲ್ಲೂ ಯಾರೂ ಆ ಕಪಾಲವನ್ನು ತುಂಬದಾದರು. ಕಡೆಗೆ, ಅವನು
ಸರ್ವೇಶ್ವರನಾದ ಶ್ರೀಮನ್ನಾರಾಯಣನ ಬಳಿಗೆ ಹೋಗಿ ಭಿಕ್ಷೆ ಬೇಡಿ
ದನಂತೆ. ನಾರಾಯಣನು ತನ್ನ ಬಲತೊಡೆಯನ್ನು ಚಾಚಿ ಕಪಾಲದ
ಮೇಲೆ ಹಿಡಿದು 'ಅಕ್ಷಯಂ' ಎಂದನಂತೆ. ತೊಡೆಯಿಂದ ಹರಿದು
ಬಂದ ರಕ್ತವು ಕಪಾಲವನ್ನು ತುಂಬಿತಂತೆ. ಕೂಡಲೇ ಕಪಾಲವು
ಕೈಯಿಂದ ಕಳಚಿ ಬಿತ್ತಂತೆ. ಶಿವನ ಶಾಪವಿಮುಕ್ತಿಯಾಯಿತಂತೆ.
ಇದು ಕಥೆ.

ಆಳ್ವಾರರು ಹೇಳುತ್ತಾರೆ: ಎಲ್ಲಾ ವ್ಯಷ್ಟಿಗಳನ್ನು ಸೃಷ್ಟಿ
ಶಕ್ತಿಯನ್ನು ಕೊಟ್ಟಿರುವ ಸರ್ವೇಶ್ವರನೇ ಪರಶಿವನಿಗೆ ಬಂದ ಬ್ರಹ್ಮ-
ಹತ್ಯಾದೋಷದಿಂದ ಅವನನ್ನು ವಿಮುಕ್ತಗೊಳಿಸಿದನಷ್ಟೆ. ಹಾಗೆಯೇ,
ಅವನ ಎಲ್ಲ ಆಶ್ರಿತರ ಪಾಪಗಳನ್ನೂ ನಿರ್ಮೂಲಗೊಳಿಸಿ, ಅವರಿಗೆ
ಸದ್ಗತಿಯುಂಟು ಮಾಡುತ್ತಾನೆ.

64. கதையும் பெரும்பொருளும் கண்ணா நின் பேரே,
இதயமிருந்தவையே யேத்தில், - கதையின்
திருமொழியாய் நின்ற திருமாலே, உன்னைப்
பருமொழியால் காணப் பணி.

ಕದೈಯುಮ್ ಪೆರುಮ್ ಪೊರುಳುಮ್ ಕಣ್ಣಾ ನಿನ್ ಪೇರೇ,
ಇದಯಮಿರುಂದವೈಯೇ ಯೇತ್ತಿಲ್, - ಕದೈಯಿನ್
ತಿರುಮೊಳಿಯಾಯ್ ನಿನ್ಱ ತಿರುಮಾಲೇ, ಉನ್ನೈ
ಪ್ಪರುಮೊಳಿಯಾಲ್ ಕಾಣಪ್ಪಣಿ.

ಕದೈಯುಮ್ கதையும் = ಇತಿಹಾಸ ಪುರಾಣಾದಿಗಳೂ, ಪೆರುಮ್ ಪೊರುಳುಮ್ பெரும்பொருளும் = ಅವುಗಳಲ್ಲಿ ಅಡಗಿರುವ ವಿಶೇಷ ಅರ್ಥವೂ, ಕಣ್ಣಾ கண்ணா = ಕೃಷ್ಣಾ, ನಿನ್ ಪೇರೇ நின் பேரே = ನಿನ್ನ ಹೆಸರೇ, ಇದಯಮ್ இதயம் = ಮನಸ್ಸಿನಲ್ಲಿ, ಇರುಂದವೈಯೇ இருந்தவையே = ನೆಲಸಿರುವುವನ್ನೇ, ಯೇತ್ತಿಲ್ ஏத்தில் = ಸ್ತುತಿಸಿ (ಭಜಿಸಿ)ದರೆ, ಕದೈಯಿನ್ கதையின் = ಇತಿಹಾಸ ಪುರಾಣಗಳ, ತಿರುಮೊಳಿ திருமொழி = ಪವಿತ್ರ ಮಾತು (ಶ್ರೀಸೂಕ್ತಿ), ಆಯ್ ஆய் = ಆಗಿ, ನಿನ್ಱ நின்ற = ಇರುವ, ತಿರುಮಾಲೇ திருமாலே = ಸರ್ವೇಶ

Garani Srinivasan

ಶ್ವರನೇ, ಉನ್ನೈ உணர்விலா = ನಿನ್ನನ್ನು, ಪೆರು ப(ரு) = ಉತ್ಕೃಷ್ಟವೆಂದು (ಬಲುದೊಡ್ಡ), ಪೇಲೆಯಾಲ್ மொழியால் = ಮಾತಿನಿಂದ, ಕಾಣಾ காணா = ತಿಳಿಯಲು (ಕಂಡುಕೊಳ್ಳಲು), ಪೇಣಿ பணி = ಸೇವೆಯನ್ನು ಅನುಗ್ರಹಿಸು.

ಕೃಷ್ಣಾ, ಇತಿಹಾಸ ಪುರಾಣಗಳೂ, ಅವುಗಳ ಅಂತರಾರ್ಥವೂ, ನಿನ್ನ ಹಿರಿದರೂ, ಮನಸ್ಸಿನಲ್ಲಿ ನೆಲೆಸಿರುವುದನ್ನೇ ಬಿತ್ತರಿಸಿ (ಭಜಿಸಿ) ದರೆ, ಆ ಇತಿಹಾಸ ಪುರಾಣಗಳ ಪವಿತ್ರವಾದ ಭಾಷೆಯಲ್ಲೇ ~~[illegible]~~ ಆಗಿರುವ ದಿವ್ಯೇಶ್ವರನೇ, ನಿನ್ನನ್ನು ಬಲುದೊಡ್ಡ ಮಾತಿನಿಂದ ಕಂಡುಕೊಳ್ಳಲು (64)
ಸೇವೆಯನ್ನು ಅನುಗ್ರಹಿಸು.

ಹಿಂದಿನ ಪಾಶುರದಲ್ಲಿ ಭಗವಂತನನ್ನು ಆಶ್ರಯಿಸುವುದರಿಂದ ಸದ್ಗತಿಯುಂಟಾಗುತ್ತದೆ ಎನ್ನಲಾಯಿತು. ಈಗ ಆ ಸದ್ಗತಿಯನ್ನು ಪಡೆದುಕೊಳ್ಳುವ ಬಗೆಯನ್ನು ಬೇರೊಂದು ರೀತಿಯಲ್ಲಿ ಹೇಳಲಾಗುತ್ತಿದೆ.

ರಾಮಾಯಣ, ಮಹಾಭಾರತದಂತಹ ಇತಿಹಾಸಗಳೂ, ಹದಿನೆಂಟು ಪ್ರಸಿದ್ಧ ಪುರಾಣಗಳೂ ಭಗವದ್ವಿಷಯವನ್ನು ವಿವರಿಸುತ್ತವೆ. ಅವುಗಳನ್ನು ಓದಬೇಕು. ಅವುಗಳ ಅಂತರಾರ್ಥವನ್ನು ಅರಿತುಕೊಳ್ಳಬೇಕು. ಭಗವಂತನ ಅನಂತ ಪವಿತ್ರ ನಾಮಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಇತಿಹಾಸ ಪುರಾಣಗಳಲ್ಲಿದರ ವಾಚ್ಯವೂ ಭಾಷೆಯೂ ಭಗವಂತನೇ ಇದು. ಇಷ್ಟಾಗಿ, ಸ್ವಾಮಿಯನ್ನು ಸಂಪೂರ್ಣವಾಗಿ ಅರಿತುಕೊಳ್ಳುವುದಕ್ಕೆ ಇನ್ನು ಹೆಚ್ಚಿನ ದೊಡ್ಡ ದೊಡ್ಡ ಮಾತುಗಳು ಬೇಕೇ? ಇದು ಇಲ್ಲಿಯ ಪ್ರಶ್ನೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಆಶ್ಚರ್ಯನೇ, ನಿನ್ನನ್ನು ಅರಿತುಕೊಳ್ಳುವುದಕ್ಕೆ ಇತಿಹಾಸ ಪುರಾಣಗಳಿವೆ. ಅವುಗಳನ್ನು ಓದಿ, ಅವುಗಳ ಅಂತರಾರ್ಥವನ್ನು ತಿಳಿಯುವುದರಿಂದಲೂ, ನಿನ್ನ ಅಸಂಖ್ಯಾತವಾದ ಪವಿತ್ರ ನಾಮಗಳನ್ನು ಜಪಿಸುತ್ತಾ, ನಿನ್ನನ್ನು ಪೂಜಿಸುವುದರಿಂದ ನಿನ್ನನ್ನು ಚೆನ್ನಾಗಿ ಅರಿತುಕೊಂಡಂತೆಯೇ. ಆದರೆ, ನಿನ್ನನ್ನು ಸಂಪೂರ್ಣವಾಗಿ ಕಂಡುಕೊಳ್ಳಲು ನಿನ್ನ ಸೇವೆಯೊಂದೇ ಸಾಧನ. ಅದು ನನಗೆ ಒದಗುವಂತೆ ನನಗೆ ಕರುಣಿಸಿ ಅನುಗ್ರಹಿಸು.

65. பணிந்தேன் திருமேனி பைங்கமலம் கையால்,
அணிந்தேனுன் சேவடிமேல் அன்பாய், — துணிந்தேன்
புரிந்தேத்தி உன்னைப் புகலிடம் பார்த்து, ஆங்கே
இருந்தேத்தி வாழும் இது.

ಪಣಿಂದೇನ್ ತಿರುಮೇನಿ ಪೈಂಗಮಲಮ್ ಕೈಯಾಲ್,
ಅಣಿಂದೇನುನ್ ಶೇವಡಿಮೇಲ್ ಅನ್ಬಾಲ್, — ತುಣಿಂದೇನ್
ಪುರಿಂದೇತ್ತಿ ಯುನ್ನೈಪ್ ಪುಗಲಿಡಮ್ ಪಾರ್ತ್ತು, ಆಙ್ಗೇ
ಇರುಂದೇತ್ತಿ ವಾಳುಮ್ ಇದು.

ಪಣಿನ್ದೇನ್ ಪಣಿನ್ದೇನ್ = ನಮಸ್ಕರಿಸಿದೆನು, ತಿರುಮೇನಿ ತಿರುಮೇನಿ = ನಿನ್ನ ದಿವ್ಯವಾದ ರೂಪಕ್ಕೆ, ಪೈ ಕಮಲವಾ ಪೈ ಕಮಲಂ = ಸುಂದರವಾದ ಕಮಲದ ಹೂವನ್ನು, ~~ಕೈಯಾ~~ ಉನ್ ಉಣ್ = ನಿನ್ನ, ಶೇ ಅಡಿ ಮೇಲ್ ಶೇ ಅಡಿ ಮೇಲ್ = ಸುಂದರ (ಕೆಂಪು ಕಮಲ) ತಿರುವಡಿಗಳ ಮೇಲೆ ಅನ್ಬಾಲ್ ಅನ್ಬಾಲ್ = ಭಕ್ತಿಯಿಂದ, ಕೈಯಾಲ್ ಕೈಯಾಲ್ = ನನ್ನ ಕೈಗಳಿಂದ, ಅಣಿನ್ದೇನ್ ಅಣಿನ್ದೇನ್ = ಸಮರ್ಪಿಸಿದ್ದೇನೆ, ಪುಗುನ್ದು ಪುಗುನ್ದು = ಆಸಕ್ತಿಯಿಂದ, ಪತ್ತಿ ಪತ್ತಿ = ಹತ್ತಿಸಿ, ಉನ್ನೈ ಉನ್ನೈ = ನಿನ್ನನ್ನು, ಪುಗಲ್ ಪುಗಲ್ = ಸೇರುವುದಕ್ಕೆ, ಇಡಮಾ ಇಡಂ = ಸ್ಥಳವನ್ನು, ಪಾರ್ತ್ತು ಪಾರ್ತ್ತು = ಕಂಡು, ಅಙ್ಗೇ ಅಙ್ಗೇ = ಅಲ್ಲಿಯೇ, ಇರುನ್ದು ಇರುನ್ದು = ಇದ್ದುಕೊಂಡು, ವಾಳುಂ ವಾಳ್ವು = ಬಾಳುವ, ಪತ್ತಿ ಪತ್ತಿ = ಹತ್ತಿಸುತ್ತ, ವಾಳುಂ ವಾಳ್ವು ಬಾಳ್ವೆಯನ್ನು (ಆನಂದವನ್ನು), ಕಣ್ಣಿನ್ದೇನ್ ಕಣ್ಡು ಇರುನ್ದು = ಈ ಬಾಳ್ವೆಯನ್ನು ಉತ್ಸಾಹಗೊಂಡೆನು.

ನಿನ್ನ ದಿವ್ಯರೂಪಕ್ಕೆ ಎರಗಿದೆನು. ನಿನ್ನ ತಿರುವಡಿಗಳ ಮೇಲೆ ಸುಂದರವಾದ ಕಮಲದ ಹೂಗಳನ್ನು ನನ್ನ ಕೈಗಳಿಂದ ಭಕ್ತಿಯಿಂದ ಸಮರ್ಪಿಸಿದ್ದೇನೆ. ನಿನ್ನನ್ನು ಆಸೆಯಿಂದ ಹತ್ತಿಸಿ, ಸೇರುವುದಕ್ಕೆ ಸ್ಥಳವನ್ನು ಕಂಡು, ಅಲ್ಲಿಯೇ ಇದ್ದುಕೊಂಡು ಹತ್ತಿಸುತ್ತ ಬಾಳುವ ಈ ಆನಂದಕ್ಕಾಗಿ ಉತ್ಸಾಹಗೊಂಡೆನು. (65)

ಈ ಪಾಶುರದಲ್ಲಿ ಭಗವತ್ಸೇವೆಯನ್ನು ಮಾಡುವ ಬಗೆಯನ್ನೂ ಅದರ ಫಲವನ್ನೂ ತಿಳಿಸಲಾಗುತ್ತದೆ.

ಭಗವಂತನ ದಿವ್ಯಸುಂದರ ರೂಪಕ್ಕೆ ಎರಗುವುದು, ಸ್ವಾಮಿಯ ತಿರುವಡಿಗಳ ಮೇಲೆ ಪರಿಮಳ ಪೂರ್ಣವಾದ ಹೂಗಳನ್ನು ಸಮರ್ಪಿಸುವುದು, ಮನಸಾರ ಭಕ್ತಿ ಆಸಕ್ತಿಗಳಿಂದ ಹತ್ತಿಸುವುದು – ಇವು ಗಳು ಭಗವಂತನ ಅನುಗ್ರಹವನ್ನು ಪಡೆಯಲಿಕ್ಕೆ ಇರುವ ಸಾಧನ ಮಾಡಬೇಕಾದ ಸೇವಾ ಕಾರ್ಯಗಳು. ಇದಕ್ಕೆ ಪ್ರತಿಫಲವಾಗಿ, ಭಗವದನುಗ್ರಹದ ಮೂಲಕ ದೊರೆಯುವ ಪರಮಪದವಾಗಲೀ ನಿರಂತರ ಭಗವತ್ಸೇವೆಯೂ, ನಿತ್ಯಾನಂದ ಸುಖವೂ ಒದಗಿ ಬರುತ್ತದೆ.

ಭಕ್ತಿಸಾರವನು ಬರೆದ ದೂರದು ಇದನ್ನು ವಿಷ್ಣುವಿನ ಜ್ಞಾನಿಗಳ ಬೇಕೆನ್ನುತ್ತಾರೆ ಆಳ್ವಾರರು.

66. இது கண்டாய் நன்னெஞ்சே யிப்பிறவி யாவது, இது கண்டா யெல்லாம் நாமுற்றது,- இது கண்டாய்

Garani Srinivasan

நாரணன் பேரோத்தி நரகத் தருகணையா,
காரணமும் வல்லையேல் காண்.

ಇದು ಕಣ್ಡಾಯ್ ನನ್ನೆಂಜೇ ಇಪ್ಪಿಱವಿ ಯಾವದು,
ಇದುಕಣ್ಡಾಯ್ ಎಲ್ಲಾಮುಮ್ ನಾಮುಟ್ರದು, — ಇದುಕಣ್ಡಾಯ್
ನಾರಣನ್ ಪೇರೋದಿ ನರಕತ್ತರುಗಣೈಯಾ,
ಕಾರಣಮುಮ್ ವಲ್ಲೈಯೇಲ್ ಕಾಣ್.

ನಲ್ ನೆಂಜೇ நல் நெஞ்சே = ಒಳ್ಳೆಯ ಮನಸ್ಸೇ, ಇಪ್ಪಿಱವಿ (ಆಗುವುದು) இப்பிறவி = ಈ ಬಾಳ್ವೆ, ಆವದು ஆவது = ಹೇಗಿರುವದೆಂಬುದನ್ನು, ಇದು ಕಣ್ಡಾಯ್ இது கண்டாய் = ಇದನ್ನು ಕಂಡೆಯಾ, (ಗಮನಿಸಿದೆಯಾ?) ಎಲ್ಲಾಮುಮ್ எல்லாம் = ಎಲ್ಲವನ್ನೂ, ಉಟ್ರದು உற்றது = ನಡೆದದ್ದೆಲ್ಲವನ್ನು (ದೃಶ್ಯಾಂಶವೇನೆಂಬುದನ್ನು), ಇದು ಕಣ್ಡಾಯ್ இது கண்டாய் = ಇದನ್ನು ಕಂಡುಕೊಂಡೆಯಾ, ನಾರಣನ್ நாரணன் = ನಾರಾಯಣನ, ಪೇರೋದಿ பேர் ஓதி = ಶಿರುನಾಮಗಳನ್ನು ಪಠಿಸಿ, ನರಕತ್ತ நரகத்து = ನರಕದ, ಅರುಗು அருகு = ಅಂಚನ್ನು (ಗಡಿಯನ್ನು), ಅಣ್ಯೆಯಾ அணையா = ಸೇರದಿರುವ (ಮುಟ್ಟದಿರುವ), ಕಾರಣಮುಮ್ காரணமும் = ಕಾರಣವನ್ನು, ಇದು ಕಣ್ಡಾಯ್ இது கண்டாய் = ಇದನ್ನು ಕಂಡುಕೊಂಡೆಯಾ, ವಲ್ಲೈ ಏಲ್ வல்லை ஏல் = (ಎಲ್ಲವನ್ನೂ) ತಿಳಿಯಬಲ್ಲೆಯಾದರೆ, ಕಾಣ್ காண் = ದಾರಿಯನ್ನು (ದಕ್ಕಿಸಿಯನ್ನು) ಕಂಡುಕೋ.

ಒಳ್ಳೆಯ ಮನಸ್ಸೇ, ಈ ಬಾಳ್ವೆ (ಜನ್ಮ) ಆಗುವುದು ಹೇಗೆ ಎಂಬುದನ್ನು ಗಮನಿಸಿದೆಯಾ? ಬಾಳಿನ ಘಟನೆಗಳ ದೃಶ್ಯಾಂಶಗಳೆಲ್ಲವನ್ನು ಕಂಡುಕೊಂಡೆಯಾ? ನಾರಾಯಣನ ಶಿರುನಾಮಗಳನ್ನು ಪಠಿಸಿ ನರಕದ ಗಡಿಯ ಸೇರದಿರುವ ಕಾರಣವನ್ನು ಕಂಡುಕೊಂಡೆಯಾ? ಇವೆಲ್ಲವನ್ನೂ ಮುಟ್ಟದಿರುವ ಕಾರಣವನ್ನು ಕಂಡುಕೊಂಡೆಯಾ? ಇವೆಲ್ಲವನ್ನು ತಿಳಿದುಕೊಳ್ಳಬಲ್ಲೆಯಾದರೆ ದಾರಿಯ (ದಕ್ಕಿಸಿಯನ್ನು) ಕಂಡುಕೋ.

ಈ ಪಾಶುರದಲ್ಲಿ ಭಗವಂತನ ನಾಮೋಚ್ಚಾರಣೆಯ ಮಹಿಮೆಯೇನೆಂಬುದನ್ನು ಹೇಳಲಾಗುತ್ತದೆ. ಅದು ಪುಣ್ಯ-ಪಾಪಗಳ ಪುನರಾವರ್ತನೆಯನ್ನೂ, ಅನೇಕ ಜನ್ಮಗಳಿಂದ ಕೂಡಿಬಂದ ಪಾಪರಾಶಿಯನ್ನೂ ತೊಲಗಿಸಿ ಬಿಡುತ್ತದೆ. ಅಲ್ಲದೆ, ಪರಮಪದಪ್ರಾಪ್ತಿಯನ್ನೂ ಶಾಶ್ವತಾನಂದವನ್ನೂ ದೊರಕಿಸಿಕೊಡುತ್ತದೆ.

ಮನುಷ್ಯನು ಮೇಲು ಅಂದ ಮೇಲೆ ಪುಣ್ಯವನ್ನು ಸಾಮಾನ್ಯವಾಗಿ ಅನುಭವಿಸುತ್ತಲೇ ಇರಬೇಕೆನ್ನುವ ವಿಷಯವನ್ನು ಅರಿತುಕೊಳ್ಳಬೇಕು. ಪ್ರತಿ ಜನ್ಮದಲ್ಲೂ ಒದಗಿ ಬರುವ ಕಷ್ಟ, ದುಃಖ,

Garani Srinivasan

ಸಂಕಟಗಳನ್ನೂ ಅನುಭವಿಸಬೇಕು. ಸುಖ ಸಂತೋಷಗಳು ಸೇರಿ ಕೊಂಡದನ್ನೂ ಅನುಭವಿಸಬೇಕು. ಜನ್ಮ ಜನ್ಮದಲೂ ಅವನು ಮಾಡಿದ ಪಾಪಗಳ ಫಲವಾಗಿ ಅವನು ನರಕ ಬಾಧೆಗೆ ಒಳಗಾಗುತ್ತಾನೆಂಬುದನ್ನೂ ಅನುಭವಿಸಬೇಕು. ಎಲ್ಲವನ್ನೂ ನಿವಾರಿಸಿಕೊಳ್ಳುವುದಕ್ಕೆ ಒಂದೇ ಒಂದು ಉಪಾಯವಿದೆ. ಅದೇ ಸರ್ವೇಶ್ವರನಾದ ಶ್ರೀಮನ್ನಾರಾಯಣನ ದಿವ್ಯನಾಮಗಳನ್ನು ಬಿಡದೆ ಪಠಿಸುವುದು.

ಆಳ್ವಾರರು ಹೇಳುತ್ತಾರೆ: ನನ್ನ ಒಳ್ಳೆಯ ಮನಸ್ಸೇ, ನಿನಗೆ ಜನ್ಮ ಹೇಗೆ ಉಂಟಾಯಿತೆಂಬುದನ್ನು, ಪ್ರತಿ ಜನ್ಮದಲ್ಲೂ ಅನುಭವಿಸುವ ಕಷ್ಟ, ದುಃಖ, ಸಂಕಟಗಳಿಗೆ ಕಾರಣವನ್ನೂ ಕಂಡುಕೊಳ್ಳಬೇಕು. ಮತ್ತು ಜನ್ಮಜನ್ಮಗಳ ಪಾಪರಾಶಿಯನ್ನು ಕಡಿದುಹಾಕುವುದಕ್ಕೆ ಶ್ರೀಮನ್ನಾರಾಯಣನ ದಿವ್ಯನಾಮಗಳ ಪಠನೆಯೇ ಉಪಾಯವೆಂಬುದನ್ನು, ಅದರಿಂದ ನರಕದ ಗತಿಯನ್ನು ದೂರಮಾಡಬಹುದೆಂಬುದನ್ನು ಕಂಡುಕೊಳ್ಳಬೇಕು. ಇದನ್ನು ನೀನು ಅರಿತೆಯಾದರೆ, ನೀನು ಸದ್ಗತಿ ಕಾಣುವೆ.

67. கண்டேன் திருமேனி யான் கனாவில், ஆங்கவன் கைக்
கண்டேன் கனலுஞ் சுடராழி, கண்டேன்
உறுநோய் வினையிரண்டு மோட்டுவித்து, பின்னும்
மறுநோய் செறுவான் வலி.

ಕಣ್ಡೇನ್ ತಿರುಮೇನಿ ಯಾನ್ ಕನವಿಲ್, ಆಙ್ಗವನ್ ಕೈ
ಕಣ್ಡೇನ್ ಕನಲುಮ್ ಶುಡರಾಳಿ, ಕಣ್ಡೇನ್
ಉಱುನೋಯ್ ವಿನೈಯಿರಣ್ಡು ಮೋಟ್ಟುವಿತ್ತು, ಪಿನ್ನುಮ್
ಮಱುನೋಯ್ ಶೆಱುವಾನ್ ವಲಿ. (ಭೂತವಂಶನ)

ಕಣ್ಡೇನ್ கண்டேன் = ಕಂಡೆನು, ತಿರುಮೇನಿ திருமேனி = (ದಿವ್ಯ ರೂಪವನ್ನು, ಯಾನ್ யான் = ನಾನು, ಕನವಿಲ್ கனாவில் = ಕನಸಿನಲ್ಲಿ, ಆಙ್ಗು ஆங்கு = ಅಲ್ಲಿ, ಅವನ್ அவன் = ಅವನ, ಕೈ கை = ಕೈಯಲ್ಲಿ, ಕಣ್ಡೇನ್ கண்டேன் = ಕಂಡೆನು, ಕನಲುಮ್ கனலும் = ಜ್ವಲಿಸುತ್ತಿರುವ, ಶುಡರ್ ಆಳಿ சுடர் ஆழி = ಕಾಂತಿಯ ಚಕ್ರಾಯುಧವನ್ನು, ಕಣ್ಡೇನ್ கண்டேன் = ಕಂಡೆನು, ಉಱು உறு = ಅತಿಶಯವಾದ, ನೋಯ್ நோய் = ಸಂಕಟ (ದುಃಖ)ವನ್ನು, ವಿನೈ வினை =

Garani Srinivasan

ಪಾಪಗಳನ್ನು, ಇರಂಡುಮ್ ಮಾಱ(ಇ)ರಣ್(ರ)ಂ = ಈ ಎರಡನ್ನು. ಓಟ್ಟು ವಿಟ್ಟು ಪ್ಪಾಟ್ಟ(ರ)ವಿಕ್ಕು = ಓಡಿಸಿಬಿಟ್ಟು, ಪಿನ್ನುಮ್ ಪಿಣಿ ತ್ತಾಂ = ಮುಕ್ತಿ, ಮೂಪ್ಪು ನೋಯ್ ಮಱ್ಱು ನೋಯ್ = ಬೇರೆ ವ್ಯಾಧಿಗಳನ್ನೂ, ಶೋಕವಾನ್ ಅಂಜುವಾನ್ = ಶೋಕನೀಗುವಂಥ, ಪಲ ಉಱ = ಪರಮ ಪುರುಷಾರ್ಥವನ್ನು.

ಕನಸಿನಲ್ಲಿ ನಾನು ಭಗವಂತನ ದಿವ್ಯರೂಪವನ್ನು ಕಂಡೆ. ಅವನ ಕೈಯಲ್ಲಿ ಪ್ರಜ್ವಲಿಸಿ ಉರಿಯುತ್ತಿರುವ ಚಕ್ರಾಯುಧವನ್ನು ಕಂಡೆ. ಸಂಶಯ, (ದುಃಖ) ಪಾಪ ಎಂಬ ಎರಡನ್ನು ಓಡಿಸಿ, ಇತರ ವ್ಯಾಧಿಗಳನ್ನು ಶೋಕ 67
ನೀಗಿಸಿಬಿಡುವಂಥ ಪರಮ ಪುರುಷಾರ್ಥವನ್ನು ಕಂಡೆನು.

ಭಗವಂತನಲ್ಲಿ ಅನನ್ಯವಾಗಿ ಭಕ್ತಿ ಮಾಡುವುದರಿಂದ, ಭಗವನ್ನಾಮೋಚ್ಚಾರಣೆಯನ್ನು ಎಡೆಬಿಡದೆ ನಡೆಸುವುದರಿಂದ ಬರುವ ಫಲವೇನು ಎಂಬುದನ್ನು ಈ ಪಾಶುರ ಹೇಳುತ್ತದೆ. ಅದರಿಂದ ಭಗವಂತನೇ ಒಲಿದು ಬರುತ್ತಾನೆ. ಭಕ್ತನಿಗೆ ಕಾಣಿಸಿಕೊಳ್ಳುತ್ತಾನೆ.

ಹಿಂದಿನ ಪಾಶುರ ಆಳ್ವಾರರು ತಮ್ಮ ಒಳ್ಳೆಯ ~~ಮನ~~ ಮನಸ್ಸಿಗೆ ಕೊಟ್ಟ ಒಳವಚನದ ವಿಷಯ. ಅವರ ಮನಸ್ಸು ಅವರ ಮಾತನ್ನು ಆಲಿಸಿತು. ಅದರ ಪರಿಣಾಮವಾಗಿ, ಅವರು ಭಗವಂತನನ್ನು ಕನಸಿನಲ್ಲಿ ಸಂದರ್ಶಿಸಿದರು.

ಭಗವಂತನ ದಿವ್ಯರೂಪವನ್ನು ಆಳ್ವಾರರು ಕಂಡರು. ಅವರಿಗೆ ಆಗ ಹೆಚ್ಚಾಗಿ ಗಮನಕ್ಕೆ ಬಂದದ್ದು ಭಗವಂತನ ಕೈಯಲ್ಲಿನ ಪ್ರಜ್ವಲಿಸುವ ಚಕ್ರಾಯುಧ. ಆಳ್ವಾರರು ತಿಳಿಯುತ್ತಾರೆ: ಆ ಚಕ್ರಾಯುಧವೇ ಮನುಷ್ಯನ ಜನ್ಮಜನ್ಮಾಂತರಗಳ ಪಾಪರಾಶಿಯನ್ನು ~~[illegible]~~ ನಿರ್ಮೂಲಗೊಳಿಸುವುದು. ಅದೇ ಅವನ ಇದ ಜನ್ಮದ ದುಃಖ ಸಂಕಟಗಳನ್ನು ನಿರ್ನಾಮಗೊಳಿಸುವುದು. ಇಷ್ಟೇ ಅಲ್ಲದೆ, ಮನುಷ್ಯನಿಗೆ ಅಂಟಿಬರುವ ಇತರ ಎಲ್ಲಾ ಬಗೆಯ ವ್ಯಾಧಿಗಳನ್ನು ಅದು ನಾಶ ಮಾಡುವುದು. ಮನುಷ್ಯನನ್ನು ಹಾಗೆ ಪರಿಶುದ್ಧಗೊಳಿಸುವುದು. ಆದ್ದರಿಂದ ಅವನಿಗೆ ಪರಮಪದ ಪ್ರಾಪ್ತಿಯೂ ಲಭಿಸುವುದರಲ್ಲಿ ಸಂದೇಹವೇ ಇಲ್ಲ!

ಭಗವಂತನ ಕೈಯಲ್ಲಿರುವ ಚಕ್ರಾಯುಧಕ್ಕೇ ಇಷ್ಟು ಸಾಮರ್ಥ್ಯ ಇರುವಾಗ, ಅದನ್ನು ಧರಿಸಿ, ತನ್ನ ಬೆರಳಿನಲ್ಲಿ ಪ್ರಯೋಗಿಸುವ ಭಗವಂತನಿಗೆ ಇನ್ನೆಷ್ಟು ಹೆಚ್ಚಿನ ಸಾಮರ್ಥ್ಯವಿರಬಹುದು!

ಭಗವಂತನನ್ನು ಕನಸಿನಲ್ಲಾದರೂ ಕಂಡು, ಆನಂದವನ್ನು ಅನುಭವಿಸಿದೆವೆಂದು ಹೇಳುವ ಮಹನೀಯರು ವಿರಳವಲ್ಲವೇ?

68. வலிமிக்க வாளெயிற்று வாளவுணர் மாள,
வலிமிக்க வாள்வரை மத்தாக, — வலிமிக்க
வாணாகஞ்சுற்றி மறுகக் கடல் கடைந்தான்,
கோணாகங் கொம்பொசித்த கோ.

ವಲಿಮಿಕ್ಕ ವಾಳೆಯಿಟ್ರು ವಾಳವುಣರ್ ಮಾಳ,
ವಲಿಮಿಕ್ಕ ವಾಳ್ವರೈ ಮತ್ತಾಗ, — ವಲಿಮಿಕ್ಕ
ವಾಣಾಗಂ ಶುಟ್ರಿ ಮಱುಗಕ್ಕಡಲ್ ಕಡೈನ್ದಾನ್,
ಕೋಣಾಗಂ ಕೊಂಬೊಶಿತ್ತ ಕೋ.

ವಲಿಮಿಕ್ಕ வலிமிக்க = ಮಹಾಬಲಿಷ್ಠರಾದ, ವಾಳ್ ಎಯಿಟ್ರು வாள் எயிற்று = ಕತ್ತಿಯಂತೆ ಹರಿತವಾದ ಹಲ್ಲುಗಳುಳ್ಳ, ವಾಳ್ ಅವುಣರ್ வாள் அவுணர் = ಖಡ್ಗಾಯುಧಧಾರಿಗಳಾದ ರಾಕ್ಷಸರು, ಮಾಳ மாள = ನಾಶವಾಗುವಂತೆ, ವಲಿಮಿಕ್ಕ வலிமிக்க = ಬಹಳ ಬಲವಾದ, ವಾಳ್ வாள் = ಥಳಥಳಿಸುವ, ವರೈ வரை = ಬೆಟ್ಟವನ್ನು, ಮತ್ತು ಆಗ மத்து ஆக = ಕಡಗೋಲಾಗಿ, ವಲಿಮಿಕ್ಕ வலி மிக்க = ಬಹಳ ಶಕ್ತಿಯುಳ್ಳ, ವಾಳ್ ನಾಗಮ್ வாள் நாகம் = ಹೊಳೆಯುವ ಸರ್ಪವನ್ನು, ಶುಟ್ರಿ சுற்றி = ಸುತ್ತಿ, ಕಡಲ್ ಮಱುಗ கடல் மறுக = ಕಡಲು ಕದಡಿಹೋಗುವಂತೆ, ಕಡೈನ್ದಾನ್ கடைந்தான் = ಕಡೆದವನು, ಕೋಳ್ கோள் = ಕ್ರೂರವಾದ, ನಾಗಮ್ நாகம் = ಆನೆಯ, ಕೊಂಬು கொம்பு = ದಂತವನ್ನು, ಒಶಿತ್ತ ஒசித்த = ಮುರಿದುಹಾಕಿದ, ಕೋ கோ = ಸ್ವಾಮಿಯೇ.

ಮಹಾಬಲಿಷ್ಠರಾದ ಕತ್ತಿಯಂತೆ ಬಾಗಿದ ಹರಿತವಾದ ಹಲ್ಲುಗಳುಳ್ಳ ಖಡ್ಗಾಯುಧಧಾರಿಗಳಾದ ರಾಕ್ಷಸರು ನಾಶವಾಗುವಂತೆ ಬಹಳ ಬಲವಾದ ಥಳಥಳಿಸುವ ಬೆಟ್ಟವನ್ನು ಕಡಗೋಲಾಗಿ ಮಾಡಿ, ಬಹಳ ಶಕ್ತಿಯುಳ್ಳ ಹೊಳೆಯುವ ಸರ್ಪವನ್ನು (ಅದಕ್ಕೆ) ಸುತ್ತಿ ಕಡಲು ಕದಡಿಹೋಗುವಂತೆ ಕಡೆದವನು ಕ್ರೂರವಾದ ಆನೆಯ ದಂತವನ್ನು ಮುರಿದುಹಾಕಿದ ಸ್ವಾಮಿಯೇ. (68)

ಆಶ್ರಿತ ರಕ್ಷಣೆಯ ವಿಷಯವಾಗಿ ಎರಡು ದಿವ್ಯವಾದ ಸಂದರ್ಶನಗಳನ್ನು ಇಲ್ಲಿ ಹೇಳಲಾಗಿದೆ. ಅಲ್ಲದೆ, ಭಗವಂತನ ಅಪ್ರತಿಮವಾದ ಧೈರ್ಯವನ್ನೂ, ಶೌರ್ಯವನ್ನೂ ತಿಳಿಸುತ್ತದೆ.

ಜಗತ್ತಿನಲ್ಲಿ ಒಂದು ಕಾಲದಲ್ಲಿ ರಾಕ್ಷಸರು ಎಲ್ಲೆಲ್ಲೂ ಹೆಚ್ಚಿ

Garani Srinivasan

ಕೊಂಡಿದ್ದರು. ದೇವತೆಗಳೂ ದೇವೇಂದ್ರನೂ ಅವರಿಂದ ಅತಿಶಯವಾದ ಭಯ ತಪ್ಪಿದ್ದಲ್ಲವಾಯಿತು. ಅವರು ಭಗವಂತನಲ್ಲಿ ಮೊರೆಯಿಟ್ಟರು. ಆಶ್ರಿತರಾದ ಅವರನ್ನು ರಕ್ಷಿಸುವುದಾಗಿ ಭರವಸೆಯಿತ್ತನು. ದೇವಾಸುರರನ್ನು ಒಂದೆಡೆ ಸೇರಿಸಿ, ಕ್ಷೀರಸಾಗರವನ್ನು ಮಥಿಸುವಂತೆಯೂ, ಅದರಿಂದ ಉದ್ಭವಿಸುವ ಅಮೃತವನ್ನು ಕುಡಿದು ಅವರು ಅಮರರಾಗಬಹುದೆಂದೂ ಅವರನ್ನು ಪ್ರೋತ್ಸಾಹಿಸಿದನು, ಒಪ್ಪಿಸಿದನು. ಮಂದರ ಪರ್ವತವನ್ನು ಕಡಗೋಲಾಗಿಯೂ, ವಾಸುಕಿಯನ್ನು ಕಡೆಯುವ ಹಗ್ಗವಾಗಿಯೂ ಮಾಡಿಕೊಂಡು, ಪರ್ವತವು ಮುಳುಗಿ ಹೋಗದಂತೆ ಅದರಡಿಯಲ್ಲಿ ತಾನೇ ಮಹಾಕೂರ್ಮನಾಗಿಯೂ ಇದ್ದುಕೊಂಡು, ದೇವಾಸುರರಿಂದ ಕ್ಷೀರಸಮುದ್ರವನ್ನು ಕಡೆಯಿಸಿದನು. ಉದ್ಭವಿಸಿದ ಅಮೃತವನ್ನು ಮೋಹಿನೀ ವೇಷದಲ್ಲಿ ತಾನೇ ಬಂದು, ಅಸುರರನ್ನು ವಂಚಿಸಿ, ದೇವತೆಗಳಿಗೆ ಮಾತ್ರವೇ ಹಂಚಿ, ಅವರನ್ನು ಅಮರರನ್ನಾಗಿಸಿ, ಅವರಿಗೆ ಶತ್ರುಭಯವಿಲ್ಲದಂತೆ ಮಾಡಿದನು.

ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದಾಗ, ಅವನ ಮಾವನಾದ ಕಂಸನು ಅವನನ್ನು ಕೊಲ್ಲಲು ಮಾಡಿದ ನಾನಾ ಪ್ರಯತ್ನಗಳಲ್ಲಿ ಕುವಲಯಾಪೀಡವೆಂಬ ಮದ್ದಾನೆಯಿಂದ ಕೊಲ್ಲಿಸಲೆತ್ನಿಸಿದ್ದೂ ಒಂದು. ಮಥುರಾನಗರಿಯ ಹೆಬ್ಬಾಗಿಲಲ್ಲೇ ಅದನ್ನು ನಿಲ್ಲಿಸಿ, ಕೃಷ್ಣನು ಅಲ್ಲಿಗೆ ಬಂದ ಕೂಡಲೇ, ಅದು ಅವನ ಮೇಲೆರಗಿ ಅವನನ್ನು ಕೊಂದು ಹಾಕಬೇಕೆಂಬುದು ಕಂಸನಿಚ್ಛೆ. ಕೃಷ್ಣನು ಅದನ್ನು ಎದುರಿಸಿ, ಅದರ ದಂತವನ್ನು ಮುರಿದುಕೊಂಡು, ಅದರಿಂದಲೇ ಅದನ್ನು ಕೊಂದುಹಾಕಿದನು.

ಆಳ್ವಾರರು ಹೇಳುತ್ತಾರೆ: ರಾಕ್ಷಸರ ಭಯದಿಂದ ದೇವತೆಗಳನ್ನು ತಪ್ಪಿಸುವುದಕ್ಕೆ ಕ್ಷೀರಸಾಗರವನ್ನು ಕಡೆಯಿಸಿದವನೂ, ಶ್ರೀಕೃಷ್ಣನಾಗಿ ಅವತರಿಸಿ ಕುವಲಯಾಪೀಡವೆಂಬ ಮದ್ದಾನೆಯ ದಂತವನ್ನು ಮುರಿದು ಹಾಕಿದವನೂ ಆದ ಭಗವಂತನು ಆಶ್ರಿತರನ್ನು ರಕ್ಷಿಸುವ ಸಮರ್ಥನಲ್ಲವೇ?

69. கோ[illegible]ாகி மாநிலங்காத்து, நுங்கண் முகப்பே
மாவேகிச் செல்கின்ற மன்னவரும், பூமேவும்
செங்கமல நாபியான் சேவடிக்கே யெழ்பிறப்பும்
தண்கமல மேய்ந்தார் தமர்.

ಕೋ[illegible] ಮಾನಿಲಙ್ಗಾತ್ತು, ನಙ್ಗ[illegible] ಮುಗಪ್ಪೇ
ಮಾವೇಗಿ ಚ್ಚೆಲ್ಗಿನ್ಱ ಮನ್ನವರುಮ್, ಪೂಮೇವುಮ್

ಶೆಂಗಮಲ ನಾಭಿಯಾನ್ ಶೇವಡಿಕ್ಕೇ ಏಳ್ ಪಿರಪ್ಪುಮ್
ಕಣ್ ಕಮಲಮ್ ಏಯ್ನ್ದಾರ್ ತಮರ್.

ಕೋ ಆಗಿ கோ ஆகி = ಚಕ್ರಾಧಿಪತಿಯಾಗಿ, ಮಾನಿಲಂ ಕಾತ್ತು மா நிலம் காத்து = ಭೂಮಂಡಲವನ್ನು ಆಳಿ, ನಮ್ நம் = ನಮ್ಮ, ಕಣ್ ಮುಗಪ್ಪೇ கண் முகப்பே = ಕಣ್ಣೆದುರಲ್ಲೇ, ಮಾ ಏಗ மா ஏகி = ಕುದುರೆಯನ್ನು ಹತ್ತಿ, ಶೆಲ್ಗಿನ್ರ செல்கின்ற = ಸಂಚರಿಸುವ, ಮನ್ನವರುಮ್ மன்னவரும் = ಚಕ್ರವರ್ತಿಗಳೂ, ಪೂ பூ = ಸೊಬಗನ್ನು, ಏವುಮ್ ஏவும் = ತುಂಬಿಕೊಂಡಿರುವ (ಕೂಡಿಕೊಂಡಿರುವ), ಶೆಮ್ ಕಮಲಮ್ செங்கமலம் = ಕೋಮಲವಾದ ಕೆಂದಾವರೆಯನ್ನು, ನಾಭಿಯಾನ್ நாபியான் = ನಾಭಿಯಲ್ಲುಳ್ಳವನ, ಶೇ ಅಡಿಕ್ಕೇ சே அடிக்கே = ಕೋಮಲ (ಕೆಂಪಾದ) ಪಾದಗಳಿಗೆ, ಏಳ್ ಪಿರಪ್ಪುಮ್ ஏழ் பிறப்பும் = ಏಳು ಜನ್ಮಗಳಲ್ಲೂ, ಕಣ್ ಕಮಲಮ್ கண் கமலம் = ಕಂಪಾದ ಕಮಲದ ಹೂಗಳಿಂದ, ಏಯ್ನ್ದಾರ್ ತಮರ್ ஏய்ந்தார் தமர் = ಅವರು ಪೂಜಿಸಿದರು.

ಚಕ್ರಾಧಿಪತಿಗಳಾಗಿ, ಭೂಮಂಡಲವನ್ನಾಳಿ, ನಮ್ಮ ಕಣ್ಣ ಮುಂದೆಯೇ ಕುದುರೆಯನ್ನು ಹತ್ತಿ ಸಂಚರಿಸುವ ಚಕ್ರವರ್ತಿಗಳೂ ಸೊಬಗು ತುಂಬಿದ ಕೆಂದಾವರೆಯನ್ನು ನಾಭಿಯಲ್ಲಿ ಉಳ್ಳವನ ಕೋಮಲವಾದ ತಿರುವಡಿಗಳನ್ನು ತಮ್ಮ ಏಳು ಜನ್ಮಗಳಲ್ಲೂ ಕಂಪಾದ ಕಮಲದ ಹೂಗಳಿಂದ ಪೂಜಿಸಿದರು. (69)

ಹಿಂದಿನ ಪಾಶುರದಲ್ಲಿ ದೇವಾದಿದೇವತೆಗಳು ಭಗವಂತನನ್ನು ಆಶ್ರಯಿಸಿ, ಅವನ ತಿರುವಡಿಗಳನ್ನು ಪೂಜಿಸಿ ಉದ್ಧಾರಗೊಂಡರು ಎನ್ನಲಾಯಿತು. ಇಲ್ಲಿ ಭೂಲೋಕವಾಸಿಗಳಾಗಿ, ಭೂಮಂಡಲವನ್ನೇ ಆಳುವ ಚಕ್ರವರ್ತಿಗಳೂ ಸಹ ಭಗವಂತನ ತಿರುವಡಿಗಳನ್ನು ಬಿಡದೆ ತಮ್ಮ ಏಳು ಜನ್ಮಗಳಿಂದಲೂ ಅರ್ಚಿಸಿದರೆಂದು ಹೇಳಲ್ಪಟ್ಟಿದೆ.

ಕೆಂದಾವರೆಯನ್ನು ನಾಭಿಯಲ್ಲುಳ್ಳವನು ಭಗವಂತನಾದ ಶ್ರೀಮನ್ನಾರಾಯಣ.

ಆಳ್ವಾರರು ಹೇಳುತ್ತಾರೆ: ಸ್ವರ್ಗಾದಿ ಮೇಲಣಲೋಕಗಳ

ವಾಸಗಳಾದ ದೇವಾದಿದೇವತೆಗಳು ಮಾತ್ರವೇ ಅಲ್ಲ, ಭೂಲೋಕ ವಾಸಿಗಳಾದ ರಾಜ ಮಹಾರಾಜರುಗಳೂ ಕ್ಷತ್ರಿಯರುಗಳಾದರ ತಮ್ಮ ಪಿತೃಗಳಿಂದಲೂ ಭಗವಂತನ ತಿರುವಡಿಗಳನ್ನು ಆಶ್ರಯಿಸಿ ಅರ್ಚಿಸಿ ಉದ್ಧಾರಗೊಂಡವರೇ.

70. தமருள்ளம் தஞ்சை தலையரங்கம் தண்கால்,
தமருள்ளும் தண்பொருப்பு வேலை, - தமருள்ளும்
மாமல்லை கோவல் மதிள்குடந்தை யென்பரே,
ஏவல்ல வெந்தைக் கிடம்.

ತಮರುಳ್ಳಮ್ ತಂಜೈ ತಲೈಯರಙ್ಗಮ್ ತಣ್ಕಾಲ್,
ತಮರುಳ್ಳುಮ್ ತಣ್ಪೊರುಪ್ಪು ವೇಲೈ, - ತಮರುಳ್ಳುಮ್
ಮಾಮಲ್ಲೈ ಕೋವಲ್ ಮದಿಳ್ ಕುಡನ್ದೈ ಯೆನ್ಬರೇ,
ಏವಲ್ಲ ವೆನ್ದೈಕ್ಕಿಡಮ್.

ತಮರ್ தமர் = ಭಗವದ್ಭಕ್ತರ, ಉಳ್ಳಮ್ உள்ளம் = ಹೃದಯವು, ತಂಜೈ தஞ்சை = ತಂಜಾವೂರಿನ ಮಾಮಣಿ ದೇವಾಲಯ, ತಲೈ ಅರಙ್ಗಮ್ தலை அரங்கம் = ಸುಪ್ರಸಿದ್ಧವಾದ ಶ್ರೀರಂಗದ ದೇವಾಲಯ, ತಣ್ ಕಾಲ್ தண் கால் = ತಿರುತ್ತಣ್ ಕಾಲ್ ದೇವಾಲಯ, ತಮರ್ ಉಳ್ಳುಮ್ தமர் உள்ளும் = ಭಕ್ತರು ಚಿಂತಿಸುವಂಥ, ತಣ್ தண் = ತಂಪಾದ, ಪೊರುಪ್ಪು பொருப்பு = ಪರ್ವತವು (ತಿರುಮಲೈ ತಿರುಪತಿಯು), ವೇಲೈ வேலை = ತಿರುಪ್ಪಾಲ್ ಕಡಲು, ತಮರ್ ಉಳ್ಳುಮ್ தமர் உள்ளும் = ಭಕ್ತರು ಧ್ಯಾನಿಸುವ, ಮಾಮಲ್ಲೈ மாமல்லை = ತಿರುಕ್ಕಡನ್ ಮಲ್ಲೈ, ಕೋವಲ್ கோவல் = ತಿರುಕ್ಕೋವಲೂರು, ಮದಿಳ್ ಕುಡನ್ದೈ மதிள் குடந்தை = ಕೋಟೆಗಳಿಂದ ಸುಭದ್ರವಾದ ಕುಂಭಕೋಣ, ಎನ್ಬರೇ என்பரே = ಎನ್ನುತ್ತಾರೆ, ಏವಲ್ಲ ஏவல்ல = (ಬಾಣ ಪ್ರಯೋಗ ಮಾಡಿ) ಕೊಂದಂಥಬಲ್ಲ, ಎನ್ದೈಕ್ಕು எந்தைக்கு = ನಮ್ಮ ಸ್ವಾಮಿಗೆ, ಇಡಮ್ இடம் = ನೆಲಸುವ ಸ್ಥಳ.

ಭಗವದ್ಭಕ್ತರ ಹೃದಯವು (ಮನಸ್ಸು) ತಂಜಾವೂರಿನ ಮಾಮಣಿ ದೇವಾಲಯ, ಸುಪ್ರಸಿದ್ಧವಾದ ಶ್ರೀರಂಗದ ದೇವಾಲಯ, ತಿರುತ್ತಣ್ ಕಾಲ್ ದೇವಾಲಯಗಳಲ್ಲಿರುವುದು ಎನ್ನುತ್ತಾರೆ. ಭಕ್ತರು ಚಿಂತಿಸುವ ತಂಪಾದ ಬೆಟ್ಟವು (ತಿರುಮಲೈ ತಿರುಪತಿ), ತಿರುಪ್ಪಾಲ್ ಕಡಲ್, ಮತ್ತು ಅವರು ಧ್ಯಾನಿಸುವ ತಿರುಕ್ಕಡನ್ ಮಲ್ಲೈ, ತಿರುಕ್ಕೋವಲೂರು, ಕೋಟೆಗಳಿಂದ ಸುಭದ್ರವಾಗಿರುವ ಕುಂಭಕೋಣ, ಇವು (ಭಕ್ತರ) ಪ್ರತಿಕೂಲಿಗಳನ್ನು ಕೊಂದಂಥ ಬಲ್ಲ ನಮ್ಮ ಸ್ವಾಮಿಯು ನೆಲಸಿರುವ ತಿರುಪತಿಗಳು ಎನ್ನುತ್ತಾರೆ.

Garani Srinivasan

ಭಕ್ತ ಜನರ ಉದ್ಧಾರಕ್ಕಾಗಿಯೇ ಭಗವಂತನು ಭೂಲೋಕದಲ್ಲಿ ಅರ್ಚಾ
ವತಾರಿಯಾಗಿ ನಾನಾ ಪವಿತ್ರ ಕ್ಷೇತ್ರಗಳಲ್ಲಿ ನೆಲಸಿದ್ದಾನೆ. ಅಂಥ ನೂರಾರು
ಪವಿತ್ರಕ್ಷೇತ್ರಗಳು ಭಾರತದ ಆದ್ಯಂತ ಹರಡಿವೆ. ದಕ್ಷಿಣಾ ಭಾರತದಲ್ಲಿರುವ
ಸುಪ್ರಸಿದ್ಧವಾದ ಕೆಲವು ಕ್ಷೇತ್ರಗಳನ್ನು ಆಳ್ವಾರರು ಇಲ್ಲಿ ನೆನೆಯಿಸಿಕೊಳ್ಳು
ತ್ತಾರೆ.

ಆಳ್ವಾರರು ಹೇಳುತ್ತಾರೆ: ಭಕ್ತ ಜನರ ಹೃದಯವನ್ನು ಸೂರೆಗೈ
ಯುವ ಕ್ಷೇತ್ರಗಳಲ್ಲಿ ಶಂಖಾಕೃತಿಯ ಮಾಮಣಿದೇವಾಲಯವಿದೆ; ದೇವಾಲಯ
ಗಳಲ್ಲಿ ಮಕುಟಪ್ರಾಯವಾದ ಶ್ರೀರಂಗದ ದೇವಾಲಯವಿದೆ. ತಿರುತ್ತಣ್
ಕಾಲ್ ದೇವಾಲಯವಿದೆ. ಭಕ್ತರ ಚಿಂತನೆಗೆ ಮೂಲವಾಗಿರುವ ತಿರುಮಲೈ
ದೇವಾಲಯವಿದೆ. ತಿರುಪಾಲ್ಗಡಲೂ ಇದೆ. (ತಿರುಮಲೆಯೆಂಬ ಶ್ರೀವೈಕುಂ
ಠವೇ ಇದೆ). ಅವರು ಎಡೆಬಿಡದೆ ಧ್ಯಾನಿಸುತ್ತಿರುವ ತಿರುಕ್ಕುಡನ್ ಮಲ್ಲೈ ಕ್ಷೇ
ತ್ರವೂ, ಕೋಟೆಗಳಿಂದ ಸುಭದ್ರವಾದ ಕುಂಭಕೋಣದ ಕ್ಷೇತ್ರವೂ
ಇವೆ. ಇವುಗಳ ಒಂದೊಂದರಲ್ಲೂ ಭಕ್ತರಿಗೆ ಪ್ರತಿಕೂಲರಾದವರನ್ನು
ಸಂಹರಿಸುವ ಪರಮಸಮರ್ಥನಾದ ಭಗವಂತನು ನೆಲಸಿದ್ದಾನೆ.
ವರನ್ನು ದಿಂಡುಂತಿರುತ್ತ

71. இடங்கை வலம்புரி நின்றார்ப்ப, எரிகான்
றடங்கா ரொடுங்குவித்த தாழி, - விடங்காலும்
தீவா யரவணைமேல் தோன்றல் திசையளப்பான்,
பூவா ரடிநிமிர்த்த போது.

ಇಡಙ್ಗೈ ವಲಮ್ಬುರಿ ನಿನ್ಱಾರ್ಪ್ಪ, ಎರಿಕಾನ್
ಱಡಙ್ಗಾರೊಡುಙ್ಗುವಿತ್ತ ತಾೞಿ, - ವಿಡಙ್ಗಾಲುಮ್
ತೀವಾಯರವಣೈಮೇಲ್ ತೋನ್ಱಲ್ ತಿಶೈಯಳಪ್ಪಾನ್,
ಪೂವಾರಡಿ ನಿಮಿರ್ತ್ತ ಪೋದು.

ಇಡಙ್ಗೈ இடங்கை = ಎಡಗೈಯ, ವಲಮ್ಬುರಿ வலம்புரி = ಬಲಮುರಿಯು (ಶಂಖವು), ನಿನ್ಱು நின்று = ಇದ್ದುಕೊಂಡು, ಆರ್ಪ್ಪ ஆர்ப்ப = ಮೊಳಗುತ್ತಿರಲು, ಎರಿಕಾನ್ಱು எரிகான்று = ಜ್ವಾಲೆಯನ್ನುಗುಳುವ, ಅಡಙ್ಗಾರ್ அடங்கார் = ವಿರೋಧಿಗಳನ್ನು, ಒಡುಙ್ಗುವಿತ್ತದು ஒடுங்குவித்தது = ಅಡಗಿಸಿಬಿಟ್ಟಿತು, ಆೞಿ ஆழி = ಚಕ್ರಾಯುಧವು, ವಿಡಮ್ ಕಾಲುಮ್ விடம் காலும் = ವಿಷವನ್ನು ಕಾರುವ, ತೀ ವಾಯ್ தீ வாய் = ಭಯಂಕರವಾದ ನಾಲಗೆಗಳುಳ್ಳ, ಅರವು அரவு = ಸರ್ಪದ, ಅಣೈಮೇಲ್ அணை மேல் = ಹಾಸಿಗೆ ಮೇಲೆ, (ಮಲಗಿರುವ), ತೋನ್ಱಲ್ தோன்றல் = ಮಹಾಪುರುಷನು, ತಿಶೈ ಅಳಪ್ಪಾನ್ திசை அளப்பான் = ಎಲ್ಲಾ ದಿಕ್ಕ

ಗಳನ್ನು ಅಳೆದುಕೊಳ್ಳುವುದಕ್ಕಾಗಿ, ಪೂ பூ = ಸೊಗಸು, ಆರ್ ஆர் = ತುಂಬಿದ, ಅಡಿ அடி = ತಿರುವಡಿಯನ್ನು, ನಿಮಿರ್ತ್ತ ಪೋದು நிமிர்த்த போது = ಚಾಚಿದ ಸಮಯದಲ್ಲಿ.

ವಿಷವನ್ನು ಕಾರುವ ಭಯಂಕರವಾದ ನಾಲಗೆಯುಳ್ಳ ಹಾಸಿಗೆಯ ಮೇಲೆ ಪವಡಿಸಿರುವ ಮಹಾಪುರುಷನು ಎಲ್ಲಾ ದಿಕ್ಕುಗಳನ್ನು ಅಳೆದುಕೊಳ್ಳುವುದಕ್ಕಾಗಿ ಸೊಗಸು ತುಂಬಿದ ತಿರುವಡಿಯನ್ನು ಚಾಚಿದ ಸಮಯದಲ್ಲಿ, (ಸ್ವಾಮಿಯ) ಎಡಗೈಯ ಬಲಮುರಿಯು ಇದ್ದುಕೊಂಡು ಮೊಳಗುತ್ತಿರಲು, ಜ್ವಾಲೆಯನ್ನು (ಕೆಂಡವನ್ನು) ಸುರಿಸುವ ~~[illegible]~~ ಚಕ್ರಾಯುಧವು (71) ವಿರೋಧಿಗಳನ್ನು ಅಡಗಿಸಿಬಿಟ್ಟಿತು.

ಭಗವಂತನ ಅಸಾಧಾರಣ ಸಾಮರ್ಥ್ಯವನ್ನು ಇಲ್ಲಿ ತೋರಿಸಲಾಗಿದೆ.

ಭಗವಂತನು ವಾಮನವಟುವಾಗಿ ಬಲಿಚಕ್ರವರ್ತಿಯಿಂದ ಮೂರು ಹೆಜ್ಜೆಗಳ ನೆಲವನ್ನು ದಾನವಾಗಿ ಬೇಡಿ ಪಡೆದ ಕೂಡಲೇ ಅವನು ತ್ರಿವಿಕ್ರಮನಾಗಿ ಬೆಳೆದನು. ತನ್ನ ಒಂದು ಹೆಜ್ಜೆಯನ್ನು ಪ್ರಸರಿಸಿ, ಭೂಮಂಡಲವನ್ನು ಅಳೆದುಕೊಂಡು ಬಿಟ್ಟನು. ಮತ್ತೊಂದು ಹೆಜ್ಜೆಯನ್ನು ಎಲ್ಲಾ ಕಡೆಗಳಿಗೂ ಹಬ್ಬಿ, ಮೇಲಣ ಎಲ್ಲಾ ಲೋಕಗಳನ್ನೂ ಅಳೆದು ಕೊಂಡುಬಿಟ್ಟನು. ಆಗ, ಬಲಿಚಕ್ರವರ್ತಿಯ ಹಿರಿಯ ಮಗನಾದ ನಮುಚಿಯು ಭಗವಂತನ ಈ ಕೃತ್ಯವನ್ನು ಆಕ್ಷೇಪಿಸುತ್ತಾ "ಇದೇನನ್ಯಾಯ?" ಎಂದು ಅಬ್ಬರಿಸಿ, ಅವನ ಮೇಲೆ ನುಗ್ಗಿ ಬಂದನು. ಭಗವಂತನ ಕೈಯಲ್ಲಿನ ಶಂಖ ಚಕ್ರಗಳೇ ಆ ವಿರೋಧಿಗಳನ್ನು ನಿಗ್ರಹಿಸುವ ಕೆಲಸವನ್ನು ಮಾಡಿಬಿಟ್ಟವು.

ಆಳ್ವಾರರು ಹೇಳುತ್ತಾರೆ: ವಿಷವನ್ನು ಕಾರುವ ಭಯಂಕರವಾದ ನಾಲಗೆಯುಳ್ಳ ಸರ್ಪವನ್ನೇ ಭಗವಂತನು ತನ್ನ ಹಾಸಿಗೆಯನ್ನಾಗಿ ಮಾಡಿಕೊಂಡಿದ್ದಾನೆ. ಹಾಲ್ಗಡಲಲ್ಲಿ ಶೇಷಶಯನನಾಗಿ ಪವಡಿಸಿರುವ ಸ್ವಾಮಿಯು ತ್ರಿವಿಕ್ರಮನಾಗಿ ಬೆಳೆದು ಮೇಲಣ ಲೋಕಗಳನ್ನು ತನ್ನ ಸೊಗಸಿನ ತಿರುವಡಿಯಿಂದ ಅಳೆದು ಕೊಳ್ಳುತ್ತಿರುವಾಗ, ಅವನಿಗೆ ಎದುರಾಗಿ ಬಂದ ಎಲ್ಲ ವಿರೋಧಿಗಳನ್ನೂ ಅವನ ಕೈಯಲ್ಲಿದ್ದ ಶಂಖ ಚಕ್ರಗಳು ಅಡಗಿಸಿಬಿಟ್ಟವು. ಸ್ವಾಮಿಯ ಅಸಾಧಾರಣ ಸಾಮರ್ಥ್ಯವೇನೆಂಬುದನ್ನು ವಿವರಿಸಿ ತಿಳಿಯುವುದಾದರೂ ಹೇಗೆ?

72. போதறிந்து வானரங்கள் பூஞ்சுனை புக்கு,
ஆங்கலர்ந்த
போதரிந்து கொண்டேத்தும் போது, —
உள்ளம் போது

மணி வேங்கடவன் மலரடிக்கே செல்ல,
அணி வேங்கடவன் பேராய்ந்து.

ಪೋದರಿನ್ದು ವಾನರಙ್ಗಳ್ ಪೂಞ್ಜುನೈ ಪುಕ್ಕು, ಆಙ್ಗಲರ್ನ್ದ
ಪೋದರಿನ್ದು ಕೊಣ್ಡೇತ್ತುಮ್ ಪೋದು, ಉಳ್ಳಮೇ — ಪೋದುಮ್
ಮಣಿ ವೇಙ್ಗಡವನ್ ಮಲರಡಿಕ್ಕೇ ಶೆಲ್ಲ,
ಅಣಿ ವೇಙ್ಗಡವನ್ ಪೇರಾಯ್ನ್ದು.

ಪೋದು போது = ಉಷಃಕಾಲವನ್ನು, ಅರಿನ್ದು அறிந்து = ತಿಳಿದುಕೊಂಡು, ವಾನರಙ್ಗಳ್ வானரங்கள் = ವಾನರಗಳು, ಪೂಶುನೈ ಪುಕ್ಕು பூசுனை புக்கு = ಸುಂದರವಾದ ಸರೋವರಗಳನ್ನು (ಕೊಳಗಳನ್ನು) ಪ್ರವೇಶಿಸಿ (ಅಲ್ಲಿ ಸ್ನಾನಮಾಡಿ), ಆಙ್ಗು ஆங்கு = ಅಲ್ಲಿ, ಅಲರ್ನ್ದ அலர்ந்த = ಅರಳಿದ, ಪೋದು போது = ಹೂವುಗಳನ್ನು, ಅರಿನ್ದುಕೊಂಡು அறிந்து கொண்டு = ಬಿಡಿಸಿಕೊಂಡು, ಏತ್ತುಮ್ ಪೋದು ஏத்தும் போது = ಪೂಜಿಸಿ ಸ್ತುತಿಸುವಾಗ, ಉಳ್ಳಮೇ உள்ளம் = ಮನಸ್ಸೇ, ~~ಪೋದು போது = (ನೀನೂ ಬಾರೋಣ) ಬಾ~~, ಪೋದುಮ್ போதும் = ಹೋಗುವುದಕ್ಕೆ, ಅಣಿ ವೇಙ್ಗಡವನ್ அணி ಅಣಿ அணி = ಸಿದ್ಧನಾಗು, ಅಣಿ ವೇಙ್ಗಡವನ್ = ಸುಂದರನಾದ ತಿರುವೆಂಕಟನಾಥನ, ಪೇರ್ பேர் = ವೇಙ್ಗಡವನ್ வேங்கடவன் = ತಿರುನಾಮಗಳನ್ನು, ಆಯ್ನ್ದು ஆய்ந்து = ಪಠಿಸುತ್ತಾ, ವೇಙ್ಗಡವನ್ ತಿರುನಾಮಗಳನ್ನು, ಮಲರ್ ಅಡಿಕ್ಕೇ மலர் அடி ವೇಙ್ಗಡವನ್ வேங்கடவன் = ತಿರುವೆಂಕಟನಾಥನ, ಮಲರ್ ಅಡಿಕ್ಕೇ மலர் அடி க்கே = ಕೋಮಲ ತಿರುವಡಿಗಳನ್ನೇ, ಶೆಲ್ಲ செல்ல = ಸೇರಲು.

ಮನಸ್ಸೇ, ಕೋತಿಗಳು ಉಷಃಕಾಲವನ್ನು ಅರಿತುಕೊಂಡು, ಸುಂದರವಾದ ಕೊಳಗಳನ್ನು ಪ್ರವೇಶಿಸಿ, ಮಿಂದು, ಅಲ್ಲಿ ಅರಳಿದ ಹೂವುಗಳನ್ನು ಬಿಡಿಸಿಕೊಂಡು ಪೂಜಿಸಿ ಸ್ತುತಿಸುತ್ತವೆ. ನೀನೂ ಸುಂದರನಾದ ತಿರುವೆಂಕಟನಾಥನ ತಿರುನಾಮಗಳನ್ನು ಸ್ಮರಿಸುತ್ತಾ, ತಿರುವೆಂಕಟನಾಥನ ತಿರುವಡಿಗಳನ್ನೇ ಸೇರಲು ಸಿದ್ಧನಾಗು. (72)

ಇಲ್ಲಿ ತಿರುವೆಂಕಟಗಿರಿಯ ಹಿರಿಮೆಯನ್ನು ಸುಂದರವಾಗಿ ಹೇಳಿದೆ. ತಿರುಮಲೈ ಎಂಬುದು ಅದೆಂಥ ಪವಿತ್ರಸ್ಥಳ! ಅಲ್ಲಿ ವಾಸಿಸುವ ಕಾಲ ಮೃಗಗಳೂ ಸಹ ಭಗವಂತನ ಪಾದ ಸೇವೆಗಾಗಿ ಸದಾ ಸಿದ್ಧವಾಗಿ, ಕಾಲಕ್ಕೆ ಮಿಂದು, ಪೂಜೆ ಸಲ್ಲಿಸುತ್ತವೆ. ಮನುಷ್ಯನಾದವನು ಅವುಗಳನ್ನಾದರೂ ಅನುಸರಿಸಬಾರದೇ?

ಆಳ್ವಾರರು ಹೇಳುತ್ತಾರೆ: ಮನಸ್ಸೇ, ತಿರುಮಲೆಯಲ್ಲಿ

ಜೀವಿಸುವ ಕೋಟಿಕಗಳೂ ಸಹ ಉಷಃಕಾಲದಲ್ಲಿ ~~[illegible]~~ ಎಚ್ಚರಗೊಳ್ಳು
ತ್ತವೆ. ಕೂಡಲೇ ಅವು ಸುಂದರವಾದ ನೀರ್ಕೊಳಗಳಿಗೆ ಹೋಗಿ ಮಿಂ
ಯುತ್ತವೆ. ಅಲ್ಲಿ ಅರಳಿರುವ ಹೂವುಗಳನ್ನು ಬಿಡಿಸಿಕೊಳ್ಳುತ್ತವೆ.
ತಿರುವೇಂಕಟನಾಥನ ತಿರುವಡಿಗಳಿಗೆ ಅವುಗಳನ್ನು ಅರ್ಪಿಸಿ, ಸ್ವಾಮಿ
ಯನ್ನು ಸ್ತುತಿಸುತ್ತವೆ. ಮನಸ್ಸೇ, ನೀನೂ ಸಹ ಹಾಗೆಯೇ ಮಾಡಬೇ
ಡವೇ? ಭಗವಂತನಾದ ತಿರುವೇಂಕಟನಾಥನ ತಿರುನಾಮಗಳನ್ನು
ಸ್ಮರಿಸುತ್ತಾ, ಅವನ ತಿರುವಡಿಗಳನ್ನು ಅರ್ಚಿಸಿ ಪೂಜಿಸಲು ಉಷಃ
ಕಾಲದಲ್ಲೇ ಎದ್ದೇಳು.

ಮನಸ್ಸಿಗೆ ಕೋಟಿಕಗಳ ಸಾಮ್ಯವನ್ನು ಆಳ್ವಾರ್ಸ್ವಾಮಿ
ವಿವರಿಸಿ ಹೇಳುವುದು ವೇದಗಳ ಕಾಲದಿಂದಲೂ ಕಾಣಬಹುದು.
ಆಳ್ವಾರರು ಅದನ್ನು ಬೇರೆ ರೀತಿಯಲ್ಲಿ ಸುಂದರವಾಗಿ ಹೇಳಿದ್ದಾರೆ.

73. ஆய்ந்துரைப்ப ஆயிரம் பேராதி நடு வந்திவாய்,
வாய்ந்தமலர் தூவி வைகலும், — ஏய்ந்த
பிறைக்கோட்டுச் செங்கண் கரிவிடுத்த
பெம்மான்,
இறைக்கட்படத் துணிந்த யான்.

ಆಯ್ನ್ದುರೈಪ್ಪ ನಾಯಿರಮ್ ಪೇರಾದಿನಡು ವನ್ದಿವಾಯ್,
ವಾಯ್ನ್ದಮಲರ್ ತೂವಿ ವೈಗಲುಮ್, — ಏಯ್ನ್ದ
ಪಿಱೈಕ್ಕೋಟ್ಟು ಚ್ಚೆಙ್ಗಣ್ ಕರಿ ವಿಡುತ್ತ ಪೆಮ್ಮಾನ್,
ಇಱೈಕ್ಕಾಟ್ಪಡ ತ್ತುಣಿನ್ದ ಯಾನ್.

ಆಯ್ನ್ದು ஆய்ந்து = ಆರಿಸಿಕೊಂಡು, ಉರೈಪ್ಪನ್ உரைப்பன்
= ಹೇಳುತ್ತೇನೆ (ಸ್ಮರಿಸುತ್ತೇನೆ), ಆಯಿರಮ್ ಪೇರ್ ஆயிரம் பேர் = (ಭಗ
ವಂತನ) ಸಾವಿರನಾಮಗಳನ್ನು, ಆದಿ, ನಡು, ಅನ್ದಿವಾಯ್ ஆதி, நடு,
அந்திவாய் = ಬೆಳಗ್ಗೆ, ಮಧ್ಯಾಹ್ನ, ಮತ್ತು ಸಂಜೆಗಳಲ್ಲಿ, ವೈಗಲುಮ್
வைகலும் = ಪ್ರತಿದಿನವೂ, ಆಯ್ನ್ದ ஆய்ந்த = ಆರಿಸಿಕೊಂಡು ಬಿಡಿ
ಸಿಕೊಂಡ, ಮಲರ್ மலர் = ಹೂವುಗಳನ್ನು, ತೂವಿ தூவி = (ಭಗವಂತನಿಗೆ)
ಅರ್ಪಿಸಿ, ~~ವಾಯ್ನ್ದ ஏய்ந்த = ಯೋಗ್ಯವಾದ~~, ಪಿಱೈಕ್ಕೋಡು பிறை (ದಂತವುಳ್ಳ)
கோடு = ಬಾಲಚಂದ್ರನನ್ನು, ಏಯ್ನ್ದ ஏய்ந்த = ಹೋಲುವ,
ಶೆಙ್ಗಣ್ செங்கண் = ಕೆಂಗಣ್ಣಿನ, ಕರಿ கரி = ಆನೆಯನ್ನು,
ವಿಡುತ್ತ விடுத்த = ಬಿಡಿಸಿದ, ಪೆಮ್ಮಾನ್ பெம்மான் = ಸರ್ವೇ

Garani Srinivasan

ಶ್ವರನಾದ, ಇಱೈವರ್ಕ್ಕು இறைவர்க்கு = ಭಗವಂತನಿಗೆ (ಪುರುಷೋತ್ತಮನಿಗೆ), ಆಳ್‌ಪಡ ஆள்பட = ಸೇವೆಗೆಂದು, ಉಗಂದ உகந்த = ಉತ್ಸಾಹಗೊಂಡ, ಯಾನ್ யான் = ನಾನು.

ಬಾಲಚಂದ್ರನನ್ನು ಹೋಲುವಂಥ ದಂತವುಳ್ಳ ಕೆಂಗಣ್ಣಿನ ಆನೆಯನ್ನು ಬಿಡಿಸಿದ ಸರ್ವೇಶ್ವರನಾದ ಪುರುಷೋತ್ತಮನಿಗೆ ಸೇವೆ ಮಾಡಬೇಕೆಂದು ಉತ್ಸಾಹಗೊಂಡ ನಾನು ಬೆಳಗ್ಗೆ ಮಧ್ಯಾಹ್ನ ಮತ್ತು ಸಂಜೆಗಳಲ್ಲಿ ಭಗವಂತನ ಸಾವಿರನಾಮಗಳನ್ನು ಆರಿಸಿಕೊಂಡು ಸ್ಮರಿಸುತ್ತೇನೆ. ಆಯ್ದು ಬಿಡಿಸಿಕೊಂಡು ಬಂದ ಹೂಗಳನ್ನು (ಭಗವಂತನ ತಿರುವಡಿಗಳಮೇಲೆ) ಎರಚಿ ಪೂಜಿಸುತ್ತೇನೆ. (73)

"ಪಿಱೈ ಕೋಟ್ಟು ಶೆಙ್ಗಣ್ ಕರಿ ವಿಡುತ್ತ ಪೆಮ್ಮಾನ್ – பிறை கோட்டு செங்கண் கரி விடுத்த பெம்மாண்" — ಗಜೇಂದ್ರಮೋಕ್ಷದ ಸ್ಮರಣೆ ಇದು. ಕಾಡಿನ ಸರೋವರದಲ್ಲಿ ನೀರು ಕುಡಿಯಲು ಹೋಗಿ, ಮೊಸಳೆಯ ಬಾಯಿಗೆ ಸಿಕ್ಕಿಬಿದ್ದು ಸಂಕಟಪಡುತ್ತಿತ್ತು ಆ ಆನೆ. ತನ್ನ ಶಕ್ತಿ ಉಡುಗುತ್ತಿರುವುದನ್ನು ಕಂಡು, ಗತ್ಯಂತರವಿಲ್ಲದೆ, ಅದು ಭಗವಂತನನ್ನು "ಆದಿಮೂಲಾ" ಎಂದು ಕೂಗಿ ಕರೆಯಿತು. ಅದರಿಂದಲೇ ಕಾತರಗೊಂಡ ಭಗವಂತನು ಆನೆ ಇದ್ದ ಸ್ಥಳಕ್ಕೇ ಧಾವಿಸಿ ಬಂದು, ಚಕ್ರಾಯುಧದಿಂದ ಮೊಸಳೆಯನ್ನು ಸಂಹರಿಸಿ, ಆನೆಯನ್ನು ಸಂಕಟದಿಂದ ಪಾರುಮಾಡಿದನು. ಭಗವಂತನ ಔದಾರ್ಯ ಎಷ್ಟು ಹಿರಿದು!

ಆಳ್ವಾರರು ಹೇಳುತ್ತಾರೆ: ಬಲಿಷ್ಠವಾದ ಆನೆಯು ಸಂಕಟದಲ್ಲಿ ಸಿಕ್ಕಿಬಿದ್ದು, ಭಗವಂತನನ್ನು ಹೃದಯದಿಂದ ಕೂಗಿ ಕರೆದಾಗ ಕನಿಕರಗೊಂಡ ಸ್ವಾಮಿಯು ಅಲ್ಲಿಗೇ ಧಾವಿಸಿ ಬಂದು, ಅದನ್ನು ಸಂಕಟದಿಂದ ಬಿಡಿಸಿದನಲ್ಲ! ಭಗವಂತನ ಈ ಔದಾರ್ಯ, ಸೌಲಭ್ಯಗಳನ್ನು ಕಂಡುಕೊಂಡ ನಾನು ಆ ಸರ್ವೇಶ್ವರನಿಗೆ ಸೇವೆ ಮಾಡಬೇಕೆಂಬ ಉತ್ಕಟವಾದ ಆಶೆಯನ್ನು ಹೊತ್ತೆ. ದಿನದ ಮೂರು ವೇಳೆಗಳಲ್ಲೂ ಸ್ವಾಮಿಯ ಆಯ್ದ ಸಾವಿರನಾಮಗಳನ್ನು ಜಪಿಸುತ್ತಾ ಬಂದೆ. ಅಲ್ಲದೆ, ಆಯ್ದು ತಂದ ಹೂಗಳಿಂದ ಭಗವಂತನ ತಿರುವಡಿಗಳನ್ನು ಅರ್ಚಿಸಿ, ಪೂಜಿಸಿದೆ.

ಭಗವಂತನ ಒಂದು ಹೆಸರಿನ ಉಚ್ಚಾರದಿಂದಲೇ ಅದು ಕಷ್ಟದಲ್ಲಿ ಸಿಕ್ಕಿಬಿದ್ದ ಆನೆಯನ್ನು ಬಿಡಿಸಬಲ್ಲನಾದರೆ, ಸ್ವಾಮಿಯು ಸಾವಿರ ನಾಮಗಳನ್ನು ಅನುದಿನವೂ ಮೂರು ಹೊತ್ತೂ ತಪ್ಪದೆ ಜಪಿಸುತ್ತಾ, ಆಯ್ದು ತಂದ ಹೂಗಳಿಂದ ಸ್ವಾಮಿಯ ತಿರುವಡಿಗಳನ್ನು ಪೂಜಿಸುತ್ತಾ ಬರುವುದರಿಂದ ಭಗವಂತನು ಕನಿಕರಿಸನೇ? ಸಂಸಾರದ ಸಂಕಟದಿಂದ

Gavani Srinivasan

ಜೀವನವನ್ನು ಬಿಡಿಸಿದನೇ? ಪರಮಪದವಾದವನ್ನು, ತನ್ನ ನಿತ್ಯದಾಸ್ಯವನ್ನು ನೀಡಿದನೇ? — ಪಾಶುರದ ಧ್ವನಿ ಹೀಗಿದೆ.

74. யானே தவஞ்செய்தேனேழ் பிறப்பும் எப்பொழுதும்,
யானே தவமுடையேன் எம்பெருமான், — யானே
இருந்தமிழ் நன்மாலை யிணையடிக்கே சொன்னேன்,
பெருந்தமிழ னல்லேன் பெரிது.

ಯಾನೇ ತವಮ್ ಶೆಯ್ದೇನೇೞ್ ಪಿಱಪ್ಪುಮ್ ಎಪ್ಪೊೞುದುಮ್,
ಯಾನೇ ತವಮುಡೈಯೇನ್ ಎಮ್ಬೆರುಮಾನ್, — ಯಾನೇ
ಇರುನ್ದಮಿೞ್ ನನ್ಮಾಲೈ ಯಿಣೈಯಡಿಕ್ಕೇ ಶೊನ್ನೇನ್,
ಪೆರುನ್ದಮಿೞ ನಲ್ಲೇನ್ ಪೆರಿದು.

ಯಾನೇ யானே = ನಾನೇ, ತವಮ್ ಶೆಯ್ದೇನ್ தவம் செய்தேன் = ತಪಸ್ಸನ್ನು ಮಾಡಿದೆನು, ಏೞ್ ಪಿಱಪ್ಪುಮ್ ஏழ் பிறப்பும் = ಏಳುಜನ್ಮಗಳಿಂದಲೂ, ಎಪ್ಪೊೞುದುಮ್ எப்பொழுதும் = ಯಾವಾಗಲೂ (ಬಿಡದಂತೆ), ಯಾನೇ யானே = ನಾನೇ, ತವಮ್ ಉಡೈಯೇನ್ தவம் உடையேன் = ಆ ತಪಸ್ಸಿನ ಫಲವನ್ನು ಪಡೆದಿದ್ದೇನೆ, ಎಮ್ಬೆರುಮಾನ್ எம்பெருமான் = ಸ್ವಾಮಿಯೇ, ಯಾನೇ யானே = ನಾನೇ, ಇರುನ್ದಮಿೞ್ இருந்தமிழ் = ಶ್ರೇಷ್ಠವಾದ ತಮಿಳಿನಲ್ಲಿ, ನಲ್ ಮಾಲೈ நல் மாலை = ಒಳ್ಳೆಯ ಪಾಶುರಗಳ (ಮಾಲೆಗಳ) ಹಾರವನ್ನು, ಇಣೈ ಅಡಿಕ್ಕೇ இணை அடிக்கே = ನಿನ್ನ ಎರಡು ತಿರುವಡಿಗಳಲ್ಲಿಯೇ (ಜೋಡಿ ಪಾದಗಳಲ್ಲಿ), ಶೊನ್ನೇನ್ சொன்னேன் = ಸಮರ್ಪಿಸಿದ್ದೇನೆ, ಪೆರುನ್ದಮಿೞನ್ பெருந்தமிழன் = ಹಿರಿಯರಾದ ತಮಿಳು ಕವಿಗಳಲ್ಲಿ ಪಾರಂಗತನೂ, ಪೆರಿದು பெரிது = ಹಿರಿಯಾಂತವನೂ, ಅಲ್ಲೇನ್ அல்லேன் = ನಾನಲ್ಲ.

ಸ್ವಾಮಿ, ನಾನು ಏಳುಜನ್ಮಗಳಿಂದಲೂ ಬಿಡದಂತೆ ತಪಸ್ಸನ್ನು ಮಾಡಿದ್ದೇನೆ. ಆ ತಪಸ್ಸಿನ ಫಲವನ್ನು ಪಡೆದಿದ್ದೇನೆ. ಶ್ರೇಷ್ಠವಾದ ತಮಿಳು ಭಾಷೆಯಲ್ಲಿ ಒಳ್ಳೆಯ ಪಾಶುರಗಳ (ಮಾಲೆಗಳ) ಹಾರವನ್ನು ನಿನ್ನ ಎರಡು ತಿರುವಡಿಗಳ ಜೋಡಿಯಲ್ಲೇ ಸಮರ್ಪಿಸಿದ್ದೇನೆ. ಹಿರಿಯರಾದ ತಮಿಳು ಕವಿಗಳಲ್ಲಿ ಪಾರಂಗತನೂ, ಹಿರಿಯಾಂತವನೂ ನಾನಲ್ಲ.

(74)

ಹಿಂದಿನ ಪಾಶುರದಲ್ಲಿ ಆಳ್ವಾರರು ಭಗವಂತನ ನಿತ್ಯಕೈಂಕರ್ಯದಲ್ಲಿ ತಾವು ಬಿಡಬಾರದ ಹೊಂದಿರಬೇಕೆಂಬ ತಮ್ಮ ಮನದಾಸೆಯನ್ನು ವ್ಯಕ್ತಪಡಿಸಿದರು.

ತಮ್ಮ ಆಸೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ಅವರು ಭಗವಂತನ ಸಾವಿರ ನಾಮಗಳನ್ನು ಆರಿಸಿಕೊಂಡು ಅವುಗಳನ್ನು ಎಡೆಬಿಡದಂತೆ ಜಪಿಸುತ್ತಾ ಚಿಂತಿಸುತ್ತಾ ಕಾಲ ಕಳೆಯುತ್ತಿರುವರೆಂದು ಹೇಳಿದರು.

ಅದೇ ವಿಷಯವನ್ನು ಈ ಪಾಶುರದಲ್ಲಿ ಇನ್ನಷ್ಟು ವಿವರವಾಗಿ ಅವರು ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ಈ ಒಂದು ಜೀವನದಲ್ಲಿ ಮಾತ್ರವೇ ನಾನು ನಿನ್ನ ತಿರುನಾಮಗಳನ್ನು ಎಡೆಬಿಡದಂತೆ ಚಿಂತಿಸುತ್ತಾ, ಜಪಿಸುತ್ತಾ ಇದ್ದೇನೆಂದು ಭಾವಿಸಬಾರದು. ನನ್ನ ಎಲ್ಲಾ ಜನ್ಮಗಳಿಂದಲೂ ಸತತವಾಗಿ ನಿನ್ನನ್ನು ಕುರಿತು ಚಿಂತಿಸುತ್ತಲೂ, ನಿನ್ನ ತಿರುನಾಮಗಳನ್ನು ಜಪಿಸುತ್ತಲೂ ಬಂದಿದ್ದೇನೆ. ಇದೇ ನನ್ನ ದೃಢವಾದ ತಪಸ್ಸು. ~~ಜಪಿಸು~~ ಅದಕ್ಕೆ ತಕ್ಕ ಫಲವನ್ನು ಪಡೆದುಕೊಂಡಿದ್ದೇನೆ. ನಾನೀಗ ಶ್ರೇಷ್ಠವಾದ ತಮಿಳು ಭಾಷೆಯಲ್ಲಿ ಒಳ್ಳೆಯ ಪಾಶುರಗಳನ್ನು ರಚಿಸಿ, ನಿನ್ನ ತಿರುವಡಿಯ ಬಳಿಯಲ್ಲಿ ಹಾಡುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದೇನೆ. ನಾನೇನೂ ವೇದಾಂತ ಕವಿಯಲ್ಲ; ವೇದಾಂತ ತಮಿಳು ಕಲೆಯಲ್ಲಿ ಪಾರಂಗತನೂ ಅಲ್ಲ;

75. பெருகு மதவேழம் மாப்பிடிக்கு முன்னின்று,
இருகணிள மூங்கில் வாங்கி, — அருகிருந்த
தேன்கலந்து நீட்டுந் திருவேங்கடம் கண்டீர்,
வான்கலந்த வண்ணன் வரை.

ಪೆರುಹು ಮದವೇೞಮ್ ಮಾಪ್ಪಿಡಿಕ್ಕು ಮುನ್ನಿನ್ಱು,
ಇರುಕಣಿಳ ಮೂಙ್ಗಿಲ್ ವಾಙ್ಗಿ, — ಅರುಹಿರುನ್ದ
ತೇನ್ ಕಲನ್ದು ನೀಟ್ಟುನ್ದಿರುವೇಙ್ಗಡಮ್ ಕಣ್ಡೀರ್,
ವಾನ್ ಕಲನ್ದ ವಣ್ಣನ್ ವರೈ.

ಪೆರುಹುಮ್ பெருகும் = ಸುರಿಯುತ್ತಿರುವ (ಹರಿಯುತ್ತಿರುವ), ಮದಮ್ மதம் = ಮದಜಲವುಳ್ಳ, ವೇೞಮ್ வேழம் = ಸಲಗವು, ಮಾ ಪಿಡಿಕ್ಕು மா பிடிக்கு = ಶ್ರೇಷ್ಠವಾದ (ತನ್ನ) ಹೆಣ್ಣಾನೆಗೆ, ಮುನ್ನಿನ್ಱು முன்னின்று = ಎದುರಾಗಿ ನಿಂತು, ಇರು ಕಣ್ இருகண் = ಎರಡು (ಉತ್ತಮವಾದ) ಕಣ್ಣುಗಳುಳ್ಳ, ಇಳ இள = ಎಳೆಯ, ಮೂಙ್ಗಿಲ್ மூங்கில் = ಬಿದಿರಿನ ಮೊಳಕೆಯನ್ನು, ವಾಙ್ಗಿ வாங்கி = ಕಿತ್ತು ಕೊಂಡು, ಅರುಹು ಇರುನ್ದ அருகு இருந்த = ಪಕ್ಕದಲ್ಲೇ ಇರುವ, ತೇನ್ தேன் = ಜೇನುತುಪ್ಪವನ್ನು, ಕಲನ್ದು கலந்து = ~~ಕಲೆ~~, ಕಲಸಿ, ನೀಟ್ಟುಮ್ நீட்டும் = ನೀಡುವ, ತಿರುವೇಙ್ಗಡಮ್ திருவேங்கடம் = ತಿರುವೇಂಕಟಂ ಎಂಬುದನ್ನು,

Garani Srinivasan

ಕಣ್ಡೀರ್ ತಣ್ಣಣಿರ್ = ಕಂಡಿರಾ, ವಾನ್ ಕಲನ್ದ ವಾಣ್ ಕಲನ್ದ = ~~ಆಕಾಶ~~
~~[illegible]~~ ಆಕಾಶವನ್ನು ಹೋಲುವ, ವಣ್ಣಾನ ವಣ್ಣಣಾಣ್ = ಬಣ್ಣ (ನೀಲ
ಗನ್ನು) ಉಳ್ಳವನ, ವರ್ತ್ತು ವಾರಾ = ಬೆಟ್ಟವನ್ನು.

ದರ್ಶಿಯುತ್ತಿರುವ ಮದಜಲವುಳ್ಳ ಸಲಗವು ತನ್ನ ಶ್ರೇಷ್ಠವಾದ ಹೆಣ್ಣಾನೆಯ ಮುಂದೆ ನಿಂತು, ಉತ್ತಮವಾದ ಎರಡು ಕಣ್ಣಾನಗಳುಳ್ಳ ಬಿದಿರಿನ ಎಳೆಯ ಮೊಳಕೆಯನ್ನು ಕಿತ್ತು ತಂದು ಮಧುವಿನಲ್ಲಿರುವ ಜೇನುತುಪ್ಪವನ್ನು ಕಲಸಿ, ಅದಕ್ಕೆ ನೀಡಿ ತಿನ್ನಿಸುವಂಥ ತಿರುವೇಂಕಟಗಿರಿಯನ್ನು ಕಂಡಿರಾ, ಆಕಾಶದ ಬಣ್ಣವನ್ನು ಹೋಲುವ ಬಣ್ಣದ ಶರೀರವನ್ನುಳ್ಳವನ ಬೆಟ್ಟವನ್ನು. 75

ಈ ಪಾಶುರ ತಿರುವೇಂಕಟಗಿರಿಯ ವರ್ಣನೆಗೆ ಮೀಸಲು. ಹಾಗೆಯೇ, ಅದರ ಶಿಖರದಲ್ಲಿ ನೆಲಸಿರುವ ನೀಲಮೇಘಶ್ಯಾಮನಾದ ತಿರುವೇಂಕಟೇಶ್ವರನ ಔದಾರ್ಯವನ್ನು ಇದು ವಿವರಿಸುತ್ತದೆ.

ಮದಜಲ ಸುರಿಸುತ್ತಿರುವ ಸಲಗವು ತನ್ನ ಹೆಣ್ಣಾನೆಯನ್ನು ಒಲಿಸಿಕೊಳ್ಳುವುದಕ್ಕಾಗಿ ಅದಕ್ಕೆ, ಎಳೆಯ ಬಿದಿರು ಮೊಳಕೆಗಳನ್ನು ಕಿತ್ತು ತಂದು, ಜೇನನ್ನು ಸವರಿ, ಬಹಳ ಪ್ರೀತಿಯಿಂದ ನೀಡುವುದು. ಹಾಗೆಯೇ, ಆ ಬೆಟ್ಟದ ಮೇಲೆ ನೆಲಸಿರುವ ಭಗವಂತನು ಭಕ್ತಜನರನ್ನು ತನ್ನೆಡೆಗೆ ತನ್ನ ಕಾರುಣ್ಯ ಔದಾರ್ಯಗಳ ಮೂಲಕ ಆಕರ್ಷಿಸಿಕೊಳ್ಳುತ್ತಾನೆ ಎನ್ನುತ್ತಾರೆ ಆಳ್ವಾರರು.

ಪರಮಪುರುಷನೇ ಸಲಗವಿದ್ದಂತೆ. ಅವನನ್ನು ಆಶ್ರಯಿಸಿ ಬರುವ ಭಕ್ತಜನರೆಲ್ಲ ಹೆಣ್ಣಾನೆಗಳಿದ್ದಂತೆ. ಸಲಗವೇ ಮುಂದೆ ಬಂದು ಹೆಣ್ಣಾನೆಯನ್ನು ಒಲಿಸಿಕೊಳ್ಳುವ ಹಾಗೆ, ಭಗವಂತನು ಭಕ್ತನನ್ನು ತನ್ನ ಕಡೆಗೆ ಆಕರ್ಷಿಸಲು, ತಾನೇ ಪ್ರೀತಿ, ಕರುಣೆ ತೋರುತ್ತಾನೆ.

76. வரைச் சந்தனக் குழம்பும் வான் கலனும் பட்டும்,
விரைப் பொலிந்த வெண் மல்லிகையும் — நிரை
த்துக்கொண்டு,
ஆதிக்கண் நின்ற வறிவனடியிணையே,
ஓதிப்பணிவதுறும்.

ವರೈಚ್ಚಂದನಕ್ಕುೞುಂಬುಂ ವಾನ್ ಕಲನುಂ ಪಟ್ಟುಂ,
ವಿರೈಪ್ಪೊಲಿಂದ ವೆಣ್ ಮಲ್ಲಿಗೈಯುಂ — ನಿರೈತ್ತುಕ್ಕೊಂಡು,
ಆದಿಕ್ಕಣ್ ನಿನ್ರ ವರಿವನಡಿಯಿಣೈಯೇ,
ಓದಿಪ್ಪಣಿವದುರುಂ.

Garani Srinivasan

ವಶ್ಯೈ ಯಿಣ್ಣಾರ = ಬೆಟ್ಟದ, ಚಂದನ ಕ್ಕುೞಂಬುಂ ಶಂದ್ರಣಕ್ಕೞಿಂ
4ಂ = ಶ್ರೀಗಂಧದ ಮುದ್ದೆಯನ್ನೂ, ವಾನ್ ಕಲನುಂ ಯಿಣ್ ಕಲಣ್ಣುಂ =
ಸೆಂಬಗಿನ ಆಭರಣಗಳನ್ನೂ, ಪಟ್ಟುಂ ಪಟ್ಟುಂ = ರೇಷ್ಮೆವಸ್ತ್ರಗಳನ್ನೂ
(ಪೀತಾಂಬರವನ್ನೂ), ಪಶ್ಯೆ ಪ್ಪೊ ಅನ್ನ ಯಿಣ್ಣಾರ ಪೊಲಿನ್ದ = (ಚಿನ್ನ) ಅರಳಿ
ತೋಳ್ಛಿರುವ, ವೆಳ್ ಮಲ್ಲಿದ್ದೈಯುಂ ರಿಯಣ್ ಮಸಲ್ ನಿರೈ ಕಯ್ಯುಂ =
ಬಿಳಿಯ ಮಲ್ಲಿಗೆಯನ್ನೂ, ನಿಶ್ಚಿತ್ತ ಕಣ್ಣಿ ನಿರೈ ಕ್ಕೊಂಡು ಕೊಣ್ಡು =
ತುಂಬಿಕೊಂಡು, ಅದಿಶ್ಶಯ್ ಆಶ್ಶಿಕ್ಕಣ್ = ಬದಲ್ಲದಳ್ಳೆಯಕಾಲದಿಂದ
ಲೂ, ನಿನ್ ಅ ನ್ರಿಣ್ಣ = ನೆಲಸಿರುವ, ಅಟ್ಟಿವನ್ ಅನ್ರಿವಣ್ = ಸರ್ವಜ್ಞ
ಮೂರ್ತಿಯ, ಅಡಿ ಇಣ್ಣೈಯೇ ಅಡಿ ಕಿಣ್ಣಾಯ = ಎರಡು ತಿರುವಡಿಗಳನ್ನೇ,
ಬಿಡಿ ಕಾಣ್ಣಿ = ಸ್ತುತಿಸಿ, ವಣೆವದು ಪಣ್ಣಿಯ ತ್ತು = ನಮಸ್ಕರಿಸುವುದು,
ಉಯ್ಯುಂ ಉಣ್ಣುಂ = ಶಕ್ಯದ್ದು (ಬದಲ್ಲಯೋಗ್ಯವಾದದ್ದು).

ಬೆಟ್ಟದ ಶ್ರೀಗಂಧವನ್ನೂ, ಸೆಂಬಗಿನ ಆಭರಣಗಳನ್ನೂ, ರೇಷ್ಮೆವಸ್ತ್ರ
ಗಳನ್ನೂ (ಪೀತಾಂಬರವನ್ನೂ), ಚಿನ್ನ ಅರಳಿ ತೋಳ್ಛಿರುವ ಬಿಳಿಯ ಮಲ್ಲಿಗೆ
ಯನ್ನೂ ತುಂಬಿಕೊಂಡು ಬದಲ್ಲದಳ್ಳೆಯಕಾಲದಿಂದಲೂ (ಶಿಖರದಲ್ಲಿ) ನೆಲ
ಸಿರುವ ಸರ್ವಜ್ಞಮೂರ್ತಿಯ ಎರಡು ತಿರುವಡಿಗಳನ್ನೇ ಸ್ತುತಿಸಿ ನಮಸ್ಕ (76)
ರಿಸುವುದು ಬದಲ್ಲಯೋಗ್ಯವಾದದ್ದು.

ಹಿಂದಿನ ಪಾಶುರದ ವಿಷಯವನ್ನೇ ಇಲ್ಲಿ ಮುಂದುವರಿಸ
ಲಾಗಿದೆ. ಭಗವಂತನು (ವೆಂಕಟಾಚಲ ಶಿಖರದ) ಭಕ್ತರನ್ನು ಆಕರ್ಷಿಸು
ವ ಬಗೆಯನ್ನು ಇಲ್ಲಿ ವಿವರಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ತಿರುವೇಂಕಟ ಗಿರಿಯ ಶಿಖರದಲ್ಲಿ
ಬಹುಪುರಾತನ ಕಾಲದಿಂದಲೂ ನೆಲಸಿರುವ ಭಗವಂತನು ಘಮಘಮಿ
ಸುವ ಶ್ರೀಗಂಧವನ್ನು ಲೇಪಿಸಿಕೊಂಡಿದ್ದಾನೆ. ದಿವ್ಯವಾದ ಸೆಂಬಗಿನ ಆಭರ
ಣಗಳನ್ನು ಧರಿಸಿಕೊಂಡಿದ್ದಾನೆ. ಆಕರ್ಷಕವಾದ ಪೀತಾಂಬರವನ್ನುಟ್ಟಿದ್ದಾನೆ.
ಬಿಳಿಯ ಮಲ್ಲಿಗೆಯ ಹೂವಿನಿಂದ ಚಿನ್ನ
ಸರಮಾಲೆ ತುಂಬಿ ತೋಳ್ಛಿರುವ ಬಿಳಿಯ ಮಲ್ಲಿಗೆಯ ... ಅವನು ಸರ್ವಜ್ಞಮೂರ್ತಿ. ಆಸ್ಥಾವಿಲಯ
ಗಿ ಅಲಂಕರಿಸಿಕೊಂಡಿದ್ದಾನೆ.
ಎರಡು ತಿರುವಡಿಗಳನ್ನು ಆಶ್ರಯಿಸುವುದು, ಸ್ತುತಿಸುವುದು, ಅವುಗಳಿಗೆ
ಎರಗುವುದು – ಇವೇ ಬದಲ್ಲಯೋಗ್ಯವಾದ (ಉದ್ಧಾರಗಳ್ಳುವ) ಕೆಲಸ.

ಶ್ರೀಗಂಧದ ಪರಿಮಳ, ಮಲ್ಲಿಗೆ ಹೂವಿನ ಪರಿಮಳ ಮೂಗಿನ ಮೂಲಕ
ಮನಸ್ಸನ್ನಾಕರ್ಷಿಸುವುದು. ಸೆಂಬಗಿನ ಪೀತಾಂಬರ, ಹೊಳೆಯುವ ಆಭರಣಗಳು ಕಣ್ಣಿನ
ಮೂಲಕ ಮನಸ್ಸನ್ನಾಕರ್ಷಿಸುವುದು. ಪುರಾತನ ಕಾಲದಿಂದಲೂ ಬೆಟ್ಟದ ಶಿಖರ
ದಲ್ಲಿ ನೆಲಸಿ, ಭಕ್ತರನ್ನಾಕರ್ಷಿಸುವುದು ಇವುಗಳಿಂದಲೇ – ಪ್ರತ್ಯೇಕಿಯ ಸೆಂಬಗಿನ

Garani Srinivasan

ನಡುವೆ, ದಿವ್ಯ ಸುಂದರನಾಗಿ, ದಿವ್ಯಾಭರಣ ಭೂಷಣಗಳಿಂದ ಅಲಂಕರಿಸಿಕೊಂಡು, ಸರ್ವಜ್ಞನಾಗಿ ಮೆರೆಯುವ ಭಗವಂತನ (ವೇಂಕಟೇಶ್ವರನ) ತಿರುವಡಿಗಳನ್ನಾಶ್ರಯಿಸಿ ಉದ್ಧಾರಗೊಳ್ಳಬೇಕು.

77. உறுங்கண்டாய் நன்னெஞ்சே யுத்தமன் நற்பாதம்,
உறுங்கண்டா யொண்கமலந் தன்னால், — உறுங்கண்டாய்
ஏத்திப் பணிந்தவன் பேரீரைஞ்ஞூறெப்பொழுதும்,
சாத்தியுரைத்தல் தவம்.

ಉಱುಙ್ಗಣ್ಡಾಯ್ ನನ್ನೆಞ್ಜೇ ಯುತ್ತಮನ್ ನಱ್ಪಾದಮ್,
ಉಱುಙ್ಗಣ್ಡಾ ಯೊಣ್ಕಮಲನ್ ತನ್ನಾಲ್, — ಉಱುಙ್ಗಣ್ಡಾಯ್
ಏತ್ತಿ ಪಣಿನ್ದವನ್ ಪೇರೀರೈಞ್ಞೂಱೆಪ್ಪೊೞುದುಮ್,
ಶಾತ್ತಿಯುರೈತ್ತಲ್ ತವಮ್.

ನಲ್ ನೆಂಜೇ நல் நெஞ்சே = (ನನ್ನ) ಒಳ್ಳೆಯ ಮನಸ್ಸೇ, ಉತ್ತಮನ್ உத்தமன் = ಪುರುಷೋತ್ತಮನ, ನಲ್ ಪಾದಮ್ நற்பாதம் = ಉತ್ತಮವಾದ (ಒಳ್ಳೆಯ) ಪಾದಗಳು, ಉಱುಮ್ ಕಣ್ಡಾಯ್ உறும் கண்டாய் = ನಮಗೆ ದಕ್ಕುವು ಕಂಡೆಯಾ, ಒಣ್ ಕಮಲಮ್ ஒண் கமலம் தன்னால் = ಶ್ರೇಷ್ಠವಾದ ಕಮಲ ಪುಷ್ಪಗಳಿಂದ, ಉಱುಮ್ ಕಣ್ಡಾಯ್ உறும் கண்டாய் = ನಮಗೆ ಪ್ರಾಪ್ತವಾಗುವುದು ಕಂಡೆಯಾ, ಏತ್ತಿ ஏத்தி = ಸ್ತುತಿಸಿ, ಪಣಿನ್ದು பணிந்து = ಎರಗಿ, ಅವನ್ ಪೇರ್ அவன் பேர் = ಅವನ ಹೆಸರುಗಳನ್ನು, ಈರ್ ಐಞ್ಞೂಱು ஈரைஞ்ஞூறு = ಒಂದು ಸಾವಿರವನ್ನು, ಎಪ್ಪೊೞುದುಮ್ எப்பொழுதும் = ಎಡೆಬಿಡದೆ, ಶಾತ್ತಿ சாத்தி = ಸಮರ್ಪಿಸಿ, ಉರೈತ್ತಲ್ உரைத்தல் = ಕೀರ್ತಿಸುವುದು, ತವಮ್ தவம் = ಈ ಬಗೆಯ ತಪಸ್ಸನ್ನಾಚರಿಸುವುದು, ಉಱುಮ್ ಕಣ್ಡಾಯ್ உறும் கண்டாய் = ನಮಗೆ ದಕ್ಕುದು ಕಂಡೆಯಾ.

(ನನ್ನ) ಒಳ್ಳೆಯ ಮನಸ್ಸೇ, ಪುರುಷೋತ್ತಮನ ಒಳ್ಳೆಯ ತಿರುವಡಿಗಳು ನಮಗೆ ದಕ್ಕುವು ಕಂಡೆಯಾ. ಶ್ರೇಷ್ಠವಾದ ಕಮಲದ ಹೂಗಳಿಂದ (ಪೂಜಿಸಲು) ಅವುಗಳು ನಮಗೆ ಪ್ರಾಪ್ತವಾಗುವುದು ಕಂಡೆಯಾ. ಸ್ವಾಮಿಯ ತಿರುವಡಿಯನ್ನು ಸ್ತುತಿಸಿ, ಎರಗಿ, ಅವನ ಸಾವಿರ ನಾಮಗಳನ್ನು ಎಡೆಬಿಡದಂತೆ ಸಮರ್ಪಿಸಿ ಕೀರ್ತಿಸುವುದು — ಈ ಬಗೆಯ ತಪಸ್ಸನ್ನಾಚರಿಸುವುದು ನಮಗೆ ದಕ್ಕುದು ಕಂಡೆಯಾ?

ಆಳ್ವಾರರ ಬಂದಿನ ಒಂದು ಪಾಶುರದಲ್ಲಿ 'ತಪಸ್ಸ'ನ ವಿಷಯವಾಗಿ ಒಂದು ಬಗೆಯ ಸೂಚನೆಯನ್ನಿತ್ತಿದ್ದಾರೆ. ಇಲ್ಲಿ ಆ ವಿಷಯವನ್ನು ಸುಸ್ಪಷ್ಟವಾಗಿ ಹೇಳಿದ್ದಾರೆ.

ಬಂದಿನ ಕಾಲದಲ್ಲಿ, ಸಾಂಪ್ರದಾಯಿಕವಾಗಿ ನಡೆಸುತ್ತ ಬಂದ ನಿಜವಾದ, ದೇಹದಂಡನೆ ನಳಿಂದನೆ ಕೂಡಿದ ಪಂಚಾಗ್ನಿ ಜಂತನೆಯನ್ನು ಆಳ್ವಾರರು ಯಾವ ಸ್ವಾರ್ಥದ್ದೆಂದು ~~[illegible]~~ ಉಪದೇಶ ಮಾಡಲಿಲ್ಲ. ಯಾವುದು ಈಗಿನ ಕಾಲದ ಜನಸಾಮಾನ್ಯರಿಗೆ ಸುಲಭವಾದದ್ದೋ, ಸರಳವಾದದ್ದೋ, ಅದೇ ನಿಜವಾಗಿ ಯೋಗ್ಯವಾದ ~~[illegible]~~ ತಪಸ್ಸು ಎಂದು ಅವರ ಭಾವನೆ. ಅದನ್ನೇ ಸ್ಪಷ್ಟರೀತಿಯಲ್ಲಿ ಅವರು ಇಲ್ಲಿ ಹೇಳುತ್ತಿರುವುದು.

ಆಳ್ವಾರರು ಹೇಳುತ್ತಾರೆ: ನನ್ನ ಒಳ್ಳೆಯ ಮನಸ್ಸೇ, ಭಗವಂತನ ತಿರುವಡಿಗಳನ್ನು ಶ್ರೇಷ್ಠವಾದ ಹೂಗಳಿಂದ ಅರ್ಚಿಸಿ, ಪೂಜಿಸುವುದು; ಆ ತಿರುವಡಿಗಳನ್ನು ಸ್ತುತಿಸುವುದು; ಅವುಗಳಿಗೆ ಎರಗುವುದು; ಮತ್ತು ಭಗವಂತನ ಸಾವಿರ ತಿರುನಾಮಗಳನ್ನು ಎಡೆಬಿಡದಂತೆ ಕೀರ್ತಿಸುತ್ತಿರುವುದು. ನಾವು ಮಾಡಿದ ಎಲ್ಲವನ್ನೂ ಭಗವಂತನಿಗೆ ಸಮರ್ಪಿಸುವುದು. ಇದೇ ನಿಜವಾದ ತಪಸ್ಸು. ಉದ್ಧಾರಕ್ಕೆ ಇದೇ ಯೋಗ್ಯವಾದ ಮಾರ್ಗ. ಇದನ್ನು ಬಿಡದಂತೆ ನಾವು ಆಚರಿಸೋಣ. ಉದ್ಧಾರಗೊಳ್ಳೋಣ.

78. தவம் செய்து நான்முகனே பெற்றான், தரணி
நிவர்ந்தளப்ப நீட்டிய பொற்பாதம், — சிவந்ததன்
கையனைத்து மாரக் கழுவினான், கங்கைநீர்
பெய்தனைத்துப் பேர்மொழிந்து பின்.

ತವಮ್ ಶೆಯ್ದು ನಾನ್ಮುಗನೇ ಪೆಟ್ರಾನ್, ತರಣಿ
ನಿವರ್ನ್ದಳಪ್ಪ ನೀಟ್ಟಿಯ ಪೊಱ್ಪಾದಮ್, — ಶಿವನ್ದದನ್
ಕೈಯನೈತ್ತು ಮಾರಕ್ ಕಳುವಿನಾನ್, ಕಙ್ಗೈನೀರ್
ಪೆಯ್ದನೈತ್ತು ಪೇರ್ ಮೊಳಿನ್ದು ಪಿನ್.

ತವಮ್ ಶೆಯ್ದು தவம் செய்து = ತಪಸ್ಸನ್ನು ಆಚರಿಸಿ, ನಾನ್ಮುಗನೇ நான்முகனே = ಚತುರ್ಮುಖ ಬ್ರಹ್ಮನೇ, ಪೆಟ್ರಾನ್ பெற்றான் = (ಅದರ ಫಲವನ್ನು) ಪಡೆದನು, ತರಣಿ தரணி = ಭೂಮಿಯನ್ನು, ನಿವರ್ನ್ದು நிவர்ந்து = ಬೆಳೆದು ವಿಸ್ತರಿಸಿ, ಅಳಪ್ಪ அளப்ப = ಅಳೆಯುವುದಕ್ಕಾಗಿ, ನೀಟ್ಟಿಯ நீட்டிய = ಚಾಚಿದ, ಪೊಱ್ಪಾದಮ್ பொற்பாதம் = ಚಿನ್ನದಂಥ ಪಾದವನ್ನು, ಕಙ್ಗೈನೀರ್ ಪೆಯ್ದು கங்கைநீர் பெய்து = ಗಂಗಾಜಲವನ್ನು ಸುರಿದು, ಅನೈತ್ತು ಪೇರ್ ಮೊಳಿನ್ದು அனைத்து பேர்

மொழிந்து = (ಸ್ವಾಮಿಯ) ಎಲ್ಲಾ ತಿರುನಾಮಗಳನ್ನು ಕೀರ್ತಿಸಿದ, ವೆಣ್ வெண்
= ಬಿಳಿ, ಶಿವಂದ சிவந்த = ಕೆಂಪಾದ, ತನ್ ಕೈ ಅಂಗೈತ್ತಲಮ್ அங்கைத்
தலம் = ತನ್ನ ಕೈಗಳಲ್ಲಿ ~~ರುವ~~, ಆರ ஆர = ತೃಪ್ತಿಯಾಗುವಂತೆ,
ಕಳುವಿನಾನ್ கழுவினான் = ತೊಳೆದನು.

ಚತುರ್ಮುಖ ಬ್ರಹ್ಮನೇ ತಪಸ್ಸನ್ನು ಚರಿಸಿ, ಅದರ ಫಲವನ್ನು ಪಡೆದು ಕೊಂಡನು. (~~ಭಗವಂತನು~~) ಭೂಮಿಯನ್ನಳೆಯುವುದಕ್ಕಾಗಿ, ಬೆಳೆದು ವಿಸ್ತರಿಸಿ ಚಾಚಿದ ಭಗವಂತನ ಚಿನ್ನದಂತ ಪಾದವನ್ನು, ಗಂಗಾಜಲವನ್ನು ಸುರಿದು, ಭಗವಂತನ ಎಲ್ಲಾ ತಿರುನಾಮಗಳನ್ನು ಕೀರ್ತಿಸಿದಬಳಿಕ, ಕೆಂಪಾದ ತನ್ನ ಕೈಗಳು (78) ತೃಪ್ತಿ ಪಡುವಂತೆ, ತೊಳೆದನು.

ಮುಂದಿನ ಪಾಶುರದಲ್ಲಿ ಹೇಳಿದ 'ತಪಸ್ಸು' ಎಂಬುದಕ್ಕೆ ತಕ್ಕ ನಿದರ್ಶನವನ್ನು ಆಳ್ವಾರರು ಇಲ್ಲಿ ಹೇಳುತ್ತಾರೆ:

ಭಗವಂತನ ತಿರುವಡಿಗಳನ್ನು ಪೂಜಿಸಬೇಕೆಂಬ ಉದ್ದೇಶದಿಂದ ಚತುರ್ಮುಖ ಬ್ರಹ್ಮನು ತಪಸ್ಸು ಮಾಡಿದನು. ಅದರ ಫಲವಾಗಿಯೇ ಎಂಬಂತೆ, ಭಗವಂತನು ಭೂಮಿಯನ್ನು (ಮೂರು ಹೆಜ್ಜೆಯ ನೆಲವನ್ನು) ಅಳೆದುಕೊಳ್ಳುವುದಕ್ಕಾಗಿ ತ್ರಿವಿಕ್ರಮನಾಗಿ ಬೆಳೆದನು. ಭೂಮಂಡಲವನ್ನೆಲ್ಲಾ ಅವನ ಒಂದು ಹೆಜ್ಜೆ ವಿಸ್ತರಿಸಿ ಅಳೆದುಕೊಂಡಿತು. ಮತ್ತೊಂದು ~~ಹೆಜ್ಜೆ~~ ಪಾದವು ಮೇಲಣ ಲೋಕಗಳನ್ನೆಲ್ಲಾ ವ್ಯಾಪಿಸಿ, ಬ್ರಹ್ಮಲೋಕವನ್ನು ಮುಟ್ಟಿತು. ಬ್ರಹ್ಮನ ಆನಂದವನ್ನು ಹೇಳಬೇಕೆ? ಅವನು ಬಹಳ ಆದರದಿಂದ, ತನ್ನ ಕೈಗಳಿಗೆ ಇರುವ ಆಸೆ ಪೂರ್ತಿಯಾಗುವಂತೆ, ಗಂಗಾಜಲದಿಂದ ಭಗವಂತನ ಚಿನ್ನದ ಪಾದವನ್ನು ತೊಳೆದು ಪೂಜಿಸಿದನು. ಸ್ವಾಮಿಯ ಎಲ್ಲಾ ತಿರುನಾಮಗಳನ್ನು ಕೀರ್ತಿಸಿ ಆನಂದಪಟ್ಟನು. ಚತುರ್ಮುಖನ ತಪಸ್ಸಿಗೆ ತಕ್ಕ ಫಲ ಇದೇ ಅಲ್ಲವೇ?

ಭಗವಂತನ ತಿರುವಡಿಗಳನ್ನು ಪೂಜಿಸಿ, ಅವನ ತಿರುನಾಮಗಳನ್ನು ಕೀರ್ತಿಸುವುದು ತಪಸ್ಸು. ಅದರಿಂದ ಬರುವ ಆನಂದವೇ ಫಲ.

79. பின்னின்று தாயிரப்பக் கேளான், பெரும்பணைக்
தோள்
முன்னின்று தானிரப்பான் மொய்மலராள், — சொல்
நின்ற
தோள்நலத்தான் நேரில்லாத் தோன்றல் அவன
ளந்த
நீணிலந்தா னத்தனைக்கும் நேர்

ಪಿನ್ನಿನ್ಱು ತಾಯಿರಪ್ಪ ಕೇಳಾನ್, ಪೆರುಮ ಪಣೈತ್ತೋಳ್
ಮುನ್ನಿನ್ಱು ತಾನಿರಪ್ಪಾನ್ ಮೊಯ್ಮಲರಾಳ್, — ಶೊಲ್ ನಿನ್ಱ

ಕೋಳ್ ನಲತ್ತಾನ್ ನೇರಿಲ್ಲಾ ತೋಳನ್ ಊಲ್ ಅವನಳನ್ದ
ನೀಳ್ ಕೋಲನ್ನಾ ನತ್ತನ್ನೈಕ್ಕುಮ್ ನೇರ್.

ಪಿನ್ ನಿನ್ಱು பின் நின்று = ಹಿಂದುಗಡೆಯಿಂದ, ಕಾಯ್ தாய் = ಕಾಯಿಯನ್ನು ಇರಪ್ಪ இரப்ப = ಪ್ರಾರ್ಥಿಸುವುದನ್ನು, ಕೇಳಾನ್ கேளா ண் = ಕೇಳದವನಲ್ಲ, ಮುನ್ ನಿನ್ಱು முன் நின்று = ಎದುರಲ್ಲಿಯೇ ನಿಂತ, ಪೆರುಮಾ ಪಿಣ್ಣೈ ಕೋಳ್ பெரும் பிணை கோண் = ಚೆಳ್ಳದ ಬದಿಂನದಾಗಿ ಇರುವ ಕೋಳುಗಳುಳ್ಳ, ಮೋಯ್ ಮಲರಾಳ್ ಕಾನ್ மாய மலரான் தாண் = ಹೊಂಬಗಿನ ತಾವರೆಯಲ್ಲಿ ಜನಿಸಿದವಳೇ, ಇರಪ್ಪಾನ್ இரப்பாண் = ಪ್ರಾರ್ಥಿಸುವುದನ್ನು (ಲಕ್ಷಿಸದೆ), ಕೋಲ್ ನಿನ್ಱು சொல ಮಾತನ್ನು ಮಾತ್ರವೇ ಮುಂದಿಟ್ಟುಕೊಂಡು, ಕೋಳ್ ನಲತ್ತಾನ್ கோள் நலத் தாண் = ಭುಜಬಲ ಪರಾಕ್ರಮವುಳ್ಳವನಾಗಿ, ನೇರ್ ಇಲ್ಲಾ நேர் இல்லா = ಸಾಟಿಯಿಲ್ಲದ, ತೋಳನ್ ಊಲ್ தோளன்றல் = ಪರಮಪುರುಷನಿಗೆ, ಅವನ್ ಅಳನ್ದ அவன் அளந்த = ಅವನು ಅಳೆದುಕೊಂಡ, ನೀಳ್ ನಿಲಮ್ ತಾನ್ நீள் நிலம் தாண் = ವಿಸ್ತಾರವಾದ ಈ ಲೋಕವೊಂದು ಮಾತ್ರವೇ, ಅತ್ತನ್ನೈಕ್ಕುಮ್ அத்தனைக்கும் = ಎಲ್ಲವಿಷಯದಲ್ಲೂ (ಎಲ್ಲರೀತಿಯಲ್ಲೂ), ನೇರ್ நேர் = ಸಾಟಿ.

ಹಿಂದಿನಿಂದ ತಾಯಿಯ ಪ್ರಾರ್ಥನೆಯನ್ನು ಕೇಳದವನಲ್ಲ. ಎದುರಲ್ಲೇ ನಿಂತ ಬೆಳ್ಳಿಯ ಬದಿಂನದಾಗೆ ಸುಂದರವಾದ ಕೋಳುಗಳುಳ್ಳ ಹೊಂಬಗಿನ ಕಮಲದ ಹೂವಿನಲ್ಲಿ ಜನಿಸಿದವಳೇ ಪ್ರಾರ್ಥಿಸುವುದನ್ನು ಲಕ್ಷಿಸದೆ, ಮಾತಿನದನ್ನು ಮಾತ್ರವೇ ಮುಂದಿಟ್ಟುಕೊಂಡು ಭುಜಬಲ ಪರಾಕ್ರಮವುಳ್ಳವನಾಗಿ ಸಾಟಿಯಿಲ್ಲದ ಪರಮಪುರುಷನಿಗೆ, ಅವನು ಅಳೆದುಕೊಂಡ ವಿಸ್ತಾರವಾದ ಈ ಲೋಕವೊಂದು ಮಾತ್ರವೇ, ಎಲ್ಲಾ ರೀತಿಯಲ್ಲೂ, ಸಾಟಿಯಾಗದೆ. (79)

ಈ ಪಾಶುರದಲ್ಲಿ ಭಗವಂತನ ಎರಡು ಅವತಾರಗಳ ವೈಶಿಷ್ಟ್ಯವನ್ನು ಸುಂದರವಾಗಿ ಹೋಲಿಸಿ ಹೇಳಲಾಗಿದೆ.

ಶ್ರೀರಾಮಾವತಾರದಲ್ಲಿ, ತನ್ನ ತಾಯಿಯಾದ ಕೌಸಲ್ಯೆ, ಹಿಂದೆ ನಿಂತು, "ಕಾಡಿಗೆ ಹೋಗಬಾರದು" ಎಂಬ ಪ್ರಾರ್ಥನೆಯನ್ನು ಶ್ರೀರಾಮನು ಮನ್ನಿಸಲಿಲ್ಲ. ಮತ್ತು, ತನ್ನೊಡನೆಯೇ ಇದ್ದು ಬಾಳ್ವೆ ನಡೆಸುತ್ತಿದ್ದ ಮಹಾಲಕ್ಷ್ಮೀಸ್ವರೂಪಳಾದ ಸೀತಾದೇವಿಯೂ ಇದ್ದು "ಕಾಡಿಗೆ ಹೋಗುವುದು ಬೇಡ" ಎಂದು ಮಾಡಿದ ಪ್ರಾರ್ಥನೆಗಳಾ ಶ್ರೀರಾಮನು ಕಿವಿಗೊಡಲಿಲ್ಲ. ತನ್ನ ತಂದೆಯಾಡಿದ

Gaani Srinivasan

ಮಾತನ್ನು ಮಾತ್ರವೇ ಮುಖ್ಯವಾಗಿ ಮಾಡಿಕೊಂಡು, ಆತನ ಆಶಯವನ್ನು ಶಿರಸಾವಹಿಸಿ ಕಾಡಿಗೆ ಹೋದದ್ದು ಮಾತ್ರವಲ್ಲದೆ, ರಾಕ್ಷಸಕುಲವನ್ನೇ ನಿರ್ನಾಮಗೊಳಿಸಿದನು. ತಾನು ದಿವ್ಯ ಪರಾಕ್ರಮಿಯಾದ್ದರಿಂದಲೂ, ಭುಜಬಲ ಪರಾಕ್ರಮವುಳ್ಳವನಾದ್ದರಿಂದಲೂ ಅದೆಲ್ಲವನ್ನೂ ಶ್ರೀರಾಮನು ನಡೆಸಿದನು.

ಭಗವಂತನ ತ್ರಿವಿಕ್ರಮಾವತಾರದಲ್ಲಿ, ತಾನು ವಾಮನ ವಟುವಾಗಿ ಬಲಿಚಕ್ರವರ್ತಿಯಿಂದ ದಾನವಾಗಿ ಪಡೆದುಕೊಂಡ ಮೂರು ಹೆಜ್ಜೆ ನೆಲವನ್ನು ಅಳೆಯುವ ನೆಪದಲ್ಲಿ ಮೂರು ಲೋಕಗಳನ್ನೂ ಅಳೆದುಕೊಂಡ ದಲ್ಲದೆ, ಉದಾರಿಯಾದ ಬಲಿಚಕ್ರವರ್ತಿಯ ತಲೆಯ ಮೇಲೆ ತನ್ನ ತಿರುವಡಿಯನ್ನಿರಿಸಿ, ಅವನನ್ನು ಉದ್ಧರಿಸಿದನು. ತಾನು ಸಾಟಿಯಿಲ್ಲದ ಅದ್ಭುತ ಪರಾಕ್ರಮಿಯೆಂದೂ, ದುಷ್ಟರನ್ನು ಶಿಕ್ಷಿಸುವುದರಲ್ಲೂ ಶಿಷ್ಟರನ್ನು ರಕ್ಷಿಸುವುದರಲ್ಲೂ ಅದ್ವಿತೀಯನೆಂದೂ ತೋರಿಸಿಕೊಟ್ಟನು.

ಆಳ್ವಾರರು ಹೇಳುತ್ತಾರೆ: ಭಗವಂತನು ತನ್ನ ರಾಮಾವತಾರದಲ್ಲಿ ತಾಯಿಯ ವಾತ್ಸಲ್ಯಕ್ಕೆ ಮಾರುಹೋಗಲಿಲ್ಲ. ಮಡದಿಯ ಪ್ರೇಮದ ಮಾತಿಗೆ ಮಣಿಯಲಿಲ್ಲ. ಪಿತೃವಾಕ್ಯ ಪರಿಪಾಲನೆಯೊಂದನ್ನೇ ಗುರಿಯಾಗಿ ಇಟ್ಟುಕೊಂಡು, ಹದಿನಾಲ್ಕು ವರ್ಷ ವನವಾಸ ಮಾಡಿದ್ದಲ್ಲದೆ, ದುಷ್ಟರಾದ ರಾಕ್ಷಸಕುಲವನ್ನೇ ನಾಶಗೊಳಿಸಿ, ಶಿಷ್ಟನಾದ ವಿಭೀಷಣನೇ ಮುಂತಾದವರನ್ನು ಉದ್ಧರಿಸಿದನು. ತನ್ನ ತ್ರಿವಿಕ್ರಮಾವತಾರದಲ್ಲಿ, ತಾನು ವಾಮನನಾಗಿ ಬಲಿಚಕ್ರವರ್ತಿಯಿಂದ ಪಡೆದುಕೊಂಡ ಮೂರಡಿ ನೆಲವನ್ನು ಅಳೆದುಕೊಳ್ಳುವ ನೆಪದಲ್ಲಿ, ತನ್ನ ಎರಡೇ ಹೆಜ್ಜೆಗಳಿಂದ ಭೂಮಂಡಲವನ್ನೂ ಮೇಲಣ ಎಲ್ಲಾ ಲೋಕಗಳನ್ನೂ ಅಳೆದುಕೊಂಡು, ಮೂರನೆಯ ಹೆಜ್ಜೆಯನ್ನು ಬಲಿಚಕ್ರವರ್ತಿಯ ವಿನಯ ಪ್ರಾರ್ಥನೆಯಂತೆ, ಅವನ ತಲೆಯ ಮೇಲಿರಿಸಿ, ಅವನನ್ನುದ್ಧರಿಸಿದನು. ಈ ಕಾರ್ಯದಲ್ಲಿ ಅದನ್ನು ನೋಡಿದವರೆಲ್ಲರನ್ನೂ ನಿಬ್ಬೆರಗಾಗಿಸಿದನು. ಭಗವಂತನ ರಾಮಾವತಾರದ ಎಲ್ಲ ಕೆಲಸಗಳೂ, ತ್ರಿವಿಕ್ರಮಾವತಾರದ ಎಲ್ಲ ಕೆಲಸಗಳೂ, ಎಲ್ಲರೀತಿಯಲ್ಲೂ ಪರಸ್ಪರ ಸಾಟಿಯಾದವು ಎಂಬುದೇ ಇಲ್ಲಿನ ತಾತ್ಪರ್ಯ.

80. நேர்ந்தேனடிமை நினைந்தேன தொண்கமலம்,
ஆர்ந்தேனுன் சேவடிமேலன்பாய், — ஆர்ந்த
அடிக்கோலங் கண்டவர்க் கென்கொலோ,
முன்னைப்
படிக்கோலம் கண்ட பகல்.

Garani Srinivasan

ನೇರ್ನ್ದೇನಡಿಮೈ ನಿನೈನ್ದೇನ್ ಅದೊಣ್ ಕಮಲಮಾ,
ಆರ್ನ್ದೇನುನ್ ಶೇವಡಿಮೇಲ್ ಅನ್ಬಾಯ್ – ಆರ್ನ್ದ
ಅಡಿಕೋಲಂಕಣ್ಡವರ್ಕ್ಕೆನ್ ಕೊಲೋ, ಮುನ್ನೈ
ಪ್ಪಡಿಕೋಲಮ್ ಕಣ್ಡ ಪಗಲ್.

ಅಡಿಮೈ ನೇರ್ನ್ದೇನ್ அடிமை நேர்ந்தேன் = ನಿನ್ನ ತಿರುವಡಿಗಳ ಸೇವೆಯನ್ನು ಒಲ್ಲದಲು ಸಮರ್ಪಿಸಿದೆ, ನಿನೈನ್ದೇನ್ நினைந்தேன் = ಚಿಂತಿಸಿ ಕೊಂಡಾಡಿದೆ, ಒಣ್ ಕಮಲಮಾ ಅದು ஒண் கமலம் அது = ಸೊಬಗಿನ ಕಮಲದ ಹೂವೇ ಆಗಿರುವ ಅದನ್ನು, ಆರ್ನ್ದೇನ್ ஆர்ந்தேன் = ಪ್ರಾರ್ಥಿಸಿದೆನು, ಉನ್ ಶೇ ಅಡಿ ಮೇಲ್ உன் சேஅடி மேல் = ನಿನ್ನ ಕೋಮಲ ತಿರುವಡಿಯನ್ನು ಕುರಿತು, ಅನ್ಬು ಆಯ್ அன்பு ஆய் = ಭಕ್ತಿ ಪರವಶನಾಗಿ, ಆರ್ನ್ದ ஆர்ந்த = ಪರಿಪೂರ್ಣವಾದ, ಅಡಿ ಕೋಲಮ್ அடி கோலம் = ತಿರುವಡಿಯ ಸೊಬಗನ್ನು, ಕಣ್ಡವರ್ಕ್ಕು கண்டவர்க்கு = ಕಂಡು ಅನುಭವಿಸಿದವರಿಗೆ, ಎನ್ ಕೊಲೋ என் கொலோ = ಹೇಗೋ, ಮುನ್ನೈ முன்னை = ಮುಂಚಿತವಾಗಿ, ಪಡಿ ಕೋಲಮ್ படி கோலம் = ರೂಪ ಸೌಂದರ್ಯವನ್ನು, ಕಣ್ಡ கண்ட = ಅನುಭವಿಸಿದ, ಪಗಲ್ பகல் = ಕಾಲದಲ್ಲಿ.

ನಿನ್ನ ತಿರುವಡಿಗಳ ಸೇವೆಯನ್ನು ಒಲ್ಲದಲು ಸಮರ್ಪಿಸಿದೆ. ಸೊಬಗಿನ ಕಮಲದ ಹೂವೇ ಆಗಿರುವ ಅದನ್ನು ಕುರಿತು ಚಿಂತಿಸಿ ಕೊಂಡಾಡಿದೆ. ನಿನ್ನ ಕೋಮಲ ತಿರುವಡಿಯನ್ನು ಭಕ್ತಿ ಪರವಶನಾಗಿ ಪ್ರಾರ್ಥಿಸಿದೆ. ~~ಮುಂಚೆ~~ ಹಿಂದೆ ಒಂದು ಕಾಲದಲ್ಲಿ ನಿನ್ನ ದೇಹ ಸೌಂದರ್ಯವನ್ನು ಕಂಡು ಅನುಭವಿಸಿದ್ದು, ~~ನಿನ್ನ~~ ಪರಿಪೂರ್ಣವಾದ ನಿನ್ನ ತಿರುವಡಿಯಾ ಸೊಬಗನ್ನು ಕಂಡು ಅನುಭವಿಸಿದವರಿಗೆ ಹೇಗೆ ನಿಸೀತೋ ಕಾಣೆ. (80)

ಭಗವಂತನ ತಿರುವಡಿಯ ಸೇವೆಯ ಸೌಭಾಗ್ಯಕ್ಕಿಂತಲೂ ಸ್ವಾಮಿಯ ಯೆಂಬುದು ಹಿರಿದೇನಲ್ಲ. ತಿರುವಡಿಯ ರೂಪ ಸೌಂದರ್ಯ ಮತ್ತು ಅದರ ಸೇವೆ ಸೇವೆಯ ಸೌಭಾಗ್ಯವೊಂದೇ ಶ್ರೇಷ್ಠ — ಎಂಬುದನ್ನು ಇಲ್ಲಿ ಹೇಳಲಾಗಿದೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನಿನ್ನ ತಿರುವಡಿಗಳ ಸೇವೆಯನ್ನು ಒಲ್ಲದ ಬೇಕೆಂಬ ಆಶಯಿಂದ ಸಮರ್ಪಿಸಿದೆ. ಸುಂದರವಾದ ಕಮಲದ ಹೂವನ್ನು ಹೋಲುವ ಅವುಗಳನ್ನು ಚಿಂತಿಸಿ ಕೊಂಡಾಡಿದೆ. ಅಲ್ಲದೆ, ಭಕ್ತಿ ಪರವಶನಾಗಿ ಅದನ್ನು ದಿಟ್ಟಿಸಿ, ನಮಿಸಿದೆ. ಹಿಂದೆ, ಒಂದು ಕಾಲದಲ್ಲಿ ನಿನ್ನ ರೂಪ ಸೌಂದರ್ಯವನ್ನು ಕಂಡು ಅನುಭವಿಸಿದವರಿಗೆ ಸೌಂದರ್ಯದಲ್ಲಿ ಪರಿಪೂರ್ಣವಾದ ನಿನ್ನ ತಿರುವಡಿಗಳನ್ನು ಕಂಡು ಅನು-

ಭಾವಿಸುವವರಿಗೆ ನಿನ್ನ ರೂಪಕ್ಕಿಂತಲೂ ನಿನ್ನ ತಿರುವಡಿಯೇ ಶ್ರೇಷ್ಠವೆಂದು ಎನ್ನಿಸಿರಬೇಕು.

ಭಗವಂತನ ರೂಪಸೌಂದರ್ಯವನ್ನು ಮೇಲಣ ಲೋಕದಲ್ಲುಳ್ಳವರು ಬಂದುನೋಡಲು ನೋಡಿ ಆನಂದಿಸುತ್ತಿದ್ದರು. ಭೂಮಿಯ ಅವತಾರ ಸ್ವರೂಪವನ್ನು ಭೂಲೋಕವಾಸಿಗಳೂ ಕಂಡು ಆನಂದಿಸುತ್ತಿದ್ದರು. ಅದು(ಆಗ ಅವರಿಗೆ ಬದಲು ಆಕಸ್ಮಿಕವಾದದ್ದೊಂದು ಕಂಡು ಬಂದಿತು. ಭಗವಂತನು ತ್ರಿವಿಕ್ರಮನಾದ. ತನ್ನ ತಿರುವಡಿಯನ್ನು ಭೂಮಂಡಲವನ್ನೆಲ್ಲ ವ್ಯಾಪಿಸಿದನು. ಮತ್ತು, ಮೇಲಣ ಲೋಕದಲ್ಲೆಲ್ಲಾ ಪ್ರಸರಿಸಿದನು. ಭೂಲೋಕವಾಸಿಗಳು ಅದರ ದಿವ್ಯಪ್ರಕಾಶತೆಯನ್ನು ಕಂಡು, ಅನುಭವಿಸಿ, ಆನಂದಿಸಿದರು. ಹಾಗೆಯೇ ಮೇಲಣ ಲೋಕವಾಸಿಗಳೂ ಆ ತಿರುವಡಿಗಳನ್ನು ಕಂಡು ಆನಂದಿಸಿದರು. ಈ ಎರಡು ದೃಶ್ಯಗಳಿಗೆ ಇರುವ ಭೇದವನ್ನು ಅವರುಗಳೆಲ್ಲರೂ ಕಂಡುಕೊಂಡಿರಬಲ್ಲರು. ಮತ್ತು ತಿರುವಡಿಗಳ ಸೊಬಗನ್ನೇ ಅದ್ವಿತೀಯವೆಂದು ಕಂಡುಕೊಂಡಿರಬೇಕು.

81. பகல் கண்டேன் நாரணனைக் கண்டேன், கனாவில்
மிகக் கண்டேன் மீண்டவனை மெய்யே, — மிகக் கண்டேன்
ஊண் திகழு நேமி யொளி திகழும் சேவடியான்,
வாண் திகழுஞ் சோதி வடிவு.

ಪಗಲ್ ಕಣ್ಡೇನ್ ನಾರಣನೈಕ್ ಕಣ್ಡೇನ್, ಕನವಿಲ್
ಮಿಗಕ್ ಕಣ್ಡೇನ್ ಮೀಣ್ಡವನೈ ಮೆಯ್ಯೇ, — ಮಿಗಕ್ ಕಣ್ಡೇನ್
ಊನ್ ತಿಗಳುಂ ನೇಮಿ ಒಳಿ ತಿಗಳುಂ ಶೇವಡಿಯಾನ್,
ವಾನ್ ತಿಗಳುಂ ಶೋದಿ ವಡಿವು.

ಪಗಲ್ ಕಣ್ಡೇನ್ பகல் கண்டேன் = ಹಗಲನ್ನು (ಹಗಲಲ್ಲಿ) ಕಂಡೆನು, ನಾರಣನೈಕ್ ಕಣ್ಡೇನ್ நாரணனை கண்டேன் = ಶ್ರೀಮನ್ನಾರಾಯಣನನ್ನು ಕಂಡೆನು, ಕನವಿಲ್ ಮಿಗ கனாவில் மிக = ಕನಸಿನಲ್ಲಿಯೂ ಚೆನ್ನಾಗಿ, ಕಣ್ಡೇನ್ கண்டேன் = ಕಂಡೆನು, ಮೀಣ್ಡು மீண்டு = ಮತ್ತು, ಅವನೈ அவனை = ಅವನನ್ನು, ಮೆಯ್ಯೇ மெய்யே = ನಿಜವಾಗಿಯೂ (ಪ್ರತ್ಯಕ್ಷವಾಗಿಯೂ) (ಕಂಡೆನು), ಮಿಗ ಕಣ್ಡೇನ್ மிக கண்டேன் = ಬಲು ಚೆನ್ನಾಗಿ ನೋಡಿದೆನು, ಊನ್ ஊண் = ದಿವ್ಯರೂಪವು (ದೇಹವು), ತಿಗಳುಮ್ திகழும் = ಹೊಳೆಯುವಂತೆ, ನೇಮಿ நேமி = ಚಕ್ರಾಯುಧವನ್ನು, ಒಳಿ ತಿಗಳುಮ್ ஒளி திகழும் = ತೇಜಸ್ಸಿನಿಂದ ಹೊಳೆಯುವ, ಶೇವಡಿಯಾನ್ சேவடியான் = ಕೆಂದಾವರೆಯಂಥ ತಿರುವಡಿಗಳುಳ್ಳವನ, ವಾನ್ ತಿಗಳುಮ್ வான் திகழும் = ಪರಮಪದ

ನನ್ನು ಬೆಳಗಿಸುವ, ಕೋಟಿ ಪಟ್ಟು ಶೋಭೆಯುಳ್ಳ -
ಜ್ಯೋತಿಸ್ವರೂಪವನ್ನು, ಕಂಡೆನು.

ಹಗಲನ್ನು ಕಂಡೆನು. ಶ್ರೀಮನ್ನಾರಾಯಣನನ್ನು ಕಂಡೆನು. ಕನಸಿಗಿಂತಲೂ ಚೆನ್ನಾಗಿ ಕಂಡೆನು. ಮತ್ತು, ಅವನನ್ನು ನಿಜವಾಗಿಯೂ (ಪ್ರತ್ಯಕ್ಷವಾಗಿಯೂ) ~~ಕಂಡೆನು~~. ಬಹು ಚೆನ್ನಾಗಿ ನೋಡಿದೆನು. ದಿವ್ಯದೇಹವು ಹೊಳೆಯುವಂತೆ ಚಕ್ರಾಯುಧವನ್ನು, ತೇಜಸ್ಸಿನಿಂದ ಹೊಳೆಯುವ ಕೆಂದಾವರೆಯಂತಿರುವಡಿಗಳವನ ಪರಮಪದವನ್ನು ಬೆಳಗಿಸುವ ಜ್ಯೋತಿಸ್ವರೂಪವನ್ನು ಕಂಡೆನು. (81)

ಆಳ್ವಾರರು ಈ ವರೆಗೆ ಹೇಳಿದ ಒಂದು ಪಾಶುರದಲ್ಲಿ ತಾವು ಭಗವಂತನನ್ನು ದಿವ್ಯಸ್ವರೂಪವನ್ನು ತಮ್ಮ ಕನಸಿನಲ್ಲಿ ಸ್ಪಷ್ಟವಾಗಿ ಕಂಡೆನೆಂದೂ ಆನಂದಿಸಿದೆನೆಂದೂ ಹೇಳಿದ್ದರು. ಈ ಪಾಶುರದಲ್ಲಿ ಅವನನ್ನು ಪ್ರದು- ಕತ್ತಲಲ್ಲಿ, ನಿದ್ದೆ ಮಾಡುತ್ತಿರುವಾಗ ಬಂದ ತಮ್ಮ ಕನಸಿನಲ್ಲಿ ಭಗವಂತನನ್ನು ಕಂಡಂತೆ ಅಲ್ಲ. ಕನಸಿನಲ್ಲಿ ಕಂಡದ್ದನ್ನು ಪ್ರಮಾಣೀಕರಿಸುವುದಾದರೂ ಹೇಗೆ? ಈಗ ತಾವು ಶುಭವಾದ ಹಗಲಿನಲ್ಲೇ, ನಿಜವಾಗಿಯೇ, ಭಗವಂತನನ್ನು ಪ್ರತ್ಯಕ್ಷವಾಗಿಯೇ ಕಂಡೆನೆನ್ನುತ್ತಾರೆ. ಸರ್ವೇಶ್ವರನಾದ ಶ್ರೀಮನ್ನಾರಾಯಣನು ತನ್ನ ಕೈಯಲ್ಲಿ ಹೊಳೆಯುತ್ತಿರುವ ಚಕ್ರಾಯುಧದೊಡನೆ, ಪರಮಪದದಲ್ಲಿರುವ ಹಾಗೆ ದಿವ್ಯವಾದ ಜ್ಯೋತಿಸ್ವರೂಪವಾಗಿಯೇ ತಮಗೆ ಕಾಣಿಸಿಕೊಂಡು ದರ್ಶನವಿತ್ತುದಾಗಿ ಆಳ್ವಾರರು ಹೇಳುತ್ತಾರೆ.

ಭಗವಂತನನ್ನು ಕನಸಿನಲ್ಲಿ ಕಂಡೆನೆಂದೂ, ಹಾಗೆಯೇ ಸ್ವಾಮಿಯು ತನ್ನೊಡನೆ ಮಾತನಾಡಿದನೆಂದೂ ಹೇಳುವವರುಂಟು. ಈ ಜಡದೇಹದ ಕಣ್ಣುಗಳಿಂದಲೇ ಭಗವಂತನನ್ನು ಕಂಡನೆಂದು ಬಾರಿ ಬಾರಿ ಹೇಳುವವರು ಅತ್ಯಂತ ವಿರಳವೆನ್ನಲೇ ಬೇಕು. ಈ ದಿಶೆಯಲ್ಲಿ ಆಳ್ವಾರರು ಎಂಥ ಭಾಗ್ಯಶಾಲಿಗಳೋ!

82. வடிக்கோல வாள் நெடுங்கண் மாமலராள், செவ்விப்
படிக்கோலம் கண்டகலாள் பன்னாள், — அடிக்கோலி
ஞாலத்தான் பின்னும் நலம்புரிந்த தென்கொலோ,
கோலத்தா லில்லை குறை.

ವಡಿಕ್ಕೋಲ ವಾಳ್ ನೆಡುಙ್ಗಣ್ ಮಾಮಲರಾಳ್, ಶೆವ್ವಿ
ಪ್ಪಡಿಕ್ಕೋಲಮ್ ಕಣ್ಡಗಲಾಳ್ ಪನ್ನಾಳ್, — ಅಡಿಕ್ಕೋಲಿ
ಞಾಲತ್ತಾಲ್ ಪಿನ್ನುಮ್ ನಲಮ್ ಪುರಿನ್ದದೆನ್ಕೊಲೋ,
ಕೋಲತ್ತಾ ಲಿಲ್ಲೈ ~~..~~ ಕುಱೈ.

Garani Srinivasan

ಮಡಿಕ್ಕೊಳುಮ್ ಪಡಿಕ್ಕೋಲಮ್ = ಪರಿಪೂರ್ಣ ಸೌಂದರ್ಯವುಳ್ಳ, ವಾಳ್ ಒಣ್ = ಪ್ರಕಾಶಪೂರ್ಣವಾದ, ನೆಡುಙ್ಗಣ್ ಣೆರುಙ್ಗಣ್ = ವಿಶಾಲವಾದ ಕಣ್ಣುಗಳುಳ್ಳ, ಮಾಮಲರಾಳ್ மாமலராள் = ಶ್ರೇಷ್ಠವಾದ ತಾವರೆ ಹೂವಿನಲ್ಲಿ ಹುಟ್ಟಿದವಳಾದ ಲಕ್ಷ್ಮೀದೇವಿಯು, ಶೆವ್ವಿ ಅಚೆವ್ವಿ = ತಕ್ಕ ಸಮಯದಲ್ಲಿ, ಮಡಿಕ್ಕೊಳುಮ ಪಡಿಕ್ಕೋಲಮ್ = (ಭಗವಂತನ ರೂಪಸೌಂದರ್ಯವನ್ನು, ಕಣ್ಡು கண்டு = ಕಂಡವಳಾಗಿ, ಅಡಲಾಳ್ ಅಗ ಪಲ್ನಾಳ್ ಪಙ್ಗಾಣ್ = ಲಾಣ್ = ಅವನನ್ನು ಬಿಟ್ಟು ಅಗಲುವುದಿಲ್ಲ, ಅಡಿಕ್ಕೋಲಿ = (ಭಗವಂತನ ಷ್ಣಾಕಾಲವಾದರೂ, ಅಡಿಕ್ಕೊಳ್ಳ ಕಿರುವಡಿಯ ಕೆಳಗೆ) ವಿಸ್ತಾರವಾಗಿ ಅಳತೆಗೆ ಸಿಕ್ಕದವಳಾದ, ಇಙ್ಗಲತ್ತಾಳ್ ಪಿನ್ನುಮ್ ಪೆಣ್ಣಾಮ್ = ಇಷ್ಟದರೂ, ஞாலக்காள் = ಭೂದೇವಿಯು, ಭಗವಂತನಲ್ಲಿ ಆಶೆಯುಳ್ಳವ ನಲಮಾ ಪೊಣ್ಣದು ஞலம் புரிந்தது = ಭಗವಂತನಲ್ಲಿ ಅನುರಾಗ ಪ್ರೇಮದಿಂದ ಹೊಡದಿದ್ದಳು, ಎನ ಕೋಲೋ ನಾಣ್ ಕೊಳ = ಸೌಂದರ್ಯದಿಂದ, ಕುಲೀನ ಇಲ್ಲದ ಕೋಲತ್ತಾಳ್ கோலத்தால் = ಸೌಂದರ್ಯದಿಂದ, ಕುಱೈ ಇಲ್ಲೈ = ಕೊರತೆಯೇ ಇಲ್ಲ.

ಪರಿಪೂರ್ಣ ಸೌಂದರ್ಯವುಳ್ಳವಳೂ, ಪ್ರಕಾಶಪೂರ್ಣವಾದ ವಿಶಾಲವಾದ ಕಣ್ಣುಗಳುಳ್ಳವಳೂ, ಶ್ರೇಷ್ಠವಾದ ತಾವರೆ ಹೂವಿನಲ್ಲಿ ಹುಟ್ಟಿದವಳೂ ಆದ ಲಕ್ಷ್ಮೀದೇವಿಯು ತಕ್ಕ ಸಮಯದಲ್ಲಿ ಭಗವಂತನ ರೂಪಸೌಂದರ್ಯವನ್ನು ಕಂಡವಳಾಗಿ ಅವನನ್ನು ~~ಬಿಟ್ಟು~~ ಷ್ಣಾಕಾಲವಾದರೂ ಬಿಟ್ಟು ಅಗಲುವುದಿಲ್ಲ. ಭಗವಂತನ ಕಿರುವಡಿಯ ಕೆಳಗೆ ವಿಸ್ತಾರವಾಗಿ ಅಳತೆಗೆ ಸಿಕ್ಕದವಳಾದ ಭೂದೇವಿಯು ಭಗವಂತನಲ್ಲಿ ಅನುರಾಗ ಪ್ರೇಮದಿಂದ. ಸೌಂದರ್ಯದಿಂದ ಆಶೆಯುಳ್ಳವಳಾಗುವುದಕ್ಕೆ (82) ಕೊರತೆಯೇ ಇಲ್ಲ.

ಇಂದಿನ ಪಾಶುರದಲ್ಲಿ ಆಳ್ವಾರರು ಭಗವಂತನಾದ ಶ್ರೀಮನ್ನಾರಾಯಣನನ್ನು ಪ್ರತ್ಯಕ್ಷವಾಗಿ ಕಂಡೆನು ಎಂದರಷ್ಟೆ. ಸ್ವಾಮಿಯನ್ನು ಬನ್ನಲ್ಲೇ ಅವರು ಕಣ್ಣಾರ ಅಲ್ಲ. ಅವನೊಂದಿಗೆ ಶ್ರೀದೇವಿ ಭೂದೇವಿ ನೀಳಾದೇವಿ ಸಮೇತನಾಗಿ ಕಂಡು ಆನಂದಿಸಿದೆನೆಂದು ಹೇಳುತ್ತಾರೆ, ಈ ಪಾಶುರದಲ್ಲಿ.

ಆಳ್ವಾರರು ಹೇಳುತ್ತಾರೆ: ದೇವದಾನವರು ಕ್ಷೀರಸಾಗರವನ್ನು ಮಥಿಸಿದಾಗ ~~ಉದ್ಭವಿಸಿದ~~ ಸೌಂದರ್ಯವೇ ರೂಪವೆತ್ತಂತೆ ಉದ್ಭವಿಸಿದ ಲಕ್ಷ್ಮೀದೇವಿಯು ಶ್ರೀಮನ್ನಾರಾಯಣನ ಸಾಟಿಯಿಲ್ಲದ ಸುಂದರ ರೂಪವನ್ನು ಕಂಡು ಅವನನ್ನೇ ತನ್ನ ಪತಿಯಾಗಿ ವರಿಸಿದಳು. ಅಂದಿನಿಂದಲೂ ಅವನನ್ನು ಕ್ಷಣಕಾಲವಾದರೂ ಅಗಲದಂತೆ ಅವನ ವಕ್ಷಸ್ಥಲವಾಸಿನಿಯಾದಳು. ಆದರೆ, ಭಗವಂತನು ತ್ರಿವಿಕ್ರಮನಾಗಿ ಅವತರಿಸಿದಾಗ, ತನ್ನ ಒಂದು ಕಿರುವಡಿಯನ್ನು ಭೂಮಂಡ

Carani Srinivasan

ಲವನ್ನೆಲ್ಲಾ ವಿಸ್ತರಿಸಿ, ಅಳೆದು ಕೊಂಡನು. ಆಗ ಭೂದೇವಿ ಭಗವಂತನ ರೂಪ
ಸೌಂದರ್ಯವನ್ನು ಕಂಡು ಆಶಿಸಿದಳೇ? ಅವನ ತಿರುವಡಿಯ ಸಂಬಂಧವನ್ನು
ಮನಗಂಡು ಆಶಿಸಿದಳೇ? ಏನು ಕಾರಣದಿಂದ ಅವನನ್ನು ವಹಿಸಿದಳೋ
ಕಾಣೆ. ಸೌಂದರ್ಯದಿಂದ ಉಂಟಾದ ಕಾರಣವಲ್ಲವೇನೋ?

ಕೆಲವು ಶಾಸ್ತ್ರಗಳಿಂದ ಬಂದ ವಾದ ವಿಶೇಷಗಳಲ್ಲಿ ರೂಪಸೌಂದರ್ಯ
ದೊಡ್ಡದೋ ತಿರುವಡಿಯ ಸೌಂದರ್ಯ ದೊಡ್ಡದೋ ಎಂಬುದೂ, ತಿರುವಡಿಯ ಸಂಬಂ
ಧವೇ ರೂಪಸೌಂದರ್ಯಕ್ಕಿಂತ ದೊಡ್ಡದು ತರ್ಕಮಾರ್ಗವೂ ನಡೆದಿತ್ತು. ಈ ವಾದ
ದಲ್ಲಿ ಕಂಡುಬರುವುದೂ ಅದೇ ವಿಷಯ. ಲಕ್ಷ್ಮೀದೇವಿ ಮರುಳಾಗಿದ್ದದ್ದು
ಭಗವಂತನ ರೂಪಸೌಂದರ್ಯಕ್ಕೆ. ಆದರೆ ಭೂದೇವಿ ಅದನ್ನು ಲಕ್ಷಿಸಲೇ ಇಲ್ಲ.
ಅವನ ತಿರುವಡಿಗಳ ಸಂಬಂಧಕ್ಕೆ ಮನಸೋತಳು. ಆದ್ದರಿಂದಲೇ ಆಳ್ವಾರರನ್ನು (ದ ಅದನ್ನು ನಿಲ್ಲಿಸುವುದಕ್ಕೋಸ್ಕರ)
ವೂ ರೂಪಸೌಂದರ್ಯ ಆಗ ಕಾಲದಕ್ಕೆ ಬರಲೇ ಇಲ್ಲವೆಂದೂ, ಅದಕ್ಕೆ ಯಾವ ವಿಧವಾದ
ಕಾರಣವೂ ಉಂಟಾಗಲಿಲ್ಲವೆಂದೂ ಸಮಾಧಾನ ಹೇಳುತ್ತಾರೆ. ಅಲ್ಲದೆ, ತಿರುವಡಿ
ಯ ವೈಶಿಷ್ಟ್ಯಕ್ಕೇ ದೊಡ್ಡ ಕೀರ್ತಿಯೆಂಬುದನ್ನು ಒತ್ತಿ ಹೇಳುತ್ತಾರೆ.

83. குறையாக வெஞ்சொற்கள் கூறினேன் கூறி,
மறையாங் கெனவுரைத்த மாலை, — இறையேனும்
ஈயுங்கொ லென்றே யிருந்தேனெ னைப்பகலும்,
மாயன்கண் சென்ற வரம்.

ಕುಱೈಯಾಗ ವೆಂಜೊಱ್ಕಳ್ ಕೂಱಿನೇನ್ ಕೂಱಿ,
ಮಱೈಯಾಙ್ಗೆನವುರೈತ್ತ ಮಾಲೈ, - ಇಱೈಯೇನುಮ್
ಈಯುಙ್ಗೊಲೆನ್ಱೇ ಯಿರುನ್ದೇನೆನೈಪ್ಪಗಲುಮ್,
ಮಾಯನ್ ಕಣ್ ಶೆನ್ಱ ವರಮ್.

ಮಱೈ மறை = ವೇದಗಳು ದಿದ, ಆಙ್ಗು ಎನ ஆங்கு என =
ಅಲ್ಲಿ ಎಂದು, ಉರೈತ್ತ உரைத்த = ಹೇಳಿದ, ಮಾಲೈ மாலை = ಭಗ
ವಂತನನ್ನು, ಕುಱೈ ಆಗ குறை ஆக = ಕಡಿಮೆಯಾದ ರೀತಿಯಲ್ಲೇ
ವೆಮ್ ಶೊಱ್ಕಳೈ வெம் சொற்களை = ಕಠೋರವಾದ ಮಾತು
ಗಳನ್ನು, ಕೂಱಿನೇನ್ கூறினேன் = ಹೇಳಿದ್ದೇನೆ, ಕೂಱಿ கூ
றி = ಹೇಳಿದ್ದು ಮಾತ್ರವಲ್ಲದೆ, ಮಾಯನ್ ಕಣ್ மாயன் கண் =
ಭಗವಂತನಲ್ಲಿ (ಮಾಯನಲ್ಲಿ), ಶೆನ್ಱ சென்ற = ನಡೆಯುವ, ವರಮ್
வரம் = ಅನುಗ್ರಹವನ್ನು, ಇಱೈಯೇನುಮ್ இறையேனும் =
ಅಲ್ಪವಾದರೂ, ಈಯುಮ್ ಕೊಲ್ ಎನ್ಱೇ ஈயும் கொல் என்
றே = ಕೊಡುವನಲ್ಲವೇ ಎಂದೇ, ಇರುನ್ದೇನ್ இருந்தேன் = ಇದ್ದೇನೆ,
ಎನೈಪ್ಪಗಲುಮ್ எனைப்பகலும் = ಬಹುಕಾಲದಿಂದಲೂ.

Garani Srinivasan

ವೇದಗಳೂ ಸಹ 'ಅಲ್ಲ' ಎಂದು ಹೇಳಿದ ಭಗವಂತನನ್ನು ಕೊರತೆಯುಂಟಾಗುವ ರೀತಿಯಲ್ಲೇ ತಿಳಿಗೇಡಾದ ಮಾತುಗಳನ್ನಾಡಿದ್ದೇನೆ. ಹಾಗೆ ಹೇಳಿದ್ದು ಮಾತ್ರವಲ್ಲದೆ, ಆ ಮಾಯನಲ್ಲಿ ನಡೆಯುವ ಅನುಗ್ರಹವನ್ನು ಅತ್ಯಲ್ಪವಾದರೂ ತೋರುವನಲ್ಲವೇ ಎಂತಲೇ ಬಹುಕಾಲದಿಂದಲೂ ಇದ್ದೇನೆ. (83)

ಹಿಂದಿನ ಪಾಶುರಗಳಲ್ಲಿ ಆಳ್ವಾರರು ಭಗವಂತನನ್ನು ಪ್ರತ್ಯಕ್ಷವಾಗಿಯೇ, ಪರಮಪದದಲ್ಲಿರುವಂತೆಯೇ, ತೇಜಸ್ಸ್ವರೂಪಿಯಾಗಿಯೇ ಕಂಡೆನೆಂದು ಹೇಳಿದರಷ್ಟೆ. ತಾವು ಹಾಗೆ ಆಡಿದ ಮಾತಿನಿಂದ ತಾವು ಭಗವಂತನಲ್ಲಿ ಅಪಚಾರ ಮಾಡಿದಂತಾಯಿತೇ ಎಂಬ ಶಂಕೆ ಬಂತೇನೋ. ಆದರೂ, ತಮ್ಮ ಎಂದಾದರೊಂದು ದಿನ ಭಗವಂತನು ತಪ್ಪದೆ ಅನುಗ್ರಹಿಸುವನೆಂದು ಅವರು ನಂಬಿದ್ದರು.

ಆಳ್ವಾರರು ಹೇಳುತ್ತಾರೆ: "ಭಗವಂತನನ್ನು ನೋಡಲು ಸಾಧ್ಯವಾಗುವುದಿಲ್ಲ. ಅವನು ಮಾತಿಗೂ ಮನಸ್ಸಿಗೂ ಅತೀತನು. ಅವನಿರುವ ಪರಮಪದವು "ಅಲ್ಲ"ದೆ — ಬ್ರಹ್ಮಾಂಡದಿಂದ ಆಚೆ" ಎಂದು ವೇದಗಳು ಸಾರುತ್ತವೆ. ಅಜ್ಞಾನಿಯಾದ ನಾನು ಭಗವಂತನ ವಿಷಯದಲ್ಲಿ ತಿಳಿಯದವನಾಗಿ ಮಾತನಾಡಿದೆ. "ನನ್ನ ಈ ಕಣ್ಣುಗಳಿಂದಲೇ, ಬಳ್ಳಿಯ ಹಾಗೆ ಹಿಂದೆಯೇ ಅವನನ್ನು ಬ್ಲಿಂದೆ, ಪರಮಪದದಲ್ಲಿ ಸ್ಥಾನವುಳ್ಳವನ ಹಾಗೆಯೇ ಅವನನ್ನು ನಾನು ಕಂಡು ಆನಂದಿಸಿದೆ" ಎಂದು ಹೇಳಿಬಿಟ್ಟೆ. ಅಷ್ಟಕ್ಕೇ ಬಿಡದೆ, ಆ ಮಾಯನು ತನ್ನ ಅಪಾರ ಕೃಪೆಯಲ್ಲಿ ಅತ್ಯಲ್ಪವಾಗಿಯಾದರೂ ನನಗೆ ಅನುಗ್ರಹಿಸುವನೆಂದು ಬಹುಕಾಲದಿಂದಲೂ ನಂಬಿ ಆಶಿಸುತ್ತಿದ್ದೇನೆ.

ಭಗವಂತನನ್ನು ಮಾತು ವರ್ಣಿಸಲಾರದು. ಅವನಿರವನ್ನು ಮನಸ್ಸು ನಿಲುಕಲಾರದು. ವೇದಗಳ ಈ ಮಾತು ನಿತ್ಯವೇ. ಆದರೆ, ಆಳ್ವಾರರಿಗೆ ಭಗವಂತನ ಅಪರೂಪದ ದರ್ಶನಲಾಭವುಂಟಾದದ್ದು ಭಾಗ್ಯವು ಅವರಿಗೆ ಕೃಪೆಮಾಡಿ, ತನ್ನ ನಿಜಸ್ವರೂಪವನ್ನು ನೋಡಲು ಭಗವಂತನಿಗೆ ಯಾವುದು ಅಸಾಧ್ಯ? ಅವನು ಅನುಗ್ರಹಿಸಿದನಲ್ಲವೇ! ಭಗವಂತನಿಗೆ ಯಾವುದು ಅಡ್ಡಿ? ಅವನು ಅನುಗ್ರಹಿಸಿದನಲ್ಲವೇ! ಆದ್ದರಿಂದಲೇ ಆಳ್ವಾರರು ಅವನನ್ನು "ಮಾಯನ್" ಎನ್ನದಿರಲಾರರೆ? (ಮಾಯಾಯುತ) ಎಂದು ಕರೆದಿರುವುದು.

84. வாங்குகருதிக் குனிமை வணங்குகாத வண்மை,
உாங்குருதி மூர்க்கத் துவளை, — நாங்கவந்த

Garani Srinivasan

சிங்கமாய்க் கீண்ட திருவனடி யிணையே,
அங்கண்மா ஞாலத்து அமுது.

ವರಙ್ಗರುದಿ ತ್ತನ್ನೈ ವಣಙ್ಗಾದ ವನ್ಮೈ,
ಉರಙ್ಗರುದಿ ಮೂರ್ಕ್ಕತ್ತವನ್ನೈ, — ನರಙ್ಗಲನ್ದ
ಶಿಙ್ಗಮಾಯ್ ಕ್ಕೀಣ್ಡ ತಿರುವನಡಿಯಿಣೈಯೇ,
ಅಙ್ಗಣ್ಮಾ ಞಾಲತ್ತಮುದು.

ವರಮ್ வரம் = (ತಾನು ಪಡೆದುಕೊಂಡ) ವರಗಳನ್ನೇ, ಕರುದಿ கருதி = ಎಣಿಕೆ ಮಾಡುತ್ತಾ, (ಮುಖ್ಯವೆಂದು ಉದ್ದೇಶಿಸಿ), ತನ್ನೈ தன்னை = ಸರ್ವೇಶ್ವರನಾದ ಶ್ರೀಮನ್ನಾರಾಯಣ~~ನನ್ನು~~ನಿಗೆ, ವಣಙ್ಗಾದ வணங்காத = ವಿಧೇಯನಾಗದ, (ಬಗ್ಗದ), ವನ್ಮೈ வண்மை = ವೀರದ ಶಕ್ತಿಯನ್ನು, ಉರಮ್ உரம் = ತನ್ನ ಸಹಜವಾದ ಶಕ್ತಿಯೆಂದು, ಕರುದಿ கருதி = ಎಣಿಸಿ, ಮೂರ್ಕ್ಕತ್ತವನ್ನೈ மூர்க்கத்தவனை = ಮೂರ್ಖನಾದವನನ್ನು, ನರಙ್ಗಲನ್ದ ಶಿಙ್ಗಮಾಯ್ நரம் கலந்த சிங்கம் ஆய் = ನರನೂ ಸಿಂಹವೂ ಸೇರಿದವನಾಗಿ, ಕೀಣ್ಡ கீண்ட = ಬಗೆದು ಸೀಳಿಹಾಕಿದ, ತಿರುವನ್ திருவன் = ದಿವ್ಯಸುಂದರನ, ಅಡಿ ಇಣೈಯೇ அடி இணையே = ಎರಡು ತಿರುವಡಿಗಳೇ, ~~ಅಙ್ಗಣ್~~ ~~அங்கண்~~ ಅಮ್ அம் = ಸೊಬಗಾ, ಕಣ್ கண் = ಅಗಲವೂ, ಮಾ மா = ಬಲವೂ, ಕೂಡಿದ, ಞಾಲತ್ತು ஞாலத்து = ಭೂಮಂಡಲಕ್ಕೆ (ಭೂಲೋಕಕ್ಕೆ), ಅಮುದು அமுது = ಅಮೃತಪ್ರಾಯವಾದದ್ದು.

ತಾನು ಪಡೆದುಕೊಂಡ ವರಗಳನ್ನೇ ಮುಖ್ಯವೆಂದೆಣಿಸಿ, ಸರ್ವೇಶ್ವರನಾದ ಶ್ರೀಮನ್ನಾರಾಯಣನಿಗೆ ಬಗ್ಗದ ವೀರದ ಶಕ್ತಿಯನ್ನು ಸಹಜವಾದ ಶಕ್ತಿಯೆಂದು ಎಣಿಸಿದ ಮೂರ್ಖನಾದವನನ್ನು ನರನೂ ಸಿಂಹವೂ ಕಲೆತವನಾಗಿ ಬಗೆದು ಸೀಳಿದ ದಿವ್ಯಸುಂದರನ ಎರಡು ತಿರುವಡಿಗಳೇ ಸೊಬಗಾ ಅಗಲವೂ ಬಲವೂ ಕೂಡಿದ ಭೂಲೋಕಕ್ಕೆ ಅಮೃತಪ್ರಾಯವಾದದ್ದು. (84)

ಈ ಪಾಶುರದಲ್ಲಿ ಆಳ್ವಾರರು ಭಗವಂತನ ತಿರುವಡಿಗಳ ಆಶ್ರಯ ವೊಂದೇ ಮಾನವನ ಉದ್ಧಾರಕ್ಕೆ ತಕ್ಕದ್ದು, ಅದರಿಂದಲೇ ಅವನು ಅಮೃತತ್ವವನ್ನು ಪಡೆದುಕೊಳ್ಳಬೇಕು ಎನ್ನುತ್ತಾರೆ.

ಭಗವಂತನ ನರಸಿಂಹಾವತಾರದ ಹಿರಿಮೆಯನ್ನು ಹೇಳಲಾಗಿದೆ. ಹಿರಣ್ಯಕಶಿಪು ಕಠಿಣ ತಪಸ್ಸನ್ನಾಚರಿಸಿ, ನಾನಾ ವರಗಳನ್ನು ಪಡೆದುಕೊಂಡ. ಕೊಬ್ಬಿದ. ಮೂರ್ಖನಾದ. ತನ್ನ ಆಜನ್ಮಶತ್ರುವಾದ ಹರಿಯಲ್ಲಿ ದ್ವೇಷವನ್ನು ಬೆಳೆಸುತ್ತಾ ಹೋದ. ಆ ಹರಿಯು ತನ್ನನ್ನು ಏನೂ ಮಾಡಲಾರನೆಂದೂ, ತನಗೆ ತನ್ನ ವರಗಳ ಬಲದಿಂದ ಸಾವೇ ಬರುವುದಿಲ್ಲವೆಂದೂ ನಂಬಿದ್ದ. ಅಲ್ಲದೆ, ಹಂಬಲ್ತನ

ತನ್ನ ಮಗನಾದ ಪ್ರಹ್ಲಾದನನ್ನು ಶತ್ರುವಿನಂತೆ ಕಾಣುತ್ತಿದ್ದ. ಆಗ ಭಗ-
ವಂತನು ನರಸಿಂಹರೂಪವನ್ನು ತಳೆದು, ತನ್ನ ಕೈಉಗುರುಗಳಿಂದಲೇ
ಹಿರಣ್ಯಕಶಿಪುವನ್ನು ಬಗೆದು ಕೊಂದುಹಾಕಿದನು. ಮತ್ತು ಭಕ್ತನಾದ
ಪ್ರಹ್ಲಾದನನ್ನು ಉದ್ಧರಿಸಿದನು. ಭಗವಂತನ ಶಕ್ತಿಯ ಮಹಿಮೆ

ಆಳ್ವಾರರು ಹೇಳುತ್ತಾರೆ: (ಐಂದ್ರ ಪದಗಳಾಗಲಿ, ಸ್ವತ್ತುಗಳಾಗಲಿ,
ಪ್ರಯೋಜನ ಸಾಮಗ್ರಿಗಳೆಲ್ಲ ಕೈಂ-
ಕರ್ಯುಕ್ತಿಯಾಗಲಿ, ಮೋಕ್ಷಸಾಧನವಾಗಲಿ ನಮಗೆ ತಿಳಿಯುವುದು.
ಇದು ಹಿರಣ್ಯಕಶಿಪುವಿನ ನಿದರ್ಶನದಿಂದ ನಮಗೆ ತಿಳಿಯುವುದು
ಮಾನವನು ಅಮರತ್ವವನ್ನು ಪಡೆಯ ಬೇಕೆಂದರೆ ದಿವ್ಯಸುಂದರನಾದ
ಭಗವಂತನ ತಿರುವಡಿಗಳಿಗೆ ಶರಣಾಗಬೇಕು. ಅಮೃತವನ್ನು ಪ್ರಯಿಸ
ಬೇಕು. ಭಗವಂತನೇ ದಿವ್ಯಾಮೃತ ಅವನೇ.

೮೫. அமுதென்றும் தேனென்று மாழியானென்றும்,—
அமுதன்று கொண்டுகந்தானென்றும், அமுதன்ன
சொன்மாலை யேத்தித் தொழுதேன், சொலப்பட்ட,
நன்மாலை யேத்தி நவின்று.

ಅಮುದೆನ್ರುಮ್ ತೇನೆನ್ರು ಮಾೞಿಯಾನೆನ್ರುಮ್,
ಅಮುದನ್ರು ಕೊಣ್ಡುಗನ್ದಾನೆನ್ರುಮ್,— ಅಮುದನ್ನ
ಸೊನ್ಮಾಲೈ ಯೇತ್ತಿತ್ ತೊೞುದೇನ್, ಸೊಲಪ್ಪಟ್ಟ,
ನನ್ಮಾಲೈ ಯೇತ್ತಿ ನವಿನ್ರು.

ಅಮುದು ಎನ್ರುಮ್ அமுது என்றும் = ಅಮೃತಸ್ವರೂಪನು
ಎಂತಲೂ, ತೇನ್ ಎನ್ರುಮ್ தேன் என்றும் = ಜೇನಿನಂಥವನು
ಎಂತಲೂ, ಆೞಿಯಾನ್ ಎನ್ರುಮ್ ஆழியான் என்றும் =
ಚಕ್ರಪಾಣಿ ಎಂತಲೂ, ಅಮುದು அமுது = ಅಮೃತವನ್ನು, ಅನ್ರು
அன்று = ಅಂದು, ಕೊಣ್ಡು கொண்டு = ಪಡೆದು, ಉಗನ್ದಾನ್
ಎನ್ರುಮ್ உகந்தான் என்றும் = ದಯಪಾಲಿಸಿದವನು ಎಂತಲೂ,
ಅಮುದು ಅನ್ನ அமுது அன்ன = ಅಮೃತಸಮಾನವಾದವನೆಂದು,
ಸೊಲ್ಲಪ್ಪಟ್ಟ சொலப்பட்ட = ಹೇಳಲ್ಪಟ್ಟಿರುವ, ನಲ್ ಮಾಲೈ ನಲ್
ಮಾಲೈ = ಪರಮಶ್ರೇಷ್ಠನಾದ (ಬಲುಚೆಲ್ವಿಯವನಾದ) ಸ್ವಾಮಿಯನ್ನು ಕುರಿತು,
ಸೊಲ್ ಮಾಲೈ சொல் மாலை = ಪಾಶುರಗಳ ಮೂಲಕ, ಪಠಿತ
ಬಹುಕಾಲದಿಂದಲೂ
ಏತ್ತಿ = ಸ್ತುತಿಸಿ, ನವಿನ್ರು நவின்று = (ಆಸಕ್ತಿಯಿಂದ (ನಿರಂತರವಾಗಿ),
ಏತ್ತಿ ஏத்தி = ಸ್ತುತಿಸಿ, ತೊೞುದೇನ್ தொழுதேன் = ನಮಸ್ಕರಿಸಿ, ಪೂಜಿ
ಸುತ್ತಿದ್ದೇನೆ.

ಅಮೃತಸ್ವರೂಪನು ಎಂತಲೂ, ಜ್ಞಾನಿನಂಥವನು ಎಂತಲೂ, ಚಕ್ರಧಾರಿ ಎಂತಲೂ, ಅಮೃತವನ್ನು ಅಂದು ಪಡೆದು ದಯಪಾಲಿಸಿದವನು ಎಂತಲೂ, ಅಮೃತ ಸಮಾನ ಪಾದವನೆಂದು ಹೇಳಲ್ಪಟ್ಟಿರುವ ಬಲುಚೆಲ್ವಿಯವನಾದ ಭಗವಂತನನ್ನು ಕುರಿತು ಪಾಶುರಗಳ ಮೂಲಕ ಸ್ತುತಿಸಿ, ಆಸೆಯಿಂದಲೂ (85)
ನಮ್ರತೆಯಿಂದಲೂ ಸ್ತುತಿಸಿ, ನಮಸ್ಕರಿಸಿ, ಪೂಜಿಸುತ್ತಿದ್ದೇನೆ.

ಹಿಂದಿನ ಪಾಶುರದಲ್ಲಿ ಭಗವಂತನ ತಿರುವಡಿಗಳನ್ನು ದೃಢವಾಗಿ ಆಶ್ರಯಿಸಿ ಮಾನವನು ಉದ್ಧಾರಗೊಳ್ಳಬೇಕು ಎಂದು ಹೇಳಲಾಯಿತು. ಅದಕ್ಕೆ ಒಂದು ನಿದರ್ಶನವೆಂಬಂತೆ ಈ ಪಾಶುರವಿದೆ.

ಆಳ್ವಾರರು ಹೇಳುತ್ತಾರೆ: ಪರಮಶ್ರೇಷ್ಠನೂ, ಬಲುಚೆಲ್ವಿಯವನೂ ಆದ ಭಗವಂತನನ್ನು "ಅಮೃತದಂಥವನು," "ಜ್ಞಾನಿನಂತೆ ಮಧುರವಾದವನು", "ಕೈಯಲ್ಲಿ ಚಕ್ರಾಯುಧವನ್ನು ಹಿಡಿದಿರುವವನು," "ಹಿಂದೆ ದೇವತೆಗಳಿಗೆ ಅಮೃತವನ್ನು ಒದಗಿಸಿಕೊಟ್ಟು, ಅವರನ್ನು ಅಮರರನ್ನಾಗಿಸಿ, ದಯಪಾಲಿಸಿದವನು," "ಸಾಕ್ಷಾತ್ ಅಮೃತವೇ ಅವನು"- ಎಂದು ಮುಂತಾಗಿ ಈ ಪಾಶುರಗಳ ಮೂಲಕ ನಾನು ಸ್ತುತಿಸುತ್ತೇನೆ. ಬಹುಕಾಲದಿಂದಲೂ ಎಡೆಬಿಡದ ಆಸೆಯಿಂದಲೂ ನಮ್ರತೆಯಿಂದಲೂ ಅವನನ್ನು ಸ್ತುತಿಸುತ್ತ, ನಮಸ್ಕರಿಸುತ್ತ, ಪೂಜಿಸುತ್ತ ಇದ್ದೇನೆ.

ಇತರರು ಯಾವುದನ್ನು ಹೇಗೆ ಮಾಡಬೇಕೋ ಹಾಗೆ ತಾವೇ ಮಾಡಿ ತೋರಿಸಿ ಮಾರ್ಗದರ್ಶನ ಮಾಡುವವರು ಮಹನೀಯರು! ಆಳ್ವಾರರೂ ಹಾಗೆಯೇ.

86. நயின்றுரைத்த நாவலர்கள் நாண்மலர் கொண்டு, ஆங்கே
பயின்றதனால் பெற்றபயன் என்கொல், — பயின்றார்தம்
மெய்த்தவத்தால் காண்பரிய மேகமணி வண்ணனை, யான்
எத்தவத்தால் காண்பன் கொலின்று.

ನಯಿನ್ಱುರೈತ್ತ ನಾವಲರ್ಗಳ್ ನಾಣ್ಮಲರ್ ಕೊಣ್ಡು, ಆಙ್ಗೇ
ಪಯಿನ್ಱದನಾಲ್ ಪೆತ್ತ ಪಯನೆನ್ ಕೊಲ್, — ಪಯಿನ್ಱಾರ್ ತಮ್
ಮೆಯ್ತ್ತವತ್ತಾಲ್ ಕಾಣ್ಬರಿಯ ಮೇಗಮಣಿವಣ್ಣನೈ, ಯಾನ್
ಎತ್ತವತ್ತಾಲ್ ಕಾಣ್ಬನ್ ಕೊಲಿನ್ಱು.

ನಯಿನ್ಱು நயின்று = ಎಡೆಬಿಡದಂತೆ, ಉರೈತ್ತ உரைத்த =

ಹೇಳುವವರಾದ, ನಾವಲರ್ಗಳ್ நாவலர்கள் = ವಿದ್ವಾಂಸರಾದ
ಕವಿಗಳು, ನಾಳ್ ಮಲರ್ ಕೊಣ್ಡು நாள் மலர் கொண்டு = ಆಗಲೇ
ಅರಳಿದ ಹೂಗಳನ್ನು ಕಿತ್ತುಕೊಂಡು ಬಂದು, ಆಙ್ಗೇ ஆங்கே =
(ಭಗವಂತನಿರುವ) ಆಸ್ಥಳಗಳಲ್ಲಿಯೇ, ಆಗಲೇ, ಪಯಿನ್ಱದನಾಲ್
பயின்றதனால் = ದೃಢವಾಗಿ ಆಶ್ರಯಿಸಿ ಪೂಜಿಸಿದ್ದರಿಂದ, ಪೆಱ್ಱ
பெற்ற = ಪಡೆದುಕೊಂಡ, ಪಯನ್ பயன் = ಫಲವಾದರೂ, ಎನ್
ಕೊಲ್ என் கொல் = ಏನೋ ಕಾಣೆ, ಪಯಿನ್ಱಾರ್ ತಮ್
பயின்றார் தம் = ದೃಢವಾಗಿ ಸಾಧನಾನುಷ್ಠಾನ ಮಾಡುವವರ,
ಮೆಯ್ ತವತ್ತಾಲ್ மெய் தவத்தால் = ನಿಜವಾದ ತಪಸ್ಸಿನಿಂದ,
ಕಾಣ್ಬು ಅರಿಯ காண்பு அரிய = ಗೋಚರವಾಗಲು ಅಸಾಧ್ಯ
ವಾದವನೂ, ಮೇಹಮ್ மேகம் = ಕಾರ್ಮುಗಿಲಿನಂತೆಯೂ, ಮಣಿ
மணி = ಇಂದ್ರನೀಲ ಮಣಿಯಂತೆಯೂ, ಇರುವ, ವಣ್ಣನ್ನೈ வண்
ணனை = ಬಣ್ಣದವನನ್ನು, ಯಾನ್ யான் = ನಾನು, ಎತ್ತವತ್ತಾಲ್
எத்தவத்தால் = ಯಾವ ತಪಸ್ಸಿನ ಕಾರಣದಿಂದ, ಇನ್ಱು இன்
று = ಇಂದು, ಕಾಣ್ಬನ್ ಕೊಲ್ காண்பன் கொல் = ಕಾಣು
ತ್ತಿರುವೆನೋ ಕಾಣೆ.

ಭಗವಂತನನ್ನು ಕುರಿತು ಎಡೆಬಿಡದಂತೆ ಹೇಳುವವರಾದ ವಿದ್ವಾಂಸರೂ ಕವಿಗಳೂ ಆಗಲೇ ಅರಳಿದ ಹೂಗಳನ್ನು ಕಿತ್ತುಕೊಂಡು ಬಂದು, (ಭಗವಂತನಿರುವ) ಆಸ್ಥಳದಲ್ಲಿಯೇ, ಆಗಲೇ, ದೃಢವಾಗಿ ಆಶ್ರಯಿಸಿ ಪೂಜಿಸಿದ್ದರಿಂದ ಪಡೆದುಕೊಂಡ ಫಲವಾದರೂ ಏನೋ ಕಾಣೆ. ದೃಢವಾಗಿ ಸಾಧನಾನುಷ್ಠಾನಗಳನ್ನು ಚರಿಸುವವರ ನಿಜವಾದ ತಪಸ್ಸಿನಿಂದ ಕಾಣಲಸಾಧ್ಯನಾದವನೂ ಕಾರ್ಮುಗಿಲಿನಂತೆಯೂ, ಇಂದ್ರನೀಲ ಮಣಿಯಂತೆಯೂ, ಬಣ್ಣವುಳ್ಳವನನ್ನು ನಾನು ಯಾವ ತಪಸ್ಸಿನ ಕಾರಣದಿಂದ, ಇಂದು, (86)
ಕಾಣುತ್ತಿರುವೆನೋ ಕಾಣೆ.

ಈ ಪಾಶುರದಲ್ಲಿ ಆಳ್ವಾರರು ತಮ್ಮನ್ನು ಇತರ ಭಾಗವತರೊಡನೆ ಹೋಲಿಸಿಕೊಂಡು, ತಮ್ಮ ಉತ್ಕೃಷ್ಟತೆ ಏನೆಂಬುದನ್ನು ಇತರರೂ ಊಹಿಸಿಕೊಳ್ಳುವಂತೆ, ಸ್ವಾರಸ್ಯವಾದ ರೀತಿಯಲ್ಲಿ ಹೇಳುತ್ತಾರೆ.

ವೇದಶಾಸ್ತ್ರಗಳಲ್ಲಿ ಪಾರಂಗತರಾದ ಮಹಾ ವಿದ್ವಾಂಸರು ಭಗವಂತನನ್ನು ಕುರಿತು ಎಡೆಬಿಡದಂತೆ ಹೇಳಲು ಸಾಮರ್ಥ್ಯವುಳ್ಳವರು. ಅವರಿಗೆ ಭಗವಂತನ ಸ್ವರೂಪ, ರೂಪ, ಗುಣ, ವಿಭವಗಳು ಚೆನ್ನಾಗಿ ಅರಿವಿದೆ. ಅವರು ದೇವಾಲಯಗಳಲ್ಲಿ

Garani Srinivasan

ತಾವಿರುವ ತಾಣಗಳಲ್ಲೇ ಭಗವಂತನ ಅರ್ಚಾಮೂರ್ತಿಯನ್ನು ಶುದ್ಧವಾದ ಪರಿಮಳಪೂರ್ಣವಾದ ಪುಷ್ಪಗಳಿಂದ ಅರ್ಚಿಸಿ ಆನಂದಿಸುತ್ತಾರೆ.

ಒಂದು ಬಗೆಯ ವಿದ್ವಾಂಸರು ಯೋಗದ ಸಾಧನೆಗಳಿಂದ, ಕಠಿಣವಾದ ತಪಸ್ಸಾಧನೆಗಳಿಂದ, ತಮ್ಮ ದೇಹವನ್ನು ದಂಡಿಸಿ ಭಗವಂತನನ್ನು ಸಾಕ್ಷಾತ್ಕರಿಸಿ ಕೊಳ್ಳಲು ಯತ್ನಿಸುತ್ತಾರೆ.

ಮತ್ತೊಂದು ಬಗೆಯವರು ಅಜ್ಞಾನಿಗಳಾದ್ದರಿಂದ, ಸಾಮಾನ್ಯಜನರಾದ್ದರಿಂದ, ಅವರು ಯೋಗಿಗಳೂ ಅಲ್ಲ, ತಪಸ್ವಿಗಳೂ ಅಲ್ಲ. ಅವರು ಭಗವಂತನ ಪಾದಸೇವೆಯಲ್ಲಿ ತೊಡಗಿ, ಅದನ್ನು ಶ್ರಯಿಸಿ, ಅರ್ಚಿಸಿ, ಪೂಜಿಸುತ್ತಾ, ಭಗವಂತನ ಸಾವಿರ ನಾಮಗಳನ್ನು ಬಿಡದೆ ಉಚ್ಚರಿಸುತ್ತಾ ಕಾಲಕಳೆಯುತ್ತಾರೆ. ಈ ~~[illegible]~~ ವರ್ಗಕ್ಕೆ ಸೇರಿದವರು ಆಳ್ವಾರರು.

ಆಳ್ವಾರರು ಹೇಳುತ್ತಾರೆ: ಭಗವದ್ವಿಷಯವಾಗಿ ಚೆನ್ನಾಗಿ ಅರಿತುಕೊಂಡವರಾದ ವೇದವಿದ್ವಾಂಸರೂ, ವಿದ್ಯಾವಂತರಾದ ತಪಸ್ವಿಗಳೂ, ಭಗವಂತನನ್ನು ತಾವಿರುವಲ್ಲಿಯೇ ಅರ್ಚಿಸಿ, ಪೂಜಿಸುತ್ತಾರೆ. ಯೋಗ, ತಪಸ್ಸುಗಳಿಂದಲೂ ದೇಹವನ್ನು ದಂಡಿಸುತ್ತಾ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಅವರುಗಳು ತಮ್ಮಲ್ಲಿ ಜ್ಞಾನಭಂಡಾರದಿಂದಲೂ ಘೋರ ಸಾಧನೆಗಳಿಂದಲೂ ಯಾವ ಫಲವನ್ನು ಪಡೆದುಕೊಳ್ಳಲಿಲ್ಲ; ಅಜ್ಞಾನಿಯಾದ ನಾನಾದರೋ ಕಾಮರ್ಗಲಂತೆ ಬಣ್ಣವುಳ್ಳವನಾದ, ದಿವ್ಯವಾದ ಇಂದ್ರನೀಲಮಣಿಯಂತೆ ಬಣ್ಣವುಳ್ಳವನಾದ ಭಗವಂತನ ತಿರುವಡಿಗಳನ್ನು ಶ್ರಯಿಸಿ, ಅರ್ಚಿಸಿದ್ದರ ಪರಿಣಾಮವಾಗಿ ನನಗೆ, ಇಂದು, ಸ್ವಾಮಿಯು ಪ್ರತ್ಯಕ್ಷವಾಗಿ ತನ್ನ ದರ್ಶನಲಾಭವನ್ನು ಇತ್ತನಲ್ಲ!

87. இன்று மறுகின்றே னல்லேன், இருநிலத்தைச்
சென்றங் களந்த திருவடியை, — அன்று
கருக்கோட்டி யுள் கிடந்து கைதொழுதேன்
கண்டேன்,
திருக்கோட்டி யெந்தை திறம்.

ಇನ್ಱು ಮಱುಗಿನ್ಱೇ ನಲ್ಲೇನ್, ಇರುನಿಲತ್ತೈ
ಚೆನ್ಱಙ್ಗಳನ್ದ ತಿರುವಡಿಯೈ, — ಅನ್ಱು
ಕರುಕ್ಕೋಟ್ಟಿಯುಳ್ ಕಿಡನ್ದು ಕೈತೊೞುದೇನ್ ಕಣ್ಡೇನ್,
ತಿರುಕ್ಕೋಟ್ಟಿ ಯೆನ್ದೈ ತಿಱಮ್.

ಇನ್ಱು ಆ இன்று ஆ = ಇಂದೇಯೇ, ಮಱುಗಿನ್ಱೇನ್

ಅಲ್ಲೇನ್ அறிகிறேன் ಅಹಲೇಣ್ = ಅರಿತುಕೊಂಡೆನೆಂದಲ್ಲ,
ಇರು ನಿಲತ್ತೈ இருநிலத்தை = ವಿಸ್ತಾರವಾದ ಭೂಮಂಡಲವನ್ನು,
ಶೆನ್ಱು சென்று = ಪ್ರವೇಶಿಸಿ (ಹೋಗಿ), ಅಲ್ಲ ஆங்கு = ಅಲ್ಲಿ,
ಅಳನ್ದ அளந்த = ಅಳೆದುಕೊಂಡ, ತಿರುವಡಿಯೈ திருவடியை
= ತಿರುವಡಿಯನ್ನು, ಅನ್ಱು அன்று = ಅಂದು, ಕರುಕ್ಕೋಟ್ಟಿಯುಳ್
ಕಿಡನ್ದು கருக்கோட்டியுள் கிடந்து = ಗರ್ಭವಾಸದಲ್ಲಿ
ಕಟ್ಟಿಬಿದ್ದು (ಗರ್ಭದಲ್ಲಿ ಕಟ್ಟಿಬಿದ್ದು), ಕೈತೊಳುದೇನ್ கைதொழு
ದೇನ್ = ಕೈಮುಗಿದೆನು, ಕಣ್ಡೇನ್ கண்டேன் = ಕಂಡೆನು,
ತಿರುಕ್ಕೋಟ್ಟಿ ಎನ್ದೈ திருக்கோட்டி எந்தை = ತಿರುಕ್ಕೋಟ್ಟಿ
ಯೂರಿನ ಸ್ವಾಮಿಯ (ನನ್ನ ತಂದೆಯ), ತಿಉವರ திறம் = ಸ್ವಭಾವ
ವನ್ನು.

ವಿಸ್ತಾರವಾದ ಭೂಮಂಡಲವನ್ನು ದಾಟಿಕೊಂಡು ಅಲ್ಲಿ ಅದನ್ನಳೆದು ಕೊಂಡ ತಿರುವಡಿಯನ್ನು ಇಂದೇ ಅರಿತುಕೊಂಡೆನೆಂದಲ್ಲ. ಅಂದು, ಗರ್ಭ ದಲ್ಲಿ ಸಿಕ್ಕಿಬಿದ್ದು (ಇರುವಾಗಲೇ) ಕೈಮುಗಿದೆನು. ಅಂದೇ ತಿರುಕ್ಕೋಟ್ಟಿಯೂರಿನ ನನ್ನ ತಂದೆಯ (ಸ್ವಾಮಿಯ) ಸ್ವಭಾವವನ್ನು ಕಂಡೆನು. (87)

ಹಿಂದಿನ ಪಾಶುರದಲ್ಲಿ, ~~[illegible]~~ ವಿದ್ವಾಂಸರೂ, ಕವಿಗಳೂ, ಕೇಳಿದವರ ಭಗವಂ ತಾಧನಾನುಷ್ಠಾನಗಳಲ್ಲಿ ತೊಡಗಿರುವ ಜ್ಞಾನಿಗಳೂ ~~[illegible]~~ ಕೇಳಿದವರ ಭಗವಂ ತನು ಅತಿದಾವಾನ್ಯನಾದ ಅವನ್ನ ಕೇಳಿಕೊಂಡನಲ್ಲ ಎಂಬ ಶ್ಲಾಘ್ಯತೆಯ ಮಾತನ್ನು ಆಳ್ವಾರರು ಆಡಿದರು. ಈಗ, ಅದಕ್ಕೆ ಒಂದು ವಿವರಣೆಯ ದ್ಯಂತ ಭಗವಂತನ ಸೌಲಭ್ಯ, ಸೌಶೀಲ್ಯ, ಕಾರುಣ್ಯಾದಿ ಗುಣ ಸ್ವಭಾವವನ್ನು ಅವರು ಕಂಡುಕೊಂಡದ್ದು ಯಾವಾಗ ಎಂಬುದನ್ನು ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಹಿಂದೆ, ಭಗವಂತನು ವಾಮನನಾ ಗಿ ಬಂದು ಚಕ್ರವರ್ತಿಯಿಂದ ಮೂರುಹೆಜ್ಜೆಗಳ ನೆಲವನ್ನು ದಾನವಾ ಗಿ ಪಡೆದು ಬಳಿಕ, ಸ್ವಾಮಿಯು ತ್ರಿವಿಕ್ರಮನಾಗಿ ಬೆಳೆದಾಗ, ಅವನ ತಿರುವಡಿ ಒಂದು ಭೂಮಂಡಲವನ್ನೆಲ್ಲಾ ದಾಟಿ, ಒಂದೇ ಹೆಜ್ಜೆಯಿಂದ ಅದನ್ನೆಲ್ಲಾ ಅಳೆದುಕೊಂಡಿತಷ್ಟೆ. ತಿರುವಡಿಯ ವಿಸ್ಮಯಕಾರಕವಾದ ಆ ಸ್ವಭಾವ ವನ್ನು ನಾನು ಇಂದು ಕಂಡುಕೊಂಡೆ ಎಂದಲ್ಲ. ಬಹುಕಾಲದ ಹಿಂದೆ, ನಾನು ಗರ್ಭವಾಸ ಮಾಡುತ್ತಿದ್ದಾಗಲೇ, ನನಗೆ ಅದರ ಅಂತರ್ಯಾಮಿಯಿಂದ ...

ನಾನು ಗರ್ಭದಲ್ಲಿ ಪ್ರಾಣಪ್ರಯಾಣದಲ್ಲಿದ್ದಾಗಲೇ ಆ ದಿವ್ಯಶರೀರವಹಿಸಿ
ಕೃಪೆಯಾಗಿದೆ. ಅಂದರೆ ಭಗವಂತನ ಗುಣಸ್ವಭಾವಗಳೆಂಬುದನ್ನು
ನಾನು ಕಂಡುಕೊಂಡೆ.

ಗರ್ಭವಾಸದಲ್ಲಿರುವ ಕಾಲದಲ್ಲಿ, ಪ್ರಾಣದಶೆಯಲ್ಲಿ, ಮನುಷ್ಯ
ನಿಗೆ ಹಿಂದಿನ ಜನ್ಮದ ಗುಣವೂ, ಸಂಸ್ಕಾರವೂ ಇರುವುದೆಂದೂ, ತನ್ನನ್ನು
ಗರ್ಭವಾಸದ ಕೋಟಲೆಗಳಲ್ಲೇ ಇಲ್ಲದಂತೆ ಮಾಡೆಂದು ಭಗವಂತನನ್ನು
ಸದಾ ಪ್ರಾರ್ಥಿಸುತ್ತಿರುವನೆಂದೂ, ಭೂಸ್ಪರ್ಶವಾದ ಕೂಡಲೇ
ಅದನ್ನೆಲ್ಲ ಮಾಯೆ ಮುಸುಕಿ ಆ ಜ್ಞಾನ ಮರೆತುಹೋಗುವುದೆಂದೂ
ಹೇಳುವುದು ವಾಡಿಕೆ. ಆಳ್ವಾರರು ಅದನ್ನೇ ಇಲ್ಲಿ ಸಮರ್ಥಿಸುತ್ತಾರಾದರೂ,
ತಾವು ಭಗವಂತನ ದಯೆಯ ಮೇಲೆ ಜಾಗರಿತರಾಗಿರುವಾಗಲೂ ತಮ್ಮ ಹಿಂದಿನ ಸಂಸ್ಕಾರ
ವನ್ನು ಗುಣವನ್ನು ಮರೆತಿಲ್ಲವೆಂದು ದೃಢವಾಗಿ ಹೇಳುತ್ತಾರೆ.

44. திறம்பிற்றினியறிந்தேன் தென்னரங்கத்து எந்தை,
திறம்பா வழிசென்றார்க் கல்லால், — திறம்பாச்
செடிநரகை நீக்கித்தாம் செல்வதன்முன், வானோர்
கடிநகர வாசற் கதவு.

ತಿಱಮ್ಬಿಱ್ಱಿನಿಯಱಿನ್ದೇನ್ ತೆನ್ನರಙ್ಗತ್ತೆನ್ದೈ,
ತಿಱಮ್ಬಾ ವೞಿಶೆನ್ಱಾರ್ಕ್ಕಲ್ಲಾಲ್, — ತಿಱಮ್ಬಾ
ಚ್ಚೆಡಿನರಹೈ ನೀಕ್ಕಿತ್ತಾಮ್ ಶೆಲ್ವದನ್ ಮುನ್, ವಾನೋರ್
ಕಡಿನಗರ ವಾಶಲ್ ಕದವು.

ತೆನ್ ಅರಙ್ಗತ್ತು ಎನ್ದೈ தென் அரங்கத்து எந்தை = ದಕ್ಷಿಣದ ಶ್ರೀರಂಗದ ಸ್ವಾಮಿಯೇ, ತಿಱಮ್ಬಾ திறம்பா = ಹಿಂತಿರುಗದ, (ಹಿಂತಿರುಗಿ ಬರಲಾಗದ), ವೞಿ வழி = ದಾರಿಯಲ್ಲಿ, ಶೆನ್ಱಾರ್ಕ್ಕು சென்றார்க்கு = ಹೋಗುವವರಿಗೆ, ಅಲ್ಲಾಲ್ அல்லால் = ಅಲ್ಲದೆ (ಹೋರು), ತಿಱಮ್ಬಾ திறம்பா = ತಪ್ಪದು ಹೋಗಲಾರದ, ಶೆಡಿನರಹೈ செடி நரகை = ಸಂಸಾರವೃಕ್ಷವೆಂಬ ನರಕವನ್ನು, ನೀಕ್ಕಿ நீக்கி = ನೀಗಿಸಿ, (ತೊಲಗಿಸಿ), ತಾಮ್ தாம் = ತಾವು, ಶೆಲ್ವದನ್ ಮುನ್ செல்வதன் முன் = ಹೋಗುವುದಕ್ಕೆ (ಸೇರುವುದಕ್ಕೆ) ಮುಂಚಿತವಾಗಿಯೇ, ವಾನೋರ್ வானோர் = ನಿತ್ಯಸೂರಿಗಳ, ಕಡಿನಗರಮ್ கடி நகரம் = ಕಾವಲಿರುವ ನಗರದ, ವಾಶಲ್ ಕದವು வாசல் கதவு = ಬಾಗಿಲ ಕದವು, ತಿಱಮ್ಬಿಱ್ಱು திறம்பிற்று = ತೆರೆಯಿತು

ಎಂದು, ಇನಿ ಮೀಣ್ = ಈಗಲೇ, ಅಯಿನ್ದೇನ್ ಅಗ್ರಿಕ್ರಮೇಣ = ಅರಿತು ಕೊಂಡಿದ್ದೇನೆ.

ಸೆಂಬಗನ ಶ್ರೀರಂಗದ ಸ್ವಾಮಿಯೇ ಹಿಂತಿರುಗಿ ಬರಲಾಗದ ದಾರಿ ಎಂದು ಅದರಲ್ಲಿ ಹೋಗುವವನಲ್ಲದೆ, ಕಡಿದು ದಾಟಲಾರದ ಸಂಸಾರ ವೃಕ್ಷವೆಂಬ ನರಕವನ್ನು ಕಳಚಿ, ನಾವು ಹೋಗಿ ಸೇರುವುದಕ್ಕಿಂತಲೂ ಮುಂಚೆಯೇ ನಿತ್ಯಸೂರಿಗಳು ಕಾಯುತ್ತಿರುವಂತಹ ನನ್ನ ಬಾಗಿಲ ಕದವು (88) ತೆರೆಯುತ್ತದೆ ಎಂದು ಈಗಲೇ ಅರಿತುಕೊಂಡಿದ್ದೇನೆ.

ಈ ಪಾಶುರ ಹಿಂದಿನ ಪಾಶುರಕ್ಕೆ ಪೋಷಣೆಯಿದ್ದಂತೆ ಇದೆ. ಪುನಃ ಪುನಃ ಗರ್ಭವಾಸವನ್ನು ಅನುಭವಿಸುವುದನ್ನು ತಪ್ಪಿಸುವುದಕ್ಕೆ ಭಗವಂತನನ್ನು ಎಡೆಬಿಡದಂತೆ ಪ್ರಾರ್ಥಿಸುತ್ತಿರುವುದೇ ಉಪಾಯವೆಂಬುದನ್ನು ಬಹಳ ಸ್ಪಷ್ಟವಾಗಿ ಆಳ್ವಾರರು ಹಿಂದಿನ ಪಾಶುರದಲ್ಲಿ ಹೇಳಿದರು.

ಈಗ, ಸರಳವಾದದ್ದು, ಎಲ್ಲರೂ ಅನುಸರಿಸಬೇಕಾದ್ದೂ ಆದ ಒಂದು ಉತ್ತಮವಾದ ತತ್ತ್ವವನ್ನು ಆಳ್ವಾರರು ಹೇಳುತ್ತಾರೆ: ಮಾನವನಾಗಿ ಭಗವಂತನನ್ನು ಪಡೆದುಕೊಳ್ಳಬೇಕಾದದ್ದು ಅವನ ಗುರಿ. ಈ ಗುರಿಯನ್ನು ಸೇರುವುದಕ್ಕೆ ಭಗವಂತನ ತಿರುವಡಿಗಳ ಆಶ್ರಯವೇ ಮಾರ್ಗ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಸಂಸಾರ ಬಂಧನದಿಂದ ಮಾನವನು ಮುಕ್ತನಾಗುವುದಕ್ಕೆ ಭಗವಂತನನ್ನು ಬಿಡದೆ ಆಶ್ರಯಿಸುವುದೇ ಉಪಾಯ. ಅದನ್ನು ಪಡೆದುಕೊಳ್ಳುವುದೇ ಎಂದರೆ ಭಗವಂತನ ನಿತ್ಯಸಾನ್ನಿಧ್ಯವನ್ನು ಪಡೆದುಕೊಳ್ಳುವುದು (ಇದನ್ನು ಉಪೇಯ ಎನ್ನುತ್ತಾರೆ) ಸಾಧ್ಯ ಭಗವಂತನೇ. ಗುರಿಯೂ ಅವನೇ ಮಾರ್ಗವೂ ಅವನೇ. ಉಪಾಯವೂ ಅವನೇ ಉಪೇಯವೂ ಅವನೇ – ಇದೇ ತತ್ತ್ವ.

ಆಳ್ವಾರರು ಹೇಳುತ್ತಾರೆ: ಶ್ರೀರಂಗನಾಥನೇ ಉಪಾಯವೆಂದು ಅವನ ತಿರುವಡಿಗಳನ್ನು ಆಶ್ರಯಿಸುವವನಿಗೆ, ಸ್ವಾಮಿಯು ಅವರ ಸಂಸಾರ ಬಂಧನವನ್ನು ಕಡಿದು ಹಾಕಿ ಬಿಡುವುದಲ್ಲದೆ, ಅವರ ಪಾಪರಾಶಿಯನ್ನೆಲ್ಲಾ ನಿರ್ಮೂಲಗೊಳಿಸುವುದಲ್ಲದೆ, ಅವರು ನರಕವಾಸವನ್ನು ಅನುಭವಿಸುವುದನ್ನು ತಪ್ಪಿಸಿ, ಪರಮಪದವನ್ನು ನೀಡುತ್ತಾರೆ. ಅವರು ಕೋಟೆಗಳಿಂದ ಸುಭದ್ರವಾಗಿರುವ ಪರಮಪದವನ್ನು ತಲುಪುವುದಕ್ಕೆ ಮುಂಚಿತವಾಗಿಯೇ ಪರಮಪದದ ಬಾಗಿಲು ಅವರಿಗಾಗಿ ತೆರೆದಿರುತ್ತವೆ. ಇದನ್ನು ನಾನು ಅರಿತುಕೊಂಡೆ.

89. கதவிக் கதஞ்சிறந்த கஞ்சனை முன் காய்ந்து,
அதவிப் போர யானை யொசித்து, — பதவி யாய்ப்
பாணியால் நீரேற்றுப் பண்டொருகால் மாவலியை,
மாணியாய்க் கொண்டிலையே மண்.

ಕದವಿ ಕದಂಜಿಱನ್ದ ಕಂಜನೈ ಮುನ್ ಕಾಯ್ನ್ದು,
ಅದವಿಪ್ಪೋರ್ ಯಾನೈ ಯೊಶಿತ್ತು, — ಪದವಿಯಾಯ್
ಪ್ಪಾಣಿಯಾಲ್ ನೀರೇಱ್ಱು ಪ್ಪಣ್ಡೊರುಕಾಲ್ ಮಾವಲಿಯೈ,
ಮಾಣಿಯಾಯ್ ಕ್ಕೊಣ್ಡಿಲೈಯೇ ಮಣ್.

ಕದಮ್ கதம் = ಕೋಪವು, ಶಿಱನ್ದ சிறந்த = ಹೆಚ್ಚಾದ ಕಂಜನೈ கஞ்சனை = ಕಂಸನ ಮೇಲೆ, ಕದವಿ கதவி = ಕೋಪಿಸಿಕೊಂಡು, ಮುನ್ முன் = ಹಿಂದಿನ ಕಾಲದಲ್ಲಿ, ಕಾಯ್ನ್ದು காய்ந்து = ಸಂಹರಿಸಿ, ಪೋರ್ ಯಾನೈ போர் யானை = (ಯುದ್ಧ ಮಾಡಬಲ್ಲ) ಹೋರಾಡಬಲ್ಲ ಆನೆಯ, ಒಶಿತ್ತು ஒசித்து = ದಂತವನ್ನು ಮುರಿದು, ಅದವಿ அதவி = (ಅದರಿಂದಲೇ) ಅದನ್ನು ಕೊಂದು, ಪದವಿಯಾಯ್ பதவியாய் = ನಮ್ರತೆಯ ರೂಪಧರಿಸಿ, ಮಾಣಿಆಯ್ மாணியாய் = (ವಾಮನ) ವಟುವಾಗಿ, ಮಾವಲಿಯೈ மாவலியை = ಬಲಿಚಕ್ರವರ್ತಿಯ, ಪಾಣಿಯಾಲ್ பாணியால் = ಕೈಯಿಂದ, ನೀರ್ ಏಱ್ಱು நீர் ஏற்று = ನೀರೆರೆಸಿಕೊಂಡು, ಪಣ್ಡು ಒರುಕಾಲ್ பண்டு ஒருகால் = ಹಿಂದೆ ಒಂದು ಕಾಲದಲ್ಲಿ, ಮಣ್ மண் = ಭೂಮಿಯನ್ನು, ಕೊಣ್ಡಿಲೈಯೇ கொண்டிலையே = ಪಡೆದು ಕೊಳ್ಳಲಿಲ್ಲವೇ?

ಹಿಂದಿನ ಕಾಲದಲ್ಲಿ, ಬಹಳ ಕೋಪವುಳ್ಳ ಕಂಸನ ಮೇಲೆ ಕೋಪಗೊಂಡು (ಅವನನ್ನು) ಸಂಹರಿಸಿ, ಹೋರಾಡಬಲ್ಲ ಆನೆಯ ದಂತವನ್ನು ಮುರಿದುಕೊಂಡು (ಅದರಿಂದಲೇ) ಅದನ್ನು ಕೊಂದು, ಹಿಂದೆ ಒಂದು ಕಾಲದಲ್ಲಿ ನಮ್ರತೆಯ ರೂಪಧರಿಸಿ ವಟುವಾಗಿ ಬಲಿಚಕ್ರವರ್ತಿಯ ಕೈಯಿಂದ ನೀರೆರೆಸಿಕೊಂಡು ಭೂಮಿಯನ್ನು ಪಡೆದುಕೊಳ್ಳಲಿಲ್ಲವೇ? (89)

ಭಗವಂತನು ಆಶ್ರಿತರಕ್ಷಕನೆಂದೂ, ಆಶ್ರಿತ ವಿರೋಧಿಗಳನ್ನು ಶಿಕ್ಷಿಸತಕ್ಕವನೆಂದೂ, ಇಲ್ಲಿ ಕೆಲವು ನಿದರ್ಶನಗಳನ್ನು ಕೊಡಲಾಗಿದೆ

Garani Srinivasan

ಆಳ್ವಾರರು ಹೇಳುತ್ತಾರೆ: ಭಗವಂತ, ಬಹಳ ಕೋಪಿಷ್ಠನಾದ ನಿನ್ನ ಕಡುಶತ್ರುವಾದ ಕಂಸನ ಮೇಲೆ ಕೋಪಗೊಂಡು ಅವನನ್ನು ಕೊಂದು ಹಾಕಿದೆಯಲ್ಲವೆ? ನಿನ್ನನ್ನು ಕೊಲ್ಲುವುದಕ್ಕಾಗಿಯೇ ಕಂಸನು ಮಧುರೆಯ ಹೆಬ್ಬಾಗಿಲಲ್ಲಿ ನಿಲ್ಲಿಸಿದ್ದ ಅತಿಬಲಿಷ್ಠವಾದ ಕುವಲಯಾಪೀಡವೆಂಬ ಮದ್ದಾನೆಯನ್ನು ನೀನು ಎದುರಿಸಿ, ಅದರ ದಂತವನ್ನು ಮುರಿದುಕೊಂಡು ಅದರಿಂದಲೇ ಆ ಆನೆಯನ್ನು ಕೊಂದು ಹಾಕಿದೆಯಲ್ಲವೆ? ಮತ್ತೊಮ್ಮೆ, ಬಲಿಚಕ್ರವರ್ತಿಯ ಯಾಗಶಾಲೆಗೆ ನಮ್ರತೆಯೇ ರೂಪಗೊಂಡಂತೆ ನೀನು ವಟುವಿನ ವೇಷದಲ್ಲಿ ಪ್ರವೇಶಿಸಿ, ಅವನ ಕೈಯಿಂದ "ದಾನಕೊಟ್ಟೆ" ಎಂಬ ನೀರೆರೆಸಿಕೊಂಡ ಬಳಿಕ, ನಿನ್ನ ಹೆಜ್ಜೆಯನ್ನು ಭೂಮಂಡಲದಲ್ಲೆಲ್ಲಾ ಹರಡುವಂತೆ ವಿಸ್ತರಿಸಿ, ಅಳೆದು, ಭೂಮಂಡಲವನ್ನೇ ಪಡೆದುಕೊಂಡು ಬಿಟ್ಟೆಯಲ್ಲವೇ?

90. மண்ணுலக மாளேனே வானவர்க்கும் வானவனாய்,
விண்ணுலகம் தன்னகத்து மேவேனே, — நண்ணித்
திருமாலைச் செங்கண் நெடியானை, எங்கள்
பெருமானைக் கைதொழுத பின்.

ಮಣ್ಣುಲಗ ಮಾಳೇನೇ ವಾನವರ್ಕ್ಕುಮ್ ವಾನವನಾಯ್,
ವಿಣ್ಣುಲಗಮ್ ತನ್ನಗತ್ತು ಮೇವೇನೇ, — ನಣ್ಣಿ
ತ್ತಿರುಮಾಲೈ ಚ್ಚೆಙ್ಗಣ್ ನೆಡಿಯಾನೈ, ಎಙ್ಗಳ್
ಪೆರುಮಾನೈ ಕ್ಕೈ ತೊಳುದ ಪಿನ್.

ತಿರುಮಾಲೈ திருமாலை = ಶ್ರೀದೇವಿಯ ಪತಿಯನ್ನು, ಶೆಮ್ ಕಣ್ செம் கண் = ಕೆಂದಾವರೆಯಂತೆ ಕಣ್ಣುಗಳುಳ್ಳವನನ್ನು, ನೆಡಿಯಾನೈ நெடியானை = ಸರ್ವೇಶ್ವರನನ್ನು, ಎಙ್ಗಳ್ ಪೆರುಮಾನೈ எங்கள் பெருமானை = ನಮ್ಮ ಸ್ವಾಮಿಯನ್ನು, ನಣ್ಣಿ நண்ணி = ಸಮೀಪಿಸಿ, ಕೈ ತೊಳುದ ಪಿನ್ கைதொழுத பின் = ಕೈಮುಗಿದ ಬಳಿಕ, ಮಣ್ ಉಲಗಮ್ ಆಳೇನೇ மண் உலகம் ஆளேனே = ಭೂಲೋಕವನ್ನು ಆಳಲಾರೆನೇ? ವಾನವರ್ಕ್ಕುಮ್ வானவர்க்கும் = ದೇವತೆಗಳಿಗೆಲ್ಲ, ವಾನವನ್ ಆಯ್

வானவன் ஆய = ಅಧಿಪತಿಯಾದ ದೇವತೆಯಾಗಿ, ವಿಣ್ ಉಲ
ಗಮ್ ವಿಣ್ ಉಲகம் = ಮೇಲಣಲೋಕವಾದ, ತನ್ ಅಗತ್ತು
தன் அகத்து = ತನ್ನ ಮನೆಯಲ್ಲೇ, ಮೇಲೇನೇ மேமேலனே =
ಜಿತೆಂತನ ನಡಸಲಾರನೇ?

ಶ್ರೀದೇವಿಯ ಪತಿಯನ್ನು, ಶೆಂದಾಮರೆಯಂತೆ ಕಣ್ಣುಳ್ಳವನನ್ನು, ಸರ್ವೇಶ್ವರನನ್ನು, ನಮ್ಮ ಸ್ವಾಮಿಯನ್ನು ಸೇವಿಸಿ, ಶ್ರೇಷ್ಠನಾದ ಬಳಿಕ (ನಾನು) ಭೂಲೋಕವನ್ನಾಳಲಾರನೇ? ದೇವತೆಗಳಿಗೆಲ್ಲ ಅಧಿಪತಿಯಾದ ದೇವತೆಯಾಗಿ ಮೇಲಣಲೋಕವಾದ ತನ್ನ ಮನೆಯಲ್ಲೇ ಜಿತೆಂತನ (90) ನಡಸಲಾರನೇ?

ಈ ಪಾಶುರದಲ್ಲಿ ಭಗವಂತನನ್ನು ಪಿಂಪ್ರಾಣನಾಗಿ ಆಶ್ರಯಿಸಿದ್ದರ ಫಲವೇನು ಎಂಬುವನ್ನು ಸ್ಪಷ್ಟವಾಗಿ ಹೇಳಲಾಗಿದೆ.

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನಾದ ಸ್ವಾಮಿಯೇ, ನೀನು ಸಕಲ ಐಶ್ವರ್ಯಗಳಿಗೂ ಒಡೆಯಳಾದ ಶ್ರೀದೇವಿಯ ಪತಿಯಾಗಿದ್ದೀ. ಸಮಗಲ್ಲಿಂಗಾ ನಿತ್ಯಂಜ್ಯೋತವನ ಸುಂದರನಾಗಿ ಅತ್ಯಾಶ್ಚರ್ಯನಾಗಿದ್ದೀ. ನಿನ್ನನ್ನು ಆಶ್ರಯಿಸಿ ~~~~ ಸುಲಭನಾದ ಕೃಪಾಳುವಾದ ಸ್ವಾಮಿಯಾಗಿದ್ದೀ. ನಿನ್ನನ್ನು ಆಶ್ರಯಿಸಿ ನಿನಗೆ ಶ್ರೇಷ್ಠಮಾಗದು ಶರಣಾದ ಬಳಿಕ ನನಗೆ ಬೇರೆ ಕೊರತೆಯುಂಟೆ? ದೇವತೆಗಳೆಲ್ಲ ಅಧಿಪತಿಯಾಗಿ, ಭೂಲೋಕವನ್ನೇ ನಾನು ಆಳಬಲ್ಲೆ. ನಿನ್ನ ಬಳಿಯಲ್ಲೇ ಮೇಲಣ ಲೋಕಗಳ ಜಿತೆಂತನವನ್ನು ನಡಸಬಲ್ಲೆ. ನಿತ್ಯಾನಂದ ಸುಖವನ್ನೂ ಅನುಭವಿಸಬಲ್ಲೆ.

சேராமல் பேதுறுவீர்,
91. பின்னால் அருநரகம் முயல்மினோ, — பன்னூல்
முன்னால் வணங்கு
அளந்தானைக் கார்க்கடல்சூழ் ஞாலத்தை, எல்லாம்
அளந்தானவன் சேவடி.

ಪಿನ್ನಾಲ್ ಅರುನರಗಮ್ ಶೇರಾಮಲ್ ಪೇದುಱುವೀರ್,
ಮುನ್ನಾಲ್ ವಣಙ್ಗ ಮುಯಲ್ಮಿನೋ, ಪನ್ನೂಲ್
ಅಳನ್ದಾನೈ ಕ್ಕಾರ್ಕ್ಕಡಲ್ ಶೂಳ್ ಞಾಲತ್ತೈ, ಎಲ್ಲಾಮ್
ಅಳನ್ದಾನವನ್ ಶೇವಡಿ.

ಪಿನ್ನಾಲ್ பின்னால் = ಮರಣ ಹೊಂದಿದ ಬಳಿಕ, ಅರುನರಗಮ್ அரு நரகம் = ಕಠಿಣವಾದ ನರಕವನ್ನು, ಶೇರಾಮಲ್ சேராமல் = ಸೇರ ದಂತೆ, ~~~~, ಪೇದುಱುವೀರ್ பேதுறுவீர் = ಬಹಳವಾಗಿ ಸಂಕಟಪಡು ವವರೇ, ಪಲ್ ನೂಲ್ பன்னூல் = ಅನೇಕ ಶಾಸ್ತ್ರಗಳನ್ನು, ಅಳನ್ದಾನೈ

அளந்தானை = ಅಳೆದುಕೊಳ್ಳುವಂಥವನು, ಕಾರ್ ಕಡಲ் கார்கடல்
= ಕಪ್ಪನೆಯ ಕಡಲಿಂದ, ಸೂಳ್ (சூழ்) = ಸುತ್ತುವರಿದಿರುವ, ಞಾಲತ್ತೈ
ஞாலத்தை = ಭೂಮಂಡಲವನ್ನು, ಎಲ್ಲಾಮ್ எல்லாம் = ಎಲ್ಲವನ್ನೂ,
ಅಳನ್ದಾನ್ ಅವನ್ அளந்தான் அவன் = ಅಳೆದವನ, ಶೇಅಡಿ சே
அடி = ಕೆಂದಾವರೆಯ ಪಾದಗಳಿಗೆ, ಮುನ್ನಾಳ್ முன்னால் = ಮುಂಚೆ
ನಿಂದಲೇ, ಪಣಿಙ್ಗ பணிங்க = ನಮಸ್ಕರಿಸುವುದಕ್ಕೆ. ~~ಮು~~ ಮು
ಯಲ್ಮಿನ್ முயல்மின் = ಪ್ರಯತ್ನಿಸಿ.

ಮರಣಹೊಂದಿದ ಬಳಿಕ ಕಠಿಣವಾದ ನರಕವನ್ನು ಸೇರಲಾರದೆ
ಬಹಳವಾಗಿ ಸಂಕಟ ಪಡುವವರೇ, ಅನೇಕ ಶಾಸ್ತ್ರಗಳಿಂದ ಅಳೆದು
ಕೊಳ್ಳುವಂಥವನು, ಕಪ್ಪನೆಯ ಕಡಲಿಂದ ಸುತ್ತುವರಿದಿರುವ ಭೂಮಂ
ಡಲವನ್ನೆಲ್ಲವನ್ನು ಅಳೆದವನ ಕೆಂದಾವರೆಯ ತಿರುವಡಿಗಳಿಗೆ ಮುಂಚೆ (91)
ನಿಂದಲೇ ನಮಸ್ಕರಿಸುವುದಕ್ಕೆ ಪ್ರಯತ್ನಿಸಿ.

ಈ ಪಾಶುರದಲ್ಲಿ ಆಳ್ವಾರರು ಜನಸಾಮಾನ್ಯರಿಗೆ ಮಾಡುವ ಸದುಪದೇಶ
ವಿದೆ.

ಆಳ್ವಾರರು ಹೇಳುತ್ತಾರೆ! ಜನರೇ, ಮರಣಾನಂತರ ನೀವು ನರಕ
ವಾಸವನ್ನು ಅನುಭವಿಸಲೇ ಬೇಕಾಗುವುದಲ್ಲ ಎಂದು ಸಂಕಟ ಪಡುತ್ತಾ ನಿಮ್ಮ
ಕಾಲವನ್ನು ಕಳೆಯಬೇಡಿರಿ. ಭಗವಂತನ ಕೆಂದಾವರೆಯ ತಿರುವಡಿಗಳನ್ನು ಒಮ್ಮನ
ದಿಂದ ಆಶ್ರಯಿಸಿ. ಅದರಿಂದ ನಿಮ್ಮ ಭಯವೂ ಸಂಕಟವೂ ದೂರವಾಗುವುದು.
ವೇದ ಶಾಸ್ತ್ರಗಳೆಲ್ಲವೂ ಅವನನ್ನು ಬಗೆಬಗೆಯಾಗಿ ವರ್ಣಿಸುತ್ತವೆ. ಈ ವಿಸ್ತಾರ
ವಾದ ಭೂಮಂಡಲವನ್ನೆಲ್ಲಾ ತನ್ನ ಒಂದೇ ಹೆಜ್ಜೆಯನ್ನು ಪ್ರಸರಿಸಿ ಅಳೆದು
ಕೊಂಡ ಅದ್ಭುತಕಾರ ಅವನು.

92. அடியால் முன் கஞ்சனைச் செற்று —, அமரரேத்தும்
படியான் கொடிமேல் புள் கொண்டான், — நெடியான்றன்
நாமமே யேத்துமின்க ளேத்தினால் தாம் வேண்டும்,
காமமே காட்டும் கடிது.

ಅಡಿಯಾಲ್ ಮುನ್ ಕಂಜನ್ನೈಚ್ಚೆಟ್ರು —, ಅಮರರೇತ್ತುಮ್
ಪಡಿಯಾನ್ ಕೊಡಿಮೇಲ್ ಪುಳ್ ಕೊಣ್ಡಾನ್, — ನೆಡಿಯಾನ್ ತನ್
ನಾಮಮೇ ಯೇತ್ತುಮಿನ್ ಗಳೇತ್ತಿನಾಲ್ ತಾಮ್ ವೇಣ್ಡುಮ್,
ಕಾಮಮೇ ಕಾಟ್ಟುಮ್ ಕಡಿದು.

ಅಡಿಯಾಲ್ அடியால் = ಕಾಲಿನಿಂದ, ಮುನ್ முன் = ಆ ಕಾಲದಲ್ಲಿ, ಕಂಜನೈ கஞ்சனை = ಕಂಸನನ್ನು, ಶೆಟ್ರು செற்று = ಒದೆದು ಕೊಂದವನೂ, ಅಮರರ್ ಏತ್ತುಮ್ அமரர் ஏத்தும் = ದೇವತೆಗಳು ಸ್ತುತಿಸುವ, ಪಡಿಯಾನ್ படியான் = ಮಹೋನ್ನತ ಸ್ವರೂಪನೂ, ಕೊಡಿಮೇಲ್ கொடி மேல் = ಧ್ವಜದಲ್ಲಿ, ಪುಳ್ புள் = ಗರುಡನನ್ನು, ಕೊಣ್ಡಾನ್ கொண்டான் = ಉಳ್ಳವನೂ, (ಆದ) ನೆಡಿಯಾನ್ ತನ್ நெடியான் தன் = ಸರ್ವೇಶ್ವರನ, ನಾಮಮೇ நாமமே = (ಪವಿತ್ರವಾದ) ನಾಮಗಳನ್ನೇ ಏತ್ತುಮಿನ್ಗಳ್ ஏத்துமின்கள் = ಸ್ತುತಿಸಿರಿ, ಏತ್ತಿನಾಲ್ ஏத்தினால் = ಹಾಗೆ ಸ್ತೋತ್ರ ಮಾಡುವುದರಿಂದ, ತಾಮ್ தாம் = ನೀವು (ತಾವುಗಳು), ವೇಣ್ಡುಮ್ வேண்டும் = ಅಪೇಕ್ಷಿಸುವ, ಕಾಮಮೇ காமமே = ಇಷ್ಟಾರ್ಥಗಳೆಲ್ಲ (ಪುರುಷಾರ್ಥಗಳೆಲ್ಲ), ಕಡಿದು கடிது = ವಿಪುಲವಾಗಿ, ಕಾಟ್ಟುಮ್ காட்டும் = ನೀಡುವವನು.

ಅಂದಿನ ಕಾಲದಲ್ಲಿ ಕಂಸನನ್ನು ಕಾಲಿನಿಂದ ಒದೆದು ಕೊಂದವನೂ, ದೇವತೆಗಳು ಸ್ತುತಿಸುವ ಮಹೋನ್ನತ ಸ್ವರೂಪನೂ, ಧ್ವಜದಲ್ಲಿ ಗರುಡನನ್ನು (ಲಾಂಛನವಾಗಿ) ಉಳ್ಳವನೂ ಆದ ಸರ್ವೇಶ್ವರನ ಪವಿತ್ರವಾದ ನಾಮಗಳನ್ನೇ ಸ್ತುತಿಸಿರಿ. ನೀವು ಹಾಗೆ ಸ್ತುತಿಸುವುದರಿಂದ ನೀವು ಅಪೇಕ್ಷಿಸುವ ಇಷ್ಟಾರ್ಥಗಳೆಲ್ಲವನ್ನೂ (ಸ್ವಾಮಿಯು) ವಿಪುಲ (92)
ವಾಗಿ ನೀಡುವುದು.

ಹಿಂದಿನ ಪಾಶುರದ ವಿಷಯವನ್ನು ಈ ಪಾಶುರ ಮುಂದುವರಿಸುತ್ತದೆ. ಭಗವಂತನ ತಿರುವಡಿಗಳಿಗೆ ಎರಗುವ ಮಾನವನಿಗೆ ಸಕಲಬಾಧೆ ತಪ್ಪುವುದು ಎಂದು ಹಿಂದಿನ ಪಾಶುರದಲ್ಲಿ ಹೇಳಲಾಯಿತು. ಭಗವಂತನ ನಾಮ ಸಂಕೀರ್ತನ ಮಾಡುವುದರಿಂದ ಮಾನವನು ಅಪೇಕ್ಷಿಸುವ ಎಲ್ಲ ಇಷ್ಟಾರ್ಥಗಳೂ ಕೈಗೂಡುವುವು ಎಂದು ಈ ಪಾಶುರ ಹೇಳುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದಾಗ, ಅವನ ಸೋದರ ಮಾವನಾದ ಕಂಸಾಸುರನು ನಡೆಸಿದ ಅನೇಕಾನೇಕ ಅನ್ಯಾಯಗಳಿಗಾಗಿ ಸ್ವಾಮಿಯು ಮಧುರೆಗೆ ಬಂದು, ರತ್ನ ಸಿಂಹಾಸನದ ಮೇಲಿದ್ದ ದುಷ್ಟ ಕಂಸನ ಜುಟ್ಟು ಹಿಡಿದು ಕೆಳಕ್ಕೆ ದರದರನೆ ಎಳೆದು, ಅವನು ಧರಿಸಿದ್ದ ಕಿರೀಟವನ್ನು ಎಡಗಾಲಿನಿಂದ ಒದೆದು, ಅವನನ್ನು ಕೊಂದು ಹಾಕಿದನು. ಇದನ್ನೆಲ್ಲಾ ಕಂಡು ಆನಂದಿಸಿದ ದೇವತೆಗಳು ಭಗವಂತನನ್ನು ಮುಕ್ತ ಕಂಠದಿಂದ ಮನಸಾರ ಹೊಗಳಿದರು. ಸ್ವಾಮಿಯು ಧ್ವಜದ ಲಾಂಛನವಾದರೋ ಗರುಡ. ಆದ್ದರಿಂದ ಸ್ವಾಮಿಯು "ಗರುಡ-ಧ್ವಜ" ಎನಿಸಿಕೊಂಡ. ಅವನ ದಿವ್ಯ ನಾಮಗಳನ್ನು ಎಲ್ಲರೂ

ಕೀರ್ತಿಸಿರಿ. ನಿಮಗೆ ಸ್ವಾಮಿಯು ನಿಮ್ಮ ಎಲ್ಲ ಪುರುಷಾರ್ಥಗಳನ್ನು
ನಿಶ್ಚಯವಾಗಿ ದಯಪಾಲಿಸುವನು.

93. கடிது கொடுநரக பிற்காலும் செய்கை,
கொடிதென்றது கூடா முன்னம், — வடிசங்கம்
கொண்டானை கூந்தல்வாய் கீண்டானை,
கொங்கைநஞ்சு உண்டானை யேத்துமினோ உற்று.

ಕಡಿದು ಕೊಡು ನರಕ ಪಿಱ್ಕಾಲುಮ್ ಶೆಯ್ಗೈ,
ಕೊಡಿದೆನ್ಱದು ಕೂಡಾ ಮುನ್ನಮ್, — ವಡಿಶಙ್ಗಮ್
ಕೊಣ್ಡಾನೈ ಕೂನ್ದಲ್ ವಾಯ್ ಕೀಣ್ಡಾನೈ, ಕೊಙ್ಗೈನಂ
ಜುಣ್ಡಾನೈ ಯೇತ್ತುಮಿನೋ ಉಱ್ಱು.

ಕಡಿದು கடிது = ಭಯಂಕರವಾಗಿರುವುದು, ಕೊಡು ನರಕಮ್ கொடு நரகம் = ಕ್ರೂರವಾದ ನರಕವು, ಪಿಱ್ಕಾಲುಮ್ பிற்காலும் = ಅದಲ್ಲದೆ, ಶೆಯ್ಗೈ செய்கை = ಅಲ್ಲಿನ ಯಾತನೆಗಳು, ಕೊಡಿದು கொடிது = ಭಯಂಕರವೇ, ಎನ್ಱು என்று = ಎಂದು ತಿಳಿದುಕೊಂಡು, ಅದು ಕೂಡಾ ಮುನ್ನಮ್ அது கூடா முன்னம் = ಅದು ಸಂಭವಿಸುವುದಕ್ಕೆ ಮುಂಚೆಯೇ, ವಡಿಶಙ್ಗಮ್ வடி சங்கம் = ತೀಕ್ಷ್ಣ ಧ್ವನಿಯ ಶಂಖವನ್ನು, ಕೊಣ್ಡಾನೈ கொண்டானை = ಧರಿಸಿದವನೂ, ಕೂನ್ದಲ್ கூந்தல் = ಕೇಶಿಯೆಂಬ ರಾಕ್ಷಸನ, ವಾಯ್ வாய் = ಬಾಯನ್ನು, ಕೀಣ್ಡಾನೈ கீண்டானை = ಸೀಳಿಹಾಕಿದವನೂ, ಕೊಙ್ಗೈ கொங்கை = ಮೊಲೆಯ, ನಂಜು ಉಣ್ಡಾನೈ நஞ்சு உண்டானை = ವಿಷವನ್ನು ಉಂಡವನೂ (ಆದ ಸರ್ವೇಶ್ವರನನ್ನು), ಉಱ್ಱು உற்று = ಆಶ್ರಯಿಸಿ, (ಬಹಳವಾಗಿ), ಏತ್ತುಮಿನ್ ஏத்துமின் = ಸ್ತುತಿಸಿರಿ.

ಭಯಂಕರವಾಗಿರುವುದು ಕ್ರೂರ ನರಕವೆಂಬುದು. ಅದಲ್ಲದೆ, ಅಲ್ಲಿನ ಯಾತನೆಗಳು ಭಯಂಕರವೇ, ಎಂದು ತಿಳಿದುಕೊಂಡು, ಅದು ಸಂಭವಿಸುವುದಕ್ಕೆ ಮುಂಚೆಯೇ ತೀಕ್ಷ್ಣವಾದ ಧ್ವನಿಯ ಶಂಖವನ್ನು ಧರಿಸಿದವನೂ, ಕೇಶಿಯೆಂಬ ರಾಕ್ಷಸನ ಬಾಯನ್ನು ಸೀಳಿಹಾಕಿದವನೂ, ಮೊಲೆಯ ವಿಷವನ್ನು ಉಂಡವನೂ ಆದ ಸರ್ವೇಶ್ವರನನ್ನು ಆಶ್ರಯಿಸಿ (ಬಹಳವಾಗಿ) ಸ್ತುತಿಸಿರಿ. (93)

Garani Srinivasan

ಈ ಪಾಶುರವೂ ಹಿಂದಿನ ಪಾಶುರಗಳಂತೆಯೇ. ಸರ್ವೇಶ್ವರನಾದ ಭಗವಂತನನ್ನು ದೃಢವಾಗಿ ಆಶ್ರಯಿಸ ಬೇಕೆಂದೂ, ಅವನ ತಿರುನಾಮಗಳಿಂದ ಅವನನ್ನು ಸ್ತುತಿಸ ಬೇಕೆಂದೂ, ಅದರಿಂದ ನರಕದ ಭಯವನ್ನು ಅಲ್ಲಿ ಅನುಭವಿಸ ಬೇಕಾದ ನರಕ ಯಾತನೆಯ ಭಯವನ್ನು ನೀಗ ಬೇಕೆಂದೂ ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಜನರೇ, ನರಕವಾಸವು ಭಯಂಕರವಾದದ್ದು. ಅಲ್ಲಿ ಅನುಭವಿಸ ಬೇಕಾದ ಯಾತನೆಗಳೂ ಅತ್ಯಂತ ಭಯಂಕರವಾದವು. ನೀವು ನರಕವನ್ನು ಪ್ರವೇಶಿಸಿ, ಯಾತನೆಯನ್ನು ಅನುಭವಿಸಿ ಇದರ ದಶ್ಯತೆಯನ್ನು ಮನಗಾಣುವುದಕ್ಕೆ ಮುಂಚಿತವಾಗಿಯೇ ಭಗವಂತನನ್ನು ದೃಢವಾಗಿ ಆಶ್ರಯಿಸಿ. ಅವನನ್ನು ಎಡೆಬಿಡದಂತೆ ಸ್ತುತಿಸಿ, ನರಕವಾಸವನ್ನು ತಪ್ಪಿಸಿಕೊಳ್ಳಿ. ಭಗವಂತನ ಕೈಯಲ್ಲಿ ಶತ್ರುಗಳ ಹೃದಯವನ್ನು ಭೇದಿಸುವಂತೆ ಧ್ವನಿ ಮಾಡುವ ಶಂಖವಿದೆ. ಅವನು ಶ್ರೀಕೃಷ್ಣನಾಗಿ ಅವತರಿಸಿದ್ದಾಗ, ಕಂಸನಿಂದ ಪ್ರೇರಿತನಾದ ಕೇಶಿ ಎಂಬ ರಾಕ್ಷಸನು ಕುದುರೆಯ ರೂಪದಲ್ಲಿ ~~ಬಂದು~~. ಅವನನ್ನು ಕೊಲ್ಲಲು ಬಂದಾಗ, ಅವನು ~~ಆ~~ ಕುದುರೆಯ ದವಡೆಗಳನ್ನು ಒಡೆದು ಅಗಲಿಸಿ, ಸೀಳಿ, ಕೊಂದು ಹಾಕಿದನು. ಮತ್ತೆ, ಅವನನ್ನು ಕೊಲ್ಲಲು ಬಂದ ಪೂತನಿಯೆಂಬ ರಾಕ್ಷಸಿಯು ವಿಷ ತುಂಬಿದ ಮೊಲೆಹಾಲನ್ನುಂಡು, ಆ ನೆಪದಲ್ಲಿ ಅವಳ ಪ್ರಾಣವನ್ನೇ ಹೀರಿ ಕೊಂದು ಹಾಕಿದನು. ದುಷ್ಟರನ್ನು ನಿಗ್ರಹಿಸುವ ಬಗೆ ಅವನಿಗೆ ಗೊತ್ತು. ಆಶ್ರಿತರನ್ನು ಅವನು ಬಿಡದೆ ರಕ್ಷಿಸುವನು. ಆದ್ದರಿಂದ, ಅವನನ್ನಾಶ್ರಯಿಸಿ ಉದ್ಧಾರಗೊಳ್ಳಿ.

94. உற்று வணங்கித் தொழுமின், உலகேழும்
முற்றும் விழுங்கும் முகில்வண்ணன், – பற்றிப்
பொருந்தாதான் மார்விடந்து பூம்பாடகத்துள்
இருந்தானை, ஏத்துமென் நெஞ்சு.

ಉಟ್ರು ವಣಾಙ್ಗಿ ತ್ತೊಳುಮಿನ್, ಉಲಹೇಳುಮ್
ಮುಟ್ರುಮ್ ವಿಳುಙ್ಗುಮ್ ಮುಹಿಲ್ ವಣ್ಣನ್, – ಪಟ್ರಿ
ಪ್ಪೊರುನ್ದಾದಾನ್ ಮಾರ್ ವಿಡನ್ದು ಪೂಮ್ ಪಾಡ ಹತ್ತುಳ್
ಇರುನ್ದಾನೈ, ಏತ್ತು ಮೆನ್ ನೆಂಜು.

ಉಟ್ರು உற்று = (ಭಗವಂತನನ್ನು) ಆಶ್ರಯಿಸಿ, ವಣಾಙ್ಗಿ வணங்கி = ನಮಸ್ಕರಿಸಿ, ತೊಳುಮಿನ್ தொழுமின் = ಪೂಜಿಸಿ.

Garani Srinivasan

ಉಲಕು ಏಳುಮ್ உலகு ஏழும் = ಎಲ್ಲಾ ಲೋಕಗಳನ್ನು, ಮು
ತ್ತುವಮ್ முற்றும் = ಪೂರ್ತಿಯಾಗಿ, ವಿಳುಙ್ಗುವಮ್ விழுங்கும்
= ನುಂಗಿಬಿಡುವ, ಮುಕಿಲ್ ವಣ್ಣನ್ முகில் வண்ணன் =
ಕಾರ್ಮುಗಿಲಂತೆ ದೇಹಕಾಂತಿಯುಳ್ಳವನನ್ನು, ಪತ್ತು பற்றி =
(ಬಿಡದೆ) ಆಶ್ರಯಿಸಿ, ಪೊರುನ್ದಾ பொருந்தா = ಹೊಂದಿಕೊಂಡಿರದ,
ಶಾನ್ தான் = ಅವನ (ಹಿರಣ್ಯಕಶಿಪುವಿನ), ಮಾರ್ಬು மார்வ
= ಎದೆಯನ್ನು, ಇಡನ್ದು இடந்து = ಸೀಳಿಹಾಕಿದವನೂ, ಪೂ ಪು =
ಸೊಬಗಿನ, ಪಾಡಕತ್ತುಳ್ பாடகத்துள் = ಶಿರುಪ್ಪಾಡಹ ಎಂಬ
ಪವಿತ್ರ ಕ್ಷೇತ್ರದಲ್ಲಿ, ಇರುನ್ದಾನ್ನೆ இருந்தானை = ನೆಲಸಿರುವವ
ನನ್ನು, ಏತ್ತುಮ್ ஏத்தும் = ಸ್ತುತಿಸುತ್ತದೆ, ಎನ್ ನೆಂಜು என்
நெஞ்சு = ನನ್ನ ಮನಸ್ಸು.

ಭಗವಂತನನ್ನು ಆಶ್ರಯಿಸಿ, ನಮಸ್ಕರಿಸಿ, ಪೂಜಿಸಿ. ಎಲ್ಲಾ ಲೋಕಗಳನ್ನೂ ಪೂರ್ತಿಯಾಗಿ ನುಂಗಿಬಿಡುವ ಕಾರ್ಮುಗಿಲಂತೆ ದೇಹಕಾಂತಿಯುಳ್ಳವನನ್ನು (ಬಿಡದೆ) ಆಶ್ರಯಿಸಿ ಹೊಂದಿಕೊಳ್ಳದ ಅವನ (ಹಿರಣ್ಯಕಶಿಪುವಿನ) ಎದೆಯ ಸೀಳಿಹಾಕಿದವನೂ, ಸೊಬಗಿನ ಶಿರುಪ್ಪಾಡಹ ಎಂಬ ಪವಿತ್ರ ಕ್ಷೇತ್ರದಲ್ಲಿ ನೆಲಸಿರುವವನನ್ನು (94)
ನನ್ನ ಮನಸ್ಸು ಎಡೆಬಿಡದೆ ಸ್ತುತಿಸುತ್ತದೆ.

ಈ ಪಾಶುರದಲ್ಲಿ ಜನಸಾಮಾನ್ಯರಿಗೆ ಆಳ್ವಾರರು ನೀಡುವ ಸದುಪದೇಶದಲ್ಲಿ ತಮ್ಮನ್ನು ಒಂದು ನಿದರ್ಶನವಾಗಿ ತೋರಿಸಿಕೊಳ್ಳುವಂತೆ ಅವರಿಗೆ ಹೇಳುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಜನರೇ, ಭಗವಂತನು ಪ್ರಳಯಕಾಲ ಬಂದಾಗ ಎಲ್ಲಾ ಲೋಕಗಳನ್ನೂ ಒಟ್ಟಾಗಿ ನುಂಗಿಬಿಡುತ್ತಾನೆ. ಅವನ ದೇಹಕಾಂತಿ ಕಾರ್ಮುಗಿಲಿನಂತೆ ಆಕರ್ಷಕವಾದದ್ದು. ಪ್ರಹ್ಲಾದನು ಭಗವಂತನನ್ನು ಆಶ್ರಯಿಸುವುದನ್ನು ವಿರೋಧಿಸಿದ ಅವನ ತಂದೆಯಾದ, ಮಹಾಪರಾಕ್ರಮಿಯಾದ ಹಿರಣ್ಯಕಶಿಪುವಿನ ಎದೆಯನ್ನು ತನ್ನ ಕೈ ಉಗುರುಗಳಿಂದಲೇ ಬಗೆದು ಸೀಳಿಹಾಕಿದನು. ಈಗ ಶಿರುಪ್ಪಾಡಹವೆಂಬ ಸುಪ್ರಸಿದ್ಧವಾದ ಪವಿತ್ರ ಕ್ಷೇತ್ರದಲ್ಲಿ ಅರ್ಚಾಸ್ವಾಮಿಯಾಗಿ ನೆಲೆಗೊಂಡಿದ್ದಾನೆ. ಅಂಥ ಪರಮ ಸಮರ್ಥನೂ ಅದ್ಭುತಶಾಲಿಯೂ ಆದ ಸ್ವಾಮಿಯನ್ನು ನನ್ನ ಮನಸ್ಸು ಎಡೆಬಿಡದಂತೆ ಸ್ತುತಿಸುತ್ತದೆ. ಜನರೇ, ನೀವೂ ಸಹ ನನ್ನ ಹಾಗೆಯೇ ಅವನನ್ನು ಬಿಡದೆ ಆಶ್ರಯಿಸಿ. ಅವನ ತಿರುವಡಿಗಳಿಗೆರಗಿ, ಪೂಜಿಸಿ, ಉದ್ಧಾರಗೊಳ್ಳಿರಿ.

"ತಿರುಪ್ಪಾಡಗ" ಕ್ಷೇತ್ರವನ್ನು ಕುರಿತು ಬರೆದಿರುವರು:
"ಪಾಡಗ" ಎಂದರೆ "ಬಂಧುವೇಯಸ್ಥಳ" ಎಂದು ಅರ್ಥ ಮಾಡಬಹುದಾಗಿ ಕಾಂಚೀಪುರ ಕ್ಷೇತ್ರ ಮಹಾಭಾರತದ ಹಿನ್ನೆಲೆಯುಳ್ಳದು. ಮಹಾಭಾರತ ಯುದ್ಧಕ್ಕೆ ಮುಂಚಿತವಾಗಿ, ಶ್ರೀಕೃಷ್ಣನು ಪಾಂಡವರ ಪರವಾಗಿ ದುರ್ಯೋಧನನಲ್ಲಿ ದೌತ್ಯ ನಡೆಸಲು ಹಸ್ತಿನಾಪುರಕ್ಕೆ ಬಂದನು. ಆಗ ದುರ್ಯೋಧನನು ಹೊರಕ್ಕೆ ಕಾಣುವಂತೆ ಎಲ್ಲ ಬಗೆಯ ಸಲಕರಣೆಗಳನ್ನು ಶ್ರೀಕೃಷ್ಣನನ್ನು ಸ್ವಾಗತಿಸುವುದಕ್ಕೆ ಸಿದ್ಧಪಡಿಸಿದನು. ಅಂತರಂಗವಾಗಿ, ಅವನನ್ನು ಕೊಲ್ಲಿಸುವುದಕ್ಕೆಂದು ಎಲ್ಲ ಬಗೆಯ ಹವಣಿಕೆಗಳೂ ಅಲ್ಲಿ ಸಿದ್ಧವಾದವು. ಸಭಾ ಭವನದಲ್ಲಿ ದೊಡ್ಡದಾದ ಒಂದು ನೆಲಮಾಳಿಗೆಯನ್ನು ತೋಡಿಸಿ, ಅಲ್ಲಿ ಸುಶಿತ ಜಟ್ಟಿಗಳನೇಕರನ್ನು ಸಿದ್ಧವಾಗಿ ನಿಲ್ಲಿಸಿದನು. ಆ ನೆಲಮಾಳಿಗೆಯು ಯಾರಿಗೂ ತಿಳಿಯಬಾರದೆಂದು ಅದನ್ನು ಬಿದಿರಿನ ತಡಿಗಳಿಂದ ಮುಚ್ಚಿಸಿ, ಅದರ ಮೇಲೆ ಬೆಲೆಬಾಳುವ ರತ್ನಕಂಬಳಿಯನ್ನು ಹಾಸಿ, ಅದರ ಮೇಲೆ ರತ್ನಖಚಿತವಾದ ಆಸನವನ್ನು ಶ್ರೀಕೃಷ್ಣನಿಗಾಗಿ ಸಿದ್ಧಪಡಿಸಿದ್ದನು. ಶ್ರೀಕೃಷ್ಣನು ಬಂದ. ಆಸನವನ್ನಲಂಕರಿಸ ಹೋದಾಗ [struck] ನೆಲ ಕುಸಿದು ಕೆಳಕ್ಕೆ ಇಳಿಯಿತು. ಕೂಡಲೇ ಕೃಷ್ಣನು ಭಯಂಕರ ವಿಶ್ವರೂಪವನ್ನು ತಳೆದು, ತನ್ನ ನಾನಾ ಕೈಗಳಲ್ಲಿ ಆಯುಧಗಳಿಂದ ಅಲ್ಲಿ ಅಡಗಿಕೊಂಡಿದ್ದ ಎಲ್ಲಾ ಜಟ್ಟಿಗಳನ್ನೂ ಕೊಂದು ಹಾಕಿದನು. "ಪಾಡಗ" ಎಂಬುದು ಶ್ರೀಕೃಷ್ಣನು ವಿಶ್ವರೂಪ ಧರಿಸಿದ ಬಂಧುವೇಯಸ್ಥಳ. ಆದ್ದರಿಂದಲೇ ಅದೊಂದು ಪವಿತ್ರ ಕ್ಷೇತ್ರ.

95. ஏன்னெஞ்ச மேயானென் சென்னியான், தானவனை
வன்னெஞ்சம் கீண்ட மணிவண்ணான், — முன்னம்சே
யூழியா னூழி பெயர்த்தான், உலகேத்தும்
ஆழியா னத்தியூரான்

ಎನ್ನೆಂಜ ಮೇಯಾನೆನ್ ಶೆನ್ನಿಯಾನ್, ತಾನವನೈ
ವನ್ನೆಂಜಮ್ ಕೀಣ್ಡ ಮಣಿವಣ್ಣಾನ್, — ಮುನ್ನಮ್ ಶೇ
ಯೂಳಿಯಾ ನೂಳಿ ಪೆಯರ್ತ್ತಾನ್, ಉಲಹೇತ್ತುಮ್
ಆಳಿಯಾ ನತ್ತಿಯೂರಾನ್.

ಎನ್ ನೆಂಜಮ್ என் நெஞ்சம் = ನನ್ನ ಮನಸ್ಸಿನಲ್ಲಿ, ಮೇಯಾನ್

ಮೇಯಾನ್ = ವಾಸಿಸುವವನು, ಎನ್ ಶೆನ್ನಿಯಾನ್ ತಾಣ್ ಏಣ್ಣರಿಯಾನ್ = ನನ್ನ ತಲೆಯಲ್ಲಿರುವವನು, ತಾನವನ್ನೈ ತ್ತಾಣಯಿನಾ = ದಾನವನ (ಹಿರಣ್ಯ ಕಶಿಪುವಿನ), ವಲ್ ನೆಂಜಮ್ ಇರು ಪಿಳಂದ್ದಕಮ್ = ಬಲಿಷ್ಠವಾದ ಎದೆಯನ್ನ, ಕೀಣ್ಡ ಕೊಣ್ಡ = ಸೀಳಿದ, ಮಣಿವಣ್ಣನ್ ಮಣ್ಣಿಬಣ್ಣಾಣ್ = ಇಂದ್ರನೀಲ ಮಣಿಯ ದಾಗಿ ದೇಹಕಾಂತಿಯುಳ್ಳವನು, ಮುನ್ನಮ್ ಕೋಯ್ ಉಳ್ಳಿಯಾಣ್ =, ಕೋಂಬ್ ಊಳಿಯಾನ್ ಕುಣ್ಣಾಮ್ ಶೇಯ್ ಉಳ್ಳಿಯಾಣ್ ಇರುವವನು, ಊಳಿ ಯುಗಯುಗಗಳಿಂದಲೂ (ಅದಕ್ಕೆ ಮುಂಚಿನಿಂದಲೂ) ಇರುವವನು, ಊಳಿ ಯುಗಯುಗಗಳಿಂದಲೂ ಜಗತ್ತು ಕಾಲವೇ ಮುಂತಾದ ಎಲ್ಲವನ್ನು ಪೆಯರ್ತ್ತಾನ್ ಉಳ್ಳಿ ಪೆಯರ್ಕ್ಕುತ್ತಾನ್ = ಜಗತ್ತೇ ನಿತ್ತಿಕಿಸು ಚೆಳ್ಳುವವನು, ಉಲಕು ಏತ್ತುಮ್ ಉಲಕ್ಕುತ್ತುಮ್ = ಜಗತ್ತೇ ನಿತ್ತಿಕಿಸು ವನು, ಉಲಕು ಏತ್ತುಮ್ ಉಲಕ್ಕುತ್ತುಮ್ = ಚಕ್ರಾಯುಧವುಳ್ಳವನು, ಅತ್ತಿಯೂ ವ, ಆಳಿಯಾನ್ ಆಳ್ಳಿಯಾಣ್ = ಚಕ್ರಾಯುಧವುಳ್ಳವನು, ಅತ್ತಿಯೂ ಕಾನ್ ಅಕ್ಕಿಯೂರಾನ್ = ಹಸ್ತಿಗಿರಿಯಲ್ಲಿ ನೆಲಸಿರುವವನು.

ನನ್ನ ಮನಸ್ಸಿನಲ್ಲಿ ವಾಸಿಸುವವನು, ನನ್ನ ಶಿರಸ್ಸು (ತಲೆ) ಯಲ್ಲಿ ಇರುವವನು, ದಾನವನ ಬಲಿಷ್ಠವಾದ ಎದೆಯನ್ನು ಸೀಳಿದವನು, ಇಂದ್ರನೀಲ ಮಣಿಯ ದಾಗಿ ದೇಹಕಾಂತಿಯುಳ್ಳವನು, ಯುಗಯುಗಗಳಿಗೆ ಮುಂಚಿನಿಂದಲೂ ಇರುವವನು, ಜಗತ್ತು ಕಾಲ ಮುಂತಾದವೆಲ್ಲವನ್ನು ಚೆಳ್ಳಿಸುವವನು, ಜಗತ್ತೆ ನಿತ್ತಿಕಿಸುವ ಚಕ್ರಾಯುಧವನ್ನುಳ್ಳವನು, ಹಸ್ತಿಗಿರಿಯಲ್ಲಿ ನೆಲಸಿರುವವನು ನನ್ನ ಸ್ವಾಮಿಯಲ್ಲೆ. (95)

ಎಲ್ಲರ ಆಶ್ರಯನೂ ಶಕ್ತದಾನ ದಕಲದಿದ್ದಾಗ ದಂಡಿಸ್ಸನೂ, ವಿರಮು ಸಮರ್ಥನೂ, ಆಶ್ರಿತವಿರೋಧಿಗಳ ಮೃತ್ಯುವೂ ಆದ ಜ್ಞಾನವಂತನನ್ನು ಎಲ್ಲರೂ ಆಶ್ರಯಿಸಿ ಉದ್ಧಾರಗೊಳ್ಳಬೇಕೆಂದು ಆಳ್ವಾರರು ಇಲ್ಲಿ ಹೇಳುತ್ತಾರೆ.

ಆಳ್ವಾರರು ಹೇಳುತ್ತಾರೆ: ಜ್ಞಾನವಂತನು ಎಲ್ಲ ವಸ್ತುಗಳ ಅಂತರ್ಯಾಮಿ. ಎಲ್ಲರ ಜ್ಞಾನಕ್ಕೂ ಆಶ್ರಯನು. ಆಶ್ರಿತವಿರೋಧಿಯಾದ ದಾನವನ (ಹಿರಣ್ಯಕಶಿಪುವನ್ನು) ಎದೆಯನ್ನು ತನ್ನ ಕೈ ಉಗುರುಗಳಿಂದಲೇ ಬಗೆದು ಸೀಳಿಹಾಕಿದನು. ಇಂದ್ರನೀಲ ಮಣಿಯಂತೆ ದಿವ್ಯಕರ್ಷಕವಾದ ದೇಹಕಾಂತಿಯುಳ್ಳವನು. ಅವನು ಎಲ್ಲ ಕಾಲದಲ್ಲೂ ಇರುವವನು. ಜಗತ್ತನ್ನು ಅದರಲ್ಲಿರುವ ಎಲ್ಲ ವಸ್ತುಗಳನ್ನು ರಕ್ಷಿಸತಕ್ಕವನು. ದಿವ್ಯವಾದ ಚಕ್ರಾಯುಧವನ್ನು ಹಿಡಿದವನು. ಹಸ್ತಿಗಿರಿ ಮುಂತಾದ ಪವಿತ್ರ ಕ್ಷೇತ್ರಗಳಲ್ಲಿ ಅರ್ಚಾವತಾರಿಯಾಗಿ ನೆಲಸಿರುವವನು. ಅಂಥವನನ್ನು ಆಶ್ರಯಿಸಿ ಎಲ್ಲರೂ ಉದ್ಧಾರಗೊಳ್ಳಬೇಕು.

"ದಾನವನ್ನೈ ವನ್ನೆಂಜಮ್ ಕೀಣ್ಡಾನ್" — ಭಕ್ತನಾದ ಪ್ರಹ್ಲಾದನಿಗೆ ವಿರೋಧಿಯಾದ ಹಿರಣ್ಯಕಶಿಪುವಿನ ಎದೆಯನ್ನು ಸೀಳಿದ ನರಸಿಂಹಸ್ವಾಮಿ. ಹಸ್ತಿಗಿರಿಯಲ್ಲಿ ಅರ್ಚಾವತಾರಿಯಾದ ನರಸಿಂಹಸ್ವಾಮಿಯೆ.

Galani Srinivasan

(155)

96. அத்தியூரான் புள்ளையூர்வான், அணிமணியின்
துத்திசேர் நாகத்தின்மேல் துயில்வான், — முத்தீ
மறையாவான் மாகடல் நஞ்சுண்டான் தனக்கும்
இறையாவா னெங்கள் பிரான்.

ಅತ್ತಿಯೂರಾನ್ ಪುಳ್ಳೈಯೂರ್ವಾನ್, ಅಣಿ ಮಣಿಯಿನ್
ತುತ್ತಿ ಶೇರ್ ನಾಗತ್ತಿನ್ ಮೇಲ್ ತುಯಿಲ್ವಾನ್, — ಮುತ್ತೀ
ಮಱೈಯಾವಾನ್ ಮಾಕಡಲ್ ನಂಜುಣ್ಡಾನ್ ತನಕ್ಕುಮ್,
ಇಱೈಯಾವಾ ನೆಙ್ಗಳ್ ಪಿರಾನ್.

ಅತ್ತಿಯೂರಾನ್ அத்தியூரான் = ಹಸ್ತಿಗಿರಿಯಲ್ಲಿ ನೆಲಸಿರುವ
ವನು, ಪುಳ್ಳೈ ಊರ್ವಾನ್ புள்ளை ஊர்வான் = ಗರುಡನನ್ನು
ವಾಹನವಾಗಿರುವವನು, ಅಣಿ அணி = ಶೋಭನ, ಮಣಿಯಿನ್ மணி
யின் = ರತ್ನಗಳಿಂದಲೂ, ತುತ್ತಿ துத்தி = ಬಿಳಿಯ ಗೆರೆಗಳಿಂದಲೂ,
ಶೇರ್ சேர் = ಕೂಡಿರುವ, ನಾಗತ್ತಿನ್ நாகத்தின் ಮೇಲ್ மேல் = ನಾಗನ
ಮೇಲೆ, ತುಯಿಲ್ವಾನ್ துயில்வான் = ಪವಡಿಸುವವನು,
ಮುತ್ತೀ ಆವಾನ್ முத்தீ ஆவான் = ಮೂರು ಅಗ್ನಿಗಳು ~~ಆದವನು~~ ಆದವನು,
ಮಾಕಡಲ್ மா கடல் = ಮಹಾಕಡಲ (ಕ್ಷೀರಸಾಗರದ), ನಂಜು ಉ
ಣ್ಡಾನ್ ತನಕ್ಕು நஞ்சு உண்டான் தனக்கு = ವಿಷವನ್ನು ಉಂಡ
ವನಿಗೆ, ಇಱೈ இறை = ರಕ್ಷಕನು, ಆವಾನ್ ஆவான் = ಆದವನು,
ಎಙ್ಗಳ್ ಪಿರಾನ್ எங்கள் பிரான் = ನಮ್ಮ ಸ್ವಾಮಿ.

ಹಸ್ತಿಗಿರಿಯಲ್ಲಿ ನೆಲಸಿರುವವನು, ಗರುಡನನ್ನು ವಾಹನವಾಗುಳ್ಳ
ವನು, ಶೋಭನ ರತ್ನಗಳಿಂದಲೂ ಬಿಳಿಗೆರೆಗಳಿಂದಲೂ ಕೂಡಿರುವ
ಆದಿಶೇಷನ ಮೇಲೆ ಪವಡಿಸುವವನು, ಮೂರು ಅಗ್ನಿಗಳು ಆದವನು,
ಕ್ಷೀರಸಾಗರದ ವಿಷವನ್ನುಂಡವನ ರಕ್ಷಕನೂ ಆದವನೇ ನಮ್ಮ ಸ್ವಾಮಿ. (96)

ಈ ಪಾಶುರವು ಭಗವಂತನ ಹಿರಿಮೆಯ ಧ್ಯಾನಕ್ಕೆಂದೇ ಮೀಸಲು.

ಭಗವಂತನು ಹಾಸಿಗೆಯಲ್ಲಿ ತನ್ನ ಹಾಸಿಗೆಯನ್ನಾಗಿ ಮಾಡಿ
ಕೊಂಡಿರುವ ಅನಂತನ ಭವ್ಯ ವರ್ಣನೆ ಇಲ್ಲಿದೆ. ಶೋಭನ ರತ್ನ
ಗಳು ಅದರ ಹೆಡೆಯ ಮೇಲೆ ಹೊಳೆಯುತ್ತವೆ. ಕತ್ತಿನಲ್ಲಿ ಬಿಳಿಯ
ಗೆರೆಗಳೂ ಬಂಗಾರ್ಗಳೂ ಶೋಭಿಸುತ್ತವೆ.

ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿ — ಎಂಬವು
ಮೂರು ಅಗ್ನಿಗಳು.

Garani Srinivasan

ಅಮೃತವನ್ನು ಪಡೆದುಕೊಳ್ಳುವುದಕ್ಕಾಗಿ, ದೇವಾಸುರರಿಂದ ಕ್ಷೀರಸಾಗರವನ್ನು ಕಡೆಯಿಸಿದಾಗ, ಭಯಂಕರವಾದ ಹಾಲಾಹಲ ವಿಷವು ಮೊದಲು ಉತ್ಪತ್ತಿಯಾಯಿತು. ಅದು ಎಲ್ಲೆಲ್ಲೂ ಹರಡಿ, ಎಲ್ಲವನ್ನೂ ನಾಶಮಾಡುವುದಾಗಿತ್ತು. ಆಗ ರುದ್ರನು ಅದನ್ನು ಒಂದೇ ಆಪೋಶನವಾಗಿ ನುಂಗಿಬಿಟ್ಟನು. ಅದು ಗಂಟಲಿನಿಂದ ಕೆಳಕ್ಕೆ ಇಳಿಯದಂತೆಯೂ, ರುದ್ರನಿಗೆ ಅದರಿಂದ ಯಾವ ಕೆಡಕೂ ಆಗದಂತೆಯೂ ಅವನನ್ನು ರಕ್ಷಿಸಿದವನು ಭಗವಂತನಾದ ಶ್ರೀಮನ್ನಾರಾಯಣನು.

ಆಳ್ವಾರರು ಹೇಳುತ್ತಾರೆ: ಹಸ್ತಿಗಿರಿಯಲ್ಲಿ ನೆಲೆಸಿರುವ ಭಗವಂತನೇ ಗರುಡವಾಹನನು. ಅವನೇ ಹಾಲ್ಗಡಲಲ್ಲಿ ಶೇಷನ ಮೇಲೆ ಪವಡಿಸಿರುವವನು. ಅವನೇ ಶ್ರೀಕೃಷ್ಣಸ್ವಾಮಿಯಾದವನು. ವಿಷವನ್ನುಂಡ ರುದ್ರನನ್ನು ರಕ್ಷಿಸಿದವನೂ ಅವನೇ.

97. எங்கள் பெருமா னிமையோர் தலைமகன் நீ,
செங்கண் நெடுமால் திருமார்பா, — பொங்கு
படமூக்கி னாயிரவாய்ப் பாம்பணைமேல் சேர்ந்தாய்,
குடமூக்கில் கோயிலாக் கொண்டு.

ಎಙ್ಗಳ್ ಪೆರುಮಾ ನಿಮೈಯೋರ್ ತಲೈಮಗನ್ ನೀ,
ಶೆಙ್ಗಣ್ ನೆಡುಮಾಲ್ ತಿರುಮಾರ್ಬಾ, — ಪೊಙ್ಗು
ಪಡಮೂಕ್ಕಿನಾಯಿರವಾಯ್ ಪ್ಪಾಮ್ಬಣೈಮೇಲ್ ಶೇರ್ನ್ದಾಯ್,
ಕುಡಮೂಕ್ಕಿಲ್ ಕೋಯಿಲಾ ಕ್ಕೊಣ್ಡು.

ಎಙ್ಗಳ್ ಪೆರುಮಾನ್ எங்கள் பெருமாண் = ನಮ್ಮ ಸ್ವಾಮಿಯಾದ (ನೀನು), ಇಮೈಯೋರ್ இமையோர் = ನಿತ್ಯಸೂರಿಗಳ, ತಲೈಮಗನ್ ನೀ தலைமகன் நீ = ನಿರ್ವಾಹಕನು ನೀನು, ಶೆಮ್ ಕಣ್ செம்கண் = ಕೆಂದಾವರೆಯಂತೆ ಕಣ್ಣುಳ್ಳ, ನೆಡುಮಾಲ್ நெடுமால் = ಸರ್ವೇಶ್ವರನೇ, ತಿರುಮಾರ್ಬಾ திருமார்பா = ಶ್ರೀದೇವಿಯನ್ನು ವಕ್ಷಸ್ಥಳದಲ್ಲಿ ಉಳ್ಳವನೇ, ಪೊಙ್ಗು பொங்கு = ವಿಸ್ತರಿಸಿ, ಪಡಮ್ படம் = ಹೆಡೆಗಳನ್ನೂ, ಮೂಕ್ಕಿನ್ மூக்கின் = ಮೂಗನ್ನೂ, ಆಯಿರಮ್ ವಾಯ್ ஆயிரம் வாய் = ಸಾವಿರ ತಲೆಗಳ (ಬಾಯಿಗಳ), ಪಾಮ್ಬು பாம்பு = ಹಾವಿನ, ಅಣೈ ಮೇಲ್ அணை மேல் = ಹಾಸಿಗೆಯ ಮೇಲೆ, ಶೇರ್ನ್ದಾಯ್ சேர்ந்தாய் = ಪವಡಿಸಿರುವವನೇ, ಕುಡಮೂಕ್ಕಿಲ್ குடமூக்கில் = ಕುಂಭಕೋಣದಲ್ಲಿ, ಕೋ

[illegible] ಕೋಯಿಲ್ ಆ கோயி ல் ஆ = ದೇವಮಂದಿರವಾಗಿ, ಕೊಣ್ಡು கொண்டு = ಮನಸ್ಸು ಮಾಡಿ.

ನಮ್ಮ ಸ್ವಾಮಿಯೇ, ನೀನು ನಿತ್ಯಸೂರಿಗಳ ನಿರ್ವಾಹಕನು. ಕೌದಾವರಿಯಂತೆ ಕಣ್ಣುಳ್ಳ ಸರ್ವೇಶ್ವರನು. ಶ್ರೀದೇವಿಯನ್ನು ನಿನ್ನ ವಕ್ಷಸ್ಥಲದಲ್ಲಿ ಧರಿಸಿರುವವನು. ಎತ್ತಿರುವ ಹೆಡೆಗಳನ್ನು ಮೂಗನ್ನು ಸಾವಿರಗಳನ್ನು ಉಳ್ಳ ಹಾವಿನ ಹಾಸಿಗೆಯ ಮೇಲೆ ಪವಡಿಸಿರುವವನು. ಮತ್ತು ಕುಂಭಕೋಣದಲ್ಲಿ ಮನಸ್ಸು ಮಾಡಿ ದೇವಮಂದಿರದಲ್ಲಿ ನೆಲೆಸಿರುವವನು. (97)

ಹಿಂದಿನ ಪಾಶುರದ ಹಾಗೆಯೇ ಭಗವಂತನ ಹಿರಿಮೆಯನ್ನು ಭೋಗಗಳ ವಿವರಿಸುವುದು ಈ ಪಾಶುರವೂ ಇದೇ.

ಭಗವಂತನು ಎಷ್ಟು ಐಶ್ವರ್ಯವನ್ನು ಪಡೆದು ಸರ್ವೇಶ್ವರನಾಗಿ ಹೊಂದಿದ್ದಾನೋ ಅಷ್ಟೇ ಸರಳ ಸುಲಭನಾಗಿ ಭೂಲೋಕದ ಭಕ್ತರನ್ನು ಉದ್ಧಾರಕರ್ತನಾಗಿದ್ದಾನೆ. ಅವನು ಪಾಲ್ಗಡಲಲ್ಲಿ ಶೇಷಶಯನನಾಗಿದ್ದಾನೆ, ಪರಮಪದದಲ್ಲಿ ನಿತ್ಯಸೂರಿಗಳ ನಿರ್ವಾಹಕನಾಗಿದ್ದಾನೆ. ಅಲ್ಲದೆ, ಭೂಲೋಕದಲ್ಲಿನ ನಾನಾ ದಿವ್ಯಕ್ಷೇತ್ರಗಳಲ್ಲಿ ಅರ್ಚಾಸ್ವಾಮಿಯಾಗಿ ಮೆರೆಯುತ್ತಾನೆ. ಶ್ರೀದೇವಿಯನ್ನು ತನ್ನ ವಕ್ಷಸ್ಥಲದಲ್ಲಿಯೇ ಇರಿಸಿಕೊಂಡಿದ್ದಾನೆ.

98. கொண்டு வளர்க்கக் குழவியாய்த் தான் வளர்ந்தது,
உண்ட துலகேழு முன்னொடுங்க, — கொண்டு
குடமாடிக் கோவலனாய் மேவி, என்னெஞ்சம்
இடமாகக் கொண்ட விறை

ಕೊಣ್ಡು ವಳರ್ಕ್ಕಕ್ಕುೞವಿಯಾಯ್ತ್ತಾನ್ ವಳರ್ನ್ದದು,
ಉಣ್ಡದುಲಗೇೞು ಮುಳ್ಳೊಡುಙ್ಗ,— ಕೊಣ್ಡು
ಕುಡಮಾಡಿ ಕ್ಕೋವಲನಾಯ್ ಮೇವಿ, ಎನ್ನೆಂಜಮ್
ಇಡಮಾಗಕ್ಕೊಣ್ಡ ವಿಱೈ

ಕೊಣ್ಡು கொண்டு = (ಕೈಯಲ್ಲಿ) ಎತ್ತಿಕೊಂಡು, ವಳರ್ಕ್ಕ வளர்க்க = ಆಡಿಸಿ ಬೆಳೆಸಲಿಕ್ಕೆ, ಕುೞವಿ ಆಯ್ குழவி ஆய் = ಮಗುವಾಗಿ, ತಾನ್ ವಳರ್ನ್ದದು தான் வளர்ந்தது = ತಾನು ಬೆಳೆದದ್ದು,

ಮಲರ್ ಉಲಧೃಮ್ ஏழ் உலகும் = ಏಳುಲೋಕಗಳನ್ನು, ಉಳ್
உள் = ತನ್ನ ಒಳಗೆ, ಒಡುಙ್ಗ ஒடுங்க = ಅಡಗಿರುವಂತೆ, ಉಣ್ಡಾ
உண்டது = ಉಂಡದ್ದು, ಕೊಣ್ಡು கொண்டு = ಕೈಗೆ ಎತ್ತಿಕೊಂಡು,
ಕುಡಮ್ ಆಡಿ குடம் ஆடி = ಕೊಡದ ಕುಣಿತವನ್ನು ಆಡಿ, ಕೋವ
ಲನ್ ಆಯ್ கோவலன் ஆய் = ಗೋವಳನಾಗಿ, ಮೇವಿ மேவி =
ವಾಸಿಸುತ್ತಾ, ಎನ್ ನೆಂಜಮ್ என் நெஞ்சம் = ನನ್ನ ಮನಸ್ಸನ್ನು (ಹೃದ
ಯವನ್ನು), ಇಡಮ್ ಆಹ இடம் ஆக = ನೆಲೆಯಿರುವ ಸ್ಥಳವಾಗಿ,
ಕೊಣ್ಡ கொண்ட = ಆರಿಸಿಕೊಂಡ, ಇಱೈ இறை = ದೇವರಶ್ರೇ
ಷ್ಠನಾದ ಸ್ವಾಮಿಯೇ.

ಕೈಯಲ್ಲಿ ಎತ್ತಿಕೊಂಡು ಆಡಿಸಿ ಬೆಳೆಸಕ್ಕೆ ದಯಮಾಡಿ ತಾನು ಬೆಳೆದದ್ದು, ಏಳುಲೋಕಗಳನ್ನು ತನ್ನ ಒಳಗೆ ಅಡಗಿರುವಂತೆ ಉಂಡದ್ದು, ಕೈಯಲ್ಲಿ ಕೊಡವನ್ನು ಎತ್ತಿಕೊಂಡು ಕೊಡದ ಕುಣಿತವನ್ನಾಡಿದ್ದು, ಗೋವಳನಾಗಿ ವಾಸಿಸಿದ್ದು, ನನ್ನ ಮನಸ್ಸನ್ನು (ಹೃದಯವನ್ನು) ತಾನು ನೆಲೆಯಿರುವ ಸ್ಥಳವಾಗಿ ಆರಿಸಿಕೊಂಡದ್ದು, ದೇವರಶ್ರೇಷ್ಠ (98)
ನಾದ ಸ್ವಾಮಿಯೇ.

ಈ ಪಾಶುರದಲ್ಲಿ ಆಳ್ವಾರರು ಭಗವಂತನ ಪರತ್ವಗುಣವನ್ನು ಸೌಲಭ್ಯಗುಣವನ್ನು ನಿದರ್ಶನ ಪೂರ್ವಕವಾಗಿ ಸಾಧಿಸಿದ್ದಾರೆ.

ಪ್ರಳಯಕಾಲದಲ್ಲಿ ಏಳುಲೋಕಗಳನ್ನು ಭಗವಂತನು ರಕ್ಷಿಸಿ ಪೂರ್ತಿ ಅದೃಷ್ಟವನ್ನು ಒಂದೇ ಗುಕ್ಕಿಗೆ ಕಬಳಿಸಿದನು ಮತ್ತು ಅವು ಸೂಕ್ಷ್ಮವಾಗಿ ತನ್ನ ಹೊಟ್ಟೆಯಲ್ಲಿ ಅಡಗಿರುವಂತೆ ಮಾಡಿಕೊಂಡನು. ಎಂಥ ಅದ್ಭುತನೋ ಸ್ವಾಮಿ! ಅವನೇ ಶ್ರೀಕೃಷ್ಣನಾಗಿ, ಗೋವಳನಾಗಿ ಅವತರಿಸಿದನು. ತನ್ನನ್ನು ಹಡೆದ ತಂದೆತಾಯಿಗಳಿಂದ ದೂರವಾಗಿ, ಎಲ್ಲ ಗೋಪಿಯರೂ ಅವನನ್ನು ಎತ್ತಿ ಆಡಿಸಿ ಬೆಳೆಸುವಂತೆ ದಯಮಾಡಿದನು. ಗೋವಳರ ನಡುವೆ ಬೆಳೆಯುತ್ತಾ ಅವರು ನಡೆಸುವ ಕೊಡದ ಕುಣಿತದಲ್ಲಿ ತಾನು ಅದ್ವಿತೀಯನೆಂದು ತೋರಿಸಿ ಎಲ್ಲರನ್ನೂ ಮೆಚ್ಚಿಸಿದನು. ಆಳ್ವಾರರಂಥ ಭಕ್ತರ ಹೃದಯದಲ್ಲಿ ಆಶ್ರಯಿಸಿ ನೆಲಸುವಂಥ ಸುಲಭನೇ ಆ ದೇವರಶ್ರೇಷ್ಠನಾದ ಸ್ವಾಮಿ!

99. இறை யெம்பெருமா னருளென்று, இமையோர்
முறைநின்று மொய்ம்மலர்கள் தூவ, -
அறைகழல

சேவடியான் செங்கண்ணெடியான், குறளுருவாய்
மாவடியின் மண் கொண்டான் மால்.

ಇಱೈ ಎಂಪೆರುಮಾನ್ ಅರುಳೆನ್ಱು, ಇಮೈಯೋರ್
ಮುಱೈ ನಿನ್ಱು ಮೊಯ್ಪ್ಪೂಮಲರ್‌ಗಳ್ ತೂವ, - ಅಱೈಕ್ಕೞಲ
ಶೇವಡಿಯಾನ್ ಶೆಂಗಣ್ಣೆಡಿಯಾನ್, ಕುಱಳುರುವಾಯ್
ಮಾವಡಿವಿನ್ ಮಣ್ ಕೊಂಡಾನ್ ಮಾಲ್.

ಎಮ್ಪೆರುಮಾನ್ நம்பெருமான் = ನಮ್ಮ ಸ್ವಾಮಿಯೇ, ಇಱೈ இறை = ಕಿಂಚಿತ್ತಾಗಿ, ಆದರೂ, ಅರುಳ್ அருள் = ಕೃಪೆಮಾಡಿ, ಎನ್ಱು என்று = ಎಂದು, ಇಮೈಯೋರ್ இமையோர் = ಬ್ರಹ್ಮಾದಿ ದೇವತೆಗಳು, ಮುಱೈ ನಿನ್ಱು முறைநின்று = ದಾಸರಾಗಿ ನಿಂತು, ಮೊಯ್ மொய்ம்மாய = ಸೊಬಗಿನ, ಮಲರ್‌ಗಳ್ மலர்கள் = ಹೂಗಳನ್ನು, ತೂವಿ தூவி = ತಿರುವಡಿಗಳ ಮೇಲೆ ಎರಚಿ, (ಅರ್ಚಿಸಿ), ಅಱೈ அறை = ಧ್ವನಿ ಮಾಡುವ, ಕೞಲ್ கழல் = ಕಾಲಂದುಗೆಯನ್ನು ಧರಿಸಿದ, ಶೇ ಅಡಿಯಾನ್ சே அடியான் = ಕೆಂದಾವರೆಯಂತೆ ತಿರುವಡಿಗಳುಳ್ಳವನೂ, ಶೆಮ್ ಕಣ್ செம் கண் = ಕೆಂಪಗೆ (ಕೆಂದಾವರೆಯಂತೆ) ಕಣ್ಣುಗಳುಳ್ಳವನೂ, ನೆಡಿಯಾನ್ நெடியான் = ಸರ್ವಾಂತರ್ಯಾಮಿಯಾದವನೂ, ಮಾಲ್ மால் = ಸರ್ವೇಶ್ವರನು, ಕುಱಳ್ ಉರು ಆಯ್ குறள் உரு ஆய் = ವಾಮನ ವಟುವಿನ ರೂಪವನ್ನು ತಳೆದು, ಮಾವಡಿವಿನ್ மாவடிவின் = ಅದ್ಭುತವಾದ ರೂಪದಿಂದ, ಮಣ್ ಕೊಂಡಾನ್ மண் கொண்டான் = ಭೂಮಿಯನ್ನು ಅಳೆದುಕೊಂಡನು,

ಬ್ರಹ್ಮಾದಿ ದೇವತೆಗಳು ದಾಸರಾಗಿ ನಮ್ರತೆಯಿಂದ ನಿಂತು, ನಮ್ಮ ಸ್ವಾಮಿಯೇ, ಕಿಂಚಿತ್ತಾದರೂ ನಮಗೆ ಕೃಪೆ ಮಾಡಬೇಕು ಎಂದು (ಪ್ರಾರ್ಥಿಸುತ್ತ) ಸೊಬಗಿನ ಹೂಗಳನ್ನು ತಿರುವಡಿಗಳ ಮೇಲೆ ಅರ್ಚಿಸಿ (ಪೂಜಿಸುತ್ತ) ಧ್ವನಿ ಮಾಡುವ ಕಾಲಂದುಗೆಯನ್ನು ಧರಿಸಿದ ಕೆಂದಾವರೆಯಂತೆ (ಕೆಂಪು ಮಲರಾದ) ಕಣ್ಣುಗಳುಳ್ಳವನೂ ತಿರುವಡಿಗಳುಳ್ಳವನೂ, ಕೆಂಪಗೆ (ಕೆಂದಾವರೆಯಂತೆ) ಕಣ್ಣುಗಳುಳ್ಳವನೂ ಆದ ಸರ್ವೇಶ್ವರನು ವಾಮನ ವಟುವಿನ ಸರ್ವಾಂತರ್ಯಾಮಿಯಾದವನೂ ಆದ ಸರ್ವೇಶ್ವರನು ವಾಮನ ವಟುವಿನ ರೂಪವನ್ನು ತಳೆದು ಅದ್ಭುತವಾದ ರೂಪದಿಂದ ಭೂಮಿಯನ್ನು ಅಳೆದು (99) ಕೊಂಡನು.

ಈ ಪಾಶುರದಲ್ಲಿ ಭಗವಂತನ ತ್ರಿವಿಕ್ರಮಾವತಾರದ ಮಹಿಮೆಯನ್ನು (ಮುಖ್ಯವಾಗಿ ಭಗವಂತನ ತಿರುವಡಿಗಳ ಮಹಿಮೆಯನ್ನು) ವಿಶೇಷವಾಗಿ ಕೀರ್ತಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನೂ ಸರ್ವಾಂತರ್ಯಾಮಿಯೂ ಆದ ಭಗವಂತನು, ಹಿಂದೆ, ಬಲಿಚಕ್ರವರ್ತಿಯ ಬಳಿಗೆ ವಾಮನ

ವಟುವಾಗಿ ಬಂದು, ಅವನಿಂದ ಮೂರು ಹೆಜ್ಜೆಗಳ ನೆಲವನ್ನು ದಾನವಾಗಿ ಪಡೆದುಕೊಂಡ ಕೂಡಲೇ ಮಹದದ್ಭುತನಾದ ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದು ಹೆಜ್ಜೆಯನ್ನು ವಿಸ್ತರಿಸಿ, ಭೂಮಿಯನ್ನೆಲ್ಲಾ ಆವರಿಸಿ, ಅದರಿಂದ ಭೂಮಂಡಲವನ್ನು ಅಳೆದುಕೊಂಡುಬಿಟ್ಟನು. ಭಗವಂತನ ಮತ್ತೊಂದು ತಿರುವಡಿಯು ಮೇಲಣ ಲೋಕಗಳನ್ನೆಲ್ಲಾ ಆವರಿಸಿಕೊಂಡುಬಿಟ್ಟಿತು. ಆಗ, ಬ್ರಹ್ಮಾದಿದೇವತೆಗಳೆಲ್ಲರೂ ಕೈಕಟ್ಟಿ ನಮ್ರತೆಯಿಂದ ನಿಂತು, ತಮ್ಮ ನಡುವೆ ಇರುವ ಕೆಂದಾವರೆಯಂತೆ ಕೋಮಲವಾದ ಆ ತಿರುವಡಿಯನ್ನು ಸೊಬಗಿನ ಪರಿಮಳ ಪುಷ್ಪಗಳಿಂದ ಅರ್ಚಿಸಿ, "ನಮ್ಮ ಮೇಲೆ ಸ್ವಲ್ಪವಾದರೂ ಕೃಪೆಮಾಡು" ಎಂದು ಪ್ರಾರ್ಥಿಸಿದರು.

ಭಗವಂತನ ತಿರುವಡಿಗಳನ್ನು ಆಶ್ರಯಿಸಿ, ಜನ್ಮದಿಂದ ಪೂಜಿಸುವುದರಿಂದ ಎಲ್ಲರೂ ಭಗವಂತನ ಕೃಪೆಗೆ ಪಾತ್ರರಾಗಬಹುದು.

100. மாலே நெடியோனே கண்ணனே, விண்ணவர்க்கு
மேலா வியன் துழாய்க் கண்ணியனே, — மேலால்
விளவின் காய் கன்றினால் வீழ்த்தவனே, என்றன்
அளவன்றால் யானுடைய அன்பு.

ಮಾಲೇ ನೆಡಿಯೋನೇ ಕಣ್ಣನೇ, ವಿಣ್ಣವರ್ಕ್ಕು
ಮೇಲಾ ವಿಯನ್ ತುೞಾಯ್ ಕ್ಕಣ್ಣಿಯನೇ, — ಮೇಲಾಲ್
ವಿಳವಿನ್ ಕಾಯ್ ಕನ್ಱಿನಾಲ್ ವೀೞ್ತ್ತವನೇ, ಎನ್ಱನ್
ಅಳವನ್ಱಾಲ್ ಯಾನುಡೈಯ ಅನ್ಬು.

ಮಾಲೇ மாலே = (ಭಕ್ತರಲ್ಲಿ) ಪ್ರೀತಿಯುಳ್ಳವನೇ, ನೆಡಿಯೋನೇ நெடியோனே = ಸರ್ವಾಂತರ್ಯಾಮಿಯೇ, ಕಣ್ಣನೇ கண்ணனே = ಶ್ರೀಕೃಷ್ಣನೇ, ವಿಣ್ಣವರ್ಕ್ಕು விண்ணவர்க்கு = ನಿತ್ಯಸೂರಿಗಳಿಗೆ, ಮೇಲಾ மேலா = ಒಡೆಯನೇ, ವಿಯನ್ வியன் = ಸುಂದರವಾದ, ತುೞಾಯ್ துழாய் = ತುಲಸಿಯ, ಕಣ್ಣಿಯನೇ கண்ணியனே = ಹಾರವನ್ನು ಧರಿಸಿರುವವನೇ, ಮೇಲಾಲ್ மேலால் = ಇದಕ್ಕಿಂತ ಹಿಂದೆ, ವಿಳವಿನ್ ಕಾಯ್ விளவின் காய் = ಬೇಲದ ಹಣ್ಣನ್ನು, ಕನ್ಱಿನಾಲ್ கன்றினால் = ಕರುವಿನಿಂದ, ವೀೞ್ತ್ತವನೇ வீழ்த்தவனே = ಕೆಡವಿದವನೇ (ಉರುಳಿಸಿದವನೇ), ಎನ್ಱನ್ என்றன் = ನನ್ನ, ಅಳವು ಅನ್ಱು அளவு அன்று = ಅಳತೆ ಮಾಡಲು ಸಾಧ್ಯವಿಲ್ಲ, ಆಲ್ ஆல் = ಅಯ್ಯೋ,

Garani Srinivasan

ಯಾನ್ ಉಕ್ಕೆಂಯ ಯಾಣ್ ಉಡೈಯು = ನನ್ನ, ಅನ್ಬು ಆಣ್ 4 = ಭಕ್ತಿ ಯೆಂಬುದು.

ಭಕ್ತರಲ್ಲಿ ಪ್ರೀತಿಯುಳ್ಳವನೇ, ಸರ್ವಾಂತರ್ಯಾಮಿಯೇ, ಶ್ರೀಕೃಷ್ಣನೇ, ನಿತ್ಯಸೂರಿಗಳಿಗೆ ಒಡೆಯನೇ. ಸುಂದರವಾದ ತುಲಸಿಯ ಹಾರವನ್ನು ಧರಿಸಿರುವವನೇ, ಇದಕ್ಕಿಂತ ಮಿಗಿಲಾಗಿ, ಬೇಲದ ಹಣ್ಣನ್ನು ಕರುವಿನಿಂದ ಉದುರಿಸಿದವನೇ, ನನ್ನ ಭಕ್ತಿಯೆಂಬುದು ಅಳತೆ ಮಾಡಲು ಸಾಧ್ಯವಿಲ್ಲವಲ್ಲ! (100)

ಈ ಪಾಶುರದಲ್ಲಿ ಆಳ್ವಾರರು ಭಗವಂತನನ್ನು ಅವನ ವಿಶಿಷ್ಟ ಗುಣಗಳಿಂದ ವಿವರಿಸಿದ್ದಾರೆ. ಸ್ವಾಮಿಯಲ್ಲಿರುವ ತಮ್ಮ ಭಕ್ತಿಯನ್ನು ಯಾವ ಯಾವ ರೀತಿಯಲ್ಲಿ (ತಮ್ಮ ಈ ಪಾಶುರಗಳಲ್ಲಿ) ವರ್ಣಿಸಿ ಹೇಳಿದರೂ ಸಹ ಅದು ತಮಗೆ ತೃಪ್ತಿ ತರುವುದಿಲ್ಲವೆಂದೂ, ತಮ್ಮ ಭಕ್ತಿಯು ಅಳತೆಗೆ ಮೀರಿದ್ದೆಂದೂ ಸೂಚಿಸುತ್ತಾ ಸಂತೋಷಪಡುತ್ತಾರೆ. ಇದರೊಂದಿಗೆ ಅವರ ತಿರುವನ್ದಾದಿ ಮುಗಿಯುತ್ತದೆ.

"ವಿಳವಿನ್ ಕಾಯ್ ಕನ್ರಿನಾಲ್ ವೀಳ್ತ್ತವನೇ" — ಇದು ಭಗವಂತನ ಶ್ರೀಕೃಷ್ಣಾವತಾರದ ಒಂದು ಪ್ರಸಂಗ. ನಂದಗೋಕುಲದಲ್ಲಿ ಅವನು ಬೆಳೆಯುತ್ತಿದ್ದಾಗ, ಗೋವಳಬಾಲಕರ ಜೊತೆಯಲ್ಲಿ ಅವನೂ ದನಕರುಗಳ ಹಿಂದೆ ಅವುಗಳನ್ನು ಮೇಯಿಸುವುದಕ್ಕೆ ಕಾಡಿಗೆ ಹೋಗುತ್ತಿದ್ದನು. ಅವನ ಕಡು ಶತ್ರುವಾದ ಕಂಸನಿಂದ ಪ್ರೇರಿತರಾದ ಕಪಿತ್ಥಾಸುರ, ವತ್ಸಾಸುರ ಎಂಬುವರು ಅವನನ್ನು ಕೊಲ್ಲಲು ಹವಣಿಸಿದರು. ಕಪಿತ್ಥಾಸುರನು ಬೇಲದ ವನದಲ್ಲಿ ಹಣ್ಣುಗಳಿಂದ ತುಂಬಿರುವಂತಹ ಬೇಲದ ಮರವಾಗಿ ನಿಂತನು. ವತ್ಸಾಸುರನು ಕರುಗಳ ನಡುವೆ ಕರುವಾಗಿ ನಿಂತನು. (ಅವರು ಸಮಯ ಹೊಂಚುತ್ತಿದ್ದರು. ಗೋವಳಬಾಲಕರು ಬೇಲದ ಹಣ್ಣನ್ನು ತಿನ್ನಬೇಕೆಂದು ಆಶಿಸಿದರು. ಆಗ ಸರ್ವಜ್ಞನಾದ ಕೃಷ್ಣನು ಆ ಕರುವಿನ ಹಿಂಗಾಲುಗಳನ್ನು ಹಿಡಿದು, ಗರಗರನೆ ತಿರುಗಿಸಿ, ಅದನ್ನು ಬಿರುಸಾಗಿ ಬೀಸಿ ಬೇಲದ ಮರಗಳ ಮೇಲಕ್ಕೆ ಎಸೆದನು. ಅದು ಬೇಲದ ಮರದ ರೂಪದಲ್ಲಿದ್ದ ಕಪಿತ್ಥಾಸುರನ ಮೇಲೆ ಬಿರುಸಾಗಿ ಬಿದ್ದದ್ದರಿಂದ, ಆ ಇಬ್ಬರು ರಾಕ್ಷಸರೂ ಏಕಕಾಲದಲ್ಲಿ ಮಡಿದರು. ಹಣ್ಣುಗಳು ಸಮೃದ್ಧಿಯಾಗಿ ಉದುರಿದವು. ಬಾಲಕರು ತಿಂದು ಆನಂದಿಸಿದರು. ಇದು ಕತೆ.

ಆಳ್ವಾರರು ಹೇಳುತ್ತಾರೆ: ಭಗವಂತನು ತನ್ನ ಭಕ್ತರಲ್ಲಿ ವ್ಯಾಮೋಹಗೊಂಡವನು. ಅವರ ಹಿತಚಿಂತನೆಯೇ ಸ್ವಾಮಿಯ ಮನದಲ್ಲಿ ಯಾವಾಗಲೂ ತುಂಬಿರುತ್ತದೆ. ಅವನು ಸರ್ವಾಂತರ್ಯಾಮಿ. ಆದರೂ ನನ್ನ ಮನಸ್ಸಿನಲ್ಲಿ ಇರುವುದನ್ನು ಅವನು ಅರಿತುಕೊಂಡಿಲ್ಲವೇ? ಅವನು ಅತ್ಯಾಶ್ಚರ್ಯನೇ.

Gerali Srinivasan

ಪರಮಪದವಾಸಿಗಳಾದ ನಿತ್ಯಸೂರಿಗಳಿಗೆ ಒಡೆಯನಾಗಿ ಅವರಾರಾಧ್ಯನಾಗಿದ್ದಾನೆ. ಎಂದೆಂದಿಗೂ ಬಾಡದ ತುಲಸಿಯ ಹಾರದಿಂದ ಅಲಂಕೃತನಾಗಿದ್ದಾನೆ. ಅವನು ತನ್ನ ಔದಾರ್ಯದಿಂದ ಇಬ್ಬರು ಮಾಯಾವಿಗಳಾದ ರಾಕ್ಷಸರನ್ನು (ಮಧುಸುರ, ಕೈಟಭಾಸುರರನ್ನು) ಸುಮ್ಮನೇ ಕೊಂದುಹಾಕಿದನು. ~~ಅಂತ~~ ಸಮರ್ಥನೂ ಸರ್ವಜ್ಞನೂ ಆದ ಅವನು ನನ್ನ ಹೃದಯದಲ್ಲಿ ತುಂಬಿರುವ ಭಕ್ತಿಯನ್ನು ಅರಿಯದಿರುವನೇ? ನನಗಂತೂ ಅದು ಆಶ್ಚರ್ಯಕರವಾದದ್ದು ಎನಿಸುತ್ತದೆ.

— ೦ —

ಎರಡನೆಯ ತಿರುವನ್ದಾದಿ ಮುಗಿದುದು.

Garani Srinivasan

அடிவரவு: ಅಡಿಯ ನಡೆ

1. அன்பு, ஞானத்தால், பரிசு, நகரிழை, அடிமுன்றுலறிந்
தைந்து கழலெடுத்துகந்து, அன்றது பேர்த்தின
கடைநின்றமரர்.

ಅನ್ಬು ಜ್ಞಾನತ್ತಾಲ್ ಪರಿಶು ನಗರಿಳೈ, ಅಡಿಮೂನ್ರಿಲಱಿನ್ದ
ಕೞಲೆಡುತ್ತುಗನ್ದು, ಅನ್ರದು ಪೇರ್ತ್ತಿನ್ ಕಡೈನಿನ್ರಮರರ್

2. கடைநின்றவரிவர் தொடரெடு பண்டி, திரிந்தது
கணக்கடி மற்றூர் கொண்டது வழக்கன்று கண்டா
ய் பழிபாவம் தாமுளரே.

ಕಡೈನಿನ್ರವರಿವರ್ ತೊಡರೆಡು ಪಣ್ಡಿ, ತಿರಿನ್ದದು ತಿನಕ್ಕಡಿ ಮಟ್ರೂರ್
ಕೊಣ್ಡದು ವೞಕ್ಕನ್ರು ಕಣ್ಡಾಯ್ ಪೞಿ ಪಾವಮ್ ತಾಮುಳರೇ.

3. தாமுளரரியது தாழ்ந்தவன் கண்டாய் சென்றது
வந்தித்துப் பதியமை மனதுவேம் மக்கைநோயன்
றுலகு பிராணென்று

ತಾಮುಳ ಅರಿಯದು ತಾೞ್ನ್ದವನ್ ಕಣ್ಡಾಯ್ ಶೆನ್ರದು ವನ್ದಿತ್ತುಪ್ಪ
ದಿಯಮೈ ಮನದುವೇಮ್ ಮಕ್ಕೈ ನೋಯನ್ರುಲಗು ಪಿರಾನೆನ್ರು.

4. பிராணென்று மகிழ்ந்தது துணிந்தது வகையால்,
இனிதென்பர் சிறியார் இருந்தண் எமக்கென்று,
ஒத்தின் சுருக்காகப் பொருளாலமரு.

ಪಿರಾನೆನ್ರು ಮಕಿೞ್ನ್ದದು ತುಣಿನ್ದದು ವಕೈಯಾಲ್,
ಇನಿದೆನ್ಬರ್ ಶಿಱಿಯಾರ್ ಇರುನ್ದಣ್ ಎಮಕ್ಕೆನ್ರು,
ಒತ್ತಿನ್ ಶುರುಕ್ಕಾಗಪ್ಪೊರುಳಾಲಮರು.

5. பொருளால் நினைப்பன் கோளிரண் சிறந்தார்க்கு,
உளதென்று பயின்றது மலையரி உணர்ந்தாய்,
மலையேழு மழைப்பன் திருமாலை மதிக்கண்டாய்.

ಪೊರುಳಾಲ್ ನಿನೈಪ್ಪನ್ ಕೋಳಿರಣ್ ಶಿಱನ್ದಾರ್ಕ್ಕು,
ಉಳದೆನ್ರು ಪಯಿನ್ರದು ಮಲೈಯರಿ ಉಣರ್ನ್ದಾಯ್,
ಮಲೈಯೇೞು ಮೞೈಪ್ಪನ್ ತಿರುಮಾಲೈ ಮದಿಕ್ಕಣ್ಡಾಯ್.

6. மதிநிறங்கரியன் நெறியார் வெற்பென்றிரும்,
என்று மறந்தறி காணக்கழி திருமங்கை,
நாம் பெற்றருண்புரி ஒருரு நின்றதோர்.

Garani Srinivasan

మదనిలఙ్గరయన్ నోలయార్ మేలా మీన్ లారుమా,
ఎన్నలు మలన్దలా కొణ్డలా తిరుమఙ్గై,
నామా వేఱురుళ్ వం కరురు నిన్నలదేనిలర్.

7. நின்றதோர் பெண்ணொன் றெறெழும் கதையும்,
பணிந்தே னிது கண்டாய் கண்டேன் வலிமிக்க,
கோவாகித் தமருள்ளாந் தஞ்சை யிடங்கை

నిన్ఱదోర్ పెణ్ణొన్ఱెఱెழుమ్ కదైయుమ్,
పణిన్దేనిదు కణ్డాయ్ కణ్డేన్ వలిమిక్క,
కోవాగిత్ తమరుళ్ళన్దఞ్జై యిడఙ్గై.

8. இடங்கை போதறிந் தாய்ந்துரை யானோதவம்,
பெருகுமத வரைச்சந் துறுங் கண்டாய் தவம்பெ
ற்றுன், பின்னின்று நேர்ந்தேன் பகற் கண்டேன்

ఇడఙ్గై పోదఱిన్దాయ్న్దురై యానోదవమ్,
పెరుగుమద వరైచ్చన్దుఱుఙ్గణ్డాయ్ తవమ్బెఱ్ఱ,
పిన్నిన్ఱు నేర్న్దేన్ పగఱ్కణ్డేన్.

9. பகல் வடிக்கோலக் குறையாக வரங்கருதி,
அமுதைன்றும் நவின்றுரை இன்று வறிதிறம்பிற்று,
கதவிக்கத மண்ணுலகம் பின்னால் நரகம்

పగల్ వడిక్కోలక్కుఱైయాగ వరఙ్గరుది,
అముదెన్ఱుమ్ నవిన్ఱురై ఇన్ఱువఱి తిఱమ్బిఱ్ఱు,
కదవిక్కద మణ్ణులగమ్ పిన్నాల్ నరగమ్.

10. பின்னாலடியால் முன் கடிதுற்று வணங்கி,
என்னெஞ்சமத்தியூரெங்கள் பெருமான்,
கொண்டுவளர்க்க இறைமாலன்பே.

పిన్నాలడియాల్ మున్ కడిదుఱ్ఱు వణఙ్గి,
ఎన్నెఞ్జ మత్తియూరెఙ్గళ్ పెరుమాన్,
కొణ్డువళర్క్క ఇఱైమాలన్బే.

20. 10. 81